ಭಾನುವಾರ, ಜುಲೈ 9, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 189 | ಪುಟ 16

• www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಕಲ್ಲ ಬೇಟೆಯ ಕೊನೆಯ ತಲೆಮಾರು

ಕೆಆರ್‌ಎಸ್, ಹೇಮಾವತಿ ಜಲಾಶಯ ನೀರಿನಮಟ್ಟ ಏರಿಕೆ 7

ಮಣಿಪುರ: ಪೊಲೀಸರಿಂದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಲು ಯತ್ನ 8

ಹಂಪಿಯಲ್ಲಿ ಜಿ20 ಸಭೆ ಇಂದಿನಿಂದ 7

ಉದ್ರಿಕ್ತ ಗುಂಪಿನಿಂದ ವಾಹನಗಳಿಗೆ ಬೆಂಕಿ 8

ಹೊಸ ವ್ಯವಸ್ಥೆಗೆ ದಲ್ಲಾಳಿಗಳ ವಿರೋಧದ ಲಾಬಿ; ಆರೋಪ • ಆಸ್ತಿ ನೋಂದಣಿಗೆ ತಪ್ಪದ ಕಾಟ

‘ಕಾವೇರಿ 2.0’ ನಿಲ್ಲದ ಗೊಂದಲ

• ವಿಕ್ರಂ ಕಾಂತಿಕೆರೆ

ಮಂಗಳೂರು: ಇದು ನಡೆದದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಕಡಬದ ರಾಕೇಶ್ (ಹೆಸರು ಬದಲಿಸಲಾಗಿದೆ), ಪಕ್ಕದ ತಾಲ್ಲೂಕಿನ ಗ್ರಾಮವೊಂದರಲ್ಲಿ ಖರೀದಿಸಿದ 60 ಸೆಂಟ್ ಜಾಗದ ಪೈಕಿ 5 ಸೆಂಟ್‌ನಲ್ಲಿ ಮನೆ ನಿರ್ಮಿಸುವ ಉದ್ದೇಶದಿಂದ ಭೂಪರಿವರ್ತನೆಗಾಗಿ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಸಂಬಂಧಿಸಿ ಮಾಹಿತಿ ತಿಳಿದುಕೊಳ್ಳಲು ಉಪ ನೋಂದಣಾಧಿಕಾರಿ ಕಚೇರಿಗೆ ತೆರಳಿದ ಅವರು ಸಲ್ಲಿಸಬೇಕಾದ ದಾಖಲೆಗಳ ಪಟ್ಟಿಯ ಬಗ್ಗೆ ಕೇಳಿ ಸುಸ್ತಾಗಿದ್ದರು. ಪ್ರತಿ ಬಾರಿ ಕಿಲೊಮೀಟರ್‌ಗಟ್ಟಲೆ ಓಡಾಡಿ ಕೆಲಸ ಮಾಡಿಸಿಕೊಳ್ಳುವುದು ಕಷ್ಟ ಎಂದು ತಿಳಿದು ಮಧ್ಯವರ್ತಿಗೆ ಕೆಲಸ ವಹಿಸಿದ್ದರು. ಆರಂಭಿಕ ಶುಲ್ಕ ₹ 2 ಸಾವಿರ ಕೊಟ್ಟು, ಸರ್ವೆಯರ್ ಬಂದಾಗ ಅವರಿಗೂ ₹ 2 ಸಾವಿರ ಕೊಟ್ಟರು. ಪಿಡಿಒ ಬಳಿಯಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಂಡಾಯಿತು. ಅಲ್ಲಿಯ ವರೆಗೆ ಎಲ್ಲ ಕೆಲಸ ಸೂಸೂತ್ರವಾಗಿ

ಒಳನೋಟ

ಕಂದಾಯದಲ್ಲಿ ಗೊಂದಲ

ಪ್ರತಿಕ್ರಿಯಿಸಿ: 9606038256

feedback@prajavani.co.in

ನಡೆದಿತ್ತು. ಆದರೆ ಭೂಪರಿವರ್ತನೆ ಕಾರ್ಯ ಪೂರ್ಣಗೊಳ್ಳಲು ಐದು ತಿಂಗಳು ಬೇಕಾಯಿತು. ಮೊದಲು ಪಾವತಿಸಿದ ₹ 4 ಸಾವಿರವಲ್ಲದೆ ಪ್ರಮಾಣಪತ್ರ ಪಡೆದುಕೊಳ್ಳಲು ₹ 10 ಸಾವಿರ ಕೊಡಬೇಕು ಎಂದು ಏಜೆಂಟ್ ಹೇಳಿದಾಗ ರಾಕೇಶ್‌ಗೆ ತಲೆ ಸುತ್ತು ಬಂದಂತಾಗಿತ್ತು.

ಮತ್ತೊಂದು ಪ್ರಸಂಗ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಅಲಗಲದ್ದಿ ಗ್ರಾಮದ್ದು.

4ನೇ ಪುಟ ನೋಡಿ

ಬೆಳಗಾವಿಯ ಶಹಾಪುರದ ಅಂಚೆ ಕಚೇರಿ ಎದುರು ಖಾತೆಯಿಂದ ಪಿಂಚಣಿ ಹಣ ಪಡೆದುಕೊಳ್ಳಲು ಹಿರಿಯ ನಾಗರಿಕರು ಸಾಲುಗಟ್ಟಿ ನಿಂತಿರುವುದು

ಸರ್ಕಾರದ ಆದೇಶಕ್ಕೆ ಕಿಮ್ಮತ್ತಿಲ್ಲ

ಅರ್ಜಿ ಸಲ್ಲಿಸಿದ 7 ದಿನಗಳಲ್ಲಿ ಭೂ ಪರಿವರ್ತನೆ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರ ಕ್ರಮ ವಹಿಸಿದೆ ಎಂದು ಹಿಂದಿನ ಕಂದಾಯ ಸಚಿವರು ಹೇಳಿಕೆ ನೀಡಿ ತಿಂಗಳುಗಳೇ ಕಳೆದಿವೆ. ಕಂದಾಯ ನಿರೀಕ್ಷಕರಿಂದ ವಿವಿಧ ಹಂತಗಳನ್ನು ದಾಟಿ ಜಿಲ್ಲಾಧಿಕಾರಿ ಕಚೇರಿಗೆ ಅರ್ಜಿ ತಲುಪಲು ಒಂದು ತಿಂಗಳು ಬೇಕು. ಏಕೆ ತಡ ಎಂದು ಕೇಳಿದರೆ ಅಧಿಕಾರಿಗಳು ಕಾರಣ ನೀಡಿ ಮತ್ತಷ್ಟು ವಿಳಂಬ ಮಾಡುತ್ತಾರೆ.

ಸೋಮಶೇಖರ್, ಕೂಡಲಕುಪ್ಪೆ, ಶ್ರೀರಂಗಪಟ್ಟಣ ತಾಲ್ಲೂಕು

ಹೊಸ ವ್ಯವಸ್ಥೆ ಜನಸ್ನೇಹಿ: ಕೃಷ್ಣ ಬೈರೇಗೌಡ

ಬೆಂಗಳೂರು: ‘ಸ್ವತ್ತುಗಳ ನೋಂದಣಿ ವ್ಯವಸ್ಥೆಯಲ್ಲಿನ ಸಮಸ್ಯೆ, ಆಡಳಿತದಲ್ಲಿ ಪಾರದರ್ಶಕತೆ, ವೇಗ ತರುವ ಉದ್ದೇಶದಿಂದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ‘ಕಾವೇರಿ– 2’ ತಂತ್ರಾಂಶ ಜಾರಿಗೆ ತರಲಾಗಿದೆ. ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ ಸಂಸ್ಥೆಯ ಸಹಯೋಗದಲ್ಲಿ ಎಲ್ಲಾ 256 ಉಪ ನೋಂದಣಿ ಕಚೇರಿಗಳಲ್ಲಿ ಅಳವಡಿಸಿರುವ ಈ ತಂತ್ರಜ್ಞಾನ ಜನಸ್ನೇಹಿ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಮರ್ಥಿಸಿದರು.

4ನೇ ಪುಟ ನೋಡಿ

ಪಶ್ಚಿಮ ಬಂಗಾಳ: ಹಿಂಸೆಗೆ 12 ಬಲಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಪಂಚಾಯಿತಿಗಳ ಚುನಾವಣೆ ಹಿನ್ನೆಲೆಯಲ್ಲಿ ಶುಕ್ರವಾರ ರಾತ್ರಿ ಆರಂಭವಾದ ಹಿಂಸಾಚಾರ ತೀವ್ರ ಸ್ವರೂಪ ಪಡೆದಿದೆ. 12 ಮಂದಿ ಸತ್ತಿದ್ದು, ಹಲವರು ಗಾಯಗೊಂಡಿದ್ದಾರೆ. ರಾಜ್ಯದ ವಿವಿಧೆಡೆ ಮತಪೆಟ್ಟಿಗೆಗಳನ್ನು ನಾಶಪಡಿಸಲಾಗಿದೆ.

ಪಕ್ಷಗಳ ಕಾರ್ಯಕರ್ತರು, ಬೆಂಬಲಿಗರ ನಡುವೆ ಪರಸ್ಪರ ಹಲ್ಲೆ, ಹಿಂಸಾಚಾರ ಕೃತ್ಯಗಳು ನಡೆದಿವೆ. ಮೃತರಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ 8, ಬಿಜೆಪಿ, ಕಾಂಗ್ರೆಸ್, ಸಿಪಿಎಂ ಮತ್ತು ಐಎಸ್‌ಎಫ್ ಪಕ್ಷದ ಒಬ್ಬರು ಸೇರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತಪೆಟ್ಟಿಗೆಗಳ ನಾಶ, ನಕಲಿ ಹೆಸರಿನಲ್ಲಿ ಮತದಾನ ಯತ್ನ, ಮತದಾನಕ್ಕೆ ಅಡ್ಡಿ ಮಾಡಿದ ಪ್ರಕರಣಗಳು ವ್ಯಾಪಕವಾಗಿ ನಡೆದಿವೆ. ಹಿಂಸಾಕೃತ್ಯಗಳ ಮಧ್ಯೆಯೇ, ಚೆಂಡು ಎಂದು ಭಾವಿಸಿ ರಸ್ತೆಯಲ್ಲಿ ಬಿದ್ದಿದ್ದ ಕಚ್ಚಾ ಬಾಂಬ್ ಎತ್ತಿಕೊಂಡಿದ್ದ ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ.

ದಕ್ಷಿಣ 24 ಪರಗಣ ಜಿಲ್ಲೆಯ ಭಂಗೋರ್‌ನಲ್ಲಿ ಈ ಘಟನೆ ನಡೆದಿದೆ. ಕಚ್ಚಾ ಬಾಂಬ್ ಗಮನಿಸಿದ ಇಬ್ಬರು ಮಕ್ಕಳಲ್ಲಿ ಒಬ್ಬಾತ ಎತ್ತಿಕೊಂಡಿದ್ದು, ಕೂಡಲೇ ಸ್ಫೋಟಿಸಿದೆ. ಕೃತ್ಯದ ಹಿಂದೆಯೇ ಇನ್ನು ಬಾಂಬ್‌ಗಳಿರುವ ಶಂಕೆ ಹಿನ್ನೆಲೆಯಲ್ಲಿ ಪತ್ತೆಗೆ ಭದ್ರತಾ ಪಡೆ ನಿಯೋಜಿಸಲಾಗಿದೆ.

ಖಂಡನೆ: ಚುನಾವಣೆ ಸಂಬಂಧಿತ ಹಿಂಸಾಚಾರಗಳನ್ನು ವಿವಿಧ ಪಕ್ಷಗಳು ಕಟುವಾಗಿ ಖಂಡಿಸಿವೆ. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬಿಜೆಪಿ ಆಗ್ರಹಿಸಿದೆ. ‘ಚುನಾವಣೆಯನ್ನು ಅಸಿಂಧು ಎಂದು ಘೋಷಿಸುವಂತೆ’ ಕೋರಿ ಕಾಂಗ್ರೆಸ್ ಪಕ್ಷವು ಹೈಕೋರ್ಟ್ ಮೆಟ್ಟಿಲೇರಿದೆ.

ಟಿಎಂಸಿ ಆಡಳಿತದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯುವುದು ಮರೀಚಿಕೆ. ಸಂವಿಧಾನದ ವಿಧಿ 355ರ ಅನ್ವಯ ರಾಷ್ಟ್ರಪತಿ ಆಡಳಿತ ಘೋಷಿಸಿ

ಸುವೇಂದು ಅಧಿಕಾರಿ
ವಿಧಾನಸಭೆ ಪ್ರತಿಪಕ್ಷದ ನಾಯಕ

ಟಿಎಂಸಿ ಬೆಂಬಲಿತ ಗೂಂಡಾಗಳು ರಾಜ್ಯದಲ್ಲಿ ಮುಕ್ತವಾಗಿ ಓಡಾಡಿಕೊಂಡಿದ್ದಾರೆ. ಚುನಾವಣೆಯಲ್ಲಿ ಜನರ ತೀರ್ಮಾನದ ಅಪಹರಣ ಬಹಿರಂಗವಾಗಿ ನಡೆದಿದೆ

ಅಧೀರ್ ರಂಜನ್ ಚೌಧರಿ
ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ

ಬಿಜೆಪಿ, ಕಾಂಗ್ರೆಸ್ ಮತ್ತು ಸಿಪಿಎಂ ಕೈಜೋಡಿಸಿವೆ. ಕೇಂದ್ರ ಪಡೆಗಳಿಗೆ ಬೇಡಿಕೆ ಕಳುಹಿಸಿದರೂ ನಿಯೋಜಿಸುತ್ತಿಲ್ಲ. ಟಿಎಂಸಿ ಕಾರ್ಯಕರ್ತರ ಹತ್ಯೆ ನಡೆದಿದೆ

ಶಶಿ ಪಾಂಜಾ
ಹಿರಿಯ ಸಚಿವೆ, ಟಿಎಂಸಿ ನಾಯಕಿ

8ನೇ ಪುಟ ನೋಡಿ

‘ಹೊರ ಗುತ್ತಿಗೆ ನೌಕರಿಯಲ್ಲೂ ಮೀಸಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿರುವ ಮೀಸಲಾತಿಯಂತೆಯೇ ಹೊರಗುತ್ತಿಗೆ ನೌಕರಿಯಲ್ಲೂ ಮೀಸಲಾತಿ ತರಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಜನಮನ ಪ್ರತಿಷ್ಠಾನ, ಮೈಸೂರಿನ ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಶನಿವಾರ ನಗರದಲ್ಲಿ ಆಯೋಜಿಸಿದ್ದ ‘ಪ್ರಬುದ್ಧ ಕರ್ನಾಟಕ: ಜನಮನ ಸಮಾವೇಶ’ದ ಸಂವಾದದಲ್ಲಿ ಮಾತನಾಡಿದರು.

‘7.5 ಲಕ್ಷ ಸರ್ಕಾರಿ ಹುದ್ದೆಗಳಲ್ಲಿ 5 ಲಕ್ಷ ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಶಿಕ್ಷಣ, ಪೊಲೀಸ್, ಆರೋಗ್ಯ ಇಲಾಖೆಯಲ್ಲಿ ಹೆಚ್ಚಿನ ಹುದ್ದೆಗಳು ಖಾಲಿಯಿದ್ದು, ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಹಂತ ಹಂತವಾಗಿ ಆ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಸದ್ಯ 75 ಸಾವಿರ ಮಂದಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ’ ಎಂದು ಹೇಳಿದರು.

6ನೇ ಪುಟ ನೋಡಿ

ಅಮರನಾಥ: ರಾಜ್ಯದ ಯಾತ್ರಿಕರಿಗೆ ಸಂಕಷ್ಟ

ಬೆಂಗಳೂರು: ಅಮರನಾಥ ಯಾತ್ರೆಗೆ ತೆರಳಿರುವ 1,000ಕ್ಕೂ ಹೆಚ್ಚು ಭಕ್ತರು ಹವಾಮಾನ ವೈಪರೀತ್ಯದಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಮಾಹಿತಿ ಲಭ್ಯವಾಗಿದೆ. ಈ ಪೈಕಿ 80ಕ್ಕೂ ಹೆಚ್ಚು ಮಂದಿ ಕರ್ನಾಟಕದವರು ಎಂದು ಪ್ರಾಥಮಿಕ ಮಾಹಿತಿ ಸಿಕ್ಕಿದೆ.

7

ಕತ್ತರಿಸಿದ ಸ್ಥಿತಿಯಲ್ಲಿ ಜೈನ ಮುನಿ ಶವ ಪತ್ತೆ

ಕಟಕಬಾವಿ (ಬೆಳಗಾವಿ ಜಿಲ್ಲೆ): ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿಯ ನಂದಿಪರ್ವತ ಆಶ್ರಮದ ಮುನಿ ಕಾಮಕುಮಾರ ನಂದಿ ಮಹಾರಾಜ ಅವರ ಶವ ಕತ್ತರಿಸಿದ ಸ್ಥಿತಿಯಲ್ಲಿ, ರಾಯಬಾಗ ತಾಲ್ಲೂಕಿನ ಕಟಕಬಾವಿಯ ಕೊಳವೆಬಾವಿಯಲ್ಲಿ ಶನಿವಾರ ಪತ್ತೆಯಾಗಿದೆ.

6

ರೈಲ್ವೆ: ಎ.ಸಿ ಚೇರ್ ಕಾರ್ ದರದಲ್ಲಿ ಶೇ 25 ರಿಯಾಯಿತಿ

ನವದೆಹಲಿ (ಪಿಟಿಐ): ಎಲ್ಲ ರೈಲುಗಳಲ್ಲಿನ ಎ.ಸಿ ಚೇರ್ ಕಾರ್, ಎಕ್ಸಿಕ್ಯೂಟಿವ್ ಕ್ಲಾಸ್ ಕೋಚ್‌ಗಳ ಪ್ರಯಾಣದಲ್ಲಿ ಆಸನಗಳ ಲಭ್ಯತೆಗೆ ಅನುಗುಣವಾಗಿ ಗರಿಷ್ಠ ಶೇ 25ರಷ್ಟು ರಿಯಾಯಿತಿ ನೀಡಲಾಗುವುದು ಎಂದು ರೈಲ್ವೆ ಮಂಡಳಿ ಶನಿವಾರ ತಿಳಿಸಿದೆ.

ವಂದೇ ಭಾರತ್, ಅನುಭೂತಿ ಹಾಗೂ ವಿಸ್ಟಾಡೋಮ್ ಕೋಚ್‌ಗಳಿರುವ ರೈಲುಗಳಿಗೂ ಈ ರಿಯಾಯಿತಿ ಅನ್ವಯ. ಮುಂಗಡ ಬುಕಿಂಗ್ ಚಾರ್ಜ್, ಸೂಪರ್ ಫಾಸ್ಟ್ ಸರ್‌ಚಾರ್ಜ್, ಜಿಎಸ್‌ಟಿ ಮತ್ತಿತರ ಶುಲ್ಕಗಳು ಹಾಗೇ ಇರಲಿವೆ ಎಂದು ಮಂಡಳಿ ತಿಳಿಸಿದೆ.

ಒಳ ಪುಟ

ಭತ್ತ ನಾಟಿ ಮಾಡಿದ ರಾಹುಲ್ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

Available at all leading retail outlets: Bangalore: Prakash Electronics – 9845949116, Payal Electronics And Home Appliances – 8884133341; Abbigere: Devi electro World – 9538244221; Chikballapur: E-city – 9945216493; Devanahalli: Reddy Electronics – 9738351235; Dodballaput: Vijaya Radio – 9341080215; Electronic city: Baron Electronics pvt ltd – 9242204839; Hanumanthanagar: Meenakshi Electricals – 9844798577, Pankaj Electronics – 9731808060; Jayanagar: Arvind – 9448988092, Devi International – 9916944265; KR puram: Pooja Electronics and Mobiles – 9353432376; Nagarabhavi: Hot Touch Home Appliacnes – 9900265745; Peenya: Ace Communications – 9743335557; Rajaji Nagar: Prakash Electronics – 9845949116; Sunkadkatte: Kundan Electroniks – 9448040338; Vidyaranyapura: Shubham Electronics & Home Appliances – 9738299004, Mahalakshmi Steel House – 9663375159.

ಆಶಾ: ಗೌರವಧನ ಹೆಚ್ಚಳಕ್ಕೆ ಆಗ್ರಹ

ಬೆಂಗಳೂರು: 'ಆಶಾ ಕಾರ್ಯಕರ್ತೆಯರ ಗೌರವಧನವನ್ನು ₹ 5 ಸಾವಿರದಿಂದ ₹ 8 ಸಾವಿರಕ್ಕೆ ಹೆಚ್ಚಳ ಮಾಡಬೇಕು' ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಆಗ್ರಹಿಸಿದೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಆಶಾ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸುತ್ತಾರೆಂಬ ನಿರೀಕ್ಷೆಯಲ್ಲಿ ಇದ್ದೇವು. ಆದರೆ, ಅದು ಹುಸಿಯಾಗಿದೆ' ಎಂದು ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಬೇಸರ ವ್ಯಕ್ತಪಡಿಸಿದ್ದಾರೆ.

ಆಶಾ ಕಾರ್ಯಕರ್ತೆಯರು, ಅಂಗನವಾಡಿ ಬಿಸಿಯೂಟ ಕಾರ್ಯಕರ್ತೆಯರಿಗೆ 'ಗೃಹಲಕ್ಷ್ಮಿ' ಯೋಜನೆಯಡಿ ಪ್ರತಿ ತಿಂಗಳು ತಲಾ ₹ 2 ಸಾವಿರ ನೀಡುವುದಾಗಿ ಹೇಳಲಾಗಿತ್ತು. ಮನೆಯ ಯಜಮಾನಿ ಬೇರೆಯವರು ಇದ್ದಲ್ಲಿ ಆಶಾ ಕಾರ್ಯಕರ್ತೆಯರು ಯೋಜನೆಯ ಫಲಾನುಭವಿಗಳಾಗುತ್ತಾರೆಯೇ ಎನ್ನುವುದನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

'ಪ್ರಬುದ್ಧ ಕರ್ನಾಟಕ: ಜನಮನ ಸಮಾವೇಶ'ದಲ್ಲಿ ಲೇಖಕ ಪರುಷೋತ್ತಮ ಬಿಳಿಮಲೆ

'ಕಲಾ ಪ್ರಕಾರಕ್ಕೂ ಅಂಟಿದ ಕೋಮುವಾದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರಾವಳಿ ವ್ಯಾಪ್ತಿಯಲ್ಲಿ ಕೋಮುವಾದದ ವಿಷ ಬಿತ್ತಲಾಗಿದ್ದು, ಶಾಂತಿ ಕದಡುವ ಕೆಲಸಗಳು ನಡೆಯುತ್ತಿವೆ' ಎಂದು ಲೇಖಕ ಡಾ. ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಜನಮನ ಪ್ರತಿಷ್ಠಾನ ಹಾಗೂ ಸಮತಾ ಅಧ್ಯಯನ ಕೇಂದ್ರ ಆಯೋಜಿಸಿದ್ದ 'ಪ್ರಬುದ್ಧ ಕರ್ನಾಟಕ: ಜನಮನ ಸಮಾವೇಶ'ದಲ್ಲಿ ಅವರು 'ಸಾಹಿತ್ಯ ಕಲೆಗಳಿಗೆ ಉತ್ತೇಜನ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಸ್ವಾಯತ್ತತೆ' ಕುರಿತು ವಿಷಯ ಮಂಡಿಸಿದರು.

'ರಾಷ್ಟ್ರಕವಿ ಕುವೆಂಪು ಅವರು ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ'ವೆಂದು ಕರೆದರು. ಆದರೆ, ಮತೀಯ ಶಕ್ತಿಗಳು ಅದನ್ನು ಒಪ್ಪದೇ ತಮ್ಮ ರಾಜಕೀಯ ಕಾರಣಕ್ಕಾಗಿ ರಾಜ್ಯದಲ್ಲಿ ಶಾಂತಿ ಕದಡುತ್ತಿವೆ. ಅಲ್ಲದೇ ಸೌಹಾರ್ದ ವಾತಾವರಣವನ್ನೇ ನಾಶ ಮಾಡಲು ಹೊರಟಿವೆ' ಎಂದು ಆಪಾದಿಸಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಪ್ರಬುದ್ಧ ಕರ್ನಾಟಕ: ಜನಮನ ಸಮಾವೇಶ'ದಲ್ಲಿ ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

'ಕೆಲವು ಆಚರಣೆಗಳು ಹಾಗೂ ಯಕ್ಷಗಾನ ಸೇರಿದಂತೆ ಅತ್ಯುತ್ತಮ ಜನಪದ ಪರಂಪರೆಗಳೂ ಈಗ ಕೋಮುವಾದದ ತೆಕ್ಕೆಗೆ ಬಿದ್ದಿವೆ. ಅವುಗಳೂ ನೆಲೆ ಕಳೆದುಕೊಳ್ಳುತ್ತಿವೆ. ಅದನ್ನು ಪೋಷಿಸಿದವರೂ ಸೇರಿದಂತೆ ಎಲ್ಲರನ್ನೂ ಅದು ಬಲಿ ತೆಗೆದುಕೊಳ್ಳಲು ಸಿದ್ಧವಾಗಿದೆ' ಎಂದು ಎಚ್ಚರಿಸಿದರು.

'ರಾಜ್ಯಕ್ಕೆ ಎಂದೂ ಕೋಮುವಾದ ನುಸುಳಿರಲಿಲ್ಲ. ಇದಕ್ಕೆ ರಾಜ್ಯದ ಇತಿಹಾಸವೇ ಸಾಕ್ಷಿಯಾಗಿದೆ. ರಾಜ್ಯಕ್ಕೆ ಯಾರೇ ಬಂದರೂ ಅವರನ್ನು ತಿರಸ್ಕರಿಸುವ ಕೆಲಸ ಮಾಡಿರಲಿಲ್ಲ. ಎಲ್ಲ ಧರ್ಮ ಹಾಗೂ ಸಮುದಾಯಗಳನ್ನು ಒಳ್ಳಗೊಳ್ಳುವ ವಿಶಿಷ್ಟತೆ ಮೆರೆದ ರಾಜ್ಯ ನಮ್ಮದಾಗಿದೆ. ಇಂತಹ ರಾಜ್ಯಕ್ಕೆ ಕೋಮುವಾದ ಕಲಿಸುವ ಪ್ರಯತ್ನಗಳು ನಡೆದಿವೆ. ಅದನ್ನು ಮೆಟ್ಟಿ ನಿಲ್ಲಬೇಕು' ಎಂದು ಕರೆ ನೀಡಿದರು.

ಶಿಕ್ಷಣ ತಜ್ಞ ಪ್ರೊ.ವಿ.ಪಿ. ನಿರಂಜನಾರಾಧ್ಯ ಅವರು 'ಪ್ರಾಥಮಿಕ ಶಿಕ್ಷಣವನ್ನು ಮಕ್ಕಳ ಜ್ಞಾನ ವಿಕಸನ ನೆಲೆಯಲ್ಲಿ ಪರಿಣಾಮಕಾರಿ ಮಾರ್ಗೋಪಾಯಗಳು' ಕುರಿತು ಮಾತನಾಡಿ, 'ಎಲ್ಲರಿಗೂ ಶಿಕ್ಷಣದ ಹಕ್ಕು ಪರಿಣಾಮಕಾರಿ ಹಾಗೂ ಪ್ರಾಮಾಣಿಕವಾಗಿ ಜಾರಿಗೊಳ್ಳಬೇಕಿದೆ' ಎಂದರು.

ಸಾಹಿತಿ ಜಿ.ರಾಮಕೃಷ್ಣ ಮಾತನಾಡಿ, 'ಸಮಾವೇಶದಲ್ಲಿ ಮಂಡನೆಯಾದ ವಿಷಯಗಳ ಸಂಕ್ಷಿಪ್ತ ಸಾರವನ್ನು ಪಟ್ಟಿ ಮಾಡಿ ಮುಖ್ಯಮಂತ್ರಿಗೆ ಸಲ್ಲಿಸಲಾಗುವುದು. ಎಲ್ಲ ಸಮಸ್ಯೆಗಳಿಗೂ ಅವರು ಪರಿಹಾರ ಹುಡುಕುವ ಭರವಸೆ ಇದೆ' ಎಂದರು.

ಡಾ.ಎಚ್.ಜಯಪ್ರಕಾಶ್ ಶೆಟ್ಟಿ, ಡಾ.ಟಿ.ಆರ್. ಚಂದ್ರಶೇಖರ್, ಪ್ರೊ. ರಾಜೇಂದ್ರ ಪೌದ್ದಾರ್ ವಿಷಯ ಮಂಡಿಸಿದ್ದರು. ಜನಮನ ಪ್ರತಿಷ್ಠಾನದ ಅಧ್ಯಕ್ಷ ಲಕ್ಷ್ಮಣ ಕೊಡಸೆ ಇದ್ದರು.

ಸುದ್ದಿ 2 ನಿಮಿಷ

ಎಸ್‌ಡಿಐನ ಕಮಾಂಡೆಂಡ್ ಆಗಿ ಕೆ.ಎನ್.ಸಂತೋಷ್ ಅಧಿಕಾರ ಸ್ವೀಕಾರ

ಬೆಂಗಳೂರು: ಭಾರತೀಯ ವಾಯುಪಡೆಯ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್‌ನ (ಎಸ್‌ಡಿಐ) ಕಮಾಂಡೆಂಟ್ ಆಗಿ ಏರ್‌ವೈಸ್ ಮಾರ್ಷಲ್ ಕೆ.ಎನ್. ಸಂತೋಷ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಬೆಂಗಳೂರಿನವರೇ ಆಗಿರುವ ಸಂತೋಷ್ ಅವರು, ಮಂಡ್ಯದ ಪಿಇಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ವ್ಯಾಸಂಗ ಮಾಡಿದ್ದರು. ನಂತರ, ಡಿಫೆನ್ಸ್ ಸರ್ವಿಸಸ್ ಸ್ಟಾಫ್ ಕಾಲೇಜಿನಲ್ಲಿ 'ಯುದ್ಧ ನಿರ್ವಹಣೆ ಮತ್ತು ರಕ್ಷಣಾ ಅಧ್ಯಯನ'ದಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದರು. ಎಸ್‌ಡಿಐನ ಆರಂಭಿಕ ದಿನಗಳಿಂದಲೂ ಸೇವೆ ಸಲ್ಲಿಸುತ್ತಿದ್ದು, ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದಾರೆ.

ಯುದ್ಧ ಮುಂಚೂಣಿ ಕೇಂದ್ರದಲ್ಲಿ ಮುಖ್ಯ ಎಂಜಿನಿಯರ್ ಆಗಿ, ವಾಯು ಸೇನಾ ಮುಖ್ಯಾಲಯದಲ್ಲಿ ಎಸ್‌ಯು–30 ಯೋಜನಾ ನಿರ್ದೇಶಕರಾಗಿ, ಯುದ್ಧ ಸಂಬಂಧಿತ ನೆಟ್‌ವರ್ಕ್‌ನ ಪ್ರಧಾನ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಮಾಸ್ಕೋದ ಭಾರತೀಯ ದೂತಾವಾಸದಲ್ಲಿ ವೈಮಾನಿಕ ಸಾಫ್ಟ್‌ವೇರ್ ವಿಶೇಷ ತಜ್ಞರಾಗಿಯೂ ಕೆಲಸ ಮಾಡಿದ್ದರು ಎಂದು ಪ್ರಕಟಣೆ ತಿಳಿಸಿದೆ.



ಮುಖ್ಯಮಂತ್ರಿಗೆ ಶೀತ, ಕೆಮ್ಮು

ಬೆಂಗಳೂರು: ಶೀತ ಮತ್ತು ಕೆಮ್ಮಿನಿಂದ ಬಳಲುತ್ತಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಎರಡು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಎರಡು ದಿನಗಳಿಂದ ಸಿದ್ದರಾಮಯ್ಯ ಅವರಿಗೆ ಶೀತ ಕಾಣಿಸಿಕೊಂಡಿದ್ದು, ಅದನ್ನು ಲೆಕ್ಕಿಸದೆ ಶುಕ್ರವಾರ ಅವರು 2 ಗಂಟೆ 50 ನಿಮಿಷಗಳ ಕಾಲ ಬಜೆಟ್ ಪುಸ್ತಕ ಓದಿದ್ದರು. ಬಳಿಕ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬಜೆಟ್‌ಗೆ ಸಂಬಂಧಿಸಿದಂತೆ ಸುದ್ದಿಗೋಷ್ಠಿ ನಡೆಸಿ, ತಮ್ಮ ನಿವಾಸಕ್ಕೆ ತೆರಳಿದ್ದರು.

'ಸಿದ್ದರಾಮಯ್ಯ ಅವರ ಆರೋಗ್ಯ ತಪಾಸಣೆ ಶನಿವಾರ ನಡೆಸಿದ್ದ ವೈದ್ಯರು, ಚಳಿ ಇರುವುದರಿಂದ ಹೊರಗೆ ಹೋಗದೆ ವಿಶ್ರಾಂತಿ ಪಡೆಯಲು ಸಲಹೆ ನೀಡಿದ್ದರು. ಆದರೂ ತಮ್ಮ ನಿವಾಸದಲ್ಲಿ ಮಧ್ಯಾಹ್ನದವರೆಗೆ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದ ಅವರು, ಮಧ್ಯಾಹ್ನದ ಬಳಿಕ ದೇವರಾಜ ಅರಸು ಭವನದಲ್ಲಿ ಹಮ್ಮಿಕೊಂಡಿದ್ದ ಪ್ರಬುದ್ಧ ಕರ್ನಾಟಕ ಜನಮನ ಸಮಾವೇಶದಲ್ಲಿ ಮತ್ತು ಎಚ್‌ಎಸ್‌ಆರ್ ಲೇಔಟ್‌ನಲ್ಲಿ ನಡೆದ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದರು' ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

'ದಿ ಎಸ್ಸೆನ್ಸಿಯಲ್ ಯು.ಆರ್. ಅನಂತಮೂರ್ತಿ' ಕೃತಿಯ ಹಿನ್ನೆಲೆಯಲ್ಲಿ ನಡೆದ ಸಂವಾದ

ಚರ್ಚೆಗೊಳಗಾದ ಅನಂತಮೂರ್ತಿಯ ಚಿಂತನೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಯು.ಆರ್. ಅನಂತಮೂರ್ತಿಯ ಬದುಕು ಮತ್ತು ಚಿಂತನೆಗಳನ್ನು ಮೆಲುಕು ಹಾಕಲು, ಚರ್ಚೆಗೆ ಒಳಪಡಿಸಲು 'ಸಮಾಜವಾದಿ ಭವಿಷ್ಯ' ಅನಂತಮೂರ್ತಿ ಚಿಂತನೆ ಸಂವಾದ ಕಾರ್ಯಕ್ರಮವು ವೇದಿಕೆಯಾಯಿತು.

ಎನ್. ಮನು ಚಕ್ರವರ್ತಿ ಮತ್ತು ಚಂದನ್ ಗೌಡ ಸಂಪಾದಿಸಿದ 'ದಿ ಎಸ್ಸೆನ್ಶಿಯಲ್ ಯು.ಆರ್. ಅನಂತಮೂರ್ತಿ' ಕೃತಿಯ ಹಿನ್ನೆಲೆಯಲ್ಲಿ ಶನಿವಾರ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಈ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

'ಕಾದಂಬರಿ', 'ಸಣ್ಣ ಕಥೆಗಳು', 'ಕವನಗಳು', 'ಪ್ರಬಂಧ ಮತ್ತು ಭಾಷಣಗಳು', 'ನೆನಪುಗಳು' ಈ ಐದು ವಿಭಾಗಗಳನ್ನು ಒಳಗೊಂಡು 'ದಿ ಎಸ್ಸೆನ್ಸಿಯಲ್ ಯು.ಆರ್. ಅನಂತಮೂರ್ತಿ' ಕೃತಿ ಸಂಪಾದಿಸಲಾಗಿದೆ. ಕೃತಿಯ ಹೆಸರು ಮತ್ತು ಆಯ್ಕೆ ಮಾಡಿಕೊಂಡ ವಿಷಯಗಳ ಬಗ್ಗೆ ಮೆಚ್ಚುಗೆ ಮತ್ತು ಪ್ರಶ್ನೆಗಳು ವೇದಿಕೆಯಲ್ಲಿ ಮೂಡಿದವು.

'ಅನಂತಮೂರ್ತಿ ಅವರು ಕಾದಂಬರಿಕಾರ ನಿಜ. ಆದರೆ, ಅವೆಲ್ಲವನ್ನು ಮೀರಿದ್ದು ಅವರ ಚಿಂತನೆಯ ಬರಹ ಮತ್ತು ಭಾಷಣಗಳು. ಅವು ರೂಪಕಗಳನ್ನು ಕಥೆ, ಕಾದಂಬರಿ, ಕವನಗಳಲ್ಲಿ ಮಾತ್ರ ಬಳಸಿದ್ದಲ್ಲ. ಪ್ರಬಂಧಗಳಲ್ಲಿಯೂ ಬಳಸಿದ್ದಾರೆ. ರಾಜಕೀಯ ಬದ್ಧ ಕಥೆಗಾರ' ಎಂದು ಉಪನ್ಯಾಸಕ ಎನ್.ಎಸ್. ಗುಂಡೂರ ಬಣ್ಣಿಸಿದರು.

'ಯು.ಆರ್ ಅನಂತಮೂರ್ತಿ ಅವರ ಸಮಾಜವಾದಿ ಭವಿಷ್ಯದ ಚಿಂತನೆ' ಕಾರ್ಯಕ್ರಮದಲ್ಲಿ ಚಂದನ್ ಗೌಡ ಮಾತನಾಡಿದರು. ಎನ್. ಮನು ಚಕ್ರವರ್ತಿ, ನಿತ್ಯಾನಂದ ಬಿ.ಶೆಟ್ಟಿ, ಎನ್.ಎಸ್ ಗುಂಡೂರ, ಅಂಜುಮ್ ಹಸನ್, ಎಚ್.ಎಸ್. ರಾಘವೇಂದ್ರ ರಾವ್ ಇದ್ದರು ಪ್ರಜಾವಾಣಿ ಚಿತ್ರ

'ಪ್ರಸ್ತುತ ವಿದ್ಯಮಾನಗಳಿಗೆ ತಕ್ಷಣ ನೇರವಾಗಿ ಪ್ರತಿಕ್ರಿಯಿಸುವ ಗುಣ ಅನಂತಮೂರ್ತಿಯವರದ್ದಾಗಿತ್ತು. ಸ್ಥಳೀಯ ಭಾಷೆ ಕನ್ನಡಕ್ಕೆ ಪಶ್ಚಿಮದ ಜತೆಗೆ ಸಂಬಂಧ ಬೆಸೆಯಲು ಪ್ರಯತ್ನಿಸಿದ್ದರು' ಎಂದು ಲೇಖಕಿ ಅಂಜುಂ ಹಸನ್ ನೆನಪು ಮಾಡಿಕೊಂಡರು.

'ಅನಂತಮೂರ್ತಿ ಆಳಕ್ಕೆ ಹೋಗಿ ಪಾಂಡಿತ್ಯದಿಂದ ಬರೆದವರಲ್ಲ. ಹಾಗೆ ಬರೆದಿದ್ದರೆ ಅದು ಯಾವುದೋ ನಾಲ್ಕು ಪಂಡಿತರ ನಡುವೆ ಚರ್ಚೆಗೆ ಒಳಗಾಗುತ್ತಿತ್ತು. ಅನಂತಮೂರ್ತಿ ಅನುಭವದಿಂದ ಮತ್ತು ಅನುಭವಕ್ಕೆ ಬೆಲೆ ಕಟ್ಟುವ ರೀತಿಯಲ್ಲಿ ಬರೆದರು. ಜನಸಾಮಾನ್ಯರಿಗೂ ಮುಟ್ಟುವಂತೆ ಬರೆದರು' ಎಂದು ಸಾಹಿತ್ಯ ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ತಿಳಿಸಿದರು.

'ರಾಜಕೀಯ, ಧರ್ಮ, ಪರಿಸರ, ಅಭಿವೃದ್ಧಿ, ಕೋಮುವಾದಗಳ ಬಗ್ಗೆ ಎಚ್ಚರಿಸಿದ, ಅದಕ್ಕಾಗಿ ಜೀವನಪೂರ್ತಿ ಒದ್ದಾಡಿದ ಅನಂತಮೂರ್ತಿಯನ್ನು ಹಿಡಿದಿಡುವುದು ಸುಲಭದ ಕೆಲಸವಲ್ಲ. ಎಲ್ಲರಿಗೂ ಕಾಣದ್ದನ್ನು ಕಾಣಿಸುವ ಕೆಲಸವನ್ನು ಅನಂತಮೂರ್ತಿ ಮಾಡಿದ್ದರು' ಎಂದು ಉಪನ್ಯಾಸಕ ನಿತ್ಯಾನಂದ ಬಿ. ಶೆಟ್ಟಿ ಸ್ಮರಿಸಿದರು.

ಉಪನ್ಯಾಸಕರು ಎತ್ತಿದ ಪ್ರಶ್ನೆಗಳಿಗೆ ಕೃತಿ ಸಂಪಾದಕರಾದ ಎನ್. ಮನು ಚಕ್ರವರ್ತಿ ಮತ್ತು ಚಂದನ್ ಗೌಡ ಉತ್ತರಿಸಿದರು.

ವ್ಯಂಗ್ಯಚಿತ್ರಗಳ ಪ್ರದರ್ಶನ ಇದೇ 22ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವ್ಯಂಗ್ಯ ಚಿತ್ರಕಾರರ ಸಂಸ್ಥೆಯು ಇದೇ 22ರಂದು ಖ್ಯಾತ ವ್ಯಂಗ್ಯ ಚಿತ್ರಕಾರ ಅನ್ವರ್ ಅಹ್ಮದ್ ಅವರ ವ್ಯಂಗ್ಯಚಿತ್ರಗಳ ಪ್ರದರ್ಶನವನ್ನು ಟ್ರಿನಿಟಿ ವೃತ್ತದಲ್ಲಿರುವ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯಲ್ಲಿ ಆಯೋಜಿಸಿದೆ.

ಈ ಪ್ರದರ್ಶನವನ್ನು ಇತಿಹಾಸ ತಜ್ಞ ರಾಮಚಂದ್ರ ಗುಹಾ ಅವರು ಉದ್ಘಾಟಿಸಲಿದ್ದಾರೆ. ಸಂಶೋಧಕ ರೀತು ಗೈರೊಲಾ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪುಸ್ತಕದ ಹೊರೆ ಕಡಿಮೆ ಮಾಡಲು ಯತ್ನ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿಗಳಿಗೆ ಪುಸ್ತಕದ ಹೊರೆಯನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುವುದು. ಅದಕ್ಕಾಗಿ ರಾಜ್ಯ ಶಿಕ್ಷಣ ನೀತಿ ರೂಪಿಸಲು ನಿರ್ಧರಿಸಿದ್ದು, ಶೀಘ್ರದಲ್ಲಿ ತಜ್ಞರ ಸಮಿತಿ ರಚಿಸಲಾಗುವುದು' ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದರು.

ನಗರದ ಆಡುಗೋಡಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಶನಿವಾರ ನಡೆದ ಬಿಟಿಎಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 22 ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್, ಸ್ಕೂಲ್ ಬ್ಯಾಗ್ ಮತ್ತು ಸ್ವೆಟರ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸರ್ಕಾರಿ ಶಾಲೆ ಹಾಗೂ ಅನುದಾನಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆ ಅಥವಾ ಬಾಳೆ ಹಣ್ಣು, ಚಿಕ್ಕಿ ಮುಂತಾದ ಪೂರಕ ಪೌಷ್ಟಿಕ ಆಹಾರ ನೀಡಲಾಗುವುದು' ಎಂದು ಹೇಳಿದರು.

ಬಿಟಿಎಂ ವಿಧಾನಸಭಾ ಕ್ಷೇತ್ರದ 22 ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಸಚಿವರಾದ ಎಸ್. ಮಧು ಬಂಗಾರಪ್ಪ, ರಾಮಲಿಂಗಾ ರೆಡ್ಡಿ ಉಚಿತ ನೋಟ್ ಬುಕ್, ಸ್ಕೂಲ್ ಬ್ಯಾಗ್ ಮತ್ತು ಸ್ವೆಟರ್ ವಿತರಿಸಿದರು

'ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಆಡುಗೋಡಿ ಕರ್ನಾಟಕ ಪಬ್ಲಿಕ್ ಸ್ಕೂಲ್ (ಮುನಿಚಿನ್ನಪ್ಪ ಶಾಲೆ) ಇತರೆ ಶಾಲೆಗಳಿಗೆ ಮಾದರಿಯಾಗಿದೆ. 2000ನೇ ಇಸವಿಯಲ್ಲಿ ಈ ಶಾಲೆಯಲ್ಲಿ 190 ವಿದ್ಯಾರ್ಥಿಗಳು ದಾಖಲಾಗಿದ್ದರು. ಪ್ರಸ್ತುತ ಸುಮಾರು 426 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ' ಎಂದು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, '1945ರಲ್ಲಿ ಈ ಸರ್ಕಾರಿ ಶಾಲೆ ಆರಂಭವಾಗಿತ್ತು. ದಾನಿಗಳ ನೆರವಿನಿಂದ ನವೀಕರಿಸಲಾಗಿದೆ. ಇದೇ ರೀತಿ ಹತ್ತಾರು ಶಾಲೆಗಳು ನವೀಕರಣಗೊಂಡಿವೆ' ಎಂದು ತಿಳಿಸಿದರು.

ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಬೈಲಾಂಜನಪ್ಪ ಮಾತನಾಡಿದರು.

'ನಗರದ ತಾಪಮಾನದಲ್ಲಿ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ 20ರಿಂದ 25 ವರ್ಷಗಳಲ್ಲೇ ಬೆಂಗಳೂರಿನಲ್ಲಿ ನಗರೀಕರಣ ಶೇ 87ರಷ್ಟು ಹೆಚ್ಚಾಗಿದೆ' ಎಂದು ಹೈದರಾಬಾದ್‌ನ ಇಸ್ರೊ ರಾಷ್ಟ್ರೀಯ ದೂರಸಂವೇದಿ ಕೇಂದ್ರದ ನಿರ್ದೇಶಕ ಡಾ. ಪ್ರಕಾಶ್ ಚೌಹಾಣ್ ಅಭಿಪ್ರಾಯಪಟ್ಟರು.

ಇಲ್ಲಿನ ರಾಮನ್ ಸಂಶೋಧನಾ ಸಂಸ್ಥೆಯ (ಆರ್‌ಆರ್‌ಐ) ಮತ್ತು ಬೆಂಗಳೂರು ಪರಿಸರ ಸಂಘಟನೆ (ಇಎಬಿ) ಶನಿವಾರ ಜಂಟಿಯಾಗಿ 'ನಗರ ನಿರ್ವಹಣೆ ಮತ್ತು ಜಲ ಸಂರಕ್ಷಣೆ' ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರಿನಲ್ಲೂ ತಾಪಮಾನ ಹೆಚ್ಚುತ್ತಿದೆ. ಕಳೆದ ಎರಡು ದಶಕಗಳಲ್ಲಿ ಬೆಂಗಳೂರಿನ ತಾಪಮಾನವೂ ಸರಾಸರಿ 1.5 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ' ಎಂದರು.

'ಬೆಂಗಳೂರು ಸೇರಿದಂತೆ ಎಲ್ಲ ಪ್ರಮುಖ ನಗರಗಳು ಹಲವು ರೀತಿಯ ಸವಾಲುಗಳು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ನಗರಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಕೊರತೆಯೂ ನಿರಂತವಾಗಿ ಹೆಚ್ಚುತ್ತಿದೆ. ಸಂಪನ್ಮೂಲಗಳಿಗಾಗಿ ಮತ್ತಷ್ಟು ಒತ್ತಡ ಹೆಚ್ಚಲಿದೆ' ಎಂದರು. ಆರ್‌ಆರ್‌ಐ ನಿರ್ದೇಶಕ ಪ್ರೊ. ತರುಣ್ ಸೌರದೀಪ್, 'ಪರಿಸರ ಸಮಸ್ಯೆಗಳನ್ನು ನಿವಾರಿಸುವುದು ಅತಿ ದೊಡ್ಡ ಸವಾಲು' ಎಂದರು. ಇಎಬಿ ಅಧ್ಯಕ್ಷ ಡಾ.ಆರ್.ಜಿ. ನಡದೂರ್ ಇದ್ದರು.

ಉಕ್ರೇನ್–ರಷ್ಯಾ ಯುದ್ಧದಿಂದ ದೇಶಕ್ಕೂ ನಷ್ಟ: ಎಂ.ಜೆ. ಅಕ್ಬರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೂರ್ವ ರಷ್ಯಾದಿಂದ ನಮ್ಮ ದೇಶಕ್ಕೆ ಪೆಟ್ರೋಲ್, ಡೀಸೆಲ್ ಸೇರಿ ಹಲವು ವಸ್ತುಗಳು ಆಮದಾಗುತ್ತಿವೆ. ಹೀಗಾಗಿ, ಉಕ್ರೇನ್ ಹಾಗೂ ರಷ್ಯಾ ನಡುವಿನ ಯುದ್ಧವು ಭಾರತದ ಮೇಲೂ ಪರಿಣಾಮ ಬೀರುತ್ತಿದೆ' ಎಂದು ಮಾಜಿ ವಿದೇಶಾಂಗ ಸಚಿವ ಎಂ.ಜೆ. ಅಕ್ಬರ್ ಕಳವಳ ವ್ಯಕ್ತಪಡಿಸಿದರು.

ಚಾಣಕ್ಯ ವಿಶ್ವವಿದ್ಯಾಲಯವು ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಉಕ್ರೇನ್‌ನಲ್ಲಿ ಯುರೋಪ್ ಯುದ್ಧ, ಏಷ್ಯಾದ ಮೇಲೆ ಪರಿಣಾಮಗಳು' ಎಂಬ ವಿಷಯದ ಬಗ್ಗೆ ಮಾತನಾಡಿದರು.

'ಈ ಯುದ್ಧದ ಪ್ರತಿಕೂಲ ಪರಿಣಾಮಗಳು ಎರಡು ದೇಶಗಳು ಹಾಗೂ ಅವುಗಳ ನೆರೆಯ ದೇಶಗಳಿಗಷ್ಟೇ ಸೀಮಿತವಾಗಿಲ್ಲ. ಜಾಗತಿಕ ಪೂರೈಕೆ ಸರಪಣಿಯನ್ನು ಈ ಸಂಘರ್ಷವು ಹಾಳುಗೆಡವಲಿದೆ. ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ಆಹಾರಧಾನ್ಯದ ಆಮದಿನಲ್ಲಿ ವ್ಯತ್ಯಯವಾಗಿ, ದರವು ಗಗನಕ್ಕೇರುವ ಸಾಧ್ಯತೆ ಇದೆ. ಈ ಯುದ್ಧದ ಪರಿಣಾಮನ್ನು ಏಷ್ಯಾ ಖಂಡವೇ ಹೆಚ್ಚು ಎದುರಿಸಲಿದ್ದು, ಮುಂದಿನ 20 ವರ್ಷಗಳು ಯುದ್ಧದ ಪ್ರಭಾವ ಇರಲಿದೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಎಂ.ಜೆ. ಅಕ್ಬರ್ ಮಾತನಾಡಿದರು

'ಈ ಯುದ್ಧದ ಮೂಲಕ ರಷ್ಯಾ ಹಾಗೂ ಅಮೆರಿಕ ಪರಸ್ಪರ ದುರ್ಬಲಗೊಳಿಸಲು ಪೈಪೋಟಿಗೆ ಇಳಿದಿದ್ದರೆ, ಚೀನಾ ಪ್ರಾಬಲ್ಯ ಮೆರೆಯುವ ತಂತ್ರದಲ್ಲಿದೆ. ನ್ಯಾಟೊ ಒಪ್ಪಿಗೆ, ರಷ್ಯಾ ಮೂಲ ಗಡಿಗೆ ಮರಳುವ ತನಕ ಉಕ್ರೇನ್ ಯುದ್ಧ ನಿಲ್ಲುವುದಿಲ್ಲ' ಎಂದರು.

'ಭಾರತದ ರಕ್ಷಣಾ ನೀತಿ ಅತ್ಯಂತ ಸ್ಥಿರವಾಗಿದ್ದು, ದೇಶದ ಹಿತಾಸಕ್ತಿ ರಕ್ಷಣೆಗೆ ಬದ್ಧವಾಗಿದೆ. ಪುಲ್ವಾಮಾ ದುಷ್ಕೃತ್ಯಕ್ಕೆ ಪ್ರತಿಯಾಗಿ ಬಾಲಾಕೋಟ್ ಮೇಲೆ ನಡೆಸಿದ ವೈಮಾನಿಕ ದಾಳಿಯು, ನೆರೆಯ ದೇಶಕ್ಕೆ ಅದರ ಮಿತಿ ತಿಳಿಸುವ ಸ್ಪಷ್ಟ ಎಚ್ಚರಿಕೆಯಾಗಿತ್ತು' ಎಂದು ಹೇಳಿದರು.

ಬೆಂಗಳೂರು ನಗರ ವಿ.ವಿ ಘಟಿಕೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸೆಂಟ್ರಲ್ ಕಾಲೇಜು ಸಭಾಂಗಣದಲ್ಲಿ ಜುಲೈ 10ರಂದು ಬೆಳಿಗ್ಗೆ 11ಕ್ಕೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವ ಆಯೋಜಿಸಲಾಗಿದೆ. 5,997 ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ 35,911 ವಿದ್ಯಾರ್ಥಿಗಳು ಪದವಿಗೆ ಅರ್ಹರಾಗಿದ್ದಾರೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರುವರು. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡುವರು. 61 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದು, 51 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಗುವುದು. ಪದವಿ ಪಡೆಯುತ್ತಿರುವವರಲ್ಲಿ ಶೇ 60ರಷ್ಟು ಮಹಿಳೆಯರು, ಶೇ 40ರಷ್ಟು ಪುರುಷರು ಇದ್ದಾರೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಹೊಸದಾಗಿ ಸ್ಥಾಪಿತವಾದ ವಿಶ್ವವಿದ್ಯಾಲಯವಾದ ಕಾರಣ ವಿಶ್ವವಿದ್ಯಾಲಯವೇ 38 ಚಿನ್ನದ ಪದಕ ನೀಡುತ್ತಿದೆ. ದಾನಿಗಳು 13 ಚಿನ್ನದ ಪದಕ ಸ್ಥಾಪಿಸಿದ್ದಾರೆ. ಎಂಎಸ್ಸಿ ರಸಾಯನ ಶಾಸ್ತ್ರದಲ್ಲಿ ಪದ್ಮಾವತಿ ಕೆ.ವಿ. ನಾಯರ್, ಬಿ.ಕಾಂನಲ್ಲಿ ಕೃಪಾನಿಧಿ ವಾಣಿಜ್ಯ ಕಾಲೇಜಿನ ಅಜಿತ್ ಕುಮಾರ್ ಎಂ, ಬಿಬಿಎನಲ್ಲಿ ಶೇಷಾದ್ರಿಪುರಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಎಸ್. ದೀಪ್ತಿ ತಲಾ ಮೂರು ಚಿನ್ನದ ಪದಕ ಪಡೆದಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಸಿ.ಎನ್. ಶ್ರೀಧರ್, ಮೌಲ್ಯಮಾಪನ ಕುಲಸಚಿವ ವಿ.ಲೋಕೇಶ್ ಇದ್ದರು.

ಕುವೆಂಪು ಪುತ್ರಿಗೆ ಗೌರವ ಡಾಕ್ಟರೇಟ್

ಸಾಹಿತ್ಯ ಕ್ಷೇತ್ರದ ಸೇವೆಗಾಗಿ ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತಿದೆ. ಶಿಕ್ಷಣ ಕ್ಷೇತ್ರದ ಸೇವೆಗಾಗಿ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕುಲಪತಿ ನಿಸಾರ್ ಅಹಮದ್, ಸಮಾಜ ಸೇವೆಗಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಅವರು ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದಾರೆ.

ಇಸ್ರೊ | ISRO

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (LEOS)
ಪೀಣ್ಯ, ಬೆಂಗಳೂರು-560058 ಲಿಯೋಸ್ ನಿರ್ಮಾಣ ಮತ್ತು ನಿರ್ವಹಣೆ ಗುಂಪು (LCMG)
[ಫೋನ್: (080) - 22685088, 5193, 5093, 5086- Fax- (080) - 28392310]

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ (ಎನ್‌ಐಇಟಿ)
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕ್ರಮ ಸಂಖ್ಯೆ	ಕೆಲಸದ ಹೆಸರು;. ಎನ್‌ಐಇಟಿ ಸಂಖ್ಯೆ ಮತ್ತು ದಿನಾಂಕ	ಟೆಂಡರ್ ಮತ್ತು ಇಎಮ್‌ಡಿಗೆ ಅಂದಾಜು ವೆಚ್ಚ ರೂ.	ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ	ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು	
				ಪ್ರಾರಂಭದ ದಿನಾಂಕ	ಮುಕ್ತಾಯದ ದಿನಾಂಕ
1	ಸ್ಟಾರ್ ಲ್ಯಾಬ್ ಬ್ಲಾಕ್, ಲಿಯೋಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು-58 ರಲ್ಲಿ ಜೆಐಬಿ ಕ್ರೇನ್ ಒದಗಿಸುವುದು. ಎನ್‌ಐಇಟಿ ಸಂಖ್ಯೆ ಲಿಯೋಸ್/ಸಿ&ಎಂಜಿ/ಮೆಕ್/ಕ್ರೇನ್/ಇಟಿಎನ್-01ಎಂ/2023-24 ದಿನಾಂಕ: 03.07.2023	ರೂ. 19.26 ಲಕ್ಷ ಇಎಂಡಿ ರೂ: 38,520/-	03 ತಿಂಗಳು	06.07.2023	28.07.2023
2	ಇಸ್ರಾದ್ ಕಟ್ಟಡ, ಲಿಯೋಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು-560058. ರಲ್ಲಿ ಸಂಕುಚಿತ ವಾಯು ಸೌಲಭ್ಯವನ್ನು ಒದಗಿಸುವುದು, ಸರಿಪಡಿಸುವುದು ಮತ್ತು ನಿಯೋಜಿಸುವುದು ಎನ್‌ಐಇಟಿ ಸಂಖ್ಯೆ: ಸಿ&ಎಂಜಿ/ಇಸ್ರಾದ್/ಸಂಕುಚಿತ ವಾಯು /ಟೆಂಡರ್/ಇಟಿಎನ್ 02ಎಂ/2023 24 ದಿನಾಂಕ 03.07.2023	ರೂ. 9.86 ಲಕ್ಷ ಇಎಂಡಿ ರೂ: 19,720/-	04 ತಿಂಗಳು	06.07.2023	28.07.2023

ಆಸಕ್ತ ಟೆಂಡರುದಾರರು ಇ-ಟೆಂಡರ್(ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು www.isro.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್ ಲೋಡ್ ಮಾಡಬಹುದು.

ಸಹಿ/-
ಸಮೂಹ ನಿರ್ದೇಶಕ [ನಿರ್ಮಾಣ ಮತ್ತು ನಿರ್ವಹಣಾ ಸಮೂಹ]
ಯುಆರ್ ಎಸ್ ಸಿ, ಬೆಂಗಳೂರು

ನಗರದಲ್ಲಿ ಇಂದು

ರಸ್ತೆ ಸುರಕ್ಷತಾ ರ್‍ಯಾಲಿ: ಆಯೋಜನೆ: ವಿಜಯನಗರ ಆಟೊಮೋಟಿವ್ ಸ್ಪೋರ್ಟ್ಸ್ ಅಸೋಸಿಯೇಷನ್, ಸ್ಥಳ: ದಿ ಕ್ಲಬ್, ಮೈಸೂರು ರಸ್ತೆ, ಬೆಳಿಗ್ಗೆ 7.30ರಿಂದ

ಚಾಮುಂಡೇಶ್ವರಿ ಜನ್ಮೋತ್ಸವ, ಮಹಾಕುಂಭಾಭಿಷೇಕ: ಗುರು ಮಹಾಗಣಪತಿ ಮೂಲ ದೇವತೆ ಪ್ರಾರ್ಥನೆ, ರಕ್ಷಾಬಂಧನ ಕಳಶ ಸ್ಥಾಪನೆ, ಅಗ್ನಿ ಪ್ರತಿಷ್ಠೆ, ಮಹಾಗಣಪತಿ ಹೋಮ, ಬೆಳಿಗ್ಗೆ 8.10ಕ್ಕೆ, ಪೂರ್ಣಾಹುತಿ ಪ್ರಸಾದ ವಿನಿಯೋಗ ಮಧ್ಯಾಹ್ನ 12ಕ್ಕೆ, ವೇದಿಕಾರ್ಚನೆ, ತತ್ವಹೋಮ, ಸ್ಪರ್ಶಾಹುತಿ, ಮಹಾಚಂಡಿಕಾ ಚಾಮುಂಡಿ ಹೋಮ ಸಂಜೆ 5ಕ್ಕೆ, 14ನೇ ಮಹಾಪೂರ್ಣಾಹುತಿ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ರಾತ್ರಿ 8ಕ್ಕೆ, ಆಯೋಜನೆ ಮತ್ತು ಸ್ಥಳ: ಚಾಮುಂಡೇಶ್ವರಿ ದೇವಸ್ಥಾನ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ

ಗಾಳಿಪಟ ಉತ್ಸವ–2023: ಅತಿಥಿಗಳು: ಮುನಿರತ್ನ, ಎಂ. ರಾಮಚಂದ್ರ, ಎಂ. ರಾಜ್‌ಕುಮಾರ್, ವಿ.ಸಿ. ಚಂದ್ರು, ಸುಧೀಂದ್ರಕುಮಾರ್, ಶಶಿಕಾಂತ್ ರಾವ್, ಶಿವಣ್ಣ, ಬಿ.ವಿ. ಶ್ರೀಮತಿ, ಅಧ್ಯಕ್ಷತೆ: ಎಚ್. ಎಲ್. ಪ್ರಸಾದ್, ಆಯೋಜನೆ: ಯೋಗ ಕೇಂದ್ರ ಆ್ಯಂಡ್ ರಾಜರಾಜೇಶ್ವರಿನಗರ ವಿಪ್ರ ವೇದಿಕೆ, ಸ್ಥಳ: ಮುನಿವೆಂಕಟಪ್ಪ ಆಟದ ಮೈದಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 8.30

ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್‌ನ ರಜತ ಮಹೋತ್ಸವ, ವಾರ್ಷಿಕ ಸಂಗೀತೋತ್ಸವ: ನಾಗಸ್ವರ: ವೆಂಕಟರಾಜು ವಿ. ಮತ್ತು ತಂಡ, ಪುರಂದರ ದಾಸರ ಪಿಳ್ಳಾರಿ ಗೀತೆಗಳು, ತ್ಯಾಗರಾಜರ ಪಂಚರತ್ನ ಕೃತಿ ಗಾಯನ ಮತ್ತು ವಾದನ, ಗಾಯನ: ಆನಂದ್ ಬಿ.ಎಸ್., ರಾಜ್ಯಶ್ರೀ ಜೋಸ್ಯಾರ್, ಸೌಮ್ಯ ಆಚಾರ್ಯ, ಕಲಾಂಬಿಕ ಸಹೋದರಿಯರು, ವೀಣೆ: ವೆಂಕಟಲಕ್ಷ್ಮಿ ಶ್ರೀಧರ್, ಪಿಟೀಲು: ಕುಶಲ್ ಬಿ., ಆಯೋಜನೆ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ಸ್ಥಳ: ವಾಂಶಿಕ ಸದನ, ಎ.ಎಚ್.ಆರ್. ಲೇಔಟ್, ಆದರ್ಶನಗರ, ಅರಿಶಿನಕುಂಟೆ, ಬೆಳಿಗ್ಗೆ 9ರಿಂದ

ಚೇತನ ನಾಟ್ಯ ನಿಕೇತನದ ಬೆಳ್ಳಿ ಸಪ್ತಾಹ: ಅತಿಥಿಗಳು: ರಾಣಿ ಸತೀಶ್, ಉಷಾ ದಾತಾರ್, ಬೈರತಿ ಬಸವರಾಜ್, ಸಿ. ಶಶಿಧರ ಕೋಟೆ, ಜಿ. ಬಾಬು, ಶಿವಣ್ಣ, ಶ್ರೀಕಾಂತ ಶಾಸ್ತ್ರಿ, ಆಯೋಜನೆ: ಚೇತನ ನಾಟ್ಯ ನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9.30ರಿಂದ

ಶ್ರೇಯಾ ಕಸ್ತೂರಿ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಶ್ರೇಯಾ ಕಸ್ತೂರಿ, ಆಯೋಜನೆ: ಶಾರದ ನೃತ್ಯಾಲಯ, ಸ್ಥಳ: ಎ.ಡಿ.ಎ ರಂಗಮಂದಿರ, ಸಂಜೆ 6

ಏರೋಸ್ಪೇಸ್ ಕನ್ನಡ ಸಂಘದ ಬೆಳ್ಳಿ ಮಹೋತ್ಸವ: ಉದ್ಘಾಟನೆ: ಪ್ರಮೋದಾದೇವಿ ಒಡೆಯರ್, ಅಧ್ಯಕ್ಷತೆ: ಮಿಹಿರ್ ಕಾಂತಿ ಮಿಶ್ರ, ಉಪಸ್ಥಿತಿ: ಚಂದ್ರಶೇಖರ ಕಂಬಾರ, ಅತಿಥಿಗಳು: ವಿ. ಮನೋಹರ್, ಸಂತೋಷ್ ಹಾನಗಲ್, ಎನ್. ಬಾಲಾಜಿ, ನಂದನ್, ಮಹೇಶ ಅಂಗಡಿ, ಕುಸುಮ ರಾಜಶೇಖರ್, ಜಿ.ಎನ್. ಶಿವಲಿಂಗ, ಲಿಂಗರಾಜು ಎಚ್., ಆರ್. ರಾಮಸ್ವಾಮಿ, ಆಯೋಜನೆ: ಏರೋಸ್ಪೇಸ್ ಕನ್ನಡ ಸಂಘ, ಸ್ಥಳ: ಡಾ.ವಿ.ಎಂ. ಘಾಟ್ಗೆ ಸಭಾಂಗಣ, ಮಧ್ಯ ಬಡಾವಣೆ, ಎಚ್.ಎ.ಎಲ್., ಬೆಳಿಗ್ಗೆ 9.30

ಪ್ರಮೋದಾದೇವಿ ಒಡೆಯರ್

ಇಂಟರ್‌ನ್ಯಾಷನಲ್ ಜಾವಾ ಎಜ್ಡಿ ಡೇ: ಆಯೋಜನೆ: ಬೆಂಗಳೂರು ಜಾವಾ ಎಜ್ಡಿ ಮೋಟಾರ ಸೈಕಲ್ ಕ್ಲಬ್, ಸ್ಥಳ: ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಮೈದಾನ್, ಯು.ಬಿ. ಸಿಟಿ, ವಿಠ್ಠಲ ಮಲ್ಯ ರಸ್ತೆ, ಬೆಳಿಗ್ಗೆ 10ರಿಂದ

ಸಂಯಮ ಯೋಗ ಮಹಾವಿದ್ಯಾಲಯದ 20ನೇ ವಾರ್ಷಿಕೋತ್ಸವ ಸಮಾರಂಭ: ಸಾನ್ನಿಧ್ಯ: ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾ ರೆಡ್ಡಿ, ಸನ್ಮಾನ: ಎಚ್.ಆರ್. ನಾಗೇಂದ್ರ, ಯೋಗ ಪರಿಚಯ ಕೃತಿ ಬಿಡುಗಡೆ: ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಎಸ್. ಸುರೇಶ್ ಕುಮಾರ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಎಚ್.ಎ. ಬಿಕ್ಷಾವರ್ತಿ ಮಠ, ಆಯೋಜನೆ: ಯೋಗರತ್ನ ಆತ್ಮಪ್ರೇಮ್ ಡಾ. ಧನ್ವಂತರಿ ಎಸ್. ಒಡೆಯರ್ ಸ್ನೇಹ ಬಳಗ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10

ಜಾನ್ ದೇವರಾಜ್ ಅವರ 'ಕಾ ಕಾ ಕು' ಪುಸ್ತಕ ಬಿಡುಗಡೆ: ಅತಿಥಿಗಳು: ಬಾಬು ಮ್ಯಾಥ್ಯು, ಶ್ವೇತಾ ಮನಪಾಡಿ, ಶ್ರೀನಿವಾಸ್ ಜಿ. ಕಪ್ಪಣ್ಣ, ಕಲ್ಪನಾ ಸಿಂಗ್, ಹಿಮಕರ್ ಎ.ಕೆ., ಬೈರಮಂಗಲ ರಾಮೇಗೌಡ, ಸಿ. ಬಸವಲಿಂಗಯ್ಯ, ಪಿಚ್ಚಳ್ಳಿ ಶ್ರೀನಿವಾಸ್, ಕಿಶೋರ್ ಜೋಸೆಫ್, ಎಚ್. ಜನಾರ್ದನ್ (ಜನ್ನಿ), ರವೀಂದ್ರ ಭಟ್ಟ, ಲಕ್ಷ್ಮಣದಾಸ್, ಪ್ರೊ. ಪ್ಯಾಟ್ರಿಕ್ ರಾಜ್‌ಕುಮಾರ್, ರಿತೋಪ್ರಿಯೋ ಸಾಹಾ, ಸೈಯದ್ ಅಕ್ರಮುಲ್ಲಾ, ಜಾನ್ ದೇವರಾಜ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

'ದಮನಿತ ಅಲೆಮಾರಿಗಳ ಸವಾಲುಗಳು ಮತ್ತು ಪರಿಹಾರ' ವಿಚಾರಗೋಷ್ಠಿ: ಉದ್ಘಾಟನೆ: ಶಿವರಾಜ ತಂಗಡಗಿ, ಅಧ್ಯಕ್ಷತೆ: ರವಿ ಮಾಕಳಿ, ಉಪಸ್ಥಿತಿ: ಅನಂತ ನಾಯಕ್, ಇಂದುಧರ್ ಹೊನ್ನಾಪುರ, ವೆಂಕಟರಮಣಯ್ಯ, ಬಿ.ಟಿ. ಲಲಿತಾ ನಾಯಕ್, ಅತಿಥಿಗಳು: ಅರವಿಂದ ಲಿಂಬಾವಳಿ, ಭೀಮಾ ನಾಯಕ್, ರುದ್ರಪ್ಪ ಲಮಾಣಿ, ಆಯೋಜನೆ: ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ, ಸ್ಥಳ: ಲಲಿತ್ ಅಶೋಕ ಹೋಟೆಲ್, ಕುಮಾರಪಾರ್ಕ್, ಬೆಳಿಗ್ಗೆ 10.30

ತಿಂಗಳ ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಸಾ.ಮ. ಶಿವಮಲ್ಲಯ್ಯ, ವಿ. ರೇಣುಕಾಪ್ರಸನ್ನ, ಅತಿಥಿಗಳು: ಶಾಂತಿ ವಾಸು, ಮಹಾಂತೇಶ್ ಮಾಗನೂರು, ಉಪಸ್ಥಿತಿ: ಕುವರ್ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ರತ್ನ ಜಿ. ನಾಗಭೂಷಣ್, ಎಸ್. ರಾಮಲಿಂಗೇಶ್ವರ, ಶಾಮಸುಂದರ್ ಎಚ್. ಆರ್., ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30ರಿಂದ

'ಹಿಂಗ್ ಮಾಡಿದ್ರೆ ಹೆಂಗೆ' ನಾಟಕದ ದೃಶ್ಯ

'ಹಿಂಗ್ ಮಾಡಿದ್ರೆ ಹೆಂಗೆ' ನಾಟಕ ಪ್ರದರ್ಶನ: ರಚನೆ: ನಾಗವೇಣಿ ರಂಗನ್, ನಿರ್ದೇಶನ: ಬಾಶ್ ರಾಘವೇಂದ್ರ, ಸಂಗೀತ: ಮೇಘನಾ ಹಳಿಯಾಳ, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ಜಗದೀಶ ಶರ್ಮ ಅವರ 'ದಶಕಂಠ ರಾವಣ', ಜೋಗಿ ಅವರ 'ಅಶ್ವತ್ಥಾಮನ್', 'ಚಿಯರ್ಸ್' ಗೋಪಾಕೃಷ್ಣ ಕುಂಟಿನಿ ಅವರ 'ಒಲವು ತುಂಬುವುದಿಲ್ಲ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಡಾಲಿ ಧನಂಜಯ, ರಾಜ್ ಬಿ. ಶೆಟ್ಟಿ, ಕೃತಿಕಾರರು: ಜಗದೀಶ ಶರ್ಮಾ ಸಂಪ, ಗೋಪಾಕೃಷ್ಣ ಕುಂಟಿನಿ, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಡಾಲಿ ಧನಂಜಯ

'ಶಿವದಾಸ್ ಘೋಷ್' ಅವರ ಜನ್ಮ ಶತಮಾನೋತ್ಸವ ಸಭೆ: ಭಾಷಣಕಾರರು: ಕೆ. ರಾಧಾಕೃಷ್ಣ, ಕೆ. ಉಮಾ, ಅಧ್ಯಕ್ಷತೆ: ಎಂ.ಎನ್. ಶ್ರೀರಾಮ್, ಆಯೋಜನೆ: ಸೋಶಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ, ಸ್ಥಳ: ಗುಂಡೂರಾವ್ ಸಭಾಂಗಣ, ಸಿರೂರ್ ಪಾರ್ಕ್ ರಸ್ತೆ, ಶೇಷಾದ್ರಿಪುರ, ಬೆಳಿಗ್ಗೆ 10.30

'ಮಣಿಪುರ ಫೈಲ್ಸ್' ಒಂದು ಮುಕ್ತ ಸಂವಾದ: ಆಯೋಜನೆ: ಪ್ರಬುದ್ಧ ಮನಸುಗಳು, ಪ್ರಬುದ್ಧ ಸಮಾಜ, ಸ್ಥಳ: ಗಾಂಧಿಭವನ, ಮಹಾದೇವಿ ತಾಯಿ ಸಭಾಂಗಣ, ಶಿವಾನಂದ ವೃತ್ತದ ಬಳಿ, ಬೆಳಿಗ್ಗೆ 11ರಿಂದ

ವಚನ ಗಾನ ಯಾನ–4 ಸಮಾರೋಪ: ಅತಿಥಿಗಳು: ಬಿ. ಚಂದ್ರಿಕ ಗುರುಪ್ರಸಾದ್, ಡಿ.ಎನ್. ಚನ್ನವೀರಪ್ಪ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ಪ್ರಪುಣ್ಯ ಸಂಗೀತ ಶಾಲೆ, ಸ್ಥಳ: ಮುನೇಶ್ವರ ದೇವಸ್ಥಾನ ಸಭಾಂಗಣ, ಹಂಪಿನಗರ, ಸಂಜೆ 4.30

'ಶ್ಮಶಾನ' ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಎಚ್.ಎನ್. ಆನಂದಮೂರ್ತಿ, 'ಮಿ. ಡೂಪ್ಲಿಕೇಟ್' ನಾಟಕ: ನಿರ್ದೇಶನ: ಸುರೇಶ್ ಜಿ., ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ, ಸ್ಥಳ: ಸಿ.ಆರ್. ಸಿಂಹ ಸಾಂಸ್ಕೃತಿಕ ಭವನ, ವಳಗೇರ, ಸಂಜೆ 6ರಿಂದ

ನೃತ್ಯ ರಂಗೋಲಿ: ಅತಿಥಿಗಳು: ಎನ್. ಎಸ್. ಬೋಸರಾಜು, ಡಾ.ಸಿ.ಎನ್. ಅಶ್ವತ್ಥನಾರಾಯಣ, ಯಲ್ಲಪ್ಪ ರೆಡ್ಡಿ, ವಿದ್ಯಾ ಕುಮಾರಿ, ಅಧ್ಯಕ್ಷತೆ: ಎ. ರಾಧಾಕೃಷ್ಣ ರಾಜು, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6ರಿಂದ

ಪುರಂದರ ಭಕ್ತಿ ಗಾನಾಮೃತ: ಗಾಯನ: ಎಸ್. ಶ್ರೀಧರರಾವ್, ಪಿಟೀಲು: ಮೈಸೂರು ಸಂಜೀವ್ ಕುಮಾರ್, ಕೊಳಲು: ರಾಘವೇಂದ್ರ, ಮೃದಂಗ: ನರಸಿಂಹ ಪ್ರಸಾದ್, ಮಾ. ಪ್ರದ್ಯುಮ್ನ ರಾವ್, ಆಯೋಜನೆ: ಪುರಂದರದಾಸ ಮೆಮೋರಿಯಲ್ ಟ್ರಸ್ಟ್, ಸ್ಥಳ: ಪುರಂದರ ಮಂಟಪ, ಇಸ್ರೊ ಲೇಔಟ್, ದೇವರಕೆರೆ, ಸಂಜೆ 6

'ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸಾಹಿತಿ ಕಮಲಾ ಹಂಪನಾ ಬೇಸರ • ಆರ್. ಪೂರ್ಣಿಮಾಗೆ 'ನಾಗಮಣಿ ಎಸ್. ರಾವ್ ದತ್ತಿ ಪ್ರಶಸ್ತಿ'

'ಕೆರೆಗಳನ್ನು ಮುಚ್ಚಿ ನಿವೇಶನ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '13ನೇ ಶತಮಾನದಲ್ಲಿಯೇ ಕೆರೆ, ಬಾವಿ ಹಾಗೂ ದೇವಾಲಯಗಳ ನಿರ್ಮಾಣದ ಮಹತ್ವವನ್ನು ಸಾರಲಾಗಿತ್ತು. ಈ ಬಗ್ಗೆ ಶಾಸನಗಳೂ ಇವೆ. ಆದರೆ, ಈಗ ಕೆರೆಗಳನ್ನು ಮುಚ್ಚಿ ನಿವೇಶನಗಳನ್ನು ನಿರ್ಮಿಸಲಾಗುತ್ತಿದೆ' ಎಂದು ಸಾಹಿತಿ ಕಮಲಾ ಹಂಪನಾ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಲೇಖಕಿಯರ ಸಂಘ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪತ್ರಕರ್ತೆ ಆರ್. ಪೂರ್ಣಿಮಾ ಅವರಿಗೆ 'ನಾಗಮಣಿ ಎಸ್. ರಾವ್ ದತ್ತಿ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು. ಈ ಪ್ರಶಸ್ತಿ ₹ 5 ಸಾವಿರ ನಗದು ಒಳಗೊಂಡಿದೆ.

'ಶಾಸನವೊಂದರಲ್ಲಿ 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸ...' ಎನ್ನಲಾಗಿದೆ. ಇದನ್ನು ಪ್ರೌಢಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರಾಮಾತ್ಯನಿಗೆ ಬಾಲ್ಯದಲ್ಲಿ ಆತನ ತಾಯಿ ಹಾಲನ್ನು ಕುಡಿಸುತ್ತಾ ಹೇಳುತ್ತಾಳೆ. ಆಗ ಕೆರೆ, ಬಾವಿಗಳು ನೀರಿನ ಮೂಲಾಧಾರವಾಗಿದ್ದವು. ದೇವಾಲಯಗಳು ಪಂಚಾಯಿತಿ ಕಟ್ಟೆಗಳಾಗಿದ್ದವು. ಆದರೆ, ಈಗ ಅವುಗಳ ಮಹತ್ವ ಅರಿತುಕೊಳ್ಳುವಲ್ಲಿ ವಿಫಲವಾಗುತ್ತಿದ್ದೇವೆ. ನಮ್ಮ ನಡೆ ಇತರರಿಗೆ ಮಾದರಿಯಾಗುವಂತಿರಬೇಕು' ಎಂದು ಹೇಳಿದರು.

ಆರ್. ಪೂರ್ಣಿಮಾ, 'ನಾಗಮಣಿ ಅವರು ವಿಧಾನಮಂಡಲ ಅಧಿವೇಶನದ ವರದಿ ಮಾಡಿದ ಮೊದಲ ಪತ್ರಕರ್ತೆ. ಅವರ ಅನುಭವ ರೋಮಾಂಚನಕಾರಿಯಾದದ್ದು. ಅವರು ತಮ್ಮ ಜೀವನಾನುಭವವನ್ನು ಪುಸ್ತಕ ರೂಪದಲ್ಲಿ ಹೊರತರಬೇಕು' ಎಂದು ಹೇಳಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು 'ಪತ್ರಿಕೆಗಳಲ್ಲಿ ಸಾಹಿತ್ಯದ ಪಾತ್ರ, ಅಂದು–ಇಂದು' ಎಂಬ ವಿಷಯ ಬಗ್ಗೆ ಮತ್ತು ಬಸವನಗುಡಿಯ ನ್ಯಾಷನಲ್ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ ಮೋಹನಬಾಬು ಅವರು 'ಪತ್ರಿಕೋದ್ಯಮದಲ್ಲಿ ಅವಕಾಶಗಳು ಮತ್ತು ಸವಾಲುಗಳು' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಆರ್. ಪೂರ್ಣಿಮಾ ಅವರಿಗೆ 'ನಾಗಮಣಿ ಎಸ್. ರಾವ್ ದತ್ತಿ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. (ಎಡದಿಂದ) ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ನಾಗಮಣಿ ಎಸ್. ರಾವ್, ಯೋಗಿತಾ ಪಿ., ಕಮಲಾ ಹಂಪನಾ, ಬಸವನಗುಡಿಯ ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲೆ ಕಮಲಾ ವೈ.ಸಿ., ನ್ಯಾಷನಲ್ ಎಜುಕೇಶನ್ ಸೊಸೈಟಿ ಅಧ್ಯಕ್ಷ ಎಚ್.ಎನ್. ಸುಬ್ರಹ್ಮಣ್ಯ ಹಾಗೂ ಕಾರ್ಯದರ್ಶಿ ವೆಂಕಟ ಸಿವಾರೆಡ್ಡಿ ಇದ್ದರು —ಪ್ರಜಾವಾಣಿ ಚಿತ್ರ

ಸರ್ಕಾರಿ ಶಾಲೆಯಲ್ಲಿ ಈಜುಕೊಳ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜಾನುಕುಂಟೆ ಗ್ರಾಮಪಂಚಾಯಿತಿ ವತಿಯಿಂದ ರಾಜಾನುಕುಂಟೆ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನಿರ್ಮಿಸಿರುವ ಈಜುಕೊಳ ಇತ್ತೀಚೆಗೆ ಉದ್ಘಾಟಿಸಲಾಯಿತು.

ಒಟ್ಟು 80X40 ಚದರಡಿ ವಿಸ್ತೀರ್ಣದಲ್ಲಿ ಸೋನಾರೊಮ್ ಫೌಂಡೇಶನ್ ಟ್ರಸ್ಟ್ ₹15 ಲಕ್ಷ ಹಾಗೂ ಗ್ರಾಮಪಂಚಾಯಿತಿಯ ₹ 65 ಲಕ್ಷ ಸೇರಿ ಒಟ್ಟು ₹80 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈಜುಕೊಳದ ಬದಿಯಲ್ಲಿ ಡ್ರೆಸಿಂಗ್ ಕೊಠಡಿ, ಶೌಚಾಲಯ ಸೌಲಭ್ಯ ಕಲ್ಪಿಸಲಾಗಿದೆ.

ಈಜುಕೊಳದ ನಿರ್ವಹಣೆಗಾಗಿ ಪಂಚಾಯಿತಿಯಿಂದ ಟೆಂಡರ್ ಆಹ್ವಾನಿಸಲಾಗಿತ್ತು. ಹರಾಜು ಪ್ರಕ್ರಿಯೆಯಲ್ಲಿ ಐದು ಮಂದಿ ಬಿಡ್‌ದಾರರು ಭಾಗವಹಿಸಿದ್ದರು. ಅಂತಿಮವಾಗಿ ಚಂದನ್ ಎಂಬುವರಿಗೆ ವಾರ್ಷಿಕ ₹4.40 ಲಕ್ಷ ಮೊತ್ತಕ್ಕೆ ಬಿಡ್ ಆಗಿದೆ. ಇದರಲ್ಲಿ ದುರಸ್ತಿ, ವಿದ್ಯುತ್ ಬಿಲ್ ಸೇರಿ ನಿರ್ವಹಣೆ ಒಳಗೊಂಡಿದೆ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗರಾಜ್ ತಿಳಿಸಿದರು.

ರಾಜಾನುಕುಂಟೆ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನಿರ್ಮಿಸಿರುವ ಈಜುಕೊಳ

'ಕ್ಷೇತ್ರವ್ಯಾಪ್ತಿಯಲ್ಲಿ ಈಜುಕೊಳ ಹೊಂದಿರುವ ಮೊದಲ ಸರ್ಕಾರಿ ಶಾಲೆ ಇದಾಗಿದೆ. ಮಕ್ಕಳಿಗೆ ಈಜು ಕಲಿಕೆ ಮತ್ತು ವ್ಯಾಯಾಮದ ಅಗತ್ಯತೆಯನ್ನು ಮನಗಂಡು ಈ ಈಜುಕೊಳ ನಿರ್ಮಿಸಲಾಗಿದೆ. ನುರಿತ ಈಜು ತರಬೇತುದಾರರನ್ನು ನೇಮಿಸಿ, ಮಕ್ಕಳಿಗೆ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗುವುದು. ನಿರ್ವಹಣೆಗಾಗಿ ಕನಿಷ್ಠ ದರವನ್ನು ನಿಗದಿ ಮಾಡಲು ತೀರ್ಮಾನಿಸಲಾಗಿದೆ. ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕು' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್.ಜಿ.ನರಸಿಂಹಮೂರ್ತಿ, ಉಪಾಧ್ಯಕ್ಷೆ ಡಿ.ಬಿ. ಹೇಮಲತ, ಮಾಜಿ ಅಧ್ಯಕ್ಷ ಕೆ.ವೀರಣ್ಣ, ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಸಿ.ವೆಂಕಟೇಶ್, ಸತೀಶ್ ಕಡತನಮಲೆ, ಎಂ.ಮೋಹನ್ ಕುಮಾರ್, ಆರ್.ಎಸ್.ಎಸ್.ಎನ್ ಬ್ಯಾಂಕ್ ನಿರ್ದೇಶಕ ಮಂಜುನಾಥ ರೆಡ್ಡಿ, ಮುಖ್ಯಶಿಕ್ಷಕ ಬಿ.ಜಿ.ಕಾಂತರಾಜು ಉಪಸ್ಥಿತರಿದ್ದರು.

'24 ಗಂಟೆ ಹೋಟೆಲ್ ತೆರೆಯಲು ಅವಕಾಶ ಕೊಡಿ'

ಬೆಂಗಳೂರು: 'ದಿನದ 24 ಗಂಟೆಗಳ ಕಾಲ ಹೋಟೆಲ್ ತೆರೆಯಲು ಅವಕಾಶ ನೀಡಬೇಕು. ಹೋಟೆಲ್ ಉದ್ಯಮಕ್ಕೆ ಕೈಗಾರಿಕೆ ಸ್ಥಾನಮಾನ ನೀಡಬೇಕು' ಎಂದು ಆಗ್ರಹಿಸಿ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಪ್ರತಿನಿಧಿಗಳು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ಹೋಟೆಲು ಉದ್ಯಮದ ಅಗತ್ಯಗಳ ಬಗ್ಗೆ ವಿವರಿಸಿದ ಸಂಘದ ಪ್ರತಿನಿಧಿಗಳು, 'ಸುಲಲಿತ ವ್ಯವಹಾರ (ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್) ನಡೆಸಲು ಅನುಕೂಲ ಆಗುವಂತೆ ಶಾಶ್ವತ ಪರವಾನಗಿ ನೀಡಬೇಕು. 24X7 ತೆರೆದಿಡಲು ಅನುಮತಿ ನೀಡಿದರೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಪೊಲೀಸರು, ವೈದ್ಯಕೀಯ ಸಿಬ್ಬಂದಿ, ಆಟೊ ಮತ್ತು ಟ್ಯಾಕ್ಸಿ ಚಾಲಕರು ಮುಂತಾದ ಅಗತ್ಯ ಸೇವೆಯಡಿ ಕಾರ್ಯನಿರ್ವಹಿಸುವವರಿಗೆ ಅನುಕೂಲ ಆಗಲಿದೆ. ಬಸ್, ರೈಲು, ವಿಮಾನದ ಮೂಲಕ ರಾತ್ರಿ ಬಂದಿಳಿಯುವವರಿಗೂ ಉಪಯುಕ್ತವಾಗಲಿದೆ' ಎಂದು ವಿವರಿಸಿದ್ದಾರೆ.

ಸಂಘದ ಅಧ್ಯಕ್ಷ ಪಿ.ಸಿ. ರಾವ್, ಉಪಾಧ್ಯಕ್ಷ ಸುಬ್ರಹ್ಮಣ್ಯ ಹೊಳ್ಳ, ಪ್ರಧಾನ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್, ಜಂಟಿ ಕಾರ್ಯದರ್ಶಿಗಳಾದ ರಾಕೇಶ್, ಶಾಕೀರ್, ಎಚ್.ಎಸ್. ಪ್ರಭಾಕರ್, ಕೃಷ್ಣರಾಜು ಮತ್ತಿತರರು ಶಿವಕುಮಾರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

'ಎಪಿಎಲ್‌ಗೂ ಅನ್ನಭಾಗ್ಯ ವಿಸ್ತರಣೆ'

ದೇವನಹಳ್ಳಿ: ಅನ್ನಭಾಗ್ಯ ಯೋಜನೆಯ ಲಾಭವನ್ನು ಕೇವಲ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ ಮಾತ್ರವಲ್ಲ ಎಪಿಎಲ್ ಕಾರ್ಡದಾರರಿಗೂವಿಸ್ತರಿಸಲಾಗುವುದು. ಬಡತನ ರೇಖೆಗಿಂತ ಮೇಲಿರುವ (ಎಪಿಎಲ್) ಕಾರ್ಡುದಾರರಿಗೂ ರಿಯಾಯಿತಿ ದರದಲ್ಲಿ ಅಕ್ಕಿ ವಿತರಣೆ ಮಾಡಲು ನಿರ್ಧಾರಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದ್ದಾರೆ.

ಎಪಿಎಲ್ ಕಾರ್ಡುದಾರರಿಗೆ ₹15ಗೆ ಒಂದು ಕೆ.ಜಿ. ಅಕ್ಕಿ ನೀಡಲಾಗುವುದು. ಉಳಿದ ಹಣವನ್ನು ರಾಜ್ಯ ಸರ್ಕಾರ ಪಾವತಿಸುತ್ತದೆ. ಇದರಿಂದಾಗಿ 10 ಲಕ್ಷ ಕುಟುಂಬದ 30 ಲಕ್ಷಕ್ಕೂ ಹೆಚ್ಚು ಜನರಿಗೆ ಲಾಭ ದೊರೆಯಲಿದೆ. 'ಅನ್ನಭಾಗ್ಯ' ಯೋಜನೆ ಅಡಿ ರಾಜ್ಯದ 4.41 ಕೋಟಿ ಬಡವರ ಹಸಿವು ನೀಗಿಸಲಾಗುತ್ತಿದೆ ಎಂದು ಅವರು ಶನಿವಾರ ತಿಳಿಸಿದರು.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಗೆ ನೇಮಕ

ನವದೆಹಲಿ(ಪಿಟಿಐ): ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಗೆ ಹತ್ತು ಹೊಸ ಸದಸ್ಯರನ್ನು ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಶನಿವಾರ ನೇಮಿಸಿದ್ದಾರೆ. ಇವರಲ್ಲಿ ಎಂಟು ಮಂದಿ ವಿವಿಧ ರಾಜ್ಯ ಘಟಕಗಳ ಚುಕ್ಕಾಣಿ ಹಿಡಿದಿದ್ದವರು.

ಬಂಡಿ ಸಂಜಯ್ ಕುಮಾರ್, ದೀಪಕ್ ಪ್ರಕಾಶ್, ಸತೀಶ್ ಪೂನಿಯಾ, ಸಂಜಯ್ ಜೈಸ್ವಾಲ್, ಸೋಮು ವೀರರಾಜು, ಸುರೇಶ್ ಕಶ್ಯಪ್, ವಿಷ್ಣುದೇವ್ ಸಾಯಿ, ಅಶ್ವನಿ ಶರ್ಮಾ ಕ್ರಮವಾಗಿ ತೆಲಂಗಾಣ, ಜಾರ್ಖಂಡ್, ರಾಜಸ್ಥಾನ, ಬಿಹಾರ, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ, ಛತ್ತೀಸಗಡ, ಪಂಜಾಬ್ ಘಟಕಗಳ ಮಾಜಿ ಅಧ್ಯಕ್ಷರಾಗಿದ್ದವರು.

ಛತ್ತೀಸಗಡದ ಧರ್ಮಲಾಲ್ ಕೌಶಿಕ್, ರಾಜಸ್ಥಾನದ ಕಿರೋಡಿಲಾಲ್ ಮೀನಾ ಸಹ ರಾಷ್ಟ್ರೀಯ ಕಾರ್ಯಕಾರಿಣಿಗೆ ಹೊಸ ಸದಸ್ಯರಾಗಿ ನೇಮಕಗೊಂಡಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ. ಛತ್ತೀಸಗಡ, ರಾಜಸ್ಥಾನದಲ್ಲಿ ಈ ವರ್ಷದ ಅಂತ್ಯಕ್ಕೆ ವಿಧಾನಸಭಾ ಚುನಾವಣೆ ನಡೆಯಲಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಕನಕಪುರ ರಸ್ತೆಯಲ್ಲಿ ಮನೆ ನಿರ್ಮಾಣಕ್ಕೆ ಅತ್ಯುತ್ತಮ ನಿವೇಶನಗಳು

BBMP 'A' KHATA SITES
@Thalaghattapura
Close to Metro Station
Kanakapura Road
Ready for Registration & Construction
Bank Loan Available
Call for Site Visit : **7406 219 219**

FOR SALE

FOR SALE 2 BHK (1392 sq. ft.) & 3 BHK (1680 sq. ft.) Flats at PNB Layout, Konankunte, Doddakallasandra, Bangalore. Bore-well, Lift, Car Parking available.
Ready-to-occupy
Contact: 9972335974 9740089974 9482088499

REAL ESTATE BUYING

Commerical
Malleshwaram

WANTED COMMERCIAL sites,Rental income Buildings Malleshwaram, Rajajinagar, Basaweshwar_nagar, Nagarbhavi. Immediate settlement, only owners. 8618240677.

Agricultural Land Converted
Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA. Brokers excuse.
Genuine Party Contact
9108133206

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

General
General

DC CONVERSION/ Change of land use, Phodi Durasti, NOC,Approvals, Khata, RERA Work,Para Legal Services.Barton Centre MG Road. 9916310226/ 9353128035. vernadevelopers.com

Sites
Anjanapura

WANTED SITES. Any Measurement. Anjanapura, Banashankari 6th Stage, JP.Nagar 8th/ 9th Phase, Narayana Nagar, BCC, BCMC Layout, Kanakapura Road. Contact: 9845298419

WANTED SITES 30x40, 40x60, Banashankari 6th Stage, Gubbalala, Anjanapura, Call : 8660800061

Nagarabhavi

WANTED NAGARABHAVI Residential Site in 40x60 West, East and North: 9035151657

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

BDA-SITES WANTED Kempegowda Layout Vishweshwaraiah Layout Other BDA Approved Layouts 30x40, 40x60, 50x80 Immediate Settlement Call:8660220048 7676900174

Industrial & Factory
General

WE HAVE buyers for Industrial sites of any size or anyIndustries running, Closed, Sick Industries with Bank Liabilities, Bank AuctionIndustries. Arun 9945699789.

REAL ESTATE SELLING

Agricultural Land Converted
Intl Airport Road

URGENTLY WANTED 50 Acre Converted Land on Chapparkallu Road/ IVC Road/ Sadahalli/ Devanahalli Doddabalapur Road and Nandhi Hills Road, Land Owners Contact: 9900001973

Agricultural Land
Mysore Road

"MADDUR 1ACRE Lake attach 28 Lakhs, Kollegala 1Acre Kabini Chanel attach 24 Lakhs. 9845178335"

Commerical
J P Nagar

SALE MINI 15 Flats Apartment near Bommanahalli, Expecting 2,75,00,000/- for total Building, suitable PG -9036706304.

J.P.NAGAR 100' Ring Road, Commercial 60x90 & 40x60 North facing, 30x40 Residential (South) Murali- 9845232711

Malleshwaram

OFFICE SPACE North facing for Sale above Axis Bank, Margosa Road, Malleswaram. Carpet area 650 sqft. Contact: 9972039720.

Mysore

COMMERCIAL CONVERTED land 88400 sqft on Mysore express Highway for Sale or JV near Mysore Contact 9731433641/ 9741019028

Flat
Banashankari

KATHRIGUPPE MAIN-ROAD 'Shri Lakshmi Residency' 2nd floor 2BHK flat for SALE 900sft west-facing. 50,00,000/- negotiable. ABHILASHA CONSULTANT.9480565758

Kumaraswamy Layout

3-BHK E/F Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Malleshwaram

NEAR MES College. Sale: 2BHK Flat, 1000sft, South Facing, first floor, Lift, Carparking. 1.30Cr., Negotiable. 9845243757

Mysore

2- BHK flat for sale in Mysore. Genuine buyers only. Contact: 8088692981

Farm House/ Land/ Resorts
Mysore

FOR BUYING & Selling any Mysore Properties Contact: Mysore Estates, Vishwanath Gowda 9590911111. *Refer genuine Buyers & Sellers, get attractive gifts. 0% Brokerage

General
Multiple Locations

SALE COMMERCIAL, industrial, residential, farmland and office space for rent in Bangalore. Contact. 9380586105

House
Banashankari

HOUSE SALE (G+3) 2BHK Per Floor @Banashankari 5th Stage BDA 30x40 Plot Attached, Poornapragna Layout, Rs 3.20 Crores Bheeresh 9900471143, 9844888847 Shivakumar 9845875555

J P Nagar

SALE 40X62 J.P.Nagar 2nd Phase With 3 BHK 2 Unit House Excellent Location Call:9844134068 9066399102

Kanakapura Road

VAKIL GARDEN CITY, 4BHK, INDEPENDENT HOUSE SALE 5.5CR PLOT 4200SFT 3500SFT BUILTUP 9845291967 9900743700

Industrial & Factory
Bommasandra

FACTORY WITH 10 Acres & 5 Lakhs Sqft Shed, P&M, Vehicles for SALE. Bommasandra Indl Area, Bengaluru. CALL- 7899802070 or Email: sbpl.liquidator@gmail.com'

General

PEENYA 2ND stage 10,000 to 25,000 sqft Industrial land for sale. Clear titles. Call. 9380586105.

Mysore Road

SALE- 50000 Sqft KIADB Industrial Land in BIDADI Industrial Area- Mysore Road- 100 ft Road. 9844071666/ 9886673223

Residential/ Commercial
J P Nagar

J.P.NAGAR, FIFTH Phase, suitable P.G/ Rentals. 4 numbers 1 BHK one 2 BHK. Owner. 9482839075.

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH FACING CONTACT OWNER 9844018823

Sites
Arkavathi Layout

ARKAVATHI LAYOUT BDA Site For Sale Near Manyatha tech park Commercial 40×60, West Facing: 9035151657

Airport Road

BETTAHALASUR AIRPORT Road Telecom Layout Green 3 Site For sale 30×35: 9916064583

Banashankari

"BANASHANKARI 2ND, 3rd, 6th Stage Residential/ Commercial 50x80, 40x60, 45x50, 30x50, Genuine buyers Call: 9845286505"

SALE BDA 30x40 Banasankari 6th 9th Block East Facing 65 lakh also 20x30 south Facing 30 Feet Road 48 lakh. 9620041313, 9945373839

'BANASHANKARI' 6TH Stage, 40x60, 60" Road 20x30, 30x40, 50x80, Residential /Commercial Sites Sale : 9916817739

SALE- 30X50 BDA Site at Banashankari 6th Stage, 4th 'T' Block, West facing. Contact: 9945427003

SITE FOR SALE North Face 879 Sqft, Vidyapeeta, Srinivasa Nagar Contact: 9880037307/ 6363673199

Hesaraghatta

MEI LAYOUT, Hesaraghatta Road, East Facing 40X60 sqft SITE for SALE opposite to Playground, Brokers Excuse. PH: 080-23106092, 6360209718.

Hebbal

TALAKAVERI LAYOUT Hebbal 40x60 North 40 Feet Road Excellent Location BDA Approved 13,500/- sft 7829203369

Intl Airport Road

"40X60 2SITES for slae around International Airport Rs.1200/- Per Sqft Negotiable. Contact: 9663063921"

Jalahalli

SITE FOR Sale Bagalgunte, DC Converted, Built to Suit Villas, Near by Nagasandra Metro:7996656677

Jayanagar

SALE SITE 30x50 Jayanagar 4th T Block NAL Layout on 40feet Road Excellent Location Call:9066399102 9844134068

J P Nagar

SALE J.P.NAGAR Residential Buildings BDA Sites 30x40, 30x46 West Facing, 30x50 North Facing Call:9449032264 9448052264.

JPNAGAR 8TH Phase, Royal County BDA Site Sale, 30x50, S/F, 9800/- Negotioble : 9538680364/9513004587

JPNAGAR 2ND Phase, BDA, 40X60, West Facing Near Woody,s Hotel 21000/-3rd Phase 40x60, 24000/- :9845600007

Kumaraswamy Layout

25X30 EAST Facing BDA Site Sale Kumaraswamy Layout Near Police Station. Clear Titles. Contact:- 9342197377

Koramangala

KORAMANGALA INNER Ring Road Amarjothi Layout 80x65 Corner 40x80, Domlur 40x60, Indiranagar 20x37 Corner. USR- 7019770736/ 8951614989.

Kanakapura Road

KANAKPURA ROAD Kaglipur Bustop Opp, Near Art of Living 30X40 Residential. Converted Site Sale 4000/- Psft: 9342552428

KANAKAPURA ROAD Kaggalipura BMRDA Approved 'E'Khata 30x40 E/F, 30X50 W/F, 3000/- Negotioble : 9740150364/9986146147

SALE BDA 30x40 East Facing JP Nagar 9th Phase 4th "A" Block Near Kanakapura Road. 9945373839, 9620041313

Nagarabhavi

"NAGARABHAVI BDA Complex 30x40 North 40 feet Road, 30x40 North 4BHK Duplex House. 9448432633"

Kempegowda Layout

NADAPRABHU KEMPEGOWDA Layout 20x30 BDA allottee North facing site, 9th Block, Sector-C for Sale 28,00,000/- negotiable -9448457267

KEMPEGOWDA Layout BDA Sites for Sale Commercial 40x60, 100ft Road Near BDA Complex Mysore Road Metro: 7899570235

RIVERSIDE RESORT
PROPERTY for SALE / RENT / LEASE
Location : 2 kms. from world famous JOGFALLS, Karnataka.
Premium Rooms, Boating Area, Just Next to River Sharavati.
CALL : 9019369350

KEMPEGOWDA LAYOUT Commercial and Residential Site for Sale 20x30, 30x40, 40x60 and 50x80. Kumar 9945112279

Magadi Road

SITE FOR SALE: 20x30 (W) "D"Group layout, Lingadheeranahalli, Andhrahalli Main Road. 8792607638, 7090351127

30X40 EF BBMP A-Katha 40ft Road 11000/- Negotiable BLE Layout 2nd Stage Magadi Road: 9916826976

Out-Station

SALE- RESIDENTIAL Site in Chikamagalur Town near Mountain View School. Located on Road from Mountain View School to Balehalli. Area approximately 15000 Sft (14.5 Guntas) @ Rs. 1200 per Sft. Contact: 9880459141.

Rajarajeshwari Nagar

R.R.NAGARA BEML Layout 30X40 House Sale 1.60Cr. Javaregowdana Doddi 30x40 Site Sale 66L. 9148914809, 9740075563.

'A' KHATA Property for Sale in RajarajeshwariNagar 30x40 and 40x60, East facing. Call: 9448288522

Sarjapur Road

SARJAPUR ROAD, near Wipro Corporate Office, site 40x60 clear titles, going cheap, phone. 8660514834

Tumkur Road

30X40 SITE sale (2 side road) Kirloskar layout, Hesaraghata main road, opposite Sapthagiri college. 9620480363.

Vishweshwariah Layout

AVAILABLE VISHWESHWARAIAH Layout 2nd Block 30X40 Site WF Ready to Construction Near Shirke Apartment: 8553908699

BHARATHNAGAR 40X60 Site For Sale on 60ft Road and Commercial Corner 40x60 Site Sale: 9964971895

40X60 1ST Block Vishveshwaraiah Layout Opp KHB Platinam Apartment, 40X60 Site Sale 6th KLE Opp Direct Owner: 9844845864

20X30 NORTH Facing Site for Sale. at Vishveshwaraiah Layout, 5th Block. Good Location. Contact: 9342874483

Yelahanka

30x40 Converted Plot @ 1,65,000/-
138/- per sq.ft, 90 minutes Journey from Yelahanka
Ready for Registration
9343510635, 9010559539

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Building Contractors

WE WILL undertake building constructions & renovations M/s Samruddhi infrastructures Engineers & contractors 9980632771/ 9900434127

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

RENTAL PROPERTIES

Accommodation Available
Commercial

RENT OFFICE Space 1800sft 1st,2nd floor and 300sft on 3rd floor,16th Cross,8th Main Malleshwaram. 9845513822/ 9731115176

RENT: BROOKFIELD, KUNDALAHALLI 1600 Sqft commercial place suitable for hotel or shops. Next to brigade tech-park 8310818291

Flats

R.T.NAGAR HMT 2BHK, 1100 sft, Ground Floor, Vasthu, carparking,3 years possession mortgage. 7259293212/ 8710883055.

House

"1BHK HOUSE for rent aprox 6 Square in R.T.Nagar, Vegetarian Tenant preferred. Contact: 9663063921"

Accommodation Wanted
Commercial

COMMERCIAL SPACE Required 600- 800sqft for Clinic. Preferable Ground Floor, Decent Place, surrounding Jayanagar, HSR Layout, Bangalore. 9591312377/ 9448778153

JOB OPPORTUNITIES

Engg/ Production Technical

REQUIRES CIVIL ENGINEERS with 3 years of experience in handling Projects Preferably Interior and Road Safety Works. ARCHITECTS with Degree/ Diploma will also be considered. Statutory benefits with a good package will be provided. Send application to: resume.sanjay marketing@gmail.com

100% EOU Granite Factory Bangalore requires Mechanical & Electrical Maintenance Engineers,Fitters,Stores and other staff. kandoi@indiagranite.com

BHUMIKA BUILDERS requires experienced SITE SUPERVISOR immediately for projects in Bangalore Call : 9538223507

Security & Detectives

SECURITY SUPERVISOR Guards required location Jakkur manayata Sarjapur Attractive Salary with weekly off. Call 9980510033

General

REQUIRED LIFT Operator in Mall, Minimum 2 Years of experience, age 30- 40 years. No. 27, K.G. Road, Opp D-Mart, Gandhinagar, Majestic, Bangalore. Mob: 9945542583.

BENGALURU JOBS Wanted Immediately MANAGERS, RECRUITERS, TELE- CALLERS. Good Salary. Ladies Pick/ Drop. Call: 99000-54469

US BASED Company Agile 367 bring Work from home opportunity upto to Rs.40,000 per month For Junior Tester /dev no experience Training provided Email: sales@agile367.com ,Cont No: 9901204433

ಬೆಂಗಳೂರು ವಿಶ್ವವಿದ್ಯಾಲಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ)
"ಜ್ಞಾನಭಾರತಿ ಸಮುದಾಯ ಭವನದ ಆವರಣ, (ಗಣೇಶ ದೇವಸ್ಥಾನದ ಎದುರು)
ಜ್ಞಾನಭಾರತಿ, ಬೆಂಗಳೂರು-560056. ದೂ. 080-22961841

ಸಂಖ್ಯೆ : ಬೆಂ.ವಿ.ವಿ.ನೌ.ಗೃ.ಸ.ಸಂ/ನೇಮಕಾತಿ/01/2023-24 ದಿನಾಂಕ : 06.07.2023

ನೇಮಕಾತಿ ಪ್ರಕಟಣೆ/ಅಧಿಸೂಚನೆ

ಬೆಂಗಳೂರು ವಿಶ್ವವಿದ್ಯಾಲಯ ಗೃಹ ನಿರ್ಮಾಣ ಸಹಕಾರ ಸಂಘ (ನಿ) ದಲ್ಲಿ ಮುಖ್ಯ ಕಾರ್ಯನಿರ್ವಾಹಕ (ಕಾರ್ಯದರ್ಶಿ) ಹುದ್ದೆಗೆ ಸಾಮಾನ್ಯ ವರ್ಗದಡಿ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ವಿವರಗಳನ್ನು ಮೇಲ್ಕಂಡ ವಿಳಾಸದ ಕಛೇರಿಯ ಪ್ರಕಟಣಾ ಫಲಕದಲ್ಲಿ ವೀಕ್ಷಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 31.07.2023, ವೇತನ ಶ್ರೇಣಿ ಈ ಕೆಳಕಂಡಂತಿದೆ.

ಕ್ರ.ಸಂ.	ಹುದ್ದೆ	ವೇತನ ಶ್ರೇಣಿ
01	ಮುಖ್ಯ ಕಾರ್ಯನಿರ್ವಾಹಕ (ಕಾರ್ಯದರ್ಶಿ)	27650-650-29600-750-32600-850-36000-950-39800-1100-46400-1250-52650

ಸಹಿ/- ಅಧ್ಯಕ್ಷರು, ಬೆ.ವಿಂ.ನೌ.ಗೃ.ಸ. (ನಿ.)
ಸಿಬ್ಬಂದಿ ನೇಮಕಾತಿ ಸಮಿತಿ

ADD INDIA is a development organisation looking for-a communication and fund-raising officer. Details: www.addindia.org

ENGLISH SOCIAL/ PT TEACHERS for English medium state school Yeshwantapur Bengaluru. WhatsApp resume. 9342816044/ 8088201545.

Multiple Vacancy

AIRWAYS GROUP
AIRWAYS COURIER (I) PVT.LTD.
Airways is expanding its existing business in Bangalore and across Karnataka
(Bangalore, Hubli, Belgaum, Mysore, Udupi, Mangalore, Manipal)
Kindly Mention The Position Applied For And The Location In Your CV
Airways Is Looking For Suitable Candidates For The Below Positions

1. Branch Managers	10	With 1-2 years Courier & Cargo Experience
2. Sales Executives	8	With 2 years Courier & Cargo Experience
3. Accounts Head	2	With Tally Background
4. Accounts Managers	3	With Tally Background
5. Accounts Executive	5	With Tally Background
6. EDP Assistants	10	
7. Field Executives	30	with bike and valid license
8. Credit Control Manager / Recovery Officer	3	
9. IT Managers	2	
10. IT Executives	3	
11. Customer Care Executive	7	with 2 years courier & cargo experience
12. Drivers	15	With LCV / HEAVY License

Please walk in for an interview till 15.07.2023
Timings : 1030 am to 1300 hrs.
37/11, Airways House, 2nd cross Road, Meanee Avenue Road, Next to A2B Hotel, Near Ulsoor Lake, Bangalore- 42.
Contact : Admin / HR with your CV
Tel : 080 -4652 5252 - 100 Lines.

Teachers/ Professors

WANTED EXPERIENCED LECTURERS M.Com/MCA/M.A (Sociology), Librarian(M.Lib) Reservation as per Government Norms, Attractive Salary, Contact Principal with original Certificates between 10.00 am and 1.00 pm, SREE VENKATESHWARA DEGREE COLLEGE, Krishnarajapuram, Bangalore-36. Phone-9036068144, 7411135627, E-mail: svs.krp.bangalore@gmail.com

REQUIRED TEACHERS
PRIMARY English & Drawing
HIGH SCHOOL English & Social Science
Attractive salary, P.F & ESIC for deserving candidates, pick up and drop from Nelamangala to Jalahalli Cross
Send your resume to E-mail bmnrequest@gmail.com Or Whatsapp to 9513333834
Walk in interview Directly on working days with original Marks cards and a set of Xerox copies between 11am to 2:30pm
SRUSHTI PUBLIC SCHOOL (Recg. by Govt. of Karnataka)
B.M.N PUBLIC SCHOOL (Affiliated to CBSE, New Delhi)
Makali, Alur Road, Dasanapura (H), Near Himalaya Drug Co., (3 Kms from Jindal), Bengaluru North -562162.
Ph: 9513333834 / 8123333677

TEACHERS & CO-ORDINATOR Wanted for Preprimary and Primary School Near Chikkaballpur. Salary will be commensurate with experience/ commitment. Contact by Whatsapp: 8105545777

WANTED GRADUATE TEACHERS FOR MATHEMATICS, COMPUTERS WHATSAPP YOUR Resumes 9353111888. A.B ENGLISH HIGH SCHOOL HAINES ROAD NEAR COLES PARK BANGALORE-51

REQUIRED FOR Higher Primary School and High School:Lady Teachers Science & English with B.Sc.,B.Ed.B.Sc., Computer Science -1 Post. Higher Primary School:Physical Education Teacher with B.A.,B.P.Ed.-1 Post. (P.F. and ESI Facility) Contact immediately Hon. Secretary, Sri Vinayaka Education Society (R) #218,BanappaPark, Cubbonpet, Bengaluru-560002. Ph:22210459,7406222209.

WANTED LADY Social Studies/ Maths/ PET teacher and Computer Teacher for Nivedita High School in Basavanagudi. Candidates in surrounding areas preferred. Call 080-26677932 b/w 10 am to 2 pm.

MATRIMONIAL

Grooms Wanted
Hindu

GROOM WANTED
Alliance Invited for **Lingayath 30/5'.6" Girl,** Govt. Employee, Own House, Well settled, No Father Looking for Re-marriage, Good Family Boy.
Contact with details
9686002687

Muslim

SUNNI MUSLIM Beautiful girl 21 Years/ 5'3/ Rich Family/ is looking a good match (Only Serious Marriage Seeker Can Contact) (080-69072053)

LANDS FOR SALE
Commercial & Residential
1. Prime location on N.H. 4, Nelamangala, Bangalore
30,522 sq.ft. - Total 28 guntas Converted Land
(Commercial - 26 guntas & Residential - 2 guntas)
North facing, Suitable for Malls / Godowns / Choultry / Showroom / Hospital etc., with clear title deeds for sale.
2. Residential Land @ Ullalu Village, Bangalore
18,513 sq.ft. - South Facing
at Ullalu Village, Yeshwanhpura Hobli, Bangalore North Taluk, with clear title deeds for sale
Interested parties please contact for more details
Karnataka Veerashaiva Vidyabhivrudhi Samsthe
No.18/1, 'Kalyana Samuchaya', 2nd Floor, 6th Cross, Next to Dr. Rajkumar International Hotel, Gandhinagar, Bengaluru-560 009
Phone : 080 22266416
Email : kvvsbangalore@gmail.com

PUBLIC NOTICE

PUBLIC NOTICE
In the court of principal Judge, Family court, Hazaribag.
Original suit No. 14/23
Kumar Anubhav Saurabh..... **Petitioner.**
Vrs.
Anusha Yadav....... **Respondent.**
U/S. 9 of Hindu Marriage Act, 1955 for restitution of conjugal life.
Notice to:-
Anusha Yadav W/o Kumar Anubhav Saurabh, Resident of village Indiqube Alpha, Marathalli Panthar Junction, Oda classes, Bengaluru, Karnataka- 560103.
Whereas, the petitioner Kumar Anubhav Saurabh, U/S, 9 of Hindu Marriage Act, 1955 for has filed the above original suit No. 14/23 in my court, in which your presence is essentially required.
The next date fixed in this suit is 17.7.2023
Therefore, you are directed to appear on the above date either personally or through your authorized Advocate in my court and file written statement if any, as to why the prayer of the petitioner should not be allowed, failing which the matter will be heard in your absence and ex parte order will be passed.
This notice is being issued to you with seal and signature of this court on - 22.06.2023
Principal Judge, Family court, Hazaribag, Jharkhand

TO WHOMSOEVER IT MAY CONCERN
This to inform that **Mr. Satish Varma** who was the Partner of our Concern M/s. MAC CONTROLS has retired as per the retirement Deed dated 30.06.2023.
As per the Reconstituted Deed dated 30.06.2023, this notification is given for the notice of our esteemed cusotmers of the Firm are requested to deal with the Continuing Partners henceforth for their future Transactions.
-Continuing Partners of MAC CONTROLS
sd/-
MAC CONTROLS, Bangalore

AUTOMOTIVE

Four Wheelers Selling
Others

QUOTATION REQURED for accident vehicle No.KA.05.MT.1767 with & without RC, Pajero Sport AT 06.04.2016. Within a week. Inspection. Insured's place. 9846007117, Surveyor-9845079529

Hyundai

NEED SALVAGE quotation for accidental damaged vehicle KA-41-P-9465 HYUNDAI VERNA CRDI SX-2013 WITHOUT R.C NIA Claim, Contact-9972041632

QUOTE REQUIRED FOR ACCIDENT DAMAGED KA-16N-6243 VERNA 1.6 CRDI SX(O)-2018 WITH & WITHOUT RC-9844048926 7-DAYS

Mahindra

QUOTATION REQURED for accident vehicle No.AP.03.BN.3555, without R.C, Mahendra XUV 500-2015, within a week. Inspection. Sireesh Auto, Marathalli. Workshop Contact-8971093306, Surveyor-9845079529

Maruti

ACCIDENT VEHICLE KA03AJ5023 Maruthi swift-dezire for`sale WITHOUT RC Call:9900942407 offers send-to National insurance Company within-7days

BUSINESS

Business to Business
Finance

WE ARRANGE Loans for Mortgage, Purchase, Construction, Takeover of Loans from Reputed Bank. T&C Apply. Contact: 9353705002.

Business Offers
Finance

LOAN AGAINST PROPERTY/ BUSINESS/ PEOJECTS: +918754809650 babainvestments7@gmail.com

General

SUKHAM Senior Living Home for joyful retirement living. Contact: Shrinidhi Hemmige 9945112586 www.sukhamseniorliving.com

EDUCATIONAL

Admission

FAILED INCOMPLETE Join College immediately, save precious One Year. Choose any Course, Contact MCC: 9341273990.

Correspondence Courses

WORKING PROFESSIONALS Join- Complete AMIIE (B.Tech), TMIIE (Diploma). Become Corporate, Chartered Engineers. Contact MCC: 9341273990.

PERSONAL

Change of Name

I MOHINI SHAHNAWAZ SHAIKH, Residing at, CAPSIA 102, Adithya Pristine Apt, KMC, Kadugodi Bangalore-560067, have changed my minor son's name from AMAN SHAIKH, to New name AMAN SHAHNAWAZ SHAIKH, vide affidavit dated 7/07/2023 before notary Veena J., Bangalore

I, NIRMALA ARAVIND KUMAR W/o.ARAVIND KUMAR R/a#209, Parmar Palace, Rama Iyengar Road,Lalbagh West,Bangalore -560004 Have`changed my Name to NIRMALA KUMARI vide`affidavit dated:22.6.2023 before Notary L Shankaranarayana, Bangalore

BECOME A CERTIFIED COUNSELLOR
Open to all, Part time
Banjara Academy
9035679801
8861421666

NCF First Time in KR PURAM Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
ITI Ground, Next to Hanging Bridge, KR Puram, Bengaluru

VISIT TODAY | Daily : 4pm - 9pm | Call : 8904727123

2 ದಿನದಲ್ಲಿ 490 ಪ್ರಕರಣ

ಎಕ್ಸ್‌ಪ್ರೆಸ್ ವೇನಲ್ಲಿ ಸಂಚಾರ ನಿಯಮಗಳ ಉಲ್ಲಂಘನೆ

ಪ್ರಜಾವಾಣಿ ವಾರ್ತೆ

ರಾಮನಗರದ ಹೊರವಲಯದ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಪೊಲೀಸರು, ಸ್ಪೀಡ್ ರಾಡಾರ್ ಮೂಲಕ ವಾಹನಗಳ ಮೇಲೆ ನಿಗಾ ಇಟ್ಟಿದ್ದಾರೆ

ರಾಮನಗರ: ಅಪಘಾತಗಳ ಹೆಚ್ಚಳದ ಬೆನ್ನಲ್ಲೇ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ವಾಹನಗಳ ಅತಿ ವೇಗ ಸೇರಿದಂತೆ ಸಂಚಾರ ನಿಯಮ ಉಲ್ಲಂಘನೆಗೆ ಸಂಚಾರಕ್ಕೆ ಕಡಿವಾಣ ಹಾಕಲು ಮುಂದಾಗಿರುವ ಪೊಲೀಸರು, ಕೇವಲ ಎರಡು ದಿನಗಳಲ್ಲಿ 490 ಪ್ರಕರಣ ಗಳನ್ನು ದಾಖಲಿಸಿ ದಂಡದ ಬಿಸಿ ಮುಟ್ಟಿಸಿದ್ದಾರೆ.

ಜುಲೈ 6ರಿಂದ ಎಕ್ಸ್‌ಪ್ರೆಸ್ ವೇನಲ್ಲಿ ವಿವಿಧೆಡೆ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು ಮೊದಲ ದಿನ 44 ಚಾಲಕರ ವಿರುದ್ಧ ಹಾಗೂ ಎರಡನೇ ದಿನ 446 ವಾಹನ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ವಾಹನಗಳ ಸಂಚಾರಕ್ಕೆ ಎಕ್ಸ್‌ಪ್ರೆಸ್ ವೇ ಮುಕ್ತವಾದ ಬಳಿಕ, ಒಂಬತ್ತು ತಿಂಗಳಲ್ಲಿ ಸಂಭವಿಸಿದ 550ಕ್ಕೂ ಹೆಚ್ಚು ಅಪಘಾತಗಳಲ್ಲಿ 158ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು. ಅತಿ ವೇಗವಾದ ಚಾಲನೆ, ಅವೈಜ್ಞಾನಿಕವಾಗಿ ರಸ್ತೆ ನಿರ್ಮಾಣ, ಮೂಲಸೌಕರ್ಯ ಇಲ್ಲದಿರುವುದು ಸೇರಿದಂತೆ ವಿವಿಧ ಕಾರಣಗಳಿಂದಾಗಿ ಅಪಘಾತ ಸಂಭವಿಸು ತ್ತಿವೆ ಎಂಬ ಟೀಕೆಗಳು ಕೇಳಿ ಬಂದಿದ್ದವು.

ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿತ್ತು. ಅದರ ಬೆನ್ನಲ್ಲೇ, ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಎಕ್ಸ್‌ಪ್ರೆಸ್ ವೇಯ ಅಪಾಯಕಾರಿ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅಪಘಾತಕ್ಕೆ ಕಾರಣವಾಗಿರುವ ಅಂಶಗಳು ಹಾಗೂ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನೀಡಿದ್ದ ವರದಿಯನ್ನ ಪರಿಶೀಲಿಸಿ, ಸಭೆ ಕೂಡ ನಡೆಸಿದ್ದರು.

ಎಡಿಜಿಪಿ ಭೇಟಿ ಬಳಿಕ ಎಕ್ಸ್‌ಪ್ರೆಸ್ ವೇನಲ್ಲಿ ಸ್ಪೀಡ್ ರಾಡಾರ್ ವಾಹನಗಳ ಮೂಲಕ, ಗರಿಷ್ಠ ವೇಗದ ಮಿತಿ ಗಂಟೆಗೆ 100 ಕಿ.ಮೀ ಮೀರಿ ಅತಿ ವೇಗವಾಗಿ ಚಲಿಸುವ ವಾಹನಗಳ ಮೇಲೆ ನಿಗಾ ಇಡಲಾಗಿತ್ತು. ರಸ್ತೆಯಲ್ಲಿ ಪೊಲೀಸ್ ಗಸ್ತು ವಾಹನಗಳನ್ನು ಆರಂಭಿಸಲಾಗಿತ್ತು.

> ಸಂಚಾರ ನಿಯಮ ಉಲ್ಲಂಘನೆಯೇ ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಕ್ಕೆ ಕಾರಣ. ಹಾಗಾಗಿ, ನಿಯಮ ಉಲ್ಲಂಘನೆ ವಿರುದ್ಧ ಕಾರ್ಯಾಚರಣೆ ನಡೆಸಲಾಗುವುದು
> **ಕಾರ್ತಿಕ್ ರೆಡ್ಡಿ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ದಾಖಲಾದ ಪ್ರಕರಣಗಳ ಅಂಕಿ ಅಂಶ	
ಅತಿ ವೇಗ	174
ಪಥ ಶಿಸ್ತು ಉಲ್ಲಂಘನೆ	137
ಸೀಟ್ ಬೆಲ್ಟ್ ಧರಿಸದಿರುವುದು	81
ಹೆಲ್ಮೆಟ್ ಧರಿಸದಿರುವುದು	47
ಇತರೆ	51

ಕ್ಯಾಟರಿಂಗ್ ವೈಷಮ್ಯದಿಂದ ನಡೆದಿದ್ದ ಕೊಲೆ • ಮೂವರನ್ನು ಬಂಧಿಸಿದ ಪೊಲೀಸರು

ಸ್ನೇಹಿತನ ಕೊಂದು ಸುಟ್ಟಿದ್ದವರ ಬಂಧನ

ಪ್ರಜಾವಾಣಿ ವಾರ್ತೆ

ಸತೀಶ್

ಶಿವಕುಮಾರ್

ಆನಂದ್

ಅಪರಾಧ ಸುದ್ದಿ

ಬೆಂಗಳೂರು: ಪೀಣ್ಯ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಆನಂದ್ (38) ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಕೃತ್ಯ ಎಸಗಿದ್ದ ಆರೋಪದಡಿ ಮೂವರು ಸ್ನೇಹಿತರನ್ನು ಬಂಧಿಸಿದ್ದಾರೆ.

‘ತಮಿಳುನಾಡಿನ ಆನಂದ್ ಅವರನ್ನು ಜುಲೈ 1ರಂದು ಕೊಲೆ ಮಾಡಿ, ಮೃತದೇಹಕ್ಕೆ ಪೆಟ್ರೋಲ್ ಸುರಿದು ಸುಟ್ಟು ಹಾಕಲಾಗಿತ್ತು. ಈ ಸಂಬಂಧ ಆರೋಪಿಗಳಾದ ಸತೀಶ್, ಶಿವಕುಮಾರ್ ಅಲಿಯಾಸ್ ಪುಟ್ಟ ಹಾಗೂ ದಯಾನಂದ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸುಟ್ಟ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿತ್ತು. ಆರಂಭದಲ್ಲಿ ಗುರುತು ಸಹ ಪತ್ತೆಯಾಗಿರಲಿಲ್ಲ. ಸ್ಥಳದಲ್ಲಿ ದೊರೆತ ಕೆಲ ಪುರಾವೆಗಳನ್ನು ಆಧರಿಸಿ ತನಿಖೆ ಕೈಗೊಂಡಾಗ, ಮೃತನ ಹೆಸರು ಆನಂದ್ ಎಂಬುದು ತಿಳಿಯಿತು. ಅವರ ಪತ್ನಿ ಹಾಗೂ ಸಂಬಂಧಿಕರನ್ನು ಸಂಪರ್ಕಿಸಿ ಹೇಳಿಕೆ ಪಡೆದು ತನಿಖೆ ಕೈಗೊಂಡಾಗ, ಸ್ನೇಹಿತರೇ ಆಗಿದ್ದ ಆರೋಪಿಗಳು ಸಿಕ್ಕಿಬಿದ್ದರು’ ಎಂದು ತಿಳಿಸಿದರು.

ಕಾರ್ಮಿಕನಾಗಿ ಸೇರಿ ಸ್ವಂತ ಉದ್ಯಮ: ‘ಆರೋಪಿ ಸತೀಶ್, ಕ್ಯಾಟರಿಂಗ್ ಉದ್ಯಮ ನಡೆಸುತ್ತಿದ್ದ. ಮದುವೆ, ಶುಭ ಕಾರ್ಯಕ್ರಮಗಳಲ್ಲಿ ಅಡುಗೆ ಮಾಡುವ ಕೆಲಸವನ್ನು ಗುತ್ತಿಗೆ ತೆಗೆದುಕೊಳ್ಳುತ್ತಿದ್ದ. ತಮಿಳುನಾಡಿನಿಂದ ಬಂದಿದ್ದ ಆನಂದ್, ಸತೀಶ್ ಬಳಿ ಕೆಲಸಕ್ಕೆ ಸೇರಿದ್ದ’ ಎಂದು ಪೊಲೀಸರು ಹೇಳಿದರು.

‘ಉತ್ತಮವಾಗಿ ಕೆಲಸ ಮಾಡುತ್ತಿದ್ದ ಆನಂದ್, ಕೆಲ ತಿಂಗಳಿನಲ್ಲಿ ಗ್ರಾಹಕರ ಮೆಚ್ಚುಗೆ ಗಳಿಸಿದ್ದರು. ಸ್ವಂತ ಕ್ಯಾಟರಿಂಗ್ ಉದ್ಯಮ ಆರಂಭಿಸುವಂತೆ ಕೆಲ ಗ್ರಾಹಕರು ಸಲಹೆ ನೀಡಿದ್ದರು. 6 ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟಿದ್ದ ಆನಂದ್, ತಮ್ಮದೇ ಕ್ಯಾಟರಿಂಗ್ ಉದ್ಯಮ ಆರಂಭಿಸಿದ್ದರು. ಆನಂದ್ ಅವರಿಗೆ ಅಡುಗೆ ತಯಾರಿ ಕೆಲಸಗಳು ಹೆಚ್ಚು ಬರಲಾರಂಭಿಸಿದ್ದವು’ ಎಂದು ತಿಳಿಸಿದರು.

‘ಆನಂದ್ ವೃತ್ತಿಯಲ್ಲಿ ಬೆಳೆಯುತ್ತಿದ್ದಂತೆ, ಸತೀಶ್‌ನಿಗೆ ನಷ್ಟ ಉಂಟಾಗಿತ್ತು. ಇದರಿಂದಾಗಿ ವೃತ್ತಿ ವೈಷಮ್ಯ ಬೆಳೆದಿತ್ತು. ಆರೋಪಿ ಸತೀಶ್, ಸಹಚರರ ಜೊತೆ ಸೇರಿ ಕೊಲೆಗೆ ಸಂಚು ರೂಪಿಸಿದ್ದ’ ಎಂದು ಹೇಳಿದರು.

ಪಾರ್ಟಿಗೆ ಕರೆದೊಯ್ದು ಹತ್ಯೆ: ‘ಆನಂದ್ ಅವರಿಗೆ ಜುಲೈ 1ರಂದು ಕರೆ ಮಾಡಿದ್ದ ಸತೀಶ್, ಪಾರ್ಟಿ ಮಾಡೋಣವೆಂದು ಹೇಳಿ ಚನ್ನರಾಯನಪಾಳ್ಯಕ್ಕೆ ಕರೆಸಿದ್ದ. ಎಲ್ಲರೂ ಮದ್ಯ ಕುಡಿದಿದ್ದರು. ಬಳಿಕ, ಆರೋಪಿಗಳು ಆನಂದ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಕೊಂದಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕೊಲೆ ಬಗ್ಗೆ ಯಾರಿಗೂ ಅನುಮಾನ ಬರಬಾರದೆಂದು ಆರೋಪಿಗಳು, ಮೃತದೇಹದ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರು. ಮೃತದೇಹ ಸುಟ್ಟ ನಂತರ, ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು. ಬಂಧನ ಭೀತಿಯಲ್ಲಿದ್ದ ಆರೋಪಿಗಳು, ನಗರ ತೊರೆದು ಹಾಸನ ಹಾಗೂ ಸುತ್ತಮುತ್ತ ಓಡಾಡಿಕೊಂಡಿದ್ದರು’ ಎಂದು ಹೇಳಿದರು.

‘ವಾರ್ಷಿಕೋತ್ಸವಕ್ಕೆ ಬಂದಿದ್ದ ಪತ್ನಿ’

‘ಆನಂದ್ ಅವರ ಪತ್ನಿ ತಮಿಳುನಾಡಿನಲ್ಲಿ ನೆಲೆಸಿದ್ದಾರೆ. ಜುಲೈ 2ರಂದು ದಂಪತಿಯ ಮದುವೆ ವಾರ್ಷಿಕೋತ್ಸವವಿತ್ತು. ಜುಲೈ 1ರಂದು ಪತ್ನಿಗೆ ಕರೆ ಮಾಡಿದ್ದ ಆನಂದ್, ಬೆಂಗಳೂರಿಗೆ ಬರುವಂತೆ ಹೇಳಿದ್ದರು. ಜುಲೈ 2ರಂದು ಪತ್ನಿ ನಗರಕ್ಕೆ ಬಂದಾಗ, ಆನಂದ್ ಕೊಲೆಯಾಗಿರುವುದು ಗೊತ್ತಾಯಿತು’ ಎಂದು ಪೊಲೀಸರು ಹೇಳಿದರು.

‘ತಮ್ಮ ಮದುವೆ ವಾರ್ಷಿಕೋತ್ಸವದ ವಿಷಯವನ್ನು ಆನಂದ್, ಆರೋಪಿಗಳಿಗೆ ತಿಳಿಸಿದ್ದ. ಅದೇ ಸೂಕ್ತ ಸಮಯವೆಂದು ತಿಳಿದಿದ್ದ ಆರೋಪಿಗಳು, ವಾರ್ಷಿಕೋತ್ಸವದ ಪಾರ್ಟಿ ಮಾಡೋಣವೆಂದು ಹೇಳಿ ಕೃತ್ಯ ಎಸಗಿದ್ದರು’ ಎಂದು ತಿಳಿಸಿದರು.

₹5 ಕೋಟಿ ಬೇಡಿಕೆ: ಪ್ರಕರಣ ರದ್ದತಿಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸನಗರದ ರಾಮಚಂದ್ರಾಪುರ ಮಠದ ವಿರುದ್ಧ ಆರ್ಥಿಕ ಅವ್ಯವಹಾರ ಆರೋಪ ಹೊರಿಸಿ ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿ, ಅದನ್ನು ಹಿಂಪಡೆಯಲು ₹ 5 ಕೋಟಿ ಬೇಡಿಕೆ ಇರಿಸಿದ್ದ ಐವರು ಆರೋಪಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಗೋಪಾಲ ಸದಾಶಿವ ಗಾಯತ್ರಿ, ರಾಜಗೋಪಾಲ ಅಡಿ, ಶೇಷಾನಂದ ವಿಶ್ವೇಶ್ವರ ಅಡಿ, ಅಮಿತ್ ನಾಡಕರ್ಣಿ ಮತ್ತು ಗಣಪತಿ ಗಜಾನನ ಹಿರೇ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ಈ ಕೃತ್ಯದಲ್ಲಿ ನೇರವಾಗಿ ಭಾಗಿಯಾದವರ ಜೊತೆ ಅರ್ಜಿದಾರರು ಸಂಪರ್ಕದಲ್ಲಿ ಇದ್ದಾರೆ ಎಂಬುದು ಮೇಲ್ನೋಟಕ್ಕೇ ವ್ಯಕ್ತವಾಗುತ್ತದೆ. ಬೇಡಿಕೆ ಮೊತ್ತದಲ್ಲಿ ₹ 10 ಲಕ್ಷ ಪಡೆಯುವಾಗ ಸಂಚನ್ನು ಬಯಲಿಗೆಳೆಯಲು ಹೆಣೆದ ಬಲೆಯಲ್ಲಿ ಬಿದ್ದಿದ್ದಾರೆ. ಹೀಗಾಗಿ, ಆರೋಪಿಗಳ ವಿರುದ್ಧದ ಅಪರಾಧ ಕೃತ್ಯವನ್ನು ಹಗುರವಾಗಿ ಪರಿಗಣಿಸಲಾಗದು’ ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: ಅರ್ಜಿದಾರರು, ಸರ್ಕಾರೇತರ ಸ್ವಯಂಸೇವಾ ಸಂಸ್ಥೆ ‘ಅಸ್ತ್ರ’ ಎಂಬ ಸಂಘಟನೆ ಮತ್ತು ‘ಗೋಕರ್ಣ ಹಿತರಕ್ಷಣಾ ಸಮಿತಿ’ ಹೆಸರಿನಲ್ಲಿ ರಾಮಚಂದ್ರಾಪುರ ಮಠದ ವಿರುದ್ಧ ಆರ್ಥಿಕ ಅವ್ಯವಹಾರ ಆರೋಪ ಹೊರಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ನಂತರದಲ್ಲಿ ಈ ಅರ್ಜಿ ಹಿಂಪಡೆಯಲು ₹ 5 ಕೋಟಿ ಬೇಡಿಕೆ ಇರಿಸಿದ್ದರು ಎಂದು ಆರೋಪಿಸಿ ಮಠದ ಗಿರಿನಗರ ಶಾಖೆಯ ಮುಖ್ಯ ಆಡಳಿತ ಅಧಿಕಾರಿ ಕೃಷ್ಣ ಗಣೇಶ್ ಭಟ್ಟ, ಬೆಂಗಳೂರಿನ ಗಿರಿನಗರ ಪೊಲೀಸ್ ಠಾಣೆಯಲ್ಲಿ 2014ರ ಜ. 2 ಪ್ರಕರಣ ದಾಖಲಿಸಿದ್ದರು.

ಈ ಸಂಬಂಧ ತನಿಖೆ ನಡೆಸಿದ್ದ ಪೊಲೀಸರು ಐಪಿಸಿ ಕಲಂ 384, 504, 506 ಮತ್ತು 511ರ ಅಡಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನಗರದ 32ನೇ ಎಸಿಎಂಎಂ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ಇದನ್ನು ರದ್ದುಪಡಿಸುವಂತೆ ಕೋರಿ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಮಠದ ಆಡಳಿತಾಧಿಕಾರಿ ಪರ ಪಿ.ಎನ್. ಮನಮೋಹನ್ ವಾದ ಮಂಡಿಸಿದ್ದರು.

ಅದಾಲತ್... ನಗರದ ಹೈಕೋರ್ಟ್ ಆವರಣದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಕಕ್ಷಿದಾರರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಆನ್‌ಲೈನ್ ಬೆಟ್ಟಿಂಗ್ ಗೀಳು

ಮನೆ, ಕಬೋರ್ಡ್‌ನ ಕೀ ಕದ್ದುಕೊಂಡು ಹೋಗಿದ್ದ ಆರೋಪಿ, ನಕಲಿ ಕೀ ಮಾಡಿಸಿಟ್ಟುಕೊಂಡಿದ್ದ. ಅದೇ ಕೀ ಬಳಸಿ ಕಳ್ಳತನ ಮಾಡಿದ್ದಾನೆ

ಅಣ್ಣನ ಮನೆಯಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್ ಗೀಳಿಗೆ ಬಿದ್ದು ಹಣ ಹೊಂದಿಸುವುದಕ್ಕಾಗಿ ಅಣ್ಣನ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮೊಹಮ್ಮದ್ ಅರ್ಜಾನ್‌ನನ್ನು (21) ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಜಯನಗರ 1ನೇ ಹಂತದ ಸೋಮೇಶ್ವರನಗರ ನಿವಾಸಿ ಮೊಹಮ್ಮದ್ ಅರ್ಜಾನ್, ಔಷಧ ಮಾರಾಟ ಕಂಪನಿ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ. ಬೆರಳಚ್ಚು ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಅರ್ಜಾನ್‌ನನ್ನು ಬಂಧಿಸಲಾಗಿದೆ. ₹ 4.60 ಲಕ್ಷ ಮೌಲ್ಯದ 78 ಗ್ರಾಂ ಚಿನ್ನಾಭರಣ, 288 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ಕೈ ಗಡಿಯಾರ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ಜಪ್ತಿ ಮಾಡಿರುವ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳು

ನಕಲಿ ಕೀ ಮಾಡಿಸಿ ಕೃತ್ಯ: ‘ಆರೋಪಿ, ಅಣ್ಣ ಹಾಗೂ ಅತ್ತಿಗೆ ಜೊತೆ ವಾಸವಿದ್ದ. ನಿತ್ಯವೂ ಬೆಳಿಗ್ಗೆ ಕೆಲಸಕ್ಕೆ ಹೋಗುತ್ತಿದ್ದ. ಆನ್‌ಲೈನ್ ಬೆಟ್ಟಿಂಗ್‌ಗಾಗಿ ಹೆಚ್ಚು ಹಣ ವ್ಯಯಿಸುತ್ತಿದ್ದ. ಕೆಲಸದಿಂದ ಬಂದ ಹಣ ಸಾಲದಿದ್ದಾಗ, ಕಳ್ಳತನ ಮಾಡಲು ಸಂಚು ರೂಪಿಸಿದ್ದ’ ಎಂದು ಪೊಲೀಸರು ಹೇಳಿದರು.

ಪೊಲೀಸರ ಜೊತೆಗೆ ಓಡಾಡಿದ್ದ: ‘ಆರೋಪಿಯು ನಿತ್ಯವೂ ಕೆಲಸಕ್ಕೆ ಹೋಗುವ ರೀತಿಯಲ್ಲಿ ಮನೆಯಿಂದ ಹೊರಗೆ ಹೋಗಿದ್ದ. ನಂತರ, ಅಣ್ಣ–ಅತ್ತಿಗೆ ಹೊರಗಡೆ ತೆರಳಿದ್ದರು. ಅದೇ ಸಂದರ್ಭದಲ್ಲಿ ಮನೆಗೆ ವಾಪಸು ಬಂದಿದ್ದ ಆರೋಪಿ, ನಕಲಿ ಕೀ ಬಳಸಿ ಮನೆಯೊಳಗೆ ನುಗ್ಗಿದ್ದ. ಕಬೋರ್ಡ್‌ನಲ್ಲಿಟ್ಟಿದ್ದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ವಾಚ್ ಕದ್ದುಕೊಂಡು ಹೊರಟು ಹೋಗಿದ್ದ’ ಎಂದು ಪೊಲೀಸರು ಹೇಳಿದರು.

‘ಅಣ್ಣ–ಅತ್ತಿಗೆ ಮನೆಗೆ ವಾಪಸು ಬಂದಾಗ, ಕಬೋರ್ಡ್ ಗಮನಿಸಿದ್ದರು. ಕಳ್ಳತನವಾಗಿದ್ದು ಗೊತ್ತಾಗಿತ್ತು. ಅರ್ಜಾನ್ ಎಂದಿನಂತೆ ಸಂಜೆ ಮನೆಗೆ ಬಂದಿದ್ದ. ಏನೂ ಅರಿಯದಂತೆ ವರ್ತಿಸಿದ್ದ. ಅಣ್ಣನೇ ಠಾಣೆಗೆ ಮಾಹಿತಿ ನೀಡಿದ್ದರು. ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದ್ದರು. ಅರ್ಜಾನ್ ಸಹ ಸ್ಥಳದಲ್ಲಿದ್ದು, ಸಿಬ್ಬಂದಿ ಜೊತೆ ಓಡಾಡಿದ್ದ’ ಎಂದು ತಿಳಿಸಿದರು.

‘ಮನೆ ಹಾಗೂ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಹಾಗೂ ಶ್ವಾನ ದಳದ ಸಿಬ್ಬಂದಿ ತಪಾಸಣೆ ನಡೆಸಿದ್ದರು. ಹೊರಗಿನಿಂದ ಬಂದವರು ಕಳ್ಳತನ ಮಾಡಿಲ್ಲವೆಂಬುದು ಗೊತ್ತಾಗಿತ್ತು.’

‘ಅರ್ಜಾನ್ ಮೇಲೆ ಅನುಮಾನ ಬಂದಿತ್ತು. ಕೃತ್ಯದ ಸ್ಥಳದಲ್ಲಿ ಸಂಗ್ರಹಿಸಿದ್ದ ಬೆರಳಚ್ಚು ಸಹ ಹೊಂದಾಣಿಕೆ ಆಗಿತ್ತು. ಈತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಆನ್‌ಲೈನ್ ಬೆಟ್ಟಿಂಗ್‌ಗೆ ಹಣ ಹೊಂದಿಸಲು ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡ’ ಎಂದು ಹೇಳಿದರು.

ಅಪಘಾತ: ಟೆಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾರು ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸಾಫ್ಟ್‌ವೇರ್ ಎಂಜಿನಿಯರ್ ತೇಜಸ್ (24) ಮೃತಪಟ್ಟಿದ್ದಾರೆ.

‘ನಗರದ ಕಂಪನಿಯೊಂದರಲ್ಲಿ ತೇಜಸ್ ಕೆಲಸ ಮಾಡುತ್ತಿದ್ದರು. ಮನೆಯಿಂದಲೇ ಕೆಲಸ ಮಾಡಲು ಅವಕಾಶವಿತ್ತು. ಶುಕ್ರವಾರ ಸ್ನೇಹಿತನ ಕೊಠಡಿಯಲ್ಲಿ ಉಳಿದುಕೊಂಡು ರಾತ್ರಿಯವರೆಗೂ ಕಚೇರಿ ಕೆಲಸ ಮಾಡಿದ್ದರು. ಬಳಿಕ, ರಾತ್ರಿ 11 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಪದ್ಮನಾಭನಗರದ ಪುಟ್ಟಲಿಂಗಯ್ಯ ಜಂಕ್ಷನ್ ಬಳಿ ತೇಜಸ್ ಬೈಕ್‌ನಲ್ಲಿ ಹೊರಟಿದ್ದರು. ಇದೇ ಮಾರ್ಗದಲ್ಲಿ ತೆರಳುತ್ತಿದ್ದ ಟಾಟಾ ಇಂಡಿಕಾ ಕಾರು ಚಾಲಕ, ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದ. ಇದರಿಂದಾಗಿ ಕಾರು, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ತೇಜಸ್ ಮೃತಪಟ್ಟಿದ್ದಾರೆ.’

‘ಅಪಘಾತಕ್ಕೆ ಕಾರಣವಾದ ಆರೋಪದಡಿ ಇಂಡಿಕಾ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಾರು ಜಪ್ತಿ ಮಾಡಿ ಆತನನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

15 ಮದುವೆಯಾಗಿ ವಂಚಿಸಿದ ಭೂಪ!

ವಿವಾಹ ಸಂಬಂಧಿ ಜಾಲತಾಣಗಳಲ್ಲಿ ನಕಲಿ ಪ್ರೊಫೈಲ್ ಸೃಷ್ಟಿಸಿರುವ ಆರೋಪಿ

ಪ್ರಜಾವಾಣಿ ವಾರ್ತೆ

ಮೈಸೂರು: ಮ್ಯಾಟ್ರಿಮೊನಿಯಲ್ ವೆಬ್‌ಸೈಟ್‌ಗಳ ಮೂಲಕ ಮಹಿಳೆಯರನ್ನು ಪರಿಚಯಿಸಿಕೊಂಡು ಮದುವೆಯಾಗಿ ನಂತರ ಅವರ ಹಣ, ಒಡವೆಯೊಂದಿಗೆ ಪರಾರಿಯಾಗುತ್ತಿದ್ದ ಬೆಂಗಳೂರಿನ ಕಾಳಿದಾಸ ನಗರದ ನಿವಾಸಿ ಕೆ.ಬಿ. ಮಹೇಶ್ (35) ಎಂಬಾತನನ್ನು ಇಲ್ಲಿನ ಕುವೆಂಪುನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಬಿ.ಮಹೇಶ್

ಆರೋಪಿಯಿಂದ ಎರಡು ಕಾರು, 7 ಮೊಬೈಲ್ ಫೋನ್ ಹಾಗೂ ₹ 2 ಲಕ್ಷ ನಗದನ್ನು ವಶಕ್ಕೆ ಪಡೆದಿದ್ದಾರೆ. 15ಕ್ಕೂ ಹೆಚ್ಚು ಮಹಿಳೆಯರನ್ನು ವಂಚಿಸಿದ್ದಾಗಿ ಆರೋಪಿಯು ಪೊಲೀಸರ ವಿಚಾರಣೆ ವೇಳೆ ಬಾಯಿಬಿಟ್ಟಿದ್ದಾನೆ.

‘ವಿವಾಹ ಸಂಬಂಧಿ ಜಾಲತಾಣಗಳಲ್ಲಿ ನಕಲಿ ಪ್ರೊಫೈಲ್ ಸೃಷ್ಟಿಸಿಕೊಳ್ಳುತ್ತಿದ್ದ ಆರೋಪಿಯು, ಮದುವೆ ಯಾಗದ ವಯಸ್ಸಾದ ಮಹಿಳೆಯರು, ವಿಧವೆಯರನ್ನು ಹುಡುಕುತ್ತಿದ್ದ. ಅವರಿಗೆ ತಾನು ಡಾಕ್ಟರ್, ಎಂಜಿನಿಯರ್, ಸಿವಿಲ್ ಗುತ್ತಿಗೆದಾರನೆಂದು ಪರಿಚಯಿಸಿಕೊಂಡು ಸಂಪರ್ಕ ಬೆಳೆಸುತ್ತಿದ್ದ. ನಂಬಿಸಿ ಮದುವೆ ಮಾಡಿಕೊಳ್ಳು ತ್ತಿದ್ದ. ಬಾಡಿಗೆ ಮನೆಗಳಿಗೆ ಕರೆದೊಯ್ದು ಬಿಡುತ್ತಿದ್ದ. ಒಂದಿಷ್ಟು ದಿನ ಜೊತೆಗೆ ಇದ್ದು, ಅವರ ಹಣ, ಒಡವೆಯೊಂದಿಗೆ ಪರಾರಿಯಾಗುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಕಿಗೆ ಬಂದಿದ್ದು ಹೇಗೆ?: ಆರೋಪಿಯು ಜಾಲತಾಣವೊಂದರ ಮೂಲಕ ಬೆಂಗಳೂರಿನ ಹೇಮಲತಾ ಎಂಬುವರನ್ನು ಪರಿಚಯಿಸಿಕೊಂಡು ತಾನು ವೈದ್ಯನೆಂದು ಹೇಳಿಕೊಂಡಿದ್ದ. 2022ರ ಡಿಸೆಂಬರ್‌ನಲ್ಲಿ ಮಹಿಳೆಯು ಮೈಸೂರಿನ ಲಿಂಗಾಂಬುದಿ ಪಾಳ್ಯದಲ್ಲಿರುವ ಆರೋಪಿಯ ಬಾಡಿಗೆ ಮನೆಗೂ ಬಂದು ಹೋಗಿದ್ದರು. 2023ರ ಜ.28ರಂದು ವಿಶಾಖಪಟ್ಟಣದ ಹೋಟೆಲ್‌ನಲ್ಲಿ ಮದುವೆಯಾಗಿದ್ದರು. ಮರುದಿನವೇ ಹೇಮಲತಾ ಅವರನ್ನು ಮೈಸೂರಿನ ಮನೆಗೆ ಕರೆತಂದಿದ್ದ.

ಕೆಲ ದಿನಗಳ ಬಳಿಕ, ತಾನು ವಿಜಯನಗರದಲ್ಲಿ ಕ್ಲಿನಿಕ್ ತೆರೆಯುತ್ತಿದ್ದು, ₹70 ಲಕ್ಷ ಸಾಲ ತೆಗೆದುಕೊಡುವಂತೆ ಪತ್ನಿಯನ್ನು ಪೀಡಿಸಿದ್ದ. ಒಪ್ಪದಿದ್ದಾಗ ಕೊಲೆ ಬೆದರಿಕೆಯೊಡ್ಡಿದ್ದ. ಫೆ. 5ರಂದು ಮನೆಯಲ್ಲಿದ್ದ ₹ 15 ಲಕ್ಷ ನಗದು ಹಾಗೂ 200 ಗ್ರಾಂನಷ್ಟು ಬಂಗಾರದ ಒಡವೆಗಳೊಂದಿಗೆ ಪರಾರಿಯಾಗಿದ್ದ.

ನಂತರ, ದಿವ್ಯ ಎಂಬ ಮಹಿಳೆ ಮನೆಗೆ ಬಂದು, ಮಹೇಶ್ ತನ್ನನ್ನೂ ಮದುವೆಯಾಗಿರುವುದಾಗಿ ಹೇಳಿದ್ದರು. ಮೋಸ ಹೋಗಿರುವುದನ್ನು ಅರಿತು ಹೇಮಲತಾ ಕುವೆಂಪುನಗರ ಠಾಣೆಗೆ ದೂರು ನೀಡಿದ್ದರು. ಪೊಲೀಸರು ತುಮಕೂರಿನ ಮಹರ್ಷಿ ವಾಲ್ಮೀಕಿ ಸರ್ಕಲ್ ಬಳಿ ಶುಕ್ರವಾರ ಬಂಧಿಸಿದರು.

‘ಶಾಲೆಗಳಿಗೆ ಹೆಚ್ಚಿನ ಅನುದಾನ ಕೊಡಿ’

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ಬಜೆಟ್‌ನಲ್ಲಿ ಮೀಸಲಿಟ್ಟಿರುವ ₹ 510 ಕೋಟಿ ಸಾಲದು, ಹೆಚ್ಚಿನ ಅನುದಾನ ಒದಗಿಸಬೇಕು ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಮಾಜಿ ಸಲಹೆಗಾರ ಎಂ.ಆರ್.ದೊರೆಸ್ವಾಮಿ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ರಾಜ್ಯದ 30 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯದ ಕೊರತೆ ಇದೆ. ದುರಸ್ತಿ ಹಾಗೂ ನಿರ್ವಹಣೆಗಾಗಿ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ₹ 13 ಸಾವಿರ ಕೋಟಿ ಮೀಸಲಿಡಲು ಕೋರಿ ಹಿಂದೆ ಪತ್ರ ಬರೆಯಲಾಗಿತ್ತು. ಹೈಕೋರ್ಟ್ ಸಹ ಸರ್ಕಾರಿ ಶಾಲೆಗಳ ಸ್ಥಿತಿ ಆಘಾತಕಾರಿಯಾಗಿದೆ ಎಂದಿದೆ. ಸಿದ್ದರಾಮಯ್ಯನವರ ಸಾಮಾಜಿಕ ಕಳಕಳಿ ಗ್ರಾಮೀಣ ಭಾಗದ ಶಾಲಾ ವಿದ್ಯಾರ್ಥಿಗಳಿಗೆ ವರವಾಗಬೇಕು. ಪುನಶ್ಚೇತನಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಬೇಕು. ಬಜೆಟ್ ಹೊರತಾಗಿಯೂ ಅನುದಾನ ಒದಗಿಸಬೇಕು ಎಂದು ಕೋರಿದ್ದಾರೆ.

ಜಿ–20 ಶೃಂಗಸಭೆ: ಡ್ರೋನ್ ಹಾರಾಟದಿಂದ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿ–20 ಶೃಂಗಸಭೆ ನಡೆಯುತ್ತಿದ್ದ ಸ್ಥಳದ ಸಮೀಪದಲ್ಲಿ ಅಕ್ರಮವಾಗಿ ಡ್ರೋನ್ ಹಾರಿಸುತ್ತಿದ್ದ ಆರೋಪದಡಿ ಇಬ್ಬರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿ ರುವ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಜಿ– 20 ಶೃಂಗಸಭೆ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಡ್ರೋನ್ ಹಾರಾಟ ನಡೆಸಿದ್ದರಿಂದ, ಹೋಟೆಲ್ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

‘ಜಿ– 20 ಶೃಂಗಸಭೆ ನಡೆಯುತ್ತಿದ್ದರಿಂದ ಹೋಟೆಲ್ ಹಾಗೂ ಸುತ್ತಮುತ್ತ ಡ್ರೋನ್ ಹಾರಾಟ ನಿಷೇಧಿಸಲಾಗಿದೆ. ಮಡಿವಾಳ ಮಾರುತಿನಗರದ ನಿವಾಸಿ ವಿನಯ್ ಪುಲಾರ್ ಎಂಬಾತ, ಸ್ಯಾಂಕಿ ರಸ್ತೆಯ ಗಾಲ್ಫ್ ಲಿಂಕ್ ಅಪಾರ್ಟ್‌ಮೆಂಟ್ ಸಮುಚ್ಚಯದ ಮೇಲ್ಭಾಗದಲ್ಲಿ ಜುಲೈ 6ರಂದು ಡ್ರೋನ್ ಹಾರಿಸುತ್ತಿದ್ದ. ಅದನ್ನು ಗಮನಿಸಿದ್ದ ಭದ್ರತಾ ಸಿಬ್ಬಂದಿ, ಸ್ಥಳಕ್ಕೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಯನ್ನು ವಿಚಾರಿಸಿದಾಗ, ಆತ ಛಾಯಾಗ್ರಾಹಕ ಎಂಬುದು ತಿಳಿಯಿತು. ಡ್ರೋನ್ ಬಳಸಿ ಹಳೇ ಕಟ್ಟಡಗಳ ವಿಡಿಯೊ ಚಿತ್ರೀಕರಿಸಿಕೊಡುವಂತೆ ಚಿರಾಗ್ ಎಂಬಾತ ಹೇಳಿದ್ದನೆಂದು ಆರೋಪಿ ಹೇಳಿಕೆ ನೀಡಿದ್ದ. ಡ್ರೋನ್ ಹಾರಾಟಕ್ಕೆ ಆರೋಪಿಯು ಯಾವುದೇ ಅನುಮತಿ ಪಡೆದಿರಲಿಲ್ಲ’ ಎಂದು ತಿಳಿಸಿವೆ.

‘ಆರೋಪಿ ವಿನಯ್ ಹಾಗೂ ಚಿರಾಗ್ ಇಬ್ಬರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಡ್ರೋನ್ ಜಪ್ತಿ ಮಾಡಲಾಗಿದೆ. ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ರಸ್ತೆಯಲ್ಲಿ ವ್ಹೀಲೆ: ಸವಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆ ಸಂಚಾರ ಠಾಣೆ ವ್ಯಾಪ್ತಿಯ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ವ್ಹೀಲೆ ಮಾಡುತ್ತಿದ್ದ ಆರೋಪದಡಿ ಬಿ.ಎಂ. ರಾಜೇಶ್‌ನನ್ನು (18) ಪೊಲೀಸರು ಬಂಧಿಸಿದ್ದಾರೆ.

‘ಕೆ.ಪಿ.ಅಗ್ರಹಾರ ನಿವಾಸಿ ರಾಜೇಶ್, ಬೈಕ್‌ನಲ್ಲಿ ವ್ಹೀಲೆ ಮಾಡುತ್ತಿದ್ದ. ಇದು ವಿಡಿಯೊದಲ್ಲಿ ಸೆರೆಯಾಗಿತ್ತು. ಅದೇ ವಿಡಿಯೊ ಆಧರಿಸಿ ಆರೋಪಿಯನ್ನು ಪತ್ತೆ ಮಾಡಿ ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಇಂಥ ಕೃತ್ಯ ಎಸಗುವವರನ್ನು ಪತ್ತೆ ಮಾಡಲು ವಿಶೇಷ ತಂಡ ರಚಿಸಲಾಗಿದೆ’ ಎಂದು ತಿಳಿಸಿವೆ.

ಮೆಲ್ಬರ್ನ್: ಕನ್ನಡ ಭವನ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಆಸ್ಟ್ರೇಲಿಯಾದ ಫೆಡರಲ್ ಮೆಂಬರ್ ಕ್ಯಾಸೆಂಡ್ರಾ ಫರ್ನಾಂಡೊ, ಗೃಹ ಮತ್ತು ನಗರಾಭಿವೃದ್ಧಿ ಸಚಿವ ಕಾಲಿನ್ ಬ್ರೂಕ್ಸ್, ಮಹೇಶ ಜೋಶಿ, ಚಂದ್ರ ಬೆಂಗಳೂರು, ಸಂಘದ ಉಪಾಧ್ಯಕ್ಷ ಗಂಗಾಧರ ಬೇವಿನಕೊಪ್ಪ, ಕಾರ್ಯದರ್ಶಿ ಶ್ರೀನಿವಾಸ್ ಶರ್ಮಾ ಇದ್ದರು.

ಬೆಂಗಳೂರು: ಆಸ್ಟ್ರೇಲಿಯಾದ ಮೆಲ್ಬರ್ನ್ ಕನ್ನಡ ಸಂಘ ನಿರ್ಮಿಸಿದ ಮೆಲ್ಬರ್ನ್ ಕನ್ನಡ ಭವನ ಶನಿವಾರ ಉದ್ಘಾಟನೆಗೊಂ ಡಿತು.

ಈ ಭವನವು ಆಸ್ಟ್ರೇಲಿಯಾದ ವಿಕ್ಟೋರಿಯಾದಲ್ಲಿರುವ ಹಾರ್ಥನ್ ರಸ್ತೆಯ ನೋಬಲ್ ಪಾರ್ಕ್‌ನಲ್ಲಿದೆ. ಭವನ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ‘ಕನ್ನಡ ಸಾಹಿತ್ಯ ಪರಿಷತ್ತು ವಿದೇಶದಲ್ಲಿ ಇರುವ ಕನ್ನಡ ಸಂಘಗಳನ್ನು ಪರಿಷತ್ತಿನ ಅಂಗ ಸಂಸ್ಥೆಯನ್ನಾಗಿಸಿಕೊಂಡು, ವಿದೇಶದಲ್ಲಿಯೂ ಕನ್ನಡ ಕಟ್ಟುವ ಕಾಯಕಲ್ಪದಲ್ಲಿ ತೊಡಗಿಕೊ ಳ್ಳಲಿದೆ’ ಎಂದು ಹೇಳಿದರು.

ಮೆಲ್ಬರ್ನ್ ಕನ್ನಡ ಸಂಘದ ಅಧ್ಯಕ್ಷ ಚಂದ್ರ ಬೆಂಗಳೂರು, ‘ಕನ್ನಡಿಗರಿಂದ ನಿರ್ಮಾಣವಾದ ಈ ಕನ್ನಡ ಭವನವು ಕನ್ನಡಿಗರ ಅನಧಿಕೃತ ರಾಯಭಾರಿ ಕಚೇರಿಯಾಗಿ ಕಾರ್ಯನಿರ್ವಹಿಸ ಲಿದೆ. ಅನಿವಾಸಿ ಕನ್ನಡಿಗರನ್ನು ಒಂದೆಡೆ ಸೇರಿಸುವ ಕೆಲಸ ಮಾಡಲಾಗುತ್ತಿದೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆ, ಜಾನಪದವನ್ನು ಮುಂದಿನ ಪೀಳಿಗೆಗೆ ತಿಳಿಸಲು ಈ ಭವನ ಕಾರ್ಯಪ್ರವೃತ್ತವಾಗಲಿದೆ’ ಎಂದು ತಿಳಿಸಿದರು.

ದೈವ ನಿಂದನೆ; ಬೆಂಗಳೂರಿನ ವ್ಯಕ್ತಿಯ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಟ್ವಿಟರ್‌ನಲ್ಲಿ ನಕಲಿ ಖಾತೆ ಮೂಲಕ ತುಳುನಾಡಿನ ದೈವಾ ರಾಧನೆ ನಿಂದನೆ ಮತ್ತು ಮಹಿಳೆಯರ ಅಶ್ಲೀಲ ಚಿತ್ರ ಪೋಸ್ಟ್ ಮಾಡಿದ ಪ್ರಕರಣದ ಆರೋಪಿ ಬೆಂಗಳೂರಿನ ಅಮೃತಹಳ್ಳಿಯ ಜಕ್ಕೂರ್ ಮುಖ್ಯರಸ್ತೆಯ ನಿವಾಸಿ ಶಿವರಾಜ್ ಎಚ್.ಕೆ. (37) ಎಂಬಾತನನ್ನು ಬಂಧಿಸಲಾಗಿದೆ.

ಈ ಕುರಿತು ತುಳುನಾಡಿನ ದೈವಾರಾಧನೆ ಸಂರಕ್ಷಣಾ ಯುವ ವೇದಿಕೆಯವರು ಮಂಗಳೂರು ಸೆನ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದು ಮಂಗಳೂರು ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಆರ್.ಜೈನ್ ತಿಳಿಸಿದ್ದಾರೆ.

‘ವಿದ್ಯುತ್ ಮಸೂದೆ ಮಂಡಿಸದಿರಿ’

ಬೆಂಗಳೂರು: ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸಲು ಉದ್ದೇಶಿಸಿರುವ ಜನ ವಿರೋಧಿ ವಿದ್ಯುತ್ ತಿದ್ದುಪಡಿ ಮಸೂದೆ– 2022 ಅನ್ನು ತರಾತುರಿಯಲ್ಲಿ ಮಂಡಿಸಬಾರದು. ಮಸೂದೆ ಬಗ್ಗೆ ಸಂಬಂಧಪಟ್ಟ ವಿದ್ಯುತ್ ಎಂಜಿನಿಯರ್‌ಗಳು, ರೈತರ ಜತೆ ಸಮಾಲೋಚಿಸಬೇಕು ಎಂದು ಆಲ್ ಇಂಡಿಯಾ ಪವರ್ ಎಂಜಿನಿಯರ್ಸ್ ಫೆಡರೇಷನ್ ಆಗ್ರಹಿಸಿದೆ.

ಶನಿವಾರ ಆಲ್ ಇಂಡಿಯಾ ಪವರ್ ಎಂಜಿನಿಯರ್ಸ್ ಫೆಡರೇಷನ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಂಡಿದೆ.

ತಿದ್ದುಪಡಿಯಿಂದ ಗ್ರಾಹಕರು ಮತ್ತು ವಿದ್ಯುತ್ ವಲಯದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಭಾರಿ ಅನ್ಯಾಯವಾಗಲಿದೆ. ರೈತ ಸಮುದಾಯಕ್ಕೆ ಪ್ರಹಾರವಾಗಲಿದೆ ಎಂದು ಎಐಪಿಇಎಫ್‌ನ ಅಧ್ಯಕ್ಷ ಶೈಲೇಂದ್ರ ದುಬೆ, ಮಹಾಪ್ರಧಾನ ಕಾರ್ಯದರ್ಶಿ ಪಿ. ರತ್ನಾಕರ ರಾವ್ ತಿಳಿಸಿದರು.

ಬೆಂಗಳೂರು ರೇಸ್

ಮೊಯಿಟೊ ಗೆಲ್ಲುವ ನಿರೀಕ್ಷೆ

ಮಹಾರಾಜಾಸ್ ಗೋಲ್ಡ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೊಯಿಟೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಏರ್ ಬ್ಲಾಸ್ಟ್ 1, ಫಿನಿಕ್ಸ್ ಸಪ್ರೈಸ್ 4, ಡಲ್ಲಾಸ್ ಡ್ರಿಫ್ಟರ್ 2
2ನೇ ರೇಸ್: ಟ್ರೂತ್ 1, ಜೂಲಿಯೊ 2, ಸಿಯಾನ್ 3
3ನೇ ರೇಸ್: ಹನಿ ಕೇಕ್ 6, ಸೆವೆನ್ತ್ ಸಮುರಾಯ್ 4, ಕಮಾಂಡಿಂಗ್ ನೈಟ್ 1
4ನೇ ರೇಸ್: ವೈಟ್ ರೋಸಸ್ 7, ಬ್ರೂಸ್ ಆಲ್‌ಮೈಟಿ 3, ಲೆಕ್ಸ್ ಲುಥೋರ್ 2
5ನೇ ರೇಸ್: ರಾಪಿಡಸ್ 3, ಡೆವಿಲ್ಸ್ ಮ್ಯಾಜಿಕ್ 2, ಆಲ್ಡ್‌ಗೇಟ್ 5
6ನೇ ರೇಸ್: ಮೊಯಿಟೊ 3, ಕಿಂಗ್ಸ್ ರಾನ್ಸಮ್ 2, ಸಕ್ಸಸ್ 4
7ನೇ ರೇಸ್: ಯಂಗ್ ಡಯಾನ 8, ಕಾಲ್ ಮೀ 2, ಸಾಂಗ್ರಿಯಲ್ 6

ಉತ್ತಮ ಬೆಟ್: ಯಂಗ್ ಡಯಾನ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಆರೋಗ್ಯ ಉಚಿತ ತಪಾಸಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ವೈದ್ಯರ ದಿನದ ಅಂಗವಾಗಿ ಬಸವೇಶ್ವರ ನಗರದ ಪುಣ್ಯ ಆಸ್ಪತ್ರೆ ಮತ್ತು ನೈಪುಣ್ಯ ಫೌಂಡೇಷನ್ ಭಾನುವಾರ ಮಹಿಳಾ ಆರೋಗ್ಯ ಉಚಿತ ತಪಾಸಣಾ ಶಿಬಿರ ಆಯೋಜಿಸಿದೆ.

ಮೂಳೆ ಸಾಂದ್ರತೆ ಪರೀಕ್ಷೆ, ಇಸಿಜಿ, ಎಕ್ಸ್‌ರೇ, ಸಕ್ಕರೆ ಕಾಯಿಲೆ, ಅಧಿಕ ರಕ್ತದೊ ತ್ತಡದ ಕುರಿತು ಉಚಿತ ಪರೀಕ್ಷೆ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ 080–49294929,9900 061061ಗೆ ಸಂಪರ್ಕಿಸಬಹುದು.

ಸಂಚಾರ ಠಾಣೆಗಳಿಗೆ ದೂರು ಹೊತ್ತು ಬಂದ ಜನ

ಸಮಸ್ಯೆ ಆಲಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲು ಹಾಗೂ ಸಂಚಾರ ಸಂಬಂಧಿತ ಸಮಸ್ಯೆ ಗಳನ್ನು ಆಲಿಸಲು ಪೊಲೀಸ್ ಠಾಣೆಗಳಲ್ಲಿ ಶನಿವಾರ ಜನಸಂಪರ್ಕ ಸಭೆ ನಡೆಸಲಾಯಿತು.

ನಗರದ ಸಂಚಾರ ಪೊಲೀಸ್ ಠಾಣೆಗಳಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಜರುಗಿದ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು. ಎಸಿಪಿ ಹಾಗೂ ಇನ್‌ಸ್ಪೆಕ್ಟರ್‌ಗಳು, ಠಾಣೆಯಲ್ಲಿ ಹಾಜರಿದ್ದು ಜನರ ಸಮಸ್ಯೆಗಳನ್ನು ಆಲಿಸಿದರು.

ಠಾಣೆವಾರು ಸಭೆಗಳನ್ನು ಆಯೋಜಿಸಿ ದ್ದರಿಂದ, ಆಯಾ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಜನರು ತಮ್ಮ ಸಮಸ್ಯೆ ಗಳನ್ನು ಹೇಳಿಕೊಂಡರು.

ನಗರದ ಹಲಸೂರು ಸಂಚಾರ ಠಾಣೆಯಲ್ಲಿ ಶನಿವಾರ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು

‘ಪಾದಚಾರಿ ಮಾರ್ಗಗಳು ಸೂಕ್ತವಾಗಿಲ್ಲ. ಇದರಿಂದ ಜನರ ಓಡಾಟಕ್ಕೆ ತೊಂದರೆಯಾಗುತ್ತಿದೆ. ಕೆಲ ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಿದ್ದು, ಇದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಿ’ ಎಂದು ಜನರು ಒತ್ತಾಯಿಸಿದರು.

‘ರಸ್ತೆಗಳಲ್ಲಿ ಅಪಾಯಕಾರಿ ರೀತಿಯಲ್ಲಿ ವ್ಹೀಲೆ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಬಾಲಕರು ಇಂಥ ಕೃತ್ಯಗಳಲ್ಲಿ ತೊಡಗುತ್ತಿದ್ದಾರೆ. ಅಂಥವರನ್ನು ಪತ್ತೆ ಮಾಡಿ ಬಾಲಕರ ಜೊತೆ ಪೋಷಕರ ವಿರುದ್ಧವೂ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಸಮಸ್ಯೆಗಳನ್ನು ಆಲಿಸಿದ ಪೊಲೀಸರು, ‘ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗುವುದು. ಸಾರ್ವಜನಿಕರೂ ಪೊಲೀಸರ ಕೆಲಸಕ್ಕೆ ಸಹಕಾರ ನೀಡಬೇಕು’ ಎಂದು ಕೋರಿದರು.

‘ಕಾವೇರಿ 2.0’ ನಿಲ್ಲದ ಗೊಂದಲ

ಒಂದನೇ ಪುಟದಿಂದ..

ಅಲ್ಲಿನ ಅನ್ನಪೂರ್ಣಮ್ಮ ಅವರಿಗೆ ವೃದ್ಧಾಪ್ಯ ವೇತನ ಸಿಗುತ್ತದೆ. ‘ಮನೆಬಾಗಿಲಿಗೆ ಮಾಸಾಶನ’ ಯೋಜನೆಯಡಿ ಅಂಚೆ ಇಲಾಖೆ ಸಿಬ್ಬಂದಿ ಪ್ರತಿ ತಿಂಗಳು ಮನೆ ಬಾಗಿಲಿಗೆ ಬರುತ್ತಾರೆ. ಬೆರಳಚ್ಚು ಪಡೆದುಕೊಳ್ಳುತ್ತಾರೆ. ಆದರೆ ಹಣ ನೀಡುವ ಸಂದರ್ಭದಲ್ಲಿ ಅಂತರ್ಜಾಲದ ತೊಂದರೆ, ಸರ್ವರ್ ಸಮಸ್ಯೆ ಎದುರಾಗುತ್ತಿದೆ. ಹೀಗಾಗಿ ಬಹುತೇಕ ಸಂದರ್ಭದಲ್ಲಿ ಅಂಚೆ ಕಚೇರಿಗೆ ನಡೆದುಕೊಂಡು ಹೋಗಿಯೇ ಹಣ ಪಡೆದುಕೊಳ್ಳುವುದು ಅನಿವಾರ್ಯ ಆಗುತ್ತದೆ.

ಬೀದರ್ ಜಿಲ್ಲೆ ಔರಾದ್ ತಾಲ್ಲೂಕು ಎಕಲಾರ ಗ್ರಾಮದ ಲೀಲಾವತಿ ಅವರಿಗೆ ತಹಶೀಲ್ದಾರ್ ಕಚೇರಿಗೇ ಹೋಗಿ ಅರ್ಜಿ ಹಾಕಿದ ನಂತರ ವೃದ್ಧಾಪ್ಯ ವೇತನ ಮಂಜೂರಾಗಿತ್ತು. ₹ 1 ಸಾವಿರ ವೆಚ್ಚ ಮಾಡಿದರೆ 15 ದಿನದಲ್ಲಿ ಸಿಗಬೇಕಾಗಿದ್ದ ಭೂ ಪರಿವರ್ತನೆ ಪ್ರಮಾಣಪತ್ರ ಕೈಸೇರಲು ಕಡಬದ ರಾಕೇಶ್ ಐದು ತಿಂಗಳು ಕಾಯಬೇಕಾಯಿತು. ‘ಸಕಾಲ ತಂತ್ರಾಂಶದಲ್ಲಿ ಸುಸೂತ್ರವಾಗಿ ಎಲ್ಲವೂ ನಡೆಯದೇ ಇದ್ದರೆ ಜಿಲ್ಲಾಧಿಕಾರಿ ಕಚೇರಿಯಿಂದ ನೋಟಿಸ್ ಬರುತ್ತದೆ’ ಎಂದು ತಾಲ್ಲೂಕು ಪಂಚಾಯಿತಿಯ ಅಧಿಕಾರಿಗಳು ಹೇಳುತ್ತಿದ್ದರೂ ಗಡಿ ಭಾಗದ ಅನ್ನಪೂರ್ಣಮ್ಮ ಅವರು ಅಂಚೆ ಕಚೇರಿಗೆ ಅಲೆಯುವುದು ತಪ್ಪಿಲ್ಲ.

ಭೂ ಪರಿವರ್ತನೆ, ಆಸ್ತಿ ಖರೀದಿ–ಮಾರಾಟ, ವಿಧವಾ–ವೃದ್ಧಾಪ್ಯ ವೇತನ ಮುಂತಾದ ಪ್ರಕ್ರಿಯೆ ಸುಲಭಗೊಳಿಸಲು ಮತ್ತು ಹಣದ ‘ವ್ಯವಹಾರ’ಕ್ಕೆ ಕಡಿವಾಣ ಹಾಕಲು ಕೈಗೊಂಡಿರುವ ಸುಧಾರಣಾ ಕಾರ್ಯಗಳ ಬಗ್ಗೆ ಹಿಂದಿನ ಸರ್ಕಾರದ ಕಂದಾಯ ಸಚಿವರು ಪದೇ ಪದೇ ಪ್ರಸ್ತಾಪಿಸುತ್ತಿದ್ದ ಸಂದರ್ಭದಲ್ಲೇ ಇಂಥ ವಿಳಂಬ, ಹಣದ ವ್ಯವಹಾರ ಪ್ರಕರಣಗಳು ನಡೆಯುತ್ತಿದ್ದವು. ಸರ್ಕಾರದ ನಾಯಕತ್ವ ಬದಲಾದರೂ ಅವ್ಯವಸ್ಥೆ ಇನ್ನೂ ಹಾಗೆಯೇ ಇದೆ.

ಉಪನೋಂದಣಾಧಿಕಾರಿ ಕಚೇರಿ ಕೆಲಸಗಳು ಕ್ಲಿಷ್ಟವಾಗಲು ಸರ್ವರ್ ಡೌನ್, ಸಾಫ್ಟ್‌ವೇರ್‌ನಲ್ಲಿ ತೊಂದರೆ, ಸರ್ವೆಯರ್, ಗ್ರಾಮ ಲೆಕ್ಕಿಗರಿಗೆ ಕೆಲಸದ ಒತ್ತಡ ಮುಂತಾದ ನೆಪಗಳನ್ನು ಹೇಳುತ್ತಿದ್ದರೂ ‘ಸಂದಾಯ’ಕ್ಕೆ ಪ್ರೇರಣೆ ನೀಡುವುದೇ ಈ ‘ವರಸೆ’ಗಳ ಹಿಂದಿನ ಉದ್ದೇಶ ಎಂಬುದು ಕಂದಾಯ ಇಲಾಖೆಯ ಕಚೇರಿಗಳಿಗೆ ಓಡಾಡುವ ಬಹುತೇಕರ ಅನಿಸಿಕೆ. ಲಂಚದ ದಾಹ ಮತ್ತು ಮಧ್ಯವರ್ತಿಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಸಮಸ್ಯೆಗಳು ಇದ್ದರೇನೆ ಒಳ್ಳೆಯದು ಎಂಬ ಭಾವನೆ ಅನೇಕ ಅಧಿಕಾರಿಗಳಲ್ಲಿ ಇದೆ ಎಂಬ ಮಾತುಗಳು ಕೇಳಿಬರುತ್ತಿವೆ. ಆಡಳಿತ ಸುಧಾರಣೆಯ ಭಾಗವಾಗಿ ಜಾರಿಗೆ ಬಂದಿರುವ ಕಾವೇರಿ 2.0 ತಂತ್ರಾಂಶದ ಮೇಲೆ ಅಧಿಕಾರಿಗಳು ಭರವಸೆ ಇರಿಸಿಕೊಂಡಿದ್ದಾರೆ. ಆದರೆ ಅದನ್ನು ವಿರೋಧಿಸುವ ಲಾಬಿಯ ಹಿಂದೆಯೂ ಕುತ್ಸಿತ ಮನಸ್ಸುಗಳು ಇವೆ ಎಂಬ ಆರೋಪ ಇದೆ.

ವಿಧವಾ–ವೃದ್ಧಾಪ್ಯ ವೇತನ ವಿತರಣೆ ಸುಲಭ ಮಾಡಲು ಕೈಗೊಂಡ ಕ್ರಮಗಳು ಪ್ರಚಾರದ ಕೊರತೆಯಿಂದ ಗಡಿಭಾಗ ಮತ್ತು ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಫಲಾನುಭವಿಗಳ ‘ಮನೆಬಾಗಿಲಿಗೆ’ ತಲುಪಿಲ್ಲ. ಕೆಲವು ಕಡೆಗಳಲ್ಲಿ ವೃದ್ಧರು ಕಚೇರಿಗಳಿಗೆ ಅಲೆದಾಡಲೇಬೇಕಾಗಿದೆ.

ಕೈಗಾರಿಕೆಗಳಿಗೆ ಉತ್ತೇಜನ ನೀಡುವುದಕ್ಕಾಗಿ 2020ರಲ್ಲಿ ಭೂಪರಿವರ್ತನೆ ಪ್ರಕ್ರಿಯೆಯನ್ನು ಸುಲಭಗೊಳಿಸಲು ಸರ್ಕಾರ ಮುಂದಾಗಿತ್ತು. ಸ್ವಂತ ಜಾಗ ಇದ್ದೂ ಬಾಡಿಗೆ ಕಟ್ಟಡಗಳಲ್ಲಿ ಕೈಗಾರಿಕೆಗಳನ್ನು ನಡೆಸುತ್ತಿದ್ದವರು ಇದನ್ನು ಕೇಳಿ ಖುಷಿಗೊಂಡರು. ಅರ್ಜಿ ಸಲ್ಲಿಸಿ ಕಾಯುವುದು ಕೊನೆಯಾಗಲಿದೆ ಎಂಬ ಭರವಸೆ ಮೂಡಿತ್ತು. ರಿಯಲ್ ಎಸ್ಟೇಟ್ ಉದ್ಯಮವನ್ನು ಪ್ರೋತ್ಸಾಹಿಸುವುದಕ್ಕಾಗಿ ಕೃಷಿಭೂಮಿಯನ್ನು ಕೃಷಿಯೇತರ ಅವಶ್ಯಕತೆಗಳಿಗಾಗಿ ಬಳಸುವ ಕಾರ್ಯವನ್ನು ಸರಳಗೊಳಿಸಲು 2021ರಲ್ಲಿ ಸರ್ಕಾರ ಮುಂದಾಗಿತ್ತು. ಭೂಪರಿವರ್ತನೆಯನ್ನು ಮೂರೇ ದಿನಗಳಲ್ಲಿ ಮಾಡಿಕೊಡಲಾಗುವುದು ಎಂದು 2022ರಲ್ಲಿ ಘೋಷಿಸಲಾಯಿತು. ಭೂಮಿ ಖರೀದಿ ಪ್ರಕ್ರಿಯೆ ಸುಲಭ ಮಾಡುವುದಕ್ಕಾಗಿ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 79–ಎ ಮತ್ತು 79–ಬಿಯನ್ನು ರದ್ದುಪಡಿಸುವ ನಿರ್ಧಾರ ಕೈಗೊಂಡ ಸರ್ಕಾರ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಇದು ಉತ್ತಮ ಮಾರ್ಗ ಎಂದು ಹೇಳಿತು.

ಇದ್ಯಾವುದರಿಂದಲೂ ಏಜೆಂಟರ ‘ಕಾಟ’ವನ್ನು ತಪ್ಪಿಸಲು ಸಾಧ್ಯವಾಗಲಿಲ್ಲ ಎಂಬುದು ಉಪನೋಂದಣಾಧಿಕಾರಿ ಕಚೇರಿ ಸುತ್ತ ಸುತ್ತು ಹಾಕಿದರೆ ಖಾತರಿಯಾಗುತ್ತದೆ. ‘ಪ್ರಜಾವಾಣಿ’ ವರದಿಗಾರರು ತೆರಳಿದ ತಾಲ್ಲೂಕು ಪಂಚಾಯಿತಿ ಕಚೇರಿಯ ಹೊರಗೆ ಐವತ್ತಕ್ಕೂ ಹೆಚ್ಚು ಏಜೆಂಟರು ‘ಗ್ರಾಹಕ’ರನ್ನು ಸೆಳೆಯಲು ಕಾಯುತ್ತಿದ್ದರು. ಗ್ರಾಮೀಣ ಭಾಗದಲ್ಲೂ ಈ ಪಿಡುಗು ಇದೆ. ‘ಸಿಸಿಟಿವಿ ಕ್ಯಾಮೆರಾ ಗಳು ಇವೆ. ಲೋಕಾಯುಕ್ತ ಸಂಸ್ಥೆ ಇದೆ. ಆದರೂ ಲಂಚ ಮತ್ತು ಏಜೆಂಟರ ಕಾಟ ತಡೆಯಲು ಆಗಲಿಲ್ಲ. ಹಣ ತೆಗೆದುಕೊಳ್ಳದವರ ಮೇಲೆಯೇ ಅಪನಂಬಿಕೆ ಮೂಡುವಷ್ಟು ವ್ಯವಸ್ಥೆ ಕೆಟ್ಟುಹೋಗಿದೆ. ಬ್ರೋಕರ್‌ಗಳಿಗೆ ರಾಜಕೀಯ ಪಕ್ಷದವರ ಕೃಪೆ ಇರುತ್ತದೆ. ದಾಖಲೆಗಳು ಸಮರ್ಪಕವಾಗಿರಬೇಕು ಎಂದು ಹೇಳಿದರೆ ನಮ್ಮ ಮೇಲೆಯೇ ಆರೋಪ ಮಾಡುತ್ತಾರೆ, ವರ್ಗಾವಣೆ ಬೆದರಿಕೆಯ ತಂತ್ರ ಪ್ರಯೋಗಿಸುತ್ತಾರೆ. ಕೆಲವೊಮ್ಮೆ ನಮ್ಮ ಕಾಲ ಮೇಲೆ ನಾವೇ ಕಲ್ಲು ಹೊತ್ತುಹಾಕುವುದು ಬೇಡ ಎಂದುಕೊಂಡು ಏಜೆಂಟರಿಗೆ ಮಣೆ ಹಾಕುವುದು ಅನಿವಾರ್ಯ ಆಗುತ್ತದೆ’ ಎಂದು ಹೆಸರು ಬಹಿರಂಗ ಮಾಡಬಾರದು ಎಂದು ಮನವಿ ಮಾಡಿದ ದಕ್ಷಿಣ ಕನ್ನಡದ ತಾಲ್ಲೂಕೊಂದರ ಉಪ ತಹಶೀಲ್ದಾರ್ ಹೇಳುತ್ತಾರೆ.

ಕಾವೇರಿ 2.0ಗೆ ಯಾಕೆ ವಿರೋಧ?: ಆಸ್ತಿ ನೋಂದಣಿಗೆ ಸಂಬಂಧಿಸಿದ ‘ಟೋಕನ್’ ಸ್ವತಃ ಪಡೆದುಕೊಳ್ಳಲು ಸಾರ್ವಜನಿಕರಿಗೆ ಅನುಕೂಲ ಒದಗಿಸುವ ಕಾವೇರಿ 2.0 ತಂತ್ರಾಂಶ ಅಳವಡಿಕೆ ಕಾರ್ಯ ಜೂನ್ 23ರಂದು ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಸುಳ್ಯ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಅಳವಡಿಸುವುದರೊಂದಿಗೆ ಮುಕ್ತಾಯ ಕಂಡಿದೆ. ಈಗಾಗಲೇ ಈ ತಂತ್ರಾಂಶಕ್ಕೆ ವಿರೋಧವೂ ಆರಂಭವಾಗಿದೆ ಎಂದು ಹೆಸರು ಪ್ರಕಟಪಡಿಸಬಾರದು ಎಂಬ ಷರತ್ತಿನೊಂದಿಗೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಕಾವೇರಿ 2.0 ತಂತ್ರಾಂಶದ ಪ್ರಾಯೋಗಿಕ ಹಂತದಲ್ಲಿ ಇದ್ದ ಸಮಸ್ಯೆಗಳ ಪೈಕಿ ಶೇಕಡ 90ರಷ್ಟನ್ನು ಬಗೆಹರಿಸಲಾಗಿದೆ. ಸದ್ಯ ಹಣ ಪಾವತಿಗೆ ಮಾತ್ರ ಸಮಸ್ಯೆ ಆಗುತ್ತಿದೆ. ಇದಕ್ಕೆ ಕಾರಣ ಹುಡುಕುತ್ತಿದ್ದೇವೆ. ಈ ಸಮಸ್ಯೆಯನ್ನೇ ಏಜೆಂಟರು ಬಂಡವಾಳ ಮಾಡಿಕೊಂಡಿದ್ದಾರೆ’ ಎಂದು ಅಧಿಕಾರಿ ಹೇಳಿದರು.

ಆಸ್ತಿ ನೋಂದಣಿಯಲ್ಲಿ ಟೋಕನ್ ಪಡೆಯುವಲ್ಲಿಂದಲೇ ಭ್ರಷ್ಟಾಚಾರ ಆರಂಭವಾಗುತ್ತದೆ. ಕೆಲವು ಕಡೆಗಳಲ್ಲಿ ಏಜೆಂಟರು ಮತ್ತು ದಸ್ತಾವೇಜು ಬರಹಗಾರರು ಉಪನೋಂದಣಾಧಿಕಾರಿಯನ್ನು ಬಲೆಗೆ ಬೀಳಿಸಿಕೊಂಡು, ತಮಗೆ ಮಾತ್ರ ಟೋಕನ್ ಸುಲಭವಾಗಿ ಸಿಗುವಂತೆ ಮಾಡುತ್ತಿದ್ದರು. ಹೀಗಾಗಿ ಏಜೆಂಟರ ಮೂಲಕ ಹೋದರೆ ಮಾತ್ರ ಆಸ್ತಿ ನೋಂದಣಿ ಮಾಡಲು ಸಾಧ್ಯ ಎಂಬಂತಾಗಿತ್ತು. ಕಾವೇರಿ 2.0ದಲ್ಲಿ ಸಾರ್ವಜನಿಕರು ನೇರವಾಗಿ ಮತ್ತು ಸುಲಭವಾಗಿ ಟೋಕನ್ ಪಡೆದುಕೊಳ್ಳಬಹುದು. ಅರ್ಜಿ ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಿಕೊಳ್ಳಬಹುದು. ಹೀಗಾಗಿ ಈ ತಂತ್ರಾಂಶ ಬಳಕೆಯಲ್ಲಿ ಅರ್ಜಿದಾರರೇ ‘ರಾಜ’ರು. ಈಗ ಕಂಪ್ಯೂಟರ್ ಆಪರೇಟರ್ ಕಾರ್ಯ ಗೌಣವಾಗಿದೆ. ಇದು ಏಜೆಂಟರನ್ನು ರೊಚ್ಚಿಗೇಳುವಂತೆ ಮಾಡಿದೆ.

‘ಸೇಲ್ ಡೀಡ್ ತಯಾರಿಸಲು ಎಷ್ಟು ಹಣ ವೆಚ್ಚವಾಗುತ್ತದೆ ಎಂದು ಮಾರಾಟಗಾರ ಮತ್ತು ಖರೀದಿದಾರರಿಗೆ ತಿಳಿಯದಂತೆ ಏಜೆಂಟರು ‘ವ್ಯವಹಾರ’ ಮಾಡುತ್ತಿದ್ದರು. ಈಗ ಆನ್‌ಲೈನ್ ಮೂಲಕ ಹಣ ಸಂದಾಯ ಮಾಡುವುದರಿಂದ ಇದರ ಪ್ರಮಾಣ ಸ್ಪಷ್ಟವಾಗಿ ತಿಳಿಯುತ್ತದೆ’ ಹೀಗಾಗಿ ಲೂಟಿ ಮಾಡಲು ಏಜೆಂಟರಿಗೆ ಅವಕಾಶ ಇಲ್ಲ’ ಎನ್ನುತ್ತಾರೆ ಕಚೇರಿಯೊಂದರ ಸಿಬ್ಬಂದಿ.

ಕಾವೇರಿಯೂ ಸರ್ವ ಸ್ವತಂತ್ರವಲ್ಲ: ಕಾವೇರಿ 2.0 ತಂತ್ರಾಂಶ ಒಂದರಿಂದಲೇ ನೋಂದಣಿ ಪ್ರಕ್ರಿಯೆ ಪೂರ್ಣಗೊಳ್ಳುವುದಿಲ್ಲ. ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ ತಂತ್ರಾಂಶಗಳನ್ನು ಇದು ಅವಲಂಬಿಸಿದೆ. ಈ ಇಲಾಖೆಗಳಿಂದ ಮಾಹಿತಿ ಬರುವುದು ವಿಳಂಬವಾದರೆ ನೋಂದಣಿ ತಡವಾಗುವ ಸಾಧ್ಯತೆ ಇದೆ ಎನ್ನುವುದು ಪತ್ರ ಬರಹಗಾರರ ಅಭಿಪ್ರಾಯ. ಹೀಗಾಗಿ ಸುಧಾರಿತ ಕಾವೇರಿ ಜಾರಿ ನಂತರವೂ ತಾಂತ್ರಿಕ ತೊಂದರೆಯ ಆತಂಕವಿದೆ.

ಕೊಪ್ಪಳ ಜಿಲ್ಲೆಯಲ್ಲಿ ಕಾವೇರಿ 2.0 ತಂತ್ರಾಂಶದಲ್ಲಿ ತಾಂತ್ರಿಕ ಸಮಸ್ಯೆಗಳು ಸಿಬ್ಬಂದಿಗೆ ತಲೆನೋವುಂಟುಮಾಡಿವೆ. ಹೊಸ ತಂತ್ರಾಂಶ ಅಳವಡಿಕೆ ಮಾಡಿದ ನಂತರವೂ ನೋಂದಣಿ ಕಾರ್ಯ ತಡವಾಗುತ್ತಿದೆ ಎಂಬ ಆರೋಪ ಕೇಳಿಬಂದಿವೆ. ಸಂಯೋಜನೆಯಾಗಿರುವ ಆಸ್ತಿ ವಿವರ ಈಗ ಸರಿಯಾಗಿ ತೋರಿಸುತ್ತಿಲ್ಲ. ಜಿಲ್ಲೆಯ ಹಲವು ಊರುಗಳ ಹೆಸರೇ ಇದರಲ್ಲಿ ದಾಖಲಾಗಿಲ್ಲ ಎಂದು ಜನರು ದೂರುತ್ತಿದ್ದಾರೆ.

ಪಿಂಚಣಿಗಾಗಿ ತಪ್ಪದ ಅಲೆದಾಟ: ‘ಮನೆ ಬಾಗಿಲಿಗೆ ಮಾಸಾಶನ’ ಯೋಜನೆಯು ಫಲಾನುಭವಿಗಳ ಪಾಲಿಗೆ 72 ಗಂಟೆಯೊಳಗೆ ಪಿಂಚಣಿ ಮಂಜೂರಾತಿ ಪಡೆದುಕೊಳ್ಳುವ ಹಾದಿಯನ್ನು ಸುಗಮಗೊಳಿಸಿದೆ. ಆದರೆ ಹಳ್ಳಿ ಹಾಗೂ ಗಡಿಭಾಗಗಳಲ್ಲಿ ಪ್ರಚಾರ ಮಾಡದೇ ಇರುವುದರಿಂದ ಪಿಂಚಣಿಗಾಗಿ ಜನರ ಅಲೆದಾಟ ತಪ್ಪಿಲ್ಲ.

ಉಡುಪಿ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ 2019ರಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದ ಯೋಜನೆ ಯಶಸ್ವಿಯಾಗಿದ್ದರಿಂದ 2022ರಲ್ಲಿ ರಾಜ್ಯ ದಾದ್ಯಂತ ವಿಸ್ತರಿಸಲಾಯಿತು. 72 ಗಂಟೆಯೊಳಗೆ ಪಿಂಚಣಿ ಮಂಜೂರು ಮಾಡಲು ಕಂದಾಯ ಇಲಾಖೆ ‘ಹಲೋ ಕಂದಾಯ ಸಚಿವರೇ’– ಶುಲ್ಕರಹಿತ ಸಹಾಯವಾಣಿ ಸೇವೆ (155245) ಆರಂಭಿಸಿದೆ. ಇದಕ್ಕೆ ಕರೆ ಮಾಡಿ ಹೆಸರು ನೋಂದಾಯಿಸಿಕೊಂಡರೆ ಗ್ರಾಮ ಲೆಕ್ಕಾಧಿಕಾರಿ ಅರ್ಜಿದಾರರ ಮನೆ ಬಾಗಿಲಿಗೇ ಬಂದು ಫೋಟೊ ತೆಗೆದುಕೊಂಡು ಅಗತ್ಯ ದಾಖಲೆಗಳನ್ನು ಮೊಬೈಲ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡುತ್ತಾರೆ. ದಾಖಲೆಗಳು ಸಮರ್ಪಕವಾಗಿದ್ದರೆ 72 ಗಂಟೆಯೊಳಗೆ ಪಿಂಚಣಿ ಮಂಜೂರು ಮಾಡಲಾಗುತ್ತದೆ.

‘ಮೂರು ವರ್ಷ ಅಲೆದಾಡಿದರೂ ನನಗೆ ಪಿಂಚಣಿ ಮಂಜೂರು ಆಗಿರಲಿಲ್ಲ. ಸಹಾಯವಾಣಿಗೆ ಕರೆ ಮಾಡಿದ ಬಳಿಕ ಈ ತಿಂಗಳಿನಿಂದ ಪಿಂಚಣಿ ಬರತೊಡಗಿದೆ’ ಎಂದು ಬೆಳಗಾವಿ ಜಿಲ್ಲೆಯ ನೇಗಿನಹಾಳ ಗ್ರಾಮದ ವೃದ್ಧೆ ಸಾತವ್ವ ವಾಲಿಕಾರ ಹೇಳಿದರು.

ಪೂರಕ ಮಾಹಿತಿ: ಬ್ಯೂರೋಗಳಿಂದ



ಚಿತ್ರ: ಗುರು ನಾವಳ್ಳಿ

> **ಮನೆ ಬಾಗಿಲಿಗೆ ಮಾಸಾಶನ ತಲುಪಿಸುವ ಪ್ರಾಯೋಗಿಕ ಯೋಜನೆಯನ್ನು ಉಡುಪಿ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನ ಗೊಳಿಸಲಾಗಿದೆ. ಈ ವರೆಗೆ ಬಂದಿರುವ ಎಲ್ಲ ಅರ್ಜಿಗಳನ್ನು 72 ತಾಸುಗಳೊಳಗೆ ವಿಲೇವಾರಿ ಮಾಡಲಾಗಿದೆ.**
>
> **ಡಾ.ಬಿ.ಎನ್.ವೀಣಾ,** ಹೆಚ್ಚುವರಿ ಜಿಲ್ಲಾಧಿಕಾರಿ, ಉಡುಪಿ

₹ 2 ಕೋಟಿಗೆ ಬೇಡಿಕೆ ಇಟ್ಟು ಜೈಲು ಸೇರಿದ ಅಧಿಕಾರಿ

ಬೆಳಗಾವಿ: ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಕುಲವಳ್ಳಿ ಗುಡ್ಡದ ಸುಮಾರು 2,900 ಎಕರೆ ಜಮೀನನ್ನು ರಾಜೇಂದ್ರ ಇನಾಮದಾರ ಅವರ ಕುಟುಂಬದವರ ಹೆಸರಿಗೆ ದಾಖಲಿಸಲು 2022ರಲ್ಲಿ ₹ 2 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಸಿಕ್ಕಿಬಿದ್ದಿದ್ದ ತಹಶೀಲ್ದಾರ್ ಸೋಮಲಿಂಗಪ್ಪ ಹಲಗಿ ಹಾಗೂ ಗುಮಾಸ್ತ ಜಿ.ಪ್ರಸನ್ನ ಜೈಲು ಪಾಲಾಗಿದ್ದರು. ₹ 2 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ದೂರಲಾಗಿತ್ತು.

ಜಮೀನು ಖರೀದಿಯ ನೋಂದಣಿ ಮಾಡಿಕೊಡಲು ಮಹಾರಾಷ್ಟ್ರದ ಇಚಲಕರಂಜಿಯ ರಾಜು ಪಾಚ್ಛಾಪುರೆ ಅವರಿಂದ ₹ 30 ಸಾವಿರ ಲಂಚ ತೆಗೆದುಕೊಳ್ಳುತ್ತಿದ್ದ ಚಿಕ್ಕೋಡಿ ಉಪನೋಂದಣಾಧಿಕಾರಿ ಜಿ.ಪಿ.ಶಿವರಾಜು ಈ ವರ್ಷದ ಜನವರಿಯಲ್ಲಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದರು.

ಮತ್ತೊಂದು ಪ್ರಕರಣದಲ್ಲಿ ಜಮೀನುಗಳ ನಕ್ಷೆ ಅವಧಿ ವಿಸ್ತರಿಸಲು ಲಂಚ ಪಡೆಯುತ್ತಿದ್ದ, ಚಿಕ್ಕೋಡಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಮೇಲ್ವಿಚಾರಕ ಸತೀಶ ಕಲ್ಯಾಣಶೆಟ್ಟಿ ಮೇ 19ರಂದು ಲೋಕಾಯುಕ್ತ ಬಲೆಗೆ ಬಿದ್ದಿದ್ದರು. ಆಸ್ತಿ ದಾಖಲಾತಿ ಬದಲಾವಣೆ ಮಾಡಿಕೊಡಲು ಲಂಚ ಪಡೆಯುತ್ತಿದ್ದ ಖಾನಾಪುರ ತಾಲ್ಲೂಕಿನ ನಿಟ್ಟೂರಿನ ಪಿಡಿಒ, ಗುಮಾಸ್ತ ಎಸಿಬಿ ಅಧಿಕಾರಿಗಳ ಬಲೆಗೆ ಬಿದ್ದಿದ್ದರು. ಹುಕ್ಕೇರಿ ತಾಲ್ಲೂಕಿನ ಗುಡಸ ಗ್ರಾಮ ಪಂಚಾಯಿತಿಯ ಗುಮಾಸ್ತರೊಬ್ಬರು ಆಸ್ತಿ ನೋಂದಣಿಗೆ ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದರು.

‘ಬೆಳಗಾವಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಆನ್‌ಲೈನ್ ಮೂಲಕ ಯಾವ ಕೆಲಸಕ್ಕೆ ಅರ್ಜಿ ಸಲ್ಲಿಸಿದರೂ ತಾಂತ್ರಿಕ ಕಾರಣ ಹೇಳಿ ವಿಳಂಬ ಮಾಡಲಾಗುತ್ತಿದೆ. ಏಜೆಂಟರ ಮೂಲಕ ಸಂಪರ್ಕಿಸಿದರೆ ಒಂದೇ ದಿನದಲ್ಲಿ ಕೆಲಸ ಆಗುತ್ತದೆ. ನಾನೇ ಲಂಚ ಕೊಟ್ಟಿದ್ದೇನೆ’ ಎಂದು ನಿವೇಶನ ಮಾರಾಟದ ನೋಂದಣಿಗಾಗಿ ಉಪನೋಂದಣಾಧಿಕಾರಿ ಕಚೇರಿಗೆ ಬಂದಿದ್ದ ವ್ಯಕ್ತಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಹೊಸ ವ್ಯವಸ್ಥೆ ಜನಸ್ನೇಹಿ: ಕೃಷ್ಣ ಬೈರೇಗೌಡ

ಒಂದನೇ ಪುಟದಿಂದ..

‘ಕಾವೇರಿ– 2’ನಲ್ಲಿನ ಗೊಂದಲಗಳ ಕುರಿತು ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಎಲ್ಲ ನೋಂದಣಿ ಕಚೇರಿಗಳಲ್ಲಿ ಈ ತಂತ್ರಾಂಶವನ್ನು ಪೂರ್ಣ ಸ್ವರೂಪದಲ್ಲಿ ಅಳವಡಿಸಿ ಇನ್ನೂ ತಿಂಗಳು ತುಂಬಿಲ್ಲ. ಯಾವುದೇ ತಂತ್ರಾಂಶವನ್ನು ಅಳವಡಿಸಿದಾಗ ಅದು ಹೊಂದಾಣಿಕೆಯಾಗಲು, ನಾವು ಆ ವ್ಯವಸ್ಥೆಗೆ ಹೊಂದಿಕೊಳ್ಳಲು ಸ್ವಲ್ಪ ಸಮಯಬೇಕು. ಕನಿಷ್ಠ ಆರು ತಿಂಗಳಾದರೂ ಅಗತ್ಯ. ಸಮಸ್ಯೆಗಳು ಕಾಣಿಸಿಕೊಂಡ ತಕ್ಷಣ ಅದಕ್ಕೆ ಪರಿಹಾರ ಕಂಡುಕೊಳ್ಳಲು ಎಲ್ಲ ಅಗತ್ಯ ಕ್ರಮಗಳನ್ನು ಇಲಾಖೆ ತೆಗೆದುಕೊಂಡಿದೆ’ ಎಂದರು.

‘ಜಾಗ ಖರೀದಿಸುವವರ ಮತ್ತು ಮಾರಾಟ ಮಾಡುವವರ ಹಿತರಕ್ಷಣೆ, ಜೊತೆಗೆ ಉಪ ನೋಂದಣಿ ಕಚೇರಿಗಳಲ್ಲಿ ನಡೆಯುತ್ತಿರುವ ವಂಚನೆ, ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳಿ ತಡೆ ಈ ತಂತ್ರಾಂಶದಿಂದ ಸಾಧ್ಯವಾಗಲಿದೆ. ನೋಂದಣಿ ಪೂರ್ವ, ನೋಂದಣಿ ಮತ್ತು ನೋಂದಣಿ ನಂತರ ಈ ಮೂರೂ ಹಂತಗಳಲ್ಲಿ ನೋಂದಣಿ ಪ್ರಕ್ರಿಯೆ ನಡೆಯುತ್ತದೆ. ಸೂಕ್ತ ದಾಖಲೆಗಳನ್ನು ನಾಗರಿಕರೇ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಿದ ನಂತರ ಉಪ ನೋಂದಣಾಧಿಕಾರಿಗಳು ಪರಿಶೀಲಿಸುತ್ತಾರೆ. ಬಳಿಕ ನಿಗದಿತ ಶುಲ್ಕ ಪಾವತಿಸಲು ತಿಳಿಸಲಾಗುತ್ತದೆ. ಶುಲ್ಕ ಪಾವತಿಸಿದ ಬೆನ್ನಲ್ಲೆ, ನಾಗರಿಕರೇ ನೋಂದಣಿಗೆ ಸಮಯ ನಿಗದಿಪಡಿಸಿಕೊಳ್ಳಬಹುದು. ಎಲ್ಲ ಹಂತಗಳಲ್ಲಿ ಮೊಬೈಲ್‌ಗೆ ಸಂದೇಶ ರವಾನೆಯಾಗುತ್ತದೆ. ಉಪ ನೋಂದಣಾಧಿಕಾರಿಗಳು ನೆಪ ಹೇಳಿಕೊಂಡು ಪ್ರಕ್ರಿಯೆ ವಿಳಂಬ ಮಾಡುವ ಅಥವಾ ತಿರಸ್ಕರಿಸುವ ಪ್ರಮೇಯವೇ ಇಲ್ಲ’ ಎಂದೂ ವಿವರಿಸಿದರು.

‘ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಸರ್ವರ್ ಡೌನ್ ಎನ್ನುವ ವಿಷಯ ಇನ್ನು ಮುಂದಿರಲ್ಲ. ಇಡೀ ರಾಜ್ಯಕ್ಕೆ ಒಂದೇ ಸರ್ವರ್. ನೆಟ್‌ವರ್ಕ್ ಸಿಗುತ್ತಿಲ್ಲ ಎನ್ನುವ ಆರೋಪಕ್ಕೂ ಅವಕಾಶವಿಲ್ಲ. ಯಾಕೆಂದರೆ, ಕೇಬಲ್ ಮೂಲಕ ಅಂತರ್ಜಾಲ ಸಂಪರ್ಕ ಕಲ್ಪಿಸಲಾಗಿದೆ. ಅಪರೂಪದ ಸಂದರ್ಭಗಳಲ್ಲಿ ಕೇಬಲ್ ತುಂಡಾದರೆ ಇಂಟರ್‌ನೆಟ್ ಕಡಿತಗೊಳ್ಳಬಹುದಷ್ಟೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಮಸ್ಯೆಗಳಿದ್ದರೆ ಶುಲ್ಕ ಪಾವತಿಗೆ ಸಮಸ್ಯೆಯಾಗಬಹುದು. ಕೃಷಿ ಜಮೀನುಗಳ ವಿವರ ಪಡೆಯಲು ‘ಭೂಮಿ’, ಗ್ರಾಮೀಣ ಮತ್ತು ನಗರ ಪ್ರದೇಶದ ಕೃಷಿಯೇತರ ಸ್ವತ್ತುಗಳಿಗೆ ‘ಇ– ಸ್ವತ್ತು’, ‘ಇ– ಆಸ್ತಿ’, ಶುಲ್ಕಗಳ ಪಾವತಿಗೆ ‘ಖಜಾನೆ–2’, ಕೃಷಿ ಸಾಲ ಪರಿಶೀಲನೆಗೆ ‘ಫ್ರೂಟ್ಸ್’, ನಿಗದಿತ ಸಮಯದಲ್ಲಿ ಸೇವೆ ನೀಡಲು ‘ಸಕಾಲ’ ಜೊತೆ ಈ ತಂತ್ರಾಂಶ ಸಂಯೋಜಿತವಾಗಿದೆ. ದಾಖಲೆಗಳ ನೈಜತೆ ಪರಿಶೀಲಿಸುವ ಈ ವ್ಯವಸ್ಥೆಯಿಂದ ಮೋಸದ ನೋಂದಣಿಗೆ ಬ್ರೇಕ್ ಬೀಳಲಿದೆ. ಹಾಗೆಂದು, ಎಲ್ಲಾ ಗೊಂದಲಗಳು ಪರಿಹಾರವಾಗಿದೆ ಎಂದಲ್ಲ. ಸಣ್ಣಪುಟ್ಟ ಗೊಂದಲಗಳು, ಸಮಸ್ಯೆಗಳು ಕಾಣಿಸಿಕೊಂಡ ತಕ್ಷಣ ಪರಿಹಾರ ಕಂಡುಕೊಳ್ಳಲು ರಾಜ್ಯ, ಪ್ರಾದೇಶಿಕ ಮತ್ತು ಜಿಲ್ಲಾಮಟ್ಟದಲ್ಲಿ ತಾಂತ್ರಿಕ ಪರಿಣತರ ನೆರವು ಪಡೆಯಲಾಗಿದೆ. ನಾಗರಿಕರ ನೆರವಿಗೆ ಸಹಾಯವಾಣಿಯಿದೆ. ಇಲಾಖೆಯ ಯುಟ್ಯೂಬ್ ಚಾನೆಲ್, ಫೇಸ್‌ಬುಕ್, ಟ್ವಿಟರ್‌ನಲ್ಲಿ ಮಾಹಿತಿಗಳಿವೆ. ಕಚೇರಿ ಸಿಬ್ಬಂದಿ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಆಂತರಿಕ ವ್ಯವಸ್ಥೆಯಡಿ ಸರ್ವೀಸ್ ಡೆಸ್ಕ್ ಇದೆ’ ಎಂದೂ ತಿಳಿಸಿದರು.

‘ಎಲ್ಲ ನೋಂದಣಿ ಕಚೇರಿಗಳಲ್ಲಿ ನೋಂದಣಿಗೆ ಸಲ್ಲಿಕೆಯಾದ ದಾಖಲೆಗಳ ಪರಿಶೀಲನೆ ಬೆಳಿಗ್ಗೆ 10ರಿಂದ 11ರವರೆಗೆ, ಸಂಜೆ 4.30ರಿಂದ 5.30ವರೆಗೆ ನಡೆಯುತ್ತದೆ. ಎಲ್ಲ ದಾಖಲೆಗಳು ಸಿದ್ಧಪಡಿಸಿಟ್ಟುಕೊಂಡರೆ 15 ನಿಮಿಷಗಳಲ್ಲಿ ಅಪ್‌ಲೋಡ್ ಸಾಧ್ಯವಿದೆ. 24 ಗಂಟೆಯ ಒಳಗೆ ನೋಂದಣಿ ಪ್ರಕ್ರಿಯೆ ಪೂರ್ಣಗೊಳ್ಳಲೇಬೇಕು. ಈ ಬಗ್ಗೆ ಸುತ್ತೋಲೆ ಹೊರಡಿಸಲಾಗಿದೆ. ಕಚೇರಿ ಸಿಬ್ಬಂದಿ ನೆಪ ಹೇಳಿ ಜಾರಿಕೊಳ್ಳುವಂತೆಯೂ ಇಲ್ಲ. ದಿನಕ್ಕೆ 40 ದಾಖಲೆಗಳು ನೋಂದಣಿ ಆಗುತ್ತಿದ್ದ ಉಪ ನೋಂದಣಿ ಕಚೇರಿಯಲ್ಲಿ ಈ ತಂತ್ರಾಂಶ ಅಳವಡಿಸಿದ ಬಳಿಕ 190 ದಾಖಲೆಗಳು ನೋಂದಣಿಯಾದ ನಿದರ್ಶನವಿದೆ. ನೋಂದಣಿ ವಿಳಂಬವಾಗುತ್ತಿದೆ. ಕಚೇರಿಯಲ್ಲಿ ಗಂಟೆಗಟ್ಟಲೆ ಕಾಯಬೇಕಾಗುತ್ತಿದೆ ಎನ್ನುವ ಪ್ರಮೇಯವೇ ಈಗ ಇಲ್ಲ’. ‘ಕಾವೇರಿ– 1ನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದೇವೆ. ಹೀಗಾಗಿ, ಸಾಂಪ್ರದಾಯಿಕ ನೋಂದಣಿಗೆ ಇನ್ನು ಅವಕಾಶವೇ ಇಲ್ಲ. ಉತ್ತಮ ಆಡಳಿತದ ಕಡೆಗಿನ ಸರ್ಕಾರದ ನಡೆಯಿದು. ಈ ಹೊಸ ವ್ಯವಸ್ಥೆಗೆ ಶೇ 98ರಷ್ಟು ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಸರಳೀಕೃತ ವ್ಯವಸ್ಥೆಗೆ ಜನರು ಒಮ್ಮೆ ಹೊಂದಿಕೊಂಡರೆ ಮುಂದೆ ಕಷ್ಟವೇನೂ ಅಲ್ಲ’ ಎಂದು ಹೇಳಿದರು.

ಮನೆ ಬಾಗಿಲಿಗೆ ಮಾಸಾಶನ: ಗಡಿಯಲ್ಲಿ ಕಾಣದ ಯಶಸ್ಸು

ಈ ಯೋಜನೆಯು ಗಡಿಭಾಗದ ಹಳ್ಳಿಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸು ಕಂಡಿಲ್ಲ. ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ವಡಗಾಂವ್ (ಡಿ)ನಲ್ಲಿ ಕಳೆದ ವರ್ಷ ಕಂದಾಯ ಸಚಿವರು ಗ್ರಾಮ ವಾಸ್ತವ್ಯ ಮಾಡಿ ಯೋಜನೆ ಘೋಷಿಸಿದ್ದರು. ಜಾಗೃತಿ ಮೂಡಿಸದೇ ಇರುವುದರಿಂದ ಗಡಿ ಭಾಗದಲ್ಲಿ ಇದು ಹೇಳಿಕೊಳ್ಳುವಷ್ಟು ಯಶಸ್ವಿಯಾಗಿಲ್ಲ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ನೌಕರರೊಬ್ಬರು ಬೇಸರ ವ್ಯಕ್ತಪಡಿಸುತ್ತಾರೆ.

ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಸಹಾಯವಾಣಿ ಮೂಲಕ 1,700ಕ್ಕೂ ಅಧಿಕ ಜನರಿಗೆ ಪಿಂಚಣಿ ಮಂಜೂರು ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯ ಹೊಸನಗರ, ಸಾಗರ, ತೀರ್ಥಹಳ್ಳಿ ತಾಲ್ಲೂಕಿನ ಗುಡ್ಡಗಾಡು ಪ್ರದೇಶಗಳಲ್ಲಿ ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಇರುವುದರಿಂದ ಆ ಭಾಗದ ಜನ ಸಾಂಪ್ರದಾಯಿಕ ವಿಧಾನವನ್ನೇ ಅವಲಂಬಿಸುವಂತಾಗಿದೆ. ಸ್ಥಳ ಪರಿಶೀಲನೆಗೆ ಬರುವ ಗ್ರಾಮ ಲೆಕ್ಕಾಧಿಕಾರಿಗಳ ‘ಕೈಬಿಸಿ’ ಮಾಡಿದರೆ ಮಾತ್ರ ಕೆಲಸ ಸುಮಗವಾಗಿ ಆಗುತ್ತದೆ ಎಂಬ ದೂರುಗಳೂ ಇವೆ. ನೂತನ ವ್ಯವಸ್ಥೆ ಆರಂಭಿಸಿದ ಬಳಿಕ ಕೋಲಾರ ಜಿಲ್ಲೆಯಲ್ಲಿ ನಾಡಕಚೇರಿಗೆ ಬಂದು ಪಿಂಚಣಿಗಾಗಿ ಅರ್ಜಿ ಕೊಡುವ ಸಂಖ್ಯೆ ಕಡಿಮೆಯಾಗಿದೆ. ಜಿಲ್ಲೆಯಲ್ಲಿ ನಿತ್ಯ 25 ಜನರಿಗೆ ಮನೆ ಬಾಗಿಲಿಗೆ ಮಾಸಾಶನ ಆದೇಶ ತಲುಪಿಸಲಾಗುತ್ತಿದೆ. ಸರ್ವರ್ ಸಮಸ್ಯೆ, ಸಿಬ್ಬಂದಿ ಕೊರತೆಯಿಂದಾಗಿ ಈ ಯೋಜನೆ ಅನುಷ್ಠಾನ ವಿಳಂಬವಾಗುತ್ತಿದೆ ಎಂದು ಅಧಿಕಾರಿಗಳೇ ಹೇಳುತ್ತಾರೆ. ‘ಗ್ರಾಮ ಲೆಕ್ಕಾಧಿಕಾರಿ ಮನೆಗೆ ಬಂದಾಗ ಅರ್ಜಿ ಸಲ್ಲಿಸಿರುವ ವ್ಯಕ್ತಿ ಇರುವುದೇ ಇಲ್ಲ. ಇದರಿಂದಾಗಿ ಅರ್ಜಿಗಳು ತಿರಸ್ಕೃತಗೊಳ್ಳುತ್ತಿವೆ. ಈ ಯೋಜನೆಯಡಿ ಒಮ್ಮೆ ಅರ್ಜಿ ತಿರಸ್ಕರಿಸಿದರೆ, ಬಳಿಕ ನಾಡಕಚೇರಿಗೇ ಹೋಗಿ ಅರ್ಜಿ ಸಲ್ಲಿಸಬೇಕು. ಸಾಂಪ್ರದಾಯಿಕ ವ್ಯವಸ್ಥೆಯಡಿ ಪರಿಶೀಲಿಸಿ ಪಿಂಚಣಿ ಮಂಜೂರು ಮಾಡಲು ಕನಿಷ್ಠ 45 ದಿನಗಳು ಬೇಕಾಗುತ್ತವೆ’ ಎನ್ನುತ್ತಾರೆ ದಾವಣಗೆರೆ ಜಿಲ್ಲೆಯ ಸಾಮಾಜಿಕ ಭದ್ರತಾ ಶಾಖೆಯ ಸಹಾಯಕ ನಿರ್ದೇಶಕಿ ಪುಷ್ಪಾ.

ದಕ್ಷಿಣ ಕನ್ನಡಕ್ಕೆ ವರವಾದ ‘ವಿಳಂಬ’

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊನೆಯದಾಗಿ ಕಾವೇರಿ 2.0 ಅಳವಡಿಸಿರುವುದು ಇಲ್ಲಿನ ಸಿಬ್ಬಂದಿಗೆ ಅನುಕೂಲ ಆಗಿದೆ. ಅಡೆತಡೆಗಳಿಗೆ ಪರಿಹಾರ ಕಂಡುಕೊಂಡ ನಂತರ ಪರಿಪೂರ್ಣ ಉತ್ಪನ್ನ ಸಿಕ್ಕಿದಂತಾಗಿದೆ ಎಂದು ಜಿಲ್ಲಾ ನೋಂದಣಾಧಿಕಾರಿ ನೂರ್ ಪಾಷಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮನೆಯಲ್ಲೇ ಕುಳಿತು ದಾಖಲೆಗಳನ್ನು ಅಪ್‌ಲೋಡ್ ಮಾಡಲು ಸಾಧ್ಯವಿರುವುದರಿಂದ ಕಚೇರಿಗಳಲ್ಲಿ ದಟ್ಟಣೆ ಕಡಿಮೆಯಾಗುತ್ತದೆ. ವೈಯಕ್ತಿಕ ಆಸ್ತಿಯ ಮಾಹಿತಿಯನ್ನು ಯಾರೂ ತಪ್ಪಾಗಿ ನಮೂದಿಸಲು ಸಾಧ್ಯವಿಲ್ಲದ ಕಾರಣ ಸರ್ಕಾರಕ್ಕೆ ಉತ್ತಮ ಪ್ರಮಾಣದ ರಾಜಸ್ವ ಬರಲಿದೆ’ ಎಂದು ನೂರ್ ಪಾಷಾ ಹೇಳಿದರು. ‘ಇದು ಜನಸ್ನೇಹಿ ತಂತ್ರಾಂಶ ಎಂದು ಕೆಲವೇ ದಿನಗಳಲ್ಲಿ ಸಾಬೀತಾಗಿದೆ. ಗೊಂದಲವಿಲ್ಲದೆ, ಗಡಿಬಿಡಿ ಮಾಡಿಕೊಳ್ಳದೆ ಜನರು ನೋಂದಣಿ ಮಾಡಿಕೊಳ್ಳಬಹುದು. ದಾಖಲೆಗಳನ್ನು ಪರಿಶೀಲಿಸಿ ಅಂತಿಮ ಮುದ್ರೆಯೊತ್ತುವುದೊಂದೇ ನಮ್ಮ ಕೆಲಸ’ ಎಂದು ಮಂಗಳೂರು ನಗರ ವಿಭಾಗದ ಹಿರಿಯ ಉಪನೋಂದಣಾಧಿಕಾರಿ ಕವಿತಾ ಪಿ.ಬಿ ಹೇಳಿದರು.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 9-7-1998

• ಸಚಿವ ಸಂಪುಟ ಪುನರ್‌ರಚನೆ ಅನಿರ್ದಿಷ್ಟಾವಧಿ ಮುಂದಕ್ಕೆ

ನವದೆಹಲಿ, ಜುಲೈ 8– ಕಳೆದ ಕೆಲವು ದಿನಗಳಿಂದ ತೀವ್ರ ರಾಜಕೀಯ ಗೊಂದಲ ಉಂಟು ಮಾಡಿದ್ದ ಸಂಪುಟ ಪುನರ್‌ರಚನೆಯು ಪುನಃ ಅನಿರ್ದಿಷ್ಟ ಕಾಲಕ್ಕೆ ಮುಂದಕ್ಕೆ ಹೋಯಿತು.

ರಾಜ್ಯದಲ್ಲಿ ಮೊದಲು ಜನತಾದಳದ ಪುನರ್‌ರಚನೆ, ನಂತರ ನಿಗಮ ಮಂಡಲಿಗಳ ನೇಮಕ ಮತ್ತು ಆಮೇಲೆ ಸಚಿವ ಸಂಪುಟ ಪುನರ್‌ರಚನೆ ಈ ಕ್ರಮದಲ್ಲಿ ನಡೆಯಬೇಕು ಎಂದು ದಳದ ಐವರು ಪ್ರಮುಖ ನಾಯಕರ ಸಭೆಯು ತೀರ್ಮಾನಿಸಿತು.

50 ವರ್ಷಗಳ ಹಿಂದೆ — ಸೋಮವಾರ, 9-7-1973

• ಡಿ.ಆರ್. ಚವಾಣ್ ನಿಧನ

ನವದೆಹಲಿ, ಜುಲೈ 8– ಕೇಂದ್ರ ಕಾನೂನು ಮತ್ತು ಕಂಪನಿ ವ್ಯವಹಾರಗಳ ಖಾತೆ ಸ್ಟೇಟ್ ಸಚಿವ ಶ್ರೀ ದಾಜ್ಜಿ ಸಾಹೆಬ್ ರಾಮರಾವ್ ಚವಾಣ್ (57) ಅವರು ಇಂದು ಬೆಳಿಗ್ಗೆ ಇಲ್ಲಿ ಹೃದಯಾಘಾತದಿಂದ ನಿಧನರಾದರು.

ಮಹಾರಾಷ್ಟ್ರದಲ್ಲಿಯ ತಮ್ಮ ಕ್ಷೇತ್ರವಾದ ಕರಡ್‌ಗೆ ಒಂದು ವಾರ ಭೇಟಿಕೊಟ್ಟ ಬಳಿಕ ಅವರು ನಿನ್ನೆ ರಾತ್ರಿ ಇಲ್ಲಿಗೆ ಹಿಂತಿರುಗಿದ್ದರು.

ಬೆಳಿಗ್ಗೆ 10 ಗಂಟೆ ವೇಳೆಯಲ್ಲಿ ಅವರು ಎದೆನೋವು ಎಂದು ಹೇಳಿದರು. ಆದರೆ, ಅನಂತರ ಸ್ವಲ್ಪ ಹೊತ್ತಿನಲ್ಲೇ ನಿಧನರಾದರು.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಜುಲೈ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಸಪ್ತಮಿ ಗಂ.20-00 ನಕ್ಷತ್ರ: ಉತ್ತರಾಭಾದ್ರ ಗಂ. 19-30 ಯೋಗ: ಶೋಭನಾ ಗಂ. 14-43 ಕರಣ: ವಿಷ್ಟಿ ಗಂ. 08-52, ಮಿಥುನ ಮಾಸದ 24 ನೇ ದಿನ, ಮಳೆನಕ್ಷತ್ರ: ಪುನರ್ವಸು 1.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-13 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 20 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 9, 1

ಮೇಷ: ಉತ್ತಮ ಕಾರ್ಯ ಮಾಡಿದವರನ್ನು ಮುಕ್ತವಾಗಿ ಶ್ಲಾಘಿಸುವ ಮನಸ್ಥಿತಿ ವೃದ್ಧಿಸಿಕೊಳ್ಳಿ. ಜವಾಬ್ದಾರಿಯನ್ನು ಕಳೆದುಕೊಳ್ಳುವ ನಿಟ್ಟಿನಲ್ಲಿ ನೀವು ತೆಗೆದುಕೊಂಡ ನಿರ್ಧಾರಗಳು ನಿಮ್ಮ ಗೌರವ ಕಡಿಮೆಗೊಳಿಸಬಹುದು.

ವೃಷಭ: ಮನೆ ಅಥವಾ ಕಟ್ಟಡ ನಿರ್ಮಾಣ ಕಾರ್ಯವನ್ನು ಅನಿವಾರ್ಯ ಪರಿಸ್ಥಿತಿಯಿಂದ ನಿಲ್ಲಿಸಬೇಕಾಗುತ್ತದೆ. ಸ್ವಲ್ಪ ಎಚ್ಚರ ತಪ್ಪಿದಲ್ಲಿ ಶತ್ರುಗಳಿಂದ ತುಂಬಾ ಸುಲಭವಾಗಿ ಮೋಸ ಹೋಗುವಂತಹ ಎಲ್ಲಾ ಸಾಧ್ಯತೆಗಳೂ ಇವೆ.

ಮಿಥುನ: ಹಿರಿಯರಿಂದ ಅಪೂರ್ಣವಾದಂತಹ ಕೆಲಸವನ್ನು ಪೂರ್ಣಗೊಳಿಸುವಂತಹ ಅಪೂರ್ವವಾದ ಅವಕಾಶ ನಿಮಗೆ ಒದಗಿಬರಲಿದೆ. ವಿದ್ಯುತ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರು ಹೆಚ್ಚಿನ ಜಾಗುರೂಕತೆ ವಹಿಸಬೇಕು.

ಕರ್ಕಾಟಕ: ಅತ್ಯಂತ ಕಠಿಣ ಪರಿಸ್ಥಿತಿಯನ್ನು ಅನುಭವಿಸಿದ ನಿಮಗೆ ಈ ದಿನವು ಆಶಾದಾಯಕ ಹಾಗೂ ಆರಾಮದಾಯಕ ದಿನವಾಗಿರುತ್ತದೆ. ಕೆಲವರ ಮಾತುಗಳು ಕಿವಿಯ ಮೇಲೆ ಬಿದ್ದರೂ ನಿರ್ಲಕ್ಷಿಸುವುದು ಉತ್ತಮ.

ಸಿಂಹ: ನೀವು ಕುಟುಂಬ ಸದಸ್ಯರ ಮುಂದೆ ಬಾಯಿ ತಪ್ಪಿ ಹೇಳಿದ ಸತ್ಯದಿಂದಾಗಿ ಸಂಘರ್ಷದ ಪರಿಸ್ಥಿತಿ ಎದುರಾಗಬಹುದು. ತಾಳ್ಮೆಯ ಪರೀಕ್ಷೆ ಆಗಬಹುದು. ಲಕ್ಷ್ಮೀ ಸಹಿತ ನಾರಾಯಣನನ್ನು ಆರಾಧಿಸುವುದು ಶುಭ ತರುತ್ತದೆ.

ಕನ್ಯಾ: ಮಕ್ಕಳು ನಿಮ್ಮನ್ನು ಕುರಿತು ಕೇಳುವಂತಹ ಪ್ರಶ್ನೆಗಳಿಗೆ ನಿರುತ್ತರರಾಗುತ್ತೀರಿ. ಅತ್ಯಂತ ಮುಖ್ಯ ವ್ಯಕ್ತಿ ನೀಡಿದ ಉಡುಗೊರೆಯೊಂದನ್ನು ಕಳೆದುಕೊಂಡು ನೊಂದುಕೊಳ್ಳುವ ಸಾಧ್ಯತೆ ಇದೆ. ದೇಹಾರೋಗ್ಯ ಸುಧಾರಣೆಯಾಗುವುದು.

ತುಲಾ: ಸಮಯದ ಅಭಾವದಿಂದಾಗಿ ಕೆಲವು ವಿಷಯಗಳು ನಿಮಗೆ ಮುಖ್ಯವೆಂದು ತೋರುತ್ತಿದ್ದರೂ ಸಹ ಅದನ್ನು ಇಂದಿನ ವೇಳಾಪಟ್ಟಿಯಿಂದ ತೆಗೆದು ಹಾಕುವಿರಿ. ವ್ಯಾಪಾರದಲ್ಲಿ ಅನಿರೀಕ್ಷಿತ ಲಾಭ ಉಂಟಾಗಬಹುದು.

ವೃಶ್ಚಿಕ: ಬಿಡುವು ಸಿಕ್ಕ ವೇಳೆಯಲ್ಲಿ ಮಾಡಬೇಕಾದ ಕೆಲಸಗಳಿದ್ದರೂ ಅವುಗಳನ್ನು ಪೂರ್ಣಗೊಳಿಸದೇ ವ್ಯರ್ಥ ಕಾಲಹರಣ ಮಾಡುವ ಸಾಧ್ಯತೆ ಇದೆ. ಬಟ್ಟೆ ವ್ಯಾಪಾರ ಉತ್ತಮವಾಗಿರುತ್ತದೆ.

ಧನು: ಮನೆಯಲ್ಲಿ ಸಹೋದರರಿದ್ದರೂ ನೀವೇ ಕೆಲಸವನ್ನು ಮಾಡಬೇಕಾದ ಪರಿಸ್ಥಿತಿಯಿಂದಾಗಿ ಕುಪಿತರಾಗುವಿರಿ. ವ್ಯವಸಾಯಕ್ಕೆ ಸಂಬಂಧಿಸಿದ ಕೆಲಸವನ್ನು ಅತ್ಯಂತ ಸಂತೋಷದಿಂದ ಹಾಗೂ ಶ್ರದ್ಧೆಯಿಂದ ಮಾಡುವಿರಿ.

ಮಕರ: ನಿದ್ದೆಯ ಅಭಾವದಿಂದಾಗಿ ಸಂಭವಿಸುತ್ತಿರುವ ಅನಾರೋಗ್ಯಗಳಿಗೆ ತುತ್ತಾಗುವಂತಹ ಸಾಧ್ಯತೆ ಇದೆ. ಶಕ್ತಿಯಿಂದ ಗೆಲ್ಲಲಾಗದ ಕೆಲವು ಸವಾಲುಗಳನ್ನು ಯುಕ್ತಿಯಿಂದ ಬಹು ಸರಳವಾಗಿ ಗೆದ್ದು ಬೀಗುವಿರಿ.

ಕುಂಭ: ಜೀವನದಲ್ಲಿ ನಡೆದ ಕೆಲವು ಘಟನೆಗಳು ಪ್ರಮುಖ ಘಟ್ಟಗಳಂತಾಗಿ ನಿಮ್ಮ ಜೀವನ ಶೈಲಿಯೇ ಬದಲಾಗುತ್ತದೆ. ವಿದೇಶದಲ್ಲಿ ಇರುವವರು ಸ್ವದೇಶದ ಬಂಧುಗಳನ್ನು ಭೇಟಿಯಾಗಲು ಬರುವ ಸಾಧ್ಯತೆ.

ಮೀನ: ವಿದ್ಯಾರ್ಜನೆಗೆಂದು ಪರವೂರಿಗೆ ಹೋದ ನೀವು ಹಾದಿ ತಪ್ಪಿದ್ದು ನಿಮ್ಮ ಹೆತ್ತವರಿಗೆ ಸಂಕಟವನ್ನು ಉಂಟು ಮಾಡುವುದು. ಚರ್ಮದ ಅಲರ್ಜಿ ನಿಮ್ಮನ್ನು ಬಾಧಿಸಬಹುದು. ದೇವಾಲಯಕ್ಕೆ ಭೇಟಿ ನೀಡುವಿರಿ.

ಪದಬಂಧ 5374 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಿರಸವಲ್ಲ ಪ್ರೀತಿಯ ಮಾತು! (3)
3.ಸಸ್ಯಗಳಿಂದ ಸಿದ್ಧಪಡಿಸಿದ ಎಣ್ಣೆ (4)
5.ವಿನಯ ತೋರಿದವನ ಕಣ್ಣು (3)
7.ನಡುವೆ ಮಸ್ಕಾ ಹೊಡೆದು ಸಲ್ಲಿಸಿದ ವಂದನೆ (4)
9.ವಿರಾಗಿ ಹಿಡಿದಿರುವ ಧಾನ್ಯ ತಿರುವುಮುರುವಾಗಿದೆ (2)
10.ಬುದ್ಧಿವಂತನೇಕೋ ತಿರುಗಿದ್ದಾನಲ್ಲಾ? (2)
11.ಗೆಲುವನ್ನು ಪಡೆದವನು(4)
14.ಮೊದಲು ಹರಿ ಇದ್ದರೇ ಇದು ತೀಕ್ಷ್ಣ (3)
16.ನೇಗಿಲನ್ನು ಕೈಯಲ್ಲಿ ಹಿಡಿದಿರುವವನು (4)
17.ಈತ ಬಲು ನೀಚ! (3)

ಮೇಲಿಂದ ಕೆಳಕ್ಕೆ
1.ಮಾನವಂತನಿಗೇ ಈ ಆದರ ಮನ್ನಣೆ ಎಲ್ಲವೂ! (3)
2.ದನ ನುಗ್ಗಿರುವ ಮನೆಯಿದು (3)
3.ಮನಸು ಸೆಳೆಯುತ್ತಿರುವ ಕಾಡು ಹೂವು (4)
4.ಅಮೂಲ್ಯ ವಸ್ತುಗಳನ್ನಿಡುವ ಕಬ್ಬಿಣದ ಪೆಟ್ಟಿಗೆ (3)
6.ಈತ ನರಕದ ಅರಸ (4)
7.ಇದು ಖಂಡಿತಾ ಅಸಲಿಯಲ್ಲ ಬಿಡಿ! (3)
8.ಈ ಸೋಂಭೇರಿಗೆ ಕೇಳಿಸಿದ್ದು ಯುದ್ಧದ ನಗಾರಿ (4)
12.ಶಾಕ್ ಆಯಿತೇ? ಇದು ಪಕ್ಕಾ ಸಸ್ಯಾಹಾರ! (4)
13.ಪ್ರೇಮಿಗಳ ಅಗಲಿಕೆಯ ನೋವು (3)
14.ವನದ ಬಳಿ ಮಾಡಿದ ಹೋಮ (3)
15.ತಣಿಯಲೆಂದು ನೀರು ನೀಡಿದ ಯುವತಿ (3)



5373ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅರ್ಧಾಂಗಿ 3.ಮದನಿಕೆ
5.ಲೀಲಾಜಾಲ 6.ವಟು
7.ಗಗನ 9.ನವೀನ
12.ಜಯ 13.ಮನೋಬಲ
15.ಸೆರೆಮನೆ 16.ಜಠರ

ಮೇಲಿಂದ ಕೆಳಕ್ಕೆ:
1.ಅತ್ತೆ 2.ಗಿಲೀಟು
3.ಮಲರೋಗ 4.ಕೆರಸಿ
6.ವರ್ತಮಾನ
8.ನವೋದಯ 10.ನಡುಮನೆ
11.ಹಾವಸೆ 12.ಜಲಜ
14.ಸರ

ಸುಡೊಕು 5760

	7			3		1		6
4		9						
	1		7	6	2		5	4
		3	5		6	4		
	4			2			6	7
		5	1		7	3		
	8		6			2		3
2		6			3			
	3	4		7		6		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5759 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂಕ್ಷಿಪ್ತ ಸುದ್ದಿ

ಎಂಜಿನಿಯರ್ ಮನೆಯಲ್ಲಿ ಮತಯಂತ್ರ ಪತ್ತೆ!

ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಶನಿವಾರ ಕಟ್ಟಡಗಳನ್ನು ನೆಲಸಮ ಮಾಡುವಾಗ ತಾಲ್ಲೂಕಿನ ಮೋಪರಹಳ್ಳಿ ಗ್ರಾಮದ ಮನೆಯೊಂದರಲ್ಲಿ ಎಲೆಕ್ಟ್ರಾನಿಕ್ ಮತಯಂತ್ರದ (ಇವಿಎಂ) ಕಂಟ್ರೋಲ್ ಯೂನಿಟ್‌ಗಳು ಪತ್ತೆ ಆಗಿವೆ.

'ದೊಡ್ಡಬಳ್ಳಾಪುರ ನಿರ್ಮಿತಿ ಕೇಂದ್ರದ ಎಂಜಿನಿಯರ್ ಶಿವಕುಮಾರ್ ಎಂಬವರ ಮನೆಯಲ್ಲಿ ಎಲೆಕ್ಟ್ರಾನಿಕ್ ಮತಯಂತ್ರದ ಏಳು ಕಂಟ್ರೋಲ್ ಯೂನಿಟ್‌ಗಳು ಸಿಕ್ಕಿವೆ. ಎಲ್ಲ ಯೂನಿಟ್‌ಗಳನ್ನು ವಶಕ್ಕೆ ಪಡೆಯಲಾಗಿದೆ. 2018ರಲ್ಲಿ ನಡೆದ ವಿಧಾನಸಭಾ ಚುನಾವಣೆ ವೇಳೆ ತಾಂತ್ರಿಕದೋಷದ ಕಾರಣ ಬಳಕೆಯಾಗದ ಇವಿಎಂ ಕಂಟ್ರೋಲ್ ಯೂನಿಟ್‌ಗಳು ಎಂಬ ಮಾಹಿತಿ ಇದೆ' ಎಂದು ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಮೋಹನಕುಮಾರಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಕಂಟ್ರೋಲ್ ಯೂನಿಟ್‌ಗಳನ್ನು ಮರಳಿಸದೆ ಮನೆಯಲ್ಲಿಯೇ ಏಕೆ ಇಟ್ಟು-ಕೊಂಡಿದ್ದರು ಎಂಬುವುದು ಇನ್ನೂ ಗೊತ್ತಾಗಿಲ್ಲ. ಈ ಬಗ್ಗೆ ವಿವರಣೆ ಕೋರಿ ಎಂಜಿನಿಯರ್ ಶಿವಕುಮಾರ್ ಅವರಿಗೆ ನೋಟಿಸ್ ನೀಡಲಾಗಿದೆ' ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

ಹಾಲು ಖರೀದಿ ದರ ಹೆಚ್ಚಳ: 11ರಂದು ಸಭೆ

ಮೈಸೂರು: 'ರೈತರಿಂದ ಹಾಲು ಖರೀದಿ ದರವನ್ನು ಪ್ರತಿ ಲೀಟರ್‌ಗೆ ₹5 ಹೆಚ್ಚಿಸುವುದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಇದೇ 11ರಂದು ಚರ್ಚಿಸಲಾಗು-ವುದು. ಅಧಿಕಾರಿಗಳು ಸಮಗ್ರ ಮಾಹಿತಿಯೊಂದಿಗೆ ಬಂದು ಮನವರಿಕೆ ಮಾಡಿಕೊಡಬೇಕು' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೂಚಿಸಿದರು.

ಮೈಸೂರು ವಿಭಾಗದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, 'ಹಾಲು ಖರೀದಿ ದರ ಹಾಗೂ ಮಾರಾಟದ ದರದಲ್ಲಿ ಯಾವುದನ್ನು ಹೆಚ್ಚಿಸಬೇಕೆಂಬ ಪ್ರಶ್ನೆಯೂ ಇದೆ. ಉತ್ಪಾದಕರಿಗೆ ತೊಂದರೆಯಾಗದಂತೆ, ಗ್ರಾಹಕರಿಗೂ ಹೊರೆಯಾಗದಂತೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದರು.

500ಕ್ಕೂ ಹೆಚ್ಚು ನಕಲಿ ಕ್ಲಿನಿಕ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 500ಕ್ಕೂ ಹೆಚ್ಚು ನಕಲಿ ವೈದ್ಯರಿಗೆ ನೋಂದಣಿ ಸಂಖ್ಯೆ ನೀಡಿ, ಕ್ಲಿನಿಕ್ ತೆರೆಯಲು ಕರ್ನಾಟಕ ಆಯುರ್ವೇದ ಮತ್ತು ಯುನಾನಿ ಮಂಡಳಿ (ಕೆಎಯುಪಿ) ನೋಂದಣಾಧಿಕಾರಿಯೇ ಸಹಕ-ರಿಸಿರುವುದು ಆಯುಷ್ ಇಲಾಖೆ ನಡೆಸಿದ ಪ್ರಾಥಮಿಕ ಪರಿಶೀಲನೆಯಲ್ಲಿ ದೃಢಪಟ್ಟಿದೆ.

ಎರಡು ವರ್ಷಗಳ ಹಿಂದೆ ಕೆಎಯುಪಿ ಮಂಡಳಿ ಮೇಲೆ ದಾಳಿ ನಡೆಸಿದ್ದ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ವೈದ್ಯರೊಬ್ಬರಿಗೆ ಮಂಡಳಿಯ ನೋಂದಣಿ ಸಂಖ್ಯೆ ನೀಡಲು ಲಂಚ ಪಡೆಯುತ್ತಿದ್ದ ಆಗಿನ ನೋಂದಣಾಧಿಕಾ-ರಿಯನ್ನು ಬಂಧಿಸಿದ್ದರು. ದಾಖಲೆಗಳನ್ನು ಪರಿಶೀಲಿಸಿದಾಗ ಹಿಂದಿನ ನೋಂ-ದಣಾಧಿಕಾರಿಯಾಗಿದ್ದ ಡಾ.ವೆಂಕಟ ರಾಮಯ್ಯ ಅವರ ಅವಧಿಯಲ್ಲಿ 13 ನಕಲಿ ವೈದ್ಯರಿಗೆ ಮಂಡಳಿಯ ನೋಂದಣಿ ಸಂಖ್ಯೆ ನೀಡಿರುವುದು ಪತ್ತೆಯಾಗಿತ್ತು.

ನಕಲಿ ನೋಂದಣಿಗಳ ಕುರಿತು ಹೆಚ್ಚಿನ ಮಾಹಿತಿ ಕಲೆಹಾಕಲು ಆಯುಷ್ ಇಲಾಖೆಯ ತಾಂತ್ರಿಕ ಸಮಿತಿ ಅಧ್ಯಕ್ಷರ ನೇತೃತ್ವದಲ್ಲಿ ಸಭೆ ನಡೆಸಿ, ವಿಸ್ತೃತ ತನಿಖೆ ನಡೆಸಲು ನಿರ್ಧ-ರಿಸಲಾಗಿತ್ತು. ರಾಜ್ಯದಲ್ಲಿ ಸುಮಾರು 500 ನಕಲಿ ವೈದ್ಯರು ಇರಬಹುದು ಎಂದು ಇಲಾಖೆ ಅಂದಾಜಿಸಿದ್ದರೂ, ಇದುವರೆಗೂ ಅಂಥ ವೈದ್ಯರು ನಡೆಸುತ್ತಿರುವ ಕ್ಲಿನಿಕ್‌ಗಳನ್ನು ನಿರ್ದಿಷ್ಟವಾಗಿ ಪತ್ತೆಹಚ್ಚಲು ಇಲಾಖೆಗೆ ಸಾಧ್ಯವಾಗಿಲ್ಲ.

ನಕಲಿ ನೋಂದಣಿ ಹೇಗೆ?: ರಾಜ್ಯದಲ್ಲಿ ಸ್ವಾತಂತ್ರ್ಯಪೂರ್ವದಿಂದ ಪಾರಂಪರಿಕ ವೈದ್ಯವೃತ್ತಿ ಮಾಡಿಕೊಂಡು ಬಂದಿದ್ದ ವೈದ್ಯರಿಗೆ ಅವರ ಪ್ರಾಕ್ಟೀಸ್ ಮುಂದುವರಿಕೆಗಾಗಿ ಪರವಾನಗಿ ನೀಡಲು 1962ರಲ್ಲಿ ಜಾರಿಗೆ ಬಂದಿದ್ದ ಕೆಎಯುಪಿ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಪರವಾನಗಿ ಪಡೆಯಲು ಅವರು ಕಾಯ್ದೆ ಜಾರಿಗೆ ಬಂದ ವರ್ಷಕ್ಕೆ ಕನಿಷ್ಠ 25 ವರ್ಷ ಪೂರೈಸಿರಬೇಕು. 10 ವರ್ಷ ಕರ್ನಾಟಕದಲ್ಲಿ ಸೇವೆ ಸಲ್ಲಿಸಿರಬೇಕು ಎಂಬ ಷರತ್ತು ವಿಧಿಸಲಾಗಿತ್ತು. ಇದರಿಂದ ಸ್ವಾತಂತ್ರ್ಯಾ ನಂತರ ಜನಿಸಿದವರಿಗೆ ಪರವಾನಗಿ ಪಡೆಯಲು ಅವಕಾಶ ಇರಲಿಲ್ಲ. ಅಂಥವರು ಹಣ ನೀಡಿ ವಾಮಮಾರ್ಗದ ಮೂಲಕ ಪರವಾನಗಿ ಪಡೆದಿದ್ದಾರೆ. ಹಿಂದೆ ನೋಂದಣಿ ಸಂಖ್ಯೆ ಪಡೆದಿದ್ದು ಮೃತರಾದವರು, ನವೀಕರಣಕ್ಕೆ ಅರ್ಜಿ ಸಲ್ಲಿಸದೇ ನೋಂದಣಿ ರದ್ದಾದವರ ಸಂಖ್ಯೆಗಳನ್ನು ನಕಲಿ ವೈದ್ಯರಿಗೆ ನೀಡಲಾಗಿದೆ.

ನಕಲಿ ವೈದ್ಯರ ಪತ್ತೆ ಕಗ್ಗಂಟು: ಎಸಿಬಿ ದಾಳಿಯ ನಂತರ ಆಯುಷ್ ಇಲಾಖೆ ಮಂಡಳಿಯಲ್ಲಿನ ದಾಖಲೆಗಳನ್ನು ಪರಿಶೀಲಿಸಿದಾಗ ಹಾರ್ಡ್‌ಡಿಸ್ಕ್‌ನಲ್ಲಿದ್ದ ದಾಖಲೆಗಳು ಅಸಲಿಯಾದ ಮೂಲ ನೋಂದಣಿದಾರರ ಹೆಸರಿನಲ್ಲೇ ಇದ್ದವು. ನಕಲಿ ನೋಂದಣಿ ಸಂಖ್ಯೆಯನ್ನು ಆನ್‌ಲೈನ್ ಹೊರತಾಗಿ ನೀಡಲಾಗಿದೆ. ನಕಲಿ ವೈದ್ಯರಿಗಾಗಿ ಪ್ರತ್ಯೇಕ ನೋಂದಣಿ ಪುಸ್ತಕ ರಚಿಸಿಕೊಂಡಿದ್ದರು ಎನ್ನಲಾಗಿದೆ. ಅಂತಹ ಕಾಗದ ಪತ್ರಗಳ ಯಾವ ಕಡತಗಳನ್ನೂ ವೆಂಕಟರಾಮಯ್ಯ ಅವರ ನಂತರ ಅಧಿಕಾರ ವಹಿಸಿಕೊಂಡ ನೋಂದಣಾಧಿಕಾರಿಗೆ ಹಸ್ತಾಂತರಿಸಿಲ್ಲ. ಹಾಗಾಗಿ, ವಿಚಾರಣೆ ಪೂರ್ಣಗೊಂಡಿಲ್ಲ. ನೋಂದಣಿ ದಾಖಲೆಗಳನ್ನು ಒದಗಿಸುವಂತೆ ಆಯುಷ್ ಅಧಿಕಾರಿಗಳು ನೀಡಿದ ನೋಟಿಸ್‌ಗಳಿಗೆ ರಾಜ್ಯದ ಕ್ಲಿನಿಕ್‌ಗಳೂ ಸ್ಪಂದಿಸಿಲ್ಲ. 'ನಕಲಿ ವೈದ್ಯರಿಗೆ ಪರವಾನಗಿ ನೀಡಿದ ಪ್ರಕರಣಗಳ ಮಾಹಿತಿಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂ ರಾವ್ ಪಡೆದಿದ್ದಾರೆ. ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ. ನಕಲಿ ವೈದ್ಯರಿಗೆ ನೋಂದಣಿ ಮಾಡಿಕೊಟ್ಟಿದ್ದ ಕೆಎಯುಪಿ ಮಂಡಳಿ ಹಿಂದಿನ ನೋಂದಣಾಧಿಕಾರಿಯಾಗಿದ್ದ ಈಗಿನ ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ವೆಂಕಟರಾಮಯ್ಯ ಅವರನ್ನು ಅಮಾನತು ಮಾಡಲಾಗಿದೆ' ಎಂದು ಆಯುಷ್ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

ತಡೆಯಾಜ್ಞೆ ಇದ್ದರೂ ಪುಸ್ತಕ ಮಾರಾಟ?

ಹೊಸಪೇಟೆ (ವಿಜಯನಗರ): ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ 'ಕುವೆಂಪು ಸಮಗ್ರ ಸಾಹಿತ್ಯದ 12ನೇ ಸಂಪುಟ'ದ ಮಾರಾಟಕ್ಕೆ ನ್ಯಾಯಾಲಯದಿಂದ ನಿರ್ಬಂಧ ಇದ್ದರೂ, ಹಲವು ಪುಸ್ತಕದ ಅಂಗಡಿಗಳಲ್ಲಿ ಮಾರಾಟ ಈಗಲೂ ನಡೆಯುತ್ತಿದೆ ಎಂಬ ಆರೋಪ ಕೇಳಿಬಂದಿದೆ.

'ಕೆಳಹಂತದ ನ್ಯಾಯಾಲಯ-ದಲ್ಲಿ ಪ್ರಕರಣದ ಅಂತಿಮ ತೀರ್ಪು ಬರುವವರೆಗೆ 12ನೇ ಸಂಪುಟವನ್ನು ಶೈಕ್ಷಣಿಕ ಮತ್ತು ಸಂಶೋಧನಾ ಕೆಲಸ ಹೊರತುಪಡಿಸಿ ಅನ್ಯ ಉದ್ದೇಶಕ್ಕೆ ಬಳಸುವುದಿಲ್ಲ, ಅದನ್ನು ಮಾರಾಟ ಕೂಡಾ ಮಾಡುವುದಿಲ್ಲ ಎಂದು ಕನ್ನಡ ವಿಶ್ವವಿದ್ಯಾಲಯವು ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ. ಆದರೆ ಪುಸ್ತಕದ ಅಂಗಡಿಗಳಲ್ಲಿ 12ನೇ ಸಂಪುಟವನ್ನು ಮಾರಾಟಕ್ಕೆ ಇಟ್ಟಿರುವುದು ಕಾಣಿಸುತ್ತಿದೆ ಎಂದು 'ಕುವೆಂಪು ಪತ್ರಗಳು' ಪುಸ್ತಕ ರಚಿಸಿರುವ ಪುಸ್ತಕಮನೆ ಹರಿಹರಪ್ರಿಯ ಅವರು ಪ್ರಶ್ನಿಸಿದ್ದಾರೆ.

'ಕೋರ್ಟ್ ಸೂಚನೆಯನ್ನು ಪಾಲಿ-ಸಲಾಗುತ್ತಿದೆ. ಪುಸ್ತಕವನ್ನು ಮಾರಾಟ ಮಾಡುತ್ತಿಲ್ಲ. ಸಂಶಯ ಇದ್ದರೆ ಪುಸ್ತಕ ಮಾರಾಟದ ರಸೀದಿ ಪುಸ್ತಕವನ್ನು ಪರಿ-ಶೀಲಿಸಬಹುದು. ಆರು ವರ್ಷದ ಹಿಂದೆ ಪುಸ್ತಕ ಖರೀದಿಸಿದ ಬೆಂಗಳೂರಿನ ಪ್ರಮುಖ ಮಾರಾಟ ಮಳಿಗೆಯವರನ್ನೂ ವಿಚಾರಿಸಿದ್ದೆ' ಎಂದು ಕನ್ನಡ ವಿಶ್ವವಿದ್ಯಾ-ಲಯದ ಕುಲಪತಿ ಡಾ.ಡಿ.ವಿ.ಪರಮ ಶಿವಮೂರ್ತಿ ಪ್ರತಿಕ್ರಿಯೆ ನೀಡಿದ್ದಾರೆ.

ಬಿಟ್ ಕಾಯಿನ್: ಆರೋಪಿಗಳಿಗೆ ನೋಟಿಸ್ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡದ (ಎಸ್ಐಟಿ) ಅಧಿಕಾರಿಗಳು, ಕಾಟನ್‌ಪೇಟೆ ಹಾಗೂ ಸಿಸಿಬಿ ಕಚೇರಿಗೆ ಭೇಟಿ ನೀಡಿ ಪ್ರಕರಣದ ಕಡತಗಳನ್ನು ಸುಪರ್ದಿಗೆ ಪಡೆದುಕೊಂ-ಡಿದ್ದಾರೆ.

2020ರಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು, 2021ರ ಫೆಬ್ರವರಿ 22ರಂದು 757 ಪುಟಗಳ ದೋಷಾರೋಪ ಪಟ್ಟಿಯನ್ನು 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಪ್ರಕರಣ ದಾಖಲಾದ ದಿನದಿಂದ ಆರೋಪ ಪಟ್ಟಿ ಸಲ್ಲಿಕೆ ಆಗುವವರೆಗಿನ ಎಲ್ಲ ಕಡತಗಳನ್ನು ಎಸ್ಐಟಿ ಪರಿಶೀಲನೆ ನಡೆಸುತ್ತಿದೆ. ಪ್ರಮುಖ ಆರೋಪಿ ಎನ್ನಲಾದ ಜಯನಗರದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಸದ್ಯ ತಲೆಮರೆಸಿಕೊಂಡಿದ್ದು, ಆತ ಎಲ್ಲಿದ್ದಾನೆ ಎಂಬುದನ್ನು ತಿಳಿಯಲು ಅಧಿಕಾರಿಗಳು ತನಿಖೆ ಮುಂದುವರಿಸಿ-ದ್ದಾರೆ.

'ಕೆಂಪೇಗೌಡನಗರ ಠಾಣೆಯಲ್ಲಿ ದಾಖಲಾಗಿದ್ದ ಡ್ರಗ್ಸ್ ಮಾರಾಟ ಪ್ರಕರ-ಣದಲ್ಲಿ ಸಿಕ್ಕಿಬಿದ್ದಿದ್ದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು, ಬಿಟ್ ಕಾಯಿನ್ ಪ್ರ-ಕರಣದಲ್ಲಿ ಬಂಧಿಸಲಾಗಿತ್ತು. ನಂತರ, ಶ್ರೀಕಿಯನ್ನು ಸಿಸಿಬಿ ಹಾಗೂ ಸಿಐಡಿ ಎರಡೂ ತನಿಖಾ ಸಂಸ್ಥೆಗಳ ಅಧಿಕಾರಿಗಳು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದವು. ಎರಡೂ ಪ್ರಕರಣಗಳಲ್ಲಿ ಜಾಮೀನು ಪಡೆದುಕೊಂಡಿರುವ ಶ್ರೀಕಿ ಹಾಗೂ ಇತರರು ಸದ್ಯ ತಲೆಮರೆಸಿಕೊಂಡಿದ್ದಾರೆ. ಕೆಲವರು ನಗರದಲ್ಲಿದ್ದು ಹಲವರು ರಾಜ್ಯ ತೊರೆದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಬಿಟ್ ಕಾಯಿನ್ ವ್ಯವಹಾರ ಹೇಗೆ ನಡೆಯುತ್ತದೆ ? ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಹಣ ವಿನಿಮಯ ಸರ್ವರ್‌ಗಳನ್ನು ಹ್ಯಾಕ್ ಮಾಡಿದವರು ಯಾರು ? ಇದರಲ್ಲಿ ಶ್ರೀಕಿ ಪಾತ್ರವೇನು ? ರಾಜ್ಯದಲ್ಲಿ ಬಿಟ್ ಕಾಯಿನ್ ಅಕ್ರಮ ಹೇಗಾಯಿತು? ಅದಕ್ಕೆ ಸಹಕಾರ ನೀಡಿದವರು ಯಾರು? ಬಿಟ್ ಕಾಯಿನ್ ಅಕ್ರಮದ ಹಣ ಎಲ್ಲಿದೆ? ಎಂಬಿತ್ಯಾದಿ ಪ್ರಾಥಮಿಕ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಸದ್ಯದಲ್ಲೇ ಶ್ರೀಕಿ ಹಾಗೂ ಇತರೆ ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ಆರಂಭಿಸಲು ಚಿಂತನೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ತಜ್ಞರ ನೆರವು: 'ಬಿಟ್ ಕಾಯಿನ್ ಪ್ರಕರಣದ ಆರೋಪಿಗಳು, ಅಂತರರಾಷ್ಟ್ರೀಯ ಹ್ಯಾಕರ್ಸ್ ಜಾಲಗಳ ಜೊತೆ ಗುರುತಿಸಿಕೊಂಡಿರುವ ಮಾಹಿತಿ ಇದೆ. ಈ ಪ್ರಕರಣ, ಸಂಪೂರ್ಣ ತಂತ್ರಜ್ಞಾನ ಹಾಗೂ ಆನ್‌ಲೈನ್ ಮೂಲಕ ನಡೆದಿದೆ. ಹೀಗಾಗಿ, ತನಿಖೆಗೆ ತಜ್ಞರ ನೆರವು ಪಡೆಯಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮತೀಯ ಗೂಂಡಾಗಿರಿ: ಇಬ್ಬರ ಬಂಧನ

ದಾವಣಗೆರೆ: ಮುಸ್ಲಿಂ ಯುವಕರೊಂದಿಗೆ ಚಿತ್ರಮಂದಿರಕ್ಕೆ ತೆರಳಿದ್ದ ಹಿಂದೂ ಯುವತಿ ಮೇಲೆ ಹಲ್ಲೆ ನಡೆಸಿ, ವಿಡಿಯೊಗಳನ್ನು ಜಾಲತಾಣದಲ್ಲಿ ಹರಿಬಿಟ್ಟ ಆರೋಪದಡಿ ಇಬ್ಬರು ಯುವಕರನ್ನು ಇಲ್ಲಿನ ಕೆ.ಟಿ. ಜೆ ನಗರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ನಗರದ ನಿವಾಸಿಗಳಾದ ದೊಡ್ಡೇಶಿ ಹಾಗೂ ನಿಂಗರಾಜ ಬಂಧಿತರು.

'ಸ್ನೇಹಿತರಾದ ಇಬ್ರಾಹಿಂ, ಮೆಹಬೂಬ್ ಸುಭಾನಿ ಅವರೊಂದಿಗೆ ಸಿನಿಮಾ ನೋಡಲು ಹೋಗಿದ್ದಾಗ ನಿನ್ನದು ಯಾವ ಜಾತಿ, ಬೇರೆ ಧರ್ಮದವರ ಜೊತೆ ಏಕೆ ಬಂದಿದ್ದೀಯಾ ಎಂದು ಪ್ರಶ್ನಿಸಿದ್ದ ಆರೋಪಿಗಳು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಜೊತೆಯಲ್ಲಿದ್ದವರಿಗೂ ಕಪಾಳಕ್ಕೆ ಹೊಡೆದಿದ್ದಾರೆ' ಎಂದು ಯುವತಿ ದೂರು ನೀಡಿದ್ದಾರೆ.

'ಕೀಳು ಜಾತಿಯವರೇ ಹೀಗೆ ಎಂದು ಹೀಯಾಳಿಸುವ ಮೂಲಕ ಜಾತಿನಿಂದನೆಯನ್ನೂ ಮಾಡಿದ್ದಾರೆ' ಎಂದು ದೂರಿದ್ದಾರೆ. ಯುವತಿಯು ಚಿತ್ರದುರ್ಗ ಜಿಲ್ಲೆಯ ಗ್ರಾಮವೊಂದರ ನಿವಾಸಿ ಯಾಗಿದ್ದಾರೆ.

ಪುರವಂತರ ಕುಣಿತ

ಕಲಬುರಗಿಯಲ್ಲಿ ವೀರಶೈವ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಸಮನ್ವಯಾತ್ಮಕ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದ ಅಂಗವಾಗಿ ಶನಿವಾರ ನಡೆದ ಕಾಶಿಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮೆರವಣಿಗೆ ವೇಳೆ ಪುರವಂತರು ಗಮನ ಸೆಳೆದರು
–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಸಾಮೂಹಿಕ ರಜೆಯ ಬಗ್ಗೆ ನಿರ್ಧಾರ ನಾಳೆ

'108' ಸಿಬ್ಬಂದಿ: ವೇತನ ಪಾವತಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ '108-ಆರೋಗ್ಯ ಕವಚ' ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಬಾಕಿ ಇರಿಸಿಕೊಂಡಿರುವ ವೇತನ ಪಾವತಿಗೆ ಕ್ರಮಕೈಗೊಳ್ಳುವುದಾಗಿ ಆರೋಗ್ಯ ಇಲಾಖೆ ಭರವಸೆ ನೀಡಿದೆ. ಇದರಿಂದಾಗಿ ಸಾಮೂಹಿಕ ರಜೆಯ ಬಗ್ಗೆ ಸೋಮವಾರದ ಬಳಿಕ ನಿರ್ಧಾರ ಕೈಗೊಳ್ಳಲು ಸಿಬ್ಬಂದಿ ತೀರ್ಮಾನಿಸಿದ್ದಾರೆ.

'108-ಆರೋಗ್ಯ ಕವಚ' ಯೋಜನೆ ನಿರ್ವಹಿಸುತ್ತಿರುವ ಜಿವಿಕೆ–ಇಎಂಆರ್‌ಐ ಸಂಸ್ಥೆ ನಾಲ್ಕು ತಿಂಗಳಿಂದ ವೇತನವನ್ನು ಬಾಕಿ ಉಳಿಸಿಕೊಂಡಿದೆ. ಇದರಿಂದಾಗಿ ಜುಲೈ 7ರೊಳಗೆ ವೇತನ ಪಾವತಿಸುವಂತೆ ಗಡುವು ನೀಡಿದ್ದ ಕರ್ನಾಟಕ ರಾಜ್ಯ ಆರೋಗ್ಯ ಕವಚ (108) ಆಂಬುಲೆನ್ಸ್ ನೌಕರರ ಸಂಘ, 'ವೇತನ ಪಾವತಿಯಾಗದಿದ್ದಲ್ಲಿ ಸಾಮೂಹಿಕವಾಗಿ ಕೆಲಸಕ್ಕೆ ಗೈರಾಗಲಾಗುವುದು' ಎಂದು ಎಚ್ಚರಿಕೆ ನೀಡಿತ್ತು.

'ಆಂಬುಲೆನ್ಸ್ ಸಿಬ್ಬಂದಿಗೆ ಬಾಕಿ ವೇತನ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ. ಸಿಬ್ಬಂದಿ ಮುಷ್ಕರ ನಡೆಸಬಾರದು' ಎಂದು ಮನವಿ ಮಾಡಿಕೊಂಡಿರುವ ದಿನೇಶ್ ಗುಂಡೂರಾವ್, ಸಿಬ್ಬಂದಿ ಜತೆಗೆ ಸೋಮವಾರ ಸಭೆ ನಡೆಸುವ ಭರವಸೆ ನೀಡಿದ್ದಾರೆ.

ಸಿಬ್ಬಂದಿ ಜತೆಗೆ ಸಭೆ ನಡೆಸಿದ ಇಲಾಖೆ ಆಯುಕ್ತ ಡಿ. ರಂದೀಪ್, 'ಸಿಬ್ಬಂದಿಗೆ ₹ 40 ಕೋಟಿ ವೇತನ ಪಾವತಿ ಬಾಕಿಯಿದ್ದು, ಮೊದಲ ಕಂತಿನಲ್ಲಿ ₹ 14 ಕೋಟಿ ಬಿಡುಗ-ಡೆಗೊಳಿಸಲಾಗಿದೆ. ಸೋಮವಾರ ಸಂಜೆಯೊಳಗೆ ಬಾಕಿ ವೇತನ ಪಾವತಿಗೆ ಕ್ರಮ ವಹಿಸಲಾಗುವುದು' ಎಂದು ಭರವಸೆ ನೀಡಿದರು.

'ಯೋಜನೆ ನಿರ್ವಹಿಸುತ್ತಿರುವ ಜಿವಿಕೆ–ಇಎಂಆರ್‌ಐ ಸಂಸ್ಥೆಯು ಕಳೆದ ಮಾರ್ಚ್ ತಿಂಗಳಿಂದ ವೇತನ ಪಾವತಿಸಿಲ್ಲ. ಇದರಿಂದ ನೌಕರರಿಗೆ ಜೀವನ ನಿರ್ವಹಣೆ ಕಷ್ಟವಾಗಿದೆ. ಈ ಬಗ್ಗೆ ಸಂಸ್ಥೆಯ ಪ್ರತಿನಿಧಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ಈಗಲಾದರೂ ಈ ಬಗ್ಗೆ ಕ್ರಮವಹಿಸಿ, ಜೂನ್ ಸಹಿತ ನಾಲ್ಕು ತಿಂಗಳ ವೇತನವನ್ನು ಪಾವತಿಸಬೇಕು. ಬಾಕಿ ಇರುವ 3 ವರ್ಷಗಳ ಹಿಂಬಾಕಿಯನ್ನು ಕೂಡಲೇ ಪಾವತಿ ಮಾಡುವಂತೆ ಆದೇಶ ಹೊರಡಿಸಬೇಕು' ಎಂದು ಸಂಘದ ರಾಜ್ಯಾಧ್ಯಕ್ಷ ಶ್ರೀಶೈಲ ಹಳ್ಳೂರ ಆಗ್ರಹಿಸಿ-ದ್ದಾರೆ.

'ಸೋಮವಾರ ನಡೆಸುವ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಸಾಮೂಹಿಕ ರಜೆಯ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ ನಾಳೆ

ಬೆಂಗಳೂರು: 'ಅಂಗನವಾಡಿ ಕಾರ್ಯಕರ್ತೆಯರಿಗೆ ಸರ್ಕಾರ ನೀಡಿರುವ ಮೊಬೈಲ್‌ಗಳನ್ನು ಇದೇ 10ರಂದು ವಾಪಸ್ ಮಾಡುವ ಮೂಲಕ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಾಗುವುದು' ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಯುಕ್ತ ಸಂಘರ್ಷ ಸಮಿತಿ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮಿ, '2018ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಎಲ್‌ಜಿ ಕಂಪನಿಯ 63 ಸಾವಿರ ಮೊಬೈಲ್‌ಗಳನ್ನು ನೀಡಲಾಗಿತ್ತು. ಇದರಲ್ಲಿ, ಪೋಷಣ್ ಅಭಿಯಾನದ ಪ್ರತಿದಿನದ ಚಟುವಟಿಕೆ-ಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ. ಈ ಮೊಬೈಲ್‌ಗಳಲ್ಲಿ ನೆಟ್‌ವರ್ಕ್, ರ್‍ಯಾಮ್, ಸ್ಟೋರೇಜ್ ಸಮಸ್ಯೆ ಇದೆ. ಹೊಸ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶವಿಲ್ಲ' ಎಂದು ದೂರಿದರು. 'ಮೊಬೈಲ್‌ಗಳ ಬದಲು ಟ್ಯಾಬ್ಲೆಟ್ ನೀಡಬೇಕು' ಎಂದು ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷ ಬಿ. ಅಮ್ಜದ್ ಒತ್ತಾಯಿಸಿದರು.

'ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಚೇರಿಗಳ ಮುಂಭಾಗದಲ್ಲಿ ಪ್ರತಿಭಟನೆ ನಡೆಯಲಿದೆ' ಎಂದು ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

25ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 25 ವರ್ಷಗಳಾದರೂ ನೀವು ನಮ್ಮ ಮನೆ ಮತ್ತು ಮನದಲ್ಲಿ ಹಚ್ಚಿದ ಹಣತೆಯಂತೆ ದಾರಿ ದೀಪವಾಗಿದ್ದೀರಿ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...

ಪತಿ: ರಾಮಕೃಷ್ಣಪ್ಪ ಮತ್ತು ಮಕ್ಕಳು, ಆರ್. ಲಕ್ಷಣಮೂರ್ತಿ, ವಕೀಲರು, ಸೊಸೆಯಂದಿರು, ಮೊಮ್ಮಕ್ಕಳು ಚರಣ್‌ಗ್ರೂಪ್ಸ್ ಮತ್ತು ಶ್ರೀಮತಿ ಜಯಮ್ಮ ಚಾರಿಟಬಲ್ ಟ್ರಸ್ಟ್ (ರಿ) ದಾಸನಪುರ, ಬೆಂಗಳೂರು

ಶ್ರೀಮತಿ ಜಯಮ್ಮ
ನಿಧನ: 09-07-1998

ಉಪವಾಸಕ್ಕೆ ನಿರ್ಧಾರ

ಹುಬ್ಬಳ್ಳಿ: 'ಜೈನಮುನಿ ಕಾಮಕುಮಾರ ನಂದಿ ಸ್ವಾಮೀಜಿ ಹತ್ಯೆ ಖಂಡನೀಯ. ಜೈನಮುನಿಗಳಿಗೆ ರಕ್ಷಣೆ ಸಿಗುವವರೆಗೂ ಆಮರಣ ಉಪವಾಸ ನಡೆಸುತ್ತೇನೆ' ಎಂದು ವರೂರ ನವಗ್ರಹ ತೀರ್ಥ ಕ್ಷೇತ್ರದ 108 ಆಚಾರ್ಯ ಗುಣಧರ ನಂದಿ ಮಹಾರಾಜರು ಹೇಳಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜೈನರು ಶಾಂತಿಪ್ರಿಯರು. ಇಂತಹ ಸಮಾಜದ ಸ್ವಾಮೀಜಿಯ ಬರ್ಬರ ಹತ್ಯೆ ತೀವ್ರ ನೋವು ತಂದಿದೆ' ಎಂದು ಕಣ್ಣೀರಿಟ್ಟರು.

'ಸರ್ಕಾರ ನಮ್ಮಂತಹ ಅಲ್ಪ-ಸಂಖ್ಯಾತರನ್ನು ಕಡೆಗಣಿಸಿದೆ. ಜೈನ ಬಸದಿಗಳು, ಜೈನಮುನಿಗಳು, ಜೈನ ಸಮಾಜಕ್ಕೆ ಸುರಕ್ಷತೆ ಇಲ್ಲವಾಗಿದೆ. ಜೈನಮುನಿಗಳ ಸುರಕ್ಷತೆ ಬಗ್ಗೆ ಮುಖ್ಯ-ಮಂತ್ರಿಗಳು ಅಥವಾ ಅಧಿಕಾರಿಗಳು ಲಿಖಿತವಾಗಿ ಭರವಸೆ ನೀಡಬೇಕು' ಎಂದರು.

ಮಠದಲ್ಲಿ ಕೆಲಸಕ್ಕಿದ್ದ ವ್ಯಕ್ತಿ ಮೇಲೆ ಕೊಲೆ ಆರೋಪ: ಸಾಲ ವಾಪಸ್ ಕೇಳಿದ್ದಕ್ಕೆ ಕೃತ್ಯದ ಶಂಕೆ

ಕತ್ತರಿಸಿದ ಸ್ಥಿತಿಯಲ್ಲಿ ಜೈನ ಮುನಿ ಶವ

ಪ್ರಜಾವಾಣಿ ವಾರ್ತೆ

ಕಟಕಬಾವಿ (ಬೆಳಗಾವಿ ಜಿಲ್ಲೆ): ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿಯ ನಂದಿಪರ್ವತ ಆಶ್ರಮದ ಮುನಿ ಕಾಮಕುಮಾರ ನಂದಿ ಮಹಾರಾಜ ಅವರ ಶವ ಕತ್ತರಿಸಿದ ಸ್ಥಿತಿಯಲ್ಲಿ, ರಾಯಬಾಗ ತಾಲ್ಲೂಕಿನ ಕಟಕಬಾವಿಯ ಕೊಳವೆಬಾವಿಯಲ್ಲಿ ಶನಿವಾರ ಪತ್ತೆಯಾಗಿದೆ.

ಕಟಕಬಾವಿ ಹೊರವಲಯದ ಕಬ್ಬಿನ ಗದ್ದೆಯಲ್ಲಿರುವ ಕೊಳವೆಬಾವಿಯಲ್ಲಿ ಅವರ ಶವ ಎಸೆಯಲಾಗಿತ್ತು. ದೇಹದ ಭಾಗಗಳನ್ನು ತುಂಡುಗಳಾಗಿ ಕತ್ತರಿಸಿ, ಚೀಲದಲ್ಲಿ ಹಾಕಿ ಕೊಳವೆಬಾವಿಯೊಳಗೆ ಹಾಕಲಾಗಿತ್ತು. ಮಾಹಿತಿ ಆಧಾರದಲ್ಲಿ ಶೋಧ ನಡೆಸಿದ ಪೊಲೀಸರು, ನಿರಂತರ 10 ತಾಸು ಕಾರ್ಯಾಚರಣೆ ನಡೆಸಿ ಶವದ ತುಂಡುಗಳನ್ನು ಪತ್ತೆ ಮಾಡಿದರು.

'ಬೋರ್‌ವೆಲ್‌ನ ಸುಮಾರು 25 ಅಡಿ ಆಳದಲ್ಲಿ ಒಂದು ಸೀರೆ, ಒಂದು ಟವಲ್ ಸಿಕ್ಕಿತು. 30 ಅಡಿ ಆಳದಲ್ಲಿ ಮುನಿಶ್ರೀ ಅವರ ದೇಹದ ಭಾಗಗಳು ಸಿಕ್ಕಿವೆ. ಕೊಲೆಯನ್ನು ಹೇಗೆ ಮಾಡಲಾಗಿದೆ, ಏಕೆ ಮಾಡಲಾಗಿದೆ ಎಂಬ ಬಗ್ಗೆ ನಿಖರ ಮಾಹಿತಿಯನ್ನು ತನಿಖೆ ಬಳಿಕ ನೀಡಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದರು.

ಪತ್ತೆಯಾಗಿದ್ದು ಹೇಗೆ?: ಕೊಲೆಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಮುನಿಶ್ರೀ ಅವರೊಂದಿಗೆ ಒಬ್ಬ ಆರೋಪಿ ಸಂಪರ್ಕದಲ್ಲಿದ್ದ. ಹಿರೇಕೋಡಿಯ ಆಶ್ರಮದಲ್ಲಿಯೇ ಗುರುವಾರ (ಜುಲೈ 6) ರಾತ್ರಿ ಮುನಿ ಮಹಾರಾಜರನ್ನು ಕೊಲೆ ಮಾಡಿದ್ದ. ಇನ್ನೊಬ್ಬ ಆರೋಪಿ ಶವವನ್ನು ಕಟಕಬಾವಿಯವರೆಗೆ ಸಾಗಿಸಲು ನೆರವಾಗಿದ್ದ. ತನಿಖೆಯಲ್ಲಿ ಕೊಲೆ ವಿಚಾರ ಬಯಲಿಗೆ ಬಂತು. ಎಂದು ಮೂಲಗಳು ಹೇಳಿವೆ

ಗುರುವಾರ ರಾತ್ರಿಯಿಂದಲೇ ಮುನಿಶ್ರೀ ಅವರು ಕಾಣೆಯಾಗಿದ್ದರು. ಅವರು ಮಲಗುವ ಕೋಣೆಯಲ್ಲೇ ದಂಡ, ಕಮಂಡಲ ಮುಂತಾದ ಸಾಮಗ್ರಿಗಳು ಪತ್ತೆಯಾಗಿದ್ದವು. ಆಶ್ರಮದ ಮುಖಂಡರು ಚಿಕ್ಕೋಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಮುನಿ ಅವರೊಂದಿಗೆ ಸಂಪರ್ಕದಲ್ಲಿದ್ದ ಎಲ್ಲರನ್ನೂ ವಿಚಾರಣೆ ಮಾಡುವಾಗ ಮುಖ್ಯ ಆರೋಪಿ ಸಿಕ್ಕಿಬಿದ್ದ. 'ಆಶ್ರಮದ ಪಕ್ಕದಲ್ಲಿಯೇ ಆರೋಪಿ ಕೃಷಿ ಕೆಲಸ ಮಾಡಿಕೊಂಡಿದ್ದ. ಮುನಿ ಅವರ ಸೇವೆ ಮಾಡುವುದಾಗಿ ಹೇಳಿ ಅವರೊಂದಿಗೆ ಸಂಪರ್ಕಕ್ಕೆ ಬಂದಿದ್ದ. ಸುಮಾರು ಆರು ವರ್ಷಗಳಿಂದ ಅವರ ಜೊತೆಗಿದ್ದ. ತನಗೆ ಕಷ್ಟವಿದೆ ಎಂದು ಹೇಳಿ ಮುನಿ ಅವರ ಟ್ರಸ್ಟ್‌ನಿಂದ ಸಾಲ ಪಡೆದಿದ್ದ. ಈ ಹಣವನ್ನು ವಾಪಸ್ ನೀಡುವಂತೆ ಮುನಿಶ್ರೀ ಪದೇಪದೇ ಕೇಳಿದ್ದರಿಂದ, ಕೋಪಗೊಂಡ ಆರೋಪಿ ಕೊಲೆ ಮಾಡಿದ್ದಾಗಿ ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

'ಕೊಲೆ ಮಾಡಿದ ಆರೋಪಿ ಮರಳಿ ಆಶ್ರಮಕ್ಕೆ ಬಂದಿದ್ದ. ಎರಡು ದಿನಗಳಿಂದ ಮುನಿಗಳನ್ನು ಹುಡುಕಾಡಿದಂತೆ ನಾಟಕ ಮಾಡಿದ್ದ' ಎಂದು ಮುನಿಶ್ರೀ ಅವರ ಪೂರ್ವಾಶ್ರಮದ ಸಂಬಂಧಿ ಪ್ರದೀಪ ನಂದಗಾಂವ ಮಾಹಿತಿ ನೀಡಿದರು.

'ಜೈನ ಮುನಿಗಳು ಜಗತ್ತಿಗೆ ಶಾಂತಿ, ಅಹಿಂಸೆ ಸಂದೇಶ ನೀಡಿದವರು. ಇತರ ಧರ್ಮದವರಿಗೂ ಆಶ್ರಮದಲ್ಲಿ ಆಶ್ರಯ ನೀಡಿದ್ದರು. ಅವರ ಸಹಾಯವನ್ನು ದುರುಪಯೋಗ ಮಾಡಿಕೊಂಡು ಕೊಲೆ ಮಾಡಲಾಗಿದೆ. ಸಲ್ಲೇಖನ, ಸಮಾಧಿ ಸ್ಥಿತಿಯ ಮೂಲಕ ಪ್ರಾಣ ಬಿಡಲು ಇಚ್ಛಿಸಿದ್ದರು. ಅಂಥವರನ್ನು ಬರ್ಬರವಾಗಿ ಕೊಲೆ ಮಾಡಿದವರಿಗೆ ಗಲ್ಲು ಶಿಕ್ಷೆ ಕೊಡಿಸಬೇಕು' ಎಂದು ಸಮಾಜದ ಮುಖಂಡರಾದ ವೀಣಾ ಪಟ್ಟಣಶೋಡಿ ಆಗ್ರಹಿಸಿದರು.

ಅಪಾರ ಭಕ್ತ ವೃಂದ ಹೊಂದಿದ್ದ ಮುನಿಶ್ರೀ ಹತ್ಯೆಯಿಂದಾಗಿ ಹಿರೇಕೋಡಿಯಲ್ಲಿ ನೀರವ ಮೌನ ಆವರಿಸಿದೆ. ಆಶ್ರಮದಲ್ಲಿ ಮುಖಂಡರು, ಕೆಲಸದವರು ದುಃಖ ತಾಳದೇ ಕಣ್ಣೀರು ಹಾಕಿದರು.

ಮುಂಜಾಗ್ರತಾ ಕ್ರಮವಾಗಿ ಹಿರೇಕೋಡಿ ಹಾಗೂ ಕಟಕಬಾವಿಯಲ್ಲಿ ಬಿಗಿ ಪೊಲೀಸ್ ಭದ್ರತೆ ಏರ್ಪಡಿಸಲಾಗಿದೆ.

ದಿಗಂಬರರಾಗಿ 25 ವರ್ಷಗಳ ಸೇವೆ

ಹಿರೇಕೋಡಿ: ಕಾಮಕುಮಾರ ನಂದಿ ಮಹಾರಾಜ ಅವರು ಸನ್ಯಾಸತ್ವ ಸ್ವೀಕರಿಸಿ ಸುಮಾರು 25 ವರ್ಷ ಕಳೆದಿವೆ. ಹಿರೇಕೋಡಿ ಗ್ರಾಮದ ಬೆಟ್ಟದ ತಪ್ಪಲಿನಲ್ಲಿ 13 ವರ್ಷಗಳ ಆಚೆ ನಂದಿ ಪರ್ವತ ಎಂಬ ಆಶ್ರಮ ಸ್ಥಾಪಿಸಿದ ಮುನಿಗಳು, ಹಂತ ಹಂತವಾಗಿ ಅಭಿವೃದ್ಧಿಪಡಿಸಿದ್ದಾರೆ. ಅಥಣಿ ತಾಲ್ಲೂಕಿನ ಖವಟಕೊಪ್ಪ ಗ್ರಾಮದವರು. ಅವರ ಪೂರ್ವಾಶ್ರಮದ ಹೆಸರು ಭರಮಪ್ಪ ಭೀಮಪ್ಪ ಉಗಾರ. 1967ರಲ್ಲಿ ಅವರು ಜನಿಸಿದ್ದು, ಅವರಿಗೆ 7 ಜನ ಸಹೋದರರು, ಮೂರು ಜನ ಸಹೋದರಿಯರಿದ್ದು, ಇಬ್ಬರು ಸಹೋದರರು ತೀರಿಕೊಂಡಿದ್ದಾರೆ.

ಕಾಮಕುಮಾರ ನಂದಿ ಮಹಾರಾಜ

ಬಿ.ಇ ಪದವಿ ಪಡೆದ ಅವರು 22ನೇ ವರ್ಷದಲ್ಲಿ ಅಧ್ಯಾತ್ಮದತ್ತ ಒಲವು ತೋರಿ ಅಕಲುಜ್ದಲ್ಲಿ ಕುಂತುಸಾಗರ ಮಹಾರಾಜರಿಂದ ಸನ್ಯಾಸ ದೀಕ್ಷೆ ಪಡೆದರು. ದೆಹಲಿ, ಹಿಮಾಲಯ, ಡೆಹರಾಡೂನ್ ಮೊದಲಾದೆಡೆ ಸಂಚರಿಸಿ ಧರ್ಮ ಪ್ರಸಾರ ಮಾಡಿದ್ದಾರೆ. ಕನ್ನಡ ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಪ್ರಾವೀಣ್ಯ ಹೊಂದಿದ್ದ ಅವರು ಹಲವು ಧಾರ್ಮಿಕ ಗ್ರಂಥಗಳನ್ನೂ ರಚಿಸಿದ್ದಾರೆ.

ಇಂದು ಅಂತ್ಯಸಂಸ್ಕಾರ

'ಕಾಮಕುಮಾರ ನಂದಿ ಮಹಾರಾಜರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಬೆಳಗಾವಿಗೆ ಸಾಗಿಸಲಾಗಿದೆ. ಹೀಗಾಗಿ, ಅವರ ಅಂತ್ಯಸಂಸ್ಕಾರವನ್ನು ಹಿರೇಕೋಡಿಯ ಆಶ್ರಮದಲ್ಲಿ ಭಾನುವಾರ ಮಧ್ಯಾಹ್ನದ ವೇಳೆಗೆ ಮುಗಿಸಲಾಗುವುದು' ಎಂದು ನಂದಿಪರ್ವತ ಆಶ್ರಮ ಟ್ರಸ್ಟ್‌ನ ಅಧ್ಯಕ್ಷ ಡಾ.ಭೀಮಪ್ಪ ಉಗಾರೆ ಹೇಳಿದರು.

ಶಿಕ್ಷೆಯಾಗುವಂತೆ ಕ್ರಮ ಜರುಗಿಸಿ: ಸಿ.ಎಂ

ಬೆಂಗಳೂರು: 'ಹಿರೇ ಕೋಡಿಯ ಜೈನಮುನಿ ಹತ್ಯೆ ಪ್ರಕರಣದ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಆಗುವಂತೆ ಕಾನೂನು ಕ್ರಮ ಕೈಗೊಳ್ಳಿ' ಎಂದು ಹಿರಿಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ, 'ಕಾನೂನುಬಾಹಿರ ಕೃತ್ಯ ಎಸಗುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ. ಕಾನೂನು ಕೈಗೆತ್ತಿಕೊಳ್ಳುವ ಹಕ್ಕು ಯಾರಿಗೂ ಇಲ್ಲ. ತಪ್ಪು ಯಾರೇ ಮಾಡಿದ್ದರೂ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದಿದ್ದಾರೆ.

'ಪೊಲೀಸರು ಈಗಾಗಲೇ ತನಿಖೆ ಚುರುಕುಗೊಳಿಸಿದ್ದು, ಹಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಯಾವುದೇ ಆರೋಪಿ ಕಾನೂನಿನಿಂದ ತಪ್ಪಿಸಿಕೊಳ್ಳಬಾರದು ಎನ್ನುವ ಸೂಚನೆಯನ್ನು ಅಧಿಕಾರಿಗಳಿಗೆ ನೀಡಿದ್ದೇನೆ' ಎಂದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸುಧಾ, ಮಯೂರ ಓದಿರಿ

ವರ್ಷಾಂತ್ಯಕ್ಕೆ ಕಾರ್ಯ ಪೂರ್ಣ • 70 ಸಾವಿರ ಕೃತಿಗಳ ಶಾಶ್ವತ ಸಂರಕ್ಷಣೆ

ಪ್ರಾಚೀನ ಹಸ್ತಪ್ರತಿಗೆ ಡಿಜಿಟಲ್ ಸ್ಪರ್ಶ

• ಮೋಹನ್ ಕುಮಾರ ಸಿ.

ಮೈಸೂರು: ಮೈಸೂರು ವಿಶ್ವವಿದ್ಯಾ-ಲಯದ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿರುವ (ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್) 70 ಸಾವಿರ ಪ್ರಾಚೀನ ಹಸ್ತಪ್ರತಿಗಳಿಗೆ ಡಿಜಿಟಲ್ ಸ್ಪರ್ಶ ನೀಡುವ ಪ್ರಕ್ರಿಯೆ ಮುಕ್ತಾಯದ ಹಂತ ತಲುಪಿದ್ದು, ವರ್ಷಾಂತ್ಯಕ್ಕೆ ಸಂಶೋಧಕರಿಗೆ ಲಭ್ಯವಾಗಲಿದೆ.

2022ರ ಮೇನಲ್ಲಿ ಆರಂಭವಾದ ಪ್ರಕ್ರಿಯೆ ಶೇ 70ರಷ್ಟು ಪೂರ್ಣಗೊಂಡಿದೆ. 25 ಸಾವಿರಕ್ಕೂ ಹೆಚ್ಚು ಕಟ್ಟುಗಳಿರುವ ಹಸ್ತಪ್ರತಿಗಳ ಡಿಜಿಟಲೀಕರಣದ ಜೊತೆಗೆ, ಅತ್ಯಂತ ಹಳೆಯದಾದ, ಕೀಟಬಾಧೆಯಿಂದ ಹಾಳಾಗುತ್ತಿರುವ ತಾಳೆಗರಿಗಳ ಸಂರಕ್ಷಣೆಯೂ ನಡೆದಿದೆ.

2,300 ವರ್ಷಗಳ ಇತಿಹಾಸವಿರುವ ಕೌಟಿಲ್ಯನ 'ಅರ್ಥಶಾಸ್ತ್ರ', ಶಂಕರಾಚಾರ್ಯರ 'ಸೌಂದರ್ಯ ಲಹರಿ', ಮುಮ್ಮಡಿ ಕೃಷ್ಣರಾಜ ಒಡೆಯರ 'ಶ್ರೀತತ್ವ ನಿಧಿ'ಯಂಥ ಅಮೂಲ್ಯ ಕೃತಿಗಳು ಡಿಜಿ-ಟಲೀಕರಣಗೊಂಡಿವೆ.

₹1.5 ಕೋಟಿ ನೆರವು: ಬೆಂಗಳೂರಿನ ಮಿಥಿಕ್ ಸೊಸೈಟಿಯು ₹1.5 ಕೋಟಿ ವೆಚ್ಚದಲ್ಲಿ ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಡಿಜಿಟಲೀಕರಣ ಪ್ರಕ್ರಿಯೆಗೆ ನೆರವಾಗಿದೆ. ಸೊಸೈಟಿಯ 37 ಮಂದಿ, ಸಂಶೋಧನಾ ಸಂಸ್ಥೆಯ ಸಿಬ್ಬಂದಿ ಹಾಗೂ ಮಹಾರಾಜ ಕಾಲೇಜಿನ ಪ್ರಾಚ್ಯ ಇತಿಹಾಸ ವಿಭಾಗದ ವಿದ್ಯಾರ್ಥಿಗಳು ಸಂರಕ್ಷಣೆಗೆ ಕೈ ಜೋಡಿಸಿದ್ದಾರೆ.

ಹಸ್ತಪ್ರತಿಗಳನ್ನು ಶಾಶ್ವತವಾಗಿಸಲು ಮಿಥಿಕ್ ಸೊಸೈಟಿ ಸಹಯೋಗದಲ್ಲಿ ಡಿಜಿಟಲೀಕರಣ ಮಾಡುತ್ತಿದ್ದು, ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ
ಡಾ.ಡಿ.ಪಿ.ಮಧುಸೂದನಾಚಾರ್ಯ
ನಿರ್ದೇಶಕ, ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆ

ಕೌಟಿಲ್ಯನ ಅರ್ಥಶಾಸ್ತ್ರದ ಹಸ್ತಪ್ರತಿ-ಯಿಂದಾಗಿಯೇ ಸಂಸ್ಥೆಗೆ ದೊಡ್ಡ ಹೆಸರು ಬಂದಿದೆ. ವಿದ್ವಾಂಸ ಆರ್.ಶಾಮಾಶಾಸ್ತ್ರಿ ಅವರು, ತಮಗೆ ಸಿಕ್ಕ ಕೌಟಿಲ್ಯನ ಅರ್ಥ-ಶಾಸ್ತ್ರದ ಹಸ್ತಪ್ರತಿಯನ್ನು ಇಲ್ಲಿರಿಸಿ, ಸಂಸ್ಕೃತ, ಇಂಗ್ಲಿಷ್‌ಗೂ ಅನುವಾದಿ-ಸಿದ್ದರು. ದೇಶದಲ್ಲಿ ಅಲ್ಲಿಯವರೆಗೂ ಮೆಗಸ್ತನೀಸ್, ಬಾಣನ ಕೃತಿಗಳೇ ಪ್ರಾಚೀನವಾಗಿದ್ದವು.

ಶತಮಾನದ ಇತಿಹಾಸ: 1891ರಲ್ಲಿ 10ನೇ ಚಾಮರಾಜ ಒಡೆಯರ್ ಅವರು ಸಂಸ್ಥೆಯನ್ನು ಸ್ಥಾಪಿಸಿದರು. ಆಗ 'ಗವರ್ನಮೆಂಟ್ ಓರಿಯಂಟಲ್ ಲೈಬ್ರರಿ' ಎಂಬ ಹೆಸರಿತ್ತು. 1916ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟಿತು. ಶತಮಾನದಿಂದಲೂ ಸಂಶೋಧಕರಿಗೆ ನಿರಂತರ ಆಕರವನ್ನು ಒದಗಿಸುತ್ತಿದೆ.

ತತ್ವಶಾಸ್ತ್ರ, ಧರ್ಮ, ಸಾಹಿತ್ಯ, ಭಾಷಾ ವಿಜ್ಞಾನ, ಜ್ಯೋತಿಷ, ನ್ಯಾಯ, ವೇದಾಂತ, ಅಲಂಕಾರ ಶಾಸ್ತ್ರ, ಶಿಲ್ಪಶಾಸ್ತ್ರ, ಪುರಾಣಗಳು ಸೇರಿದಂತೆ ವಿವಿಧ ವಿಷಯಗಳಿಗೆ ಸೇರಿದ ಸಂಸ್ಕೃತ, ಕನ್ನಡ, ಪ್ರಾಕೃತ, ತಿಗಳಾರಿ ಸೇರಿದಂತೆ ಹಲವು ಭಾಷೆಗಳ ತಾಳೆ ಗರಿಗಳು ಇವೆ.

ಸಂರಕ್ಷಣೆ ಹೇಗೆ?: 'ಹಸ್ತಪ್ರತಿಗಳ ಕಟ್ಟುಗಳಲ್ಲಿರುವ ದೂಳನ್ನು ತೆಗೆದು, ಲೆಮನ್ ಗ್ರಾಸ್ ತೈಲ ಬಳಸಿ, ಫಂಗಸ್ ಅನ್ನು ತೆಗೆಯಲಾಗುತ್ತದೆ. 'ಸಿಜೂರ್ ಸ್ಕ್ಯಾನರ್'ನಲ್ಲಿ ಸ್ಕ್ಯಾನ್ ಮಾಡಿ ಹಸ್ತಪ್ರತಿಗಳನ್ನು ಡಿಜಿಟಲೀಕರಣ ಗೊಳಿಸಲಾಗುತ್ತಿದೆ. ಪಿಡಿಎಫ್, ಜೆಪಿಇಜಿ ಮಾದರಿ ಯಲ್ಲಿ ಸಂರಕ್ಷಿಸಲಾಗುತ್ತಿದೆ. ಸ್ಕ್ಯಾನ್ ಮಾಡಿದ ನಂತರ ಕೆಂಪುಬಟ್ಟೆಯಲ್ಲಿ ಮತ್ತೆ ಸುತ್ತಿಡಲಾಗುತ್ತಿದೆ. ಯಾವ ಸ್ವರೂಪದಲ್ಲಿ ಆಸಕ್ತರಿಗೆ ಬಳಕೆಗೆ ನೀಡಬೇಕು ಎಂಬುದು ಚರ್ಚೆಯ ಹಂತದಲ್ಲಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಡಿ.ಪಿ. ಮಧುಸೂದನಾಚಾರ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಹಸ್ತಪ್ರತಿಗಳ ಸ್ವಚ್ಛತಾ ಕಾರ್ಯ ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಗೃಹಜ್ಯೋತಿ: ಅರ್ಜಿ ಪರಿಶೀಲನೆಗೆ ಲಿಂಕ್

ಬೆಂಗಳೂರು: ಗೃಹಬಳಕೆಯ ವಿದ್ಯುತ್‌ಗೆ 200 ಯೂನಿಟ್‌ವರೆಗೆ ಉಚಿತವಾಗಿ ನೀಡುವ ಗೃಹಜ್ಯೋತಿ ಯೋಜನೆಗೆ ನೋಂದಣಿ ಮಾಡಿಕೊಂಡವರು ತಮ್ಮ ಅರ್ಜಿಯ ಸ್ಥಿತಿಗತಿ ಪರಿಶೀಲನೆಗಾಗಿ ಅಂತರ್ಜಾಲ ಲಿಂಕ್ ಅನ್ನು ಇಂಧನ ಇಲಾಖೆ ಬಿಡುಗಡೆ ಮಾಡಿದೆ.

ಜೂನ್ 18ರಿಂದ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದೆ. ಗ್ರಾಹಕರು ತಮ್ಮ ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ https://sevasindhu.karnataka.gov.in/StatucTrack/Track_Status ಮೂಲಕ ಪರಿಶೀಲಿಸಿಕೊಳ್ಳ-ಬಹುದು.

ವಿಧಾನಸೌಧದಲ್ಲಿ ಸಿಕ್ಕಿಬಿದ್ದ ತಿಪ್ಪೇರುದ್ರಪ್ಪ ವಕೀಲರ ಸಂಘದ ಹಿರಿಯ ಸದಸ್ಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸುತ್ತಿದ್ದ ಸಂದರ್ಭದಲ್ಲಿ ವಿಧಾನ-ಸೌಧದೊಳಗೆ ಪ್ರವೇಶಿಸಿ ಶಾಸಕಿಯೊಬ್ಬರ ಆಸನದಲ್ಲಿ ಕುಳಿತ ಕಾರಣಕ್ಕಾಗಿ ಪೊಲೀಸರ ವಶದಲ್ಲಿರುವ ತಿಪ್ಪೇರುದ್ರಪ್ಪ (76) ಚಿತ್ರದುರ್ಗ ವಕೀಲರ ಸಂಘದ ಹಿರಿಯ ಸದಸ್ಯ.

ಮೂಲತಃ ಕೆಳಗೋಟೆಯ ಇವರು ಜೆ.ಸಿ.ಆರ್ ಬಡಾವಣೆಯಲ್ಲಿ ನೆಲೆಸಿದ್ದಾರೆ. ಶಿಕ್ಷಕಿಯಾಗಿದ್ದ ಪತ್ನಿ ನಿವೃತ್ತರಾಗಿದ್ದಾರೆ. ಪುತ್ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.

ನ್ಯಾಯಾಲಯದಲ್ಲಿ ಶೀಘ್ರಲಿಪಿಕಾರ-ರಾಗಿ ಕೆಲಸ ಮಾಡುತ್ತಿದ್ದ ತಿಪ್ಪೇರುದ್ರಪ್ಪ, ಎರಡು ದಶಕಗಳ ಹಿಂದೆಯೇ ಸ್ವಯಂ ನಿವೃತ್ತಿ ಪಡೆದಿದ್ದರು. ಕಾನೂನು ಪದವಿ ಪಡೆದು ವಕೀಲರಾಗಿದ್ದರು. ವಯಸ್ಸಿನ ಕಾರಣಕ್ಕೆ ಇತ್ತೀಚೆಗೆ ಅವರ ಬಳಿ ಹೆಚ್ಚು ಪ್ರಕರಣಗಳು ಬರುತ್ತಿರಲಿಲ್ಲ. ನಿತ್ಯವೂ ನ್ಯಾಯಾಲಯಕ್ಕೆ ಹಾಜರಾಗಿ ಕಲಾಪದಲ್ಲಿ ಪಾಲ್ಗೊಳ್ಳುತ್ತಿದ್ದರು ಎಂದು ಮೂಲಗಳು ಮಾಹಿತಿ ನೀಡಿವೆ.

'ತಿಪ್ಪೇರುದ್ರಪ್ಪ ಉತ್ತಮ ವ್ಯಕ್ತಿಯಾಗಿದ್ದರು. ಎಲ್ಲರೊಂದಿಗೂ ಗೌರವಯುತವಾಗಿ ನಡೆದುಕೊಳ್ಳುತ್ತಿದ್ದರು. ಬಜೆಟ್ ಕಲಾಪ ವೀಕ್ಷಿಸಲು ಪಾಸ್ ಪಡೆದು ವಿಧಾನಸೌಧ ಪ್ರವೇಶಿಸಿದ್ದರು. ವೀಕ್ಷಕರ ಗ್ಯಾಲರಿಗೆ ತೆರಳುವ ಮಾರ್ಗ ತಿಳಿಯದೇ ಸಮಸ್ಯೆ ಉಂಟಾಗಿರುವ ಸಾಧ್ಯತೆ ಇದೆ. ಈ ಬಗ್ಗೆ ಕೂಲಂಕಷ ತನಿಖೆ ನಡೆಯಲಿ. ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಕಾರ್ಯವನ್ನು ಮಾಡಬಾರದು' ಎಂದು ವಕೀಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಶಿವು ಯಾದವ್ ತಿಳಿಸಿದ್ದಾರೆ.

'ಹೊರ ಗುತ್ತಿಗೆ ನೌಕರಿಯಲ್ಲೂ ಮೀಸಲು'

ಒಂದನೇ ಪುಟದಿಂದ

'ಉನ್ನತ ಶಿಕ್ಷಣದಲ್ಲಿ ಬದಲಾವಣೆ ಆಗಬೇಕಿದೆ. ಸಮಾಜದಲ್ಲಿ ಅಸಮಾ-ನತೆಯಿರುವ ಕಾರಣಕ್ಕೆ ಏಕರೂಪದ ಶಿಕ್ಷಣ ಜಾರಿ ಕಷ್ಟ. ಜತೆಗೆ, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಬಂದ್ ಮಾಡುವುದೂ ಅಷ್ಟು ಸುಲಭವಲ್ಲ. ಆದರೆ, ಸರ್ಕಾರಿ ಶಾಲೆಗಳಲ್ಲೇ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಲಾಗುವುದು. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಯುವಕರಲ್ಲಿ ಕೌಶಲಾಭಿವೃದ್ಧಿ ಆಗಬೇಕಿದೆ. ಕಂಪನಿಗಳ ಮುಖ್ಯಸ್ಥರ ಜತೆಗೆ ಚರ್ಚಿಸಲಾಗಿದೆ. ಇದಕ್ಕೆ ತಕ್ಕಂತೆ ಶಿಕ್ಷಣವನ್ನು ರೂಪಿಸಲಾಗುವುದು' ಎಂದರು.

'ರಾಜ್ಯದಲ್ಲಿರುವ ಸರ್ಕಾರಿ ಭೂಮಿ ಸಮೀಕ್ಷೆ ನಡೆಸುವಂತೆ ಸೂಚಿಸಲಾಗಿದೆ. ಅಗತ್ಯವಿರುವಷ್ಟು ಭೂಮಿ ಸಿಕ್ಕರೆ ಭೂರಹಿತರಿಗೆ ನೀಡಲು ಪ್ರಯತ್ನ ಮಾಡುತ್ತೇವೆ. ಶರಾವತಿ ಮುಳುಗಡೆ ಸಂತ್ರಸ್ತರಿಗೆ ಶಾಶ್ವತ ಪರಿಹಾರ ಒದಗಿ-ಸಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. 'ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ ಮತೀಯ ಗೂಂಡಾಗಿರಿಗೆ ಅವಕಾಶ ಇಲ್ಲ. ಕಾನೂನು ಉಲ್ಲಂಘಿಸಿ-ದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳ-ಲಾಗುವುದು' ಎಂದು ಎಚ್ಚರಿಸಿದರು.

'ಮೂರು ರಾಜ್ಯಗಳಲ್ಲಿ ಮಹಿಳಾ ಉದ್ಯೋಗಿಗಳು, ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡಲಾಗುತ್ತಿದೆ. ತಜ್ಞರ ಜತೆಗೆ ಚರ್ಚಿಸಿ ರಾಜ್ಯದಲ್ಲೂ ಆ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

'ಪ್ರಬುದ್ಧ ಕರ್ನಾಟಕ: ಜನಮನ ಸಮಾವೇಶ'ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಸಾಹಿತಿ ಜಿ.ರಾಮಕೃಷ್ಣ ಇದ್ದರು – ಪ್ರಜಾವಾಣಿ ಚಿತ್ರ

ಅಕಾಡೆಮಿ ನೇಮಕಕ್ಕೆ ಸಮಿತಿ

ಅಕಾಡೆಮಿ, ಪ್ರಾಧಿಕಾರಗಳಿಗೆ ನೇಮಕ ಮಾಡಲು ಆಯ್ಕೆ ಸಮಿತಿ ರಚಿಸಲಾಗುವುದು. ಮತಾಂಧ, ಸಮಾಜ ವಿಭಜಿಸುವ ಮನಸ್ಥಿತಿಯುಳ್ಳವರು ಅಕಾಡೆಮಿಗಳೊಳಗೆ ತೂರಿಕೊಳ್ಳದಂತೆ ಆಯ್ಕೆ ಸಮಿತಿಯು ಪರಿಶೀಲನೆ ನಡೆಸಲಿದೆ. ಆ ಬಳಿಕವೇ ನೇಮಕಾತಿ ನಡೆಯಲಿದೆ ಎಂದು ಮುಖ್ಯಮಂತ್ರಿ ಹೇಳಿದರು.

'ಪ್ರಧಾನಿಯವರೇ ರಾಜ್ಯ ದಿವಾಳಿ ಆಯಿತೇ?'

'ಗ್ಯಾರಂಟಿ ಯೋಜನೆಗಳು ಅನುಷ್ಠಾನಗೊಂಡರೆ ಕರ್ನಾಟಕ ದಿವಾಳಿಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದರು. ಜನ ಸಾಮಾನ್ಯರು, ಬಡವರಿಗೆ ಹೊರೆಯಿಲ್ಲದಂತೆ ಬಜೆಟ್‌ನಲ್ಲಿ ಗ್ಯಾರಂಟಿಗೆ ಹಣ ಹೊಂದಿಸಿದ್ದೇನೆ. ರಾಜ್ಯವು ಆರ್ಥಿಕವಾಗಿ ದಿವಾಳಿ ಆಗಿದೆಯೇ ಪ್ರಧಾನಿ ಅವರೇ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ಬಿಜೆಪಿಯವರು ರಾಜ್ಯದ ಆರ್ಥಿಕ ವ್ಯವಸ್ಥೆಯನ್ನೇ ಅಶಿಸ್ತಿಗೆ ದೂಡಿದ್ದಾರೆ. ಇಂತಹ ಸಂದರ್ಭದಲ್ಲಿ ಅಧಿಕಾರಕ್ಕೆ ಬಂದಿದ್ದೇವೆ. ಆದರೂ, ಐದು ಗ್ಯಾರಂಟಿ, ಪ್ರಣಾಳಿಕೆಯಲ್ಲಿನ 76 ಭರವಸೆಗಳಿಗೆ ಹಣ ಕ್ರೋಡೀಕರಿ ಸಲಾಗಿದೆ. ಸೋರಿಕೆ ತಡೆದು ಆದಾಯ ವೃದ್ಧಿ-ಸಲಾಗುತ್ತಿದೆ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Security & Detectives

ಬೇಕಾಗಿದ್ದಾರೆ ಭದ್ರತಾ ಸಿಬ್ಬಂದಿ (Security Guards) 3-10 ವರ್ಷ ಅನುಭವ ಇರುವವರಿಗೆ ಆದ್ಯತೆ. ಕೆಲಸದ ಸ್ಥಳ: ನಾಗರಭಾವಿ ಬೆಂಗಳೂರು ಕರೆ ಮಾಡಿ: 8123551048 / 8123051049

General

MASSAGE THERAPIST. Looking for mothers aged above 25 yrs to work as Ayurvedic after- delivery care therapists. Ladies who are willing to travel across Banglore can apply. Training will be provided by us. Salary 12000/ Month PrasoothiCare PVT LTD, Begur, Bangalore, Ph: +91-9739576606

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Situation Required

ಖಾಸಗಿ ಲಿಮಿಟೆಡ್ ಲೈಟಿಂಗ್ ಕಂಪನಿಯು ದ್ವಿಚಕ್ರ ವಾಹನ ಹೊಂದಿರುವ ಎಲೆಕ್ಟ್ರಿಷಿಯನ್‌ಗಾಗಿ ಹುಡುಕುತ್ತಿದೆ ಬೆಂಗಳೂರಿನಲ್ಲಿ 98450 54158 ಅನ್ನು ಸಂಪರ್ಕಿಸಿ

Wanted

ತಕ್ಷಣ ಬೇಕಾಗಿದ್ದಾರೆ: 7th, 8th, 10th, PUC, ITI ಡಿಪ್ಲೊಮ ಯಾವುದೇ ಪದವಿ ಪಾಸ್/ ಫೇಲ್, ಹುದ್ದೆಗೆ ನೇರ ನೇಮಕಾತಿ. ಕೂಡಲೇ ಸಂಪರ್ಕಿಸಿ: 8747949797, 8747909797

ಕ್ಲಾಸಿಫೈಡ್ಸ್ ADMISSION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | ESTD.: 1997 | COMEDK CODE: E149
BE: Bachelor of Engineering
❖ Computer Science
❖ Information Science
❖ Artificial Intelligence & Machine Learning
❖ Electronics & Communication
❖ Mechanical ❖ Civil
Ph.D Program
CSE | E&C | MECH
Maths | Chemistry
Physics
VKIT
College of Pharmacy
D.Pharm
B.Pharm
M.Pharm
CET B060
Institute of Management
BCA | BCA - Hons.
BBA | BBA - Hons.
MBA | M.Com
PGCET B-323
College of Law
5 Yrs : BA - LLB | B.Com - LLB
3 Yrs : LLB
2023-24 Admissions Open
95139 53482
Admission Center: Dr.Rajkumar Road, Next to Orion Mall, Rajajinagar II Stage, Bengaluru-560055
VKIT Campus: Kumbalagodu, Kengeri, Bengaluru-560074

Engg/ Production Technical

100% EOU Granite Factory Bangalore requires Mechanical & Electrical Maintenance Engineers,Fitters,Stores and other staff. kandoi@indiagranite.com

ವ್ಯಾಪಾರ

Business Offers

Finance

LOAN AGAINST PROPERTY/ BUSINESS/ PEOJECTS: +918754809650 babainvestments7@gmail.com

Business to Business

Business

COCONUT INDUSTRY looking for Area wise daily sales having goods van, auto reqd for Selling our coconut powder, oil, etc. All High Quality products, Send your agency details to guru char@yahoomail.com, mobile 9343210155

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

General

FOR RENT Mulki Karnad industrial area 1 acre land , Premium RCC built up Contact for Godown/ warehouse/ Factory 8779224183

Industrial & Factory

Bommasandra

FACTORY WITH 10 Acres & 5 Lakhs Sqft Shed, P&M, Vehicles for SALE. Bommasandra Indl Area, Bengaluru. CALL- 7899802070 or Email: sbpl.liquidator@gmail.com'

Sites

Whitefield

30X42 SITES for Sale in Premium Layout @ Varthur. Near Sub-Register Office, BBMP Limits. #6363777281

ಪ್ರವಾಸ

Travel

ಭಾರತಪರಂಪರ ದರ್ಶನ 25.7.2023 7ದಿನ ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನ ಚಾರ್ ಧಾಮ್ ಯಾತ್ರೆ. 11ದಿನ ಗುಜರಾತ್ 9448792891.

Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ದಕ್ಷಿಣ ಕನ್ನಡ, ಹಾಸನದಲ್ಲಿ ಮುಂಗಾರು ಬಿರುಸು • ಕೊಡಗು, ಉಡುಪಿಯಲ್ಲಿ ಕ್ಷೀಣ

ಕೆಆರ್‌ಎಸ್, ಹೇಮಾವತಿ ನೀರಿನಮಟ್ಟ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಶನಿವಾರ ಮಳೆ ಮತ್ತೆ ಬಿರುಸುಗೊಂಡಿದ್ದರೆ, ಕೊಡಗು ಮತ್ತು ಉಡುಪಿ ಜಿಲ್ಲೆಯಲ್ಲಿ ಮಳೆಯ ತೀವ್ರತೆ ಕಡಿಮೆಯಾಗಿದೆ. ಕೆಆರ್‌ಎಸ್ ಮತ್ತು ಹೇಮಾವತಿ ಜಲಾಶಯಗಳ ನೀರಿನಮಟ್ಟದಲ್ಲಿ ಏರಿಕೆಯಾಗಿದ್ದರೆ, ಹಾರಂಗಿ ಜಲಾಶಯದಲ್ಲಿ ನೀರಿನ ಮಟ್ಟ ತುಸು ತಗ್ಗಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಶನಿವಾರ ಸಂಜೆ ವೇಳೆಗೆ 83.35 ಅಡಿಗೆ ಏರಿದೆ. ಕಾವೇರಿ ಉಗಮ ಸ್ಥಾನದಲ್ಲಿ ಮಳೆ ಬೀಳುತ್ತಿರುವುದರಿಂದ ಕಳೆದ ಎರಡು ದಿನಗಳಿಂದ ಜಲಾಶಯಕ್ಕೆ ನೀರು ಹರಿದು ಬರುತ್ತಿದೆ. ಜಲಾಶಯದಲ್ಲಿ ಸದ್ಯ 13.40 ಟಿಎಂಸಿ ಅಡಿ ನೀರು ಸಂಗ್ರಹವಾಗಿದ್ದು, ನದಿಗೆ 359 ಕ್ಯೂಸೆಕ್ ಹರಿಸಲಾಗುತ್ತಿದೆ.

ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಹಾಸನ ಜಿಲ್ಲೆಯ ಹೇಮಾವತಿ ಜಲಾಶಯದ ಒಳಹರಿವು ಹೆಚ್ಚಾಗಿದೆ. ಶನಿವಾರ 7,080 ಕ್ಯುಸೆಕ್ ನೀರು ಹರಿದು ಬರುತ್ತಿದೆ. ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಮುಂಗಾರು ಮಳೆಯು ಬಿರುಸು ಪಡೆಯತೊಡಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ.

ಮಂಗಳೂರು ವರದಿ: ಉಡುಪಿ ಜಿಲ್ಲೆಯ ಹೆರೂರು ಹಾಗೂ ಮಜೂರಿನಲ್ಲಿ ಬಿರುಗಾಳಿ ಬೀಸಿ ದೇವಕಿ ಶೆಟ್ಟಿ ಎಂಬವರ ಮನೆಯ ಹಂಚುಗಳು ಹಾರಿಹೋಗಿದ್ದು ಮಾಡು ಕುಸಿದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದ ಸೇವಂತಿಗುಡ್ಡೆಯಲ್ಲಿ ಗುಡ್ಡ ಜರಿದು ಭಾರಿ ಗಾತ್ರದ ಕಲ್ಲು ಉರುಳಿ ಬಿದ್ದಿತ್ತು. ಬಳಿಕ ತೆರವು ಗೊಳಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯ ಹಳೇಗೇಟು ಬಳಿ ರಾಷ್ಟ್ರೀಯ ಹೆದ್ದಾರಿ 75ರ ಚತುಷ್ಪಥ ಕಾಮಗಾರಿ ಸಲುವಾಗಿ ನಿರ್ಮಿಸಿರುವ ಪರ್ಯಾಯ ರಸ್ತೆಯು ಭಾರಿ ಮಳೆಯಿಂದಾಗಿ ಹಳ್ಳದಂತಾಗಿದೆ

ಭಾರಿ ಮಳೆ ಕಾರಣ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾಡಳಿತವು ಮಂಗಳವಾರದಿಂದ ಶುಕ್ರವಾರದವರೆಗೆ ಶಾಲೆಗಳಿಗೆ ರಜೆ ನೀಡಿತ್ತು. ಶನಿವಾರ ಶಾಲೆಗಳು ಪುನರಾರಂಭಗೊಂಡವು.

ಮಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಪ್ರತಿಕೂಲ ಹವಾಮಾನ ಇದ್ದುದರಿಂದ ಶನಿವಾರ ಬೆಳಿಗ್ಗೆ ಎರಡು ವಿಮಾನಗಳು ಇಳಿಯುವುದು ತಡವಾಯಿತು. ‘ಆಗಸದಲ್ಲೇ ಕೆಲಹೊತ್ತು ಹಾರಾಟ ನಡೆಸಿ, ಬಳಿಕ ಇಳಿಸಲಾಯಿತು’ ಎಂದು ಮೂಲಗಳು ತಿಳಿಸಿವೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯಲ್ಲಿ ಶನಿವಾರ ಮಳೆಯ ಪ್ರಮಾಣ ತಗ್ಗಿದೆ. ಮಳೆಯಿಂದಾಗಿ ಇಲ್ಲಿನ ಸಿದ್ದಾಪುರ ಗ್ರಾಮ ಪಂಚಾಯಿತಿಯ ಬಾಪೂಜಿ ಸೇವಾ ಕೇಂದ್ರದ ಚಾವಣಿ ಕುಸಿದಿದೆ.

ಗುಹ್ಯ ಕರಡಿಗೋಡು, ಕೊಂಡಂಗೇರಿ ಭಾಗದಲ್ಲಿ ಕಾವೇರಿ ನದಿ ನೀರಿನಮಟ್ಟ ಏರಿಕೆಯಾಗಿದೆ. ವಿರಾಜಪೇಟೆ ತಹಶೀಲ್ದಾರ ರಾಮಚಂದ್ರ ಸ್ಥಳಕ್ಕೆ ತೆರಳಿ ಎಚ್ಚರಿಕೆಯಿಂದ ಇರುವಂತೆ ನದಿ ತೀರದ ನಿವಾಸಿಗಳಿಗೆ ಸೂಚನೆ ನೀಡಿದ್ದಾರೆ. ಕುಶಾಲನಗರ ತಾಲ್ಲೂಕಿನ ನೆಲ್ಯಹುದಿಕೇರಿ ಗ್ರಾಮದ ಕುಂಬಾರಗುಂಡಿ, ಬೆಟ್ಟದಕಾಡು, ಬರಡಿ ಭಾಗದಲ್ಲೂ ನೀರಿನಮಟ್ಟ ಹೆಚ್ಚಾಗಿದೆ.

ಗಾಳಿಯ ಅಬ್ಬರ ಹೆಚ್ಚಿದ್ದು, ಗೋಣಿಕೊಪ್ಪಲು- ಪಾಲಿಬೆಟ್ಟ ರಸ್ತೆ ಹಾಗೂ ಮಾಕುಟ್ಟ- ಪೆರಂಬಾಡಿ ರಸ್ತೆಗಳಲ್ಲಿ ಮರಗಳು ಧರೆಗುರುಳಿವೆ.

ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಇಲ್ಲಿನ ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿದ್ದ ನೀರಿನ ಪ್ರಮಾಣವೂ ಕಡಿಮೆಯಾಗಿದೆ. ಶುಕ್ರವಾರ 2,776 ಕ್ಯುಸೆಕ್ ಇದ್ದ ನೀರಿನ ಒಳಹರಿವು ಶನಿವಾರ 1,671 ಕ್ಯುಸೆಕ್‌ಗೆ ತಗ್ಗಿದೆ. 2,859 ಗರಿಷ್ಠ ಅಡಿಯ ಈ ಜಲಾಶಯದಲ್ಲಿ ಸದ್ಯ 2833.73 ಅಡಿಗಳು ಮಾತ್ರವೇ ನೀರಿದೆ.

ಬೆಂಗಳೂರು ವರದಿ: ರಾಜ್ಯದ ಕೆಲವು ಭಾಗದಲ್ಲಿ ಭಾನುವಾರ ಹಾಗೂ ಸೋಮವಾರ ಉತ್ತಮ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಜುಲೈ 9ರಂದು ಧಾರವಾಡ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು ಹಾಗೂ ಜುಲೈ 10ರಂದು ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಜೋರು ಮಳೆಯಾಗಲಿದೆ ಎಂದು ಸೂಚನೆ ನೀಡಿದೆ.

ಮೋಡ ಬಿತ್ತನೆ ಸದ್ಯಕ್ಕಿಲ್ಲ:ಸಚಿವ

ಕಾರವಾರ: ‘ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಮಳೆ ಸುರಿಯುತ್ತಿರುವುದರಿಂದ ಸದ್ಯಕ್ಕೆ ಮೋಡ ಬಿತ್ತನೆ ಮಾಡುವ ಪ್ರಶ್ನೆ ಇಲ್ಲ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.



ಕೃಷ್ಣ ಬೈರೇಗೌಡ

ಕುಮಟಾ ತಾಲ್ಲೂಕಿನ ಪೋಸ್ಟ್ ಬೆಟ್ಕುಳಿಯಲ್ಲಿ ಎರಡು ದಿನಗಳ ಹಿಂದೆ ಗದ್ದೆಯಲ್ಲಿ ತುಂಬಿದ್ದ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದ ಸತೀಶ ನಾಯ್ಕ ಮತ್ತು ಉಲ್ಲಾಸ ಗಾವಡಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಿ, ತಲಾ ₹5 ಲಕ್ಷ ಮೊತ್ತದ ಪರಿಹಾರ ಧನದ ಚೆಕ್ ವಿತರಿಸಿದ ಬಳಿಕ ಮಾಧ್ಯಮದವರ ಜತೆ ಅವರು ಮಾತನಾಡಿದರು.

‘ಜುಲೈ 15ರ ವರೆಗೆ ಕಾದು ನೋಡುತ್ತೇವೆ. ಬಳಿಕ ಕೇಂದ್ರದ ಮಾರ್ಗಸೂಚಿ ಆಧರಿಸಿ ಕ್ರಮ ವಹಿಸಲಾಗುತ್ತದೆ. ಹವಾಮಾನ ಇಲಾಖೆ ಜುಲೈನಲ್ಲಿ ಉತ್ತಮ ಮಳೆಯಾಗುವ ಸೂಚನೆ ನೀಡಿದೆ’ ಎಂದು ಅವರು ಹೇಳಿದರು.

ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆ ಅವಧಿಯ ಮಳೆ ಪ್ರಮಾಣ (ಸೆಂಟಿಮೀಟರ್‌ಗಳಲ್ಲಿ)	
ಪಡುವರಿ (ಉಡುಪಿ)	14.0
ಯಡ್ತರೆ (ಉಡುಪಿ)	13.2
ಬೆಳ್ತಂಗಡಿ (ದಕ್ಷಿಣ ಕನ್ನಡ)	12.90
ಬಾಳ (ದಕ್ಷಿಣ ಕನ್ನಡ)	11.30
ಮಂಡೆಕೋಲು (ದಕ್ಷಿಣ ಕನ್ನಡ)	10.45

ಉತ್ತರ ಭಾರತ: ಹಲವೆಡೆ ಮಳೆ

ರಾಜಸ್ಥಾನದಲ್ಲಿ 4 ಸಾವು • ದೆಹಲಿ: ಯೆಲ್ಲೊ ಅಲರ್ಟ್

ನವದೆಹಲಿ(ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿ, ರಾಜಸ್ಥಾನ, ಜಮ್ಮು-ಕಾಶ್ಮೀರ ಸೇರಿದಂತೆ ಉತ್ತರ ಭಾರತದ ಹಲವೆಡೆ ಶನಿವಾರ ಭಾರಿ ಮಳೆಯಾಗಿದೆ. ಮಳೆ ಸಂಬಂಧಿತ ಅವಘಡಗಳಿಂದಾಗಿ ರಾಜಸ್ಥಾನದಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ಹಿಮಾಚಲ ಪ್ರದೇಶ, ರಾಜಸ್ಥಾನ, ಜಮ್ಮು-ಕಾಶ್ಮೀರದಲ್ಲಿ ಭಾನುವಾರವೂ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಭಾರಿ ಪ್ರಮಾಣದಲ್ಲಿ ಮಳೆ ನೀರು ನಿಂತ ಕಾರಣ ದೆಹಲಿಯಲ್ಲಿ ಜನವಸತಿ ಹಾಗೂ ವಾಣಿಜ್ಯ ಪ್ರದೇಶಗಳಲ್ಲಿ ಭಾರಿ ತೊಂದರೆ ಉಂಟಾಯಿತು.

ದೆಹಲಿಯಲ್ಲಿ ಭಾನುವಾರ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಕಾಶ್ಮೀರದಲ್ಲಿ ಝೀಲಂ ಸೇರಿದಂತೆ ಅದರ ಉಪನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ನದಿಪಾತ್ರದ ಕೆಲವೆಡೆ ಪ್ರವಾಹ ಉಂಟಾಗುವ ಸಾಧ್ಯತೆ ಇದ್ದು, ಆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಳೆಯಿಂದಾಗಿ ಹಠಾತ್ ಪ್ರವಾಹ, ಭೂಕುಸಿತ ಸಂಭವಿಸುವ ಸಾಧ್ಯತೆ ಇರುವುದರಿಂದ ಜಲಾನಯನ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ ಎಂದು ಹವಾಮಾನ ಇಲಾಖೆಯು ತಿಳಿಸಿದೆ.

ಸಂಚಾರ ಬಂದ್: ಶುಕ್ರವಾರ ರಾತ್ರಿ ಸುರಿದ ಮಳೆಗೆ ಹಲವೆಡೆ ಭೂಕುಸಿತ ಉಂಟಾಗಿದ್ದರಿಂದ ಜಮ್ಮು- ಶ್ರೀನಗರದ ರಾಷ್ಟ್ರೀಯ ಹೆದ್ದಾರಿ ಮೊಘಲ್ ರಸ್ತೆಯಲ್ಲಿ ಶನಿವಾರ ಸಂಚಾರ ಬಂದ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬನಿಹಾಲ್ ಮತ್ತು ಖಾಜಿಗುಂಡ್ ನಿಲ್ದಾಣಗಳಲ್ಲಿ ರೈಲು ಸಂಚಾರವನ್ನೂ ಸಹ ದಿನದಮಟ್ಟಿಗೆ ಸ್ಥಗಿತಗೊಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ರಾಜಸ್ಥಾನದ ಚಿತ್ತೋರ್‌ಘಡದಲ್ಲಿ ಸಿಡಿಲು ಬಡಿದು ಇಬ್ಬರು ಸೇರಿದಂತೆ ಮಳೆಗೆ ಸಂಬಂಧಿಸಿದ ಅವಘಡಗಳಲ್ಲಿ ನಾಲ್ವರು ಮೃತಪಟ್ಟಿದ್ದಾರೆ ಎಂದು ಶನಿವಾರ ಪೊಲೀಸರು ತಿಳಿಸಿದ್ದಾರೆ.

ಭಾರಿ ಮಳೆ ಕಾರಣ ನವದೆಹಲಿಯ ದೇಶಬಂಧು ಕಾಲೇಜು ಕಟ್ಟಡ ಶನಿವಾರ ಕುಸಿದು ಬಿದ್ದು ವಾಹನಗಳು ಜಖಂಗೊಂಡಿವೆ –ಪಿಟಿಐ ಚಿತ್ರ

ಕೇರಳದಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಕೆಲ ಭಾಗಗಳಲ್ಲಿ ಶನಿವಾರ ಭಾರಿ ಮಳೆಯಾಗಿದ್ದು, ಹಲವೆಡೆ ಸಂಚಾರ ದಟ್ಟಣೆ ಉಂಟಾಗಿತ್ತು. ಕೆಲವು ತಗ್ಗುಪ್ರದೇಶಗಳು ಜಲಾವೃತವಾಗಿವೆ. ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ, ಕೇರಳದಲ್ಲಿ ಮಳೆಯಿಂದಾಗಿ ಇದುವರೆಗೆ 19 ಜನರು ಮೃತಪಟ್ಟಿದ್ದು, 10 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ.

ರಾಜ್ಯದಲ್ಲಿ ನಿರಂತರವಾಗಿ ಸುರಿಯುತ್ತಿದ್ದ ಮಳೆಯ ತೀವ್ರತೆ ಕಡಿಮೆಯಾಗಿದೆ. ಆದರೆ, ಕೋಯಿಕ್ಕೋಡ್, ವಯನಾಡು, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಿಗೆ ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಯಲ್ಲೊ ಅಲರ್ಟ್ ಘೋಷಿಸಿದೆ.

ಕೋಯಿಕ್ಕೋಡ್ ಮತ್ತು ಕಣ್ಣೂರು ಮತ್ತು ತಲಶ್ಶೇರಿ ಮಾರ್ಗದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮರಗಳು ಉರುಳಿಬಿದ್ದು ವಾಹನಗಳ ಸಂಚಾರಕ್ಕೆ ಕೆಲಕಾಲ ತೊಂದರೆಯಾಗಿತ್ತು. ಅಗ್ನಿಶಾಮಕ ಸಿಬ್ಬಂದಿ ಮಾರ್ಗವನ್ನು ತೆರವುಗೊಳಿಸಿದ ಬಳಿಕ ಸಂಚಾರ ದಟ್ಟಣೆ ಕಡಿಮೆಯಾಯಿತು. ಪತ್ತನಂತಿಟ್ಟ ಮತ್ತು ತಿರುವಲ್ಲಾ ಪ್ರದೇಶಗಳಲ್ಲಿ ರಸ್ತೆಗಳು ಜಲಾವೃತಗೊಂಡಿವೆ.

ಅಮರನಾಥ: ರಾಜ್ಯದ ಯಾತ್ರಿಕರಿಗೆ ಸಂಕಷ್ಟ

ಎಲ್ಲರೂ ಸುರಕ್ಷಿತ, ಕೆಲವೇ ದಿನಗಳಲ್ಲಿ ಊರಿಗೆ ಮರಳುವ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಗದಗ, ಕಲಬುರಗಿ: ಅಮರನಾಥ ಯಾತ್ರೆಗೆ ತೆರಳಿದ್ದ ಕಲಬುರಗಿಯ 27 ಜನರು ಮತ್ತು ಗದಗ ಜಿಲ್ಲೆಯ 23 ಮಂದಿ ಯಾತ್ರಿಕರು ಸುರಕ್ಷಿತವಾಗಿದ್ದಾರೆ. ಹವಾಮಾನ ವೈಪರೀತ್ಯದಿಂದಾಗಿ ಮಧ್ಯದಲ್ಲೇ ಉಳಿದುಕೊಂಡಿದ್ದು, ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರನ್ನು ಸುರಕ್ಷಿತವಾಗಿ ಕರೆತರುವಂತೆ ಕುಟುಂಬ ವರ್ಗದವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕಲಬುರಗಿಯಿಂದ ಅಮರನಾಥ ರಾಮತೀರ್ಥ ಸೇವಾ ಸಮಿತಿಯ ಮೂಲಕ ತೆರಳಿರುವ 22 ಜನರ ತಂಡವು ಜಮ್ಮು ಸಮೀಪದ ಬಾಲ್‌ತಾಲ್ ಶಿಬಿರದಲ್ಲಿ ಉಳಿದುಕೊಂಡಿದೆ. ಉಳಿದ ಐದು ಜನರ ತಂಡವು ಸೇನಾ ಶಿಬಿರದಲ್ಲಿ ಆಶ್ರಯ ಪಡೆದಿದೆ. ಮೂರು ದಿನಗಳ ಹಿಂದೆ ಇವರೆಲ್ಲ ಅಮರನಾಥ ಯಾತ್ರೆಗೆ ತೆರಳಿದ್ದರು. ಎಲ್ಲರೂ ಕಲಬುರಗಿ ನಗರದವರು. ಜುಲೈ 14ರಂದು ವಾಪಸಾಗಲಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎಂ. ರಾಚಪ್ಪ ತಿಳಿಸಿದ್ದಾರೆ.

ಗದಗದಿಂದ ಹೋಗಿರುವ ವಿನೋದ್ ಸಿ.ಪಟೇಲ್, ನೀತಾ ವಿ.ಪಟೇಲ್, ಚಂದೂಲಾಲ್ ಪಟೇಲ್, ಭಾವನಾ ಪಟೇಲ್, ತೇಜಲ್, ಶಾರದಾ, ಭೂಮಿಕಾ, ರಿತೇಶ್, ಪರ್ವಿನ್ ವಿ.ನಿರ್ಮಲ್, ಟೀನಾ ಪಿ. ನಿರ್ಮಲ್, ರಾಜೇಶ್ ಬಿ., ಪಾಲಕ್ ಆರ್., ವೈಶಾಲಿ ಬಿ., ಯಶ್ ಆರ್., ಪ್ರವೀಣ್ ಸಿ., ಪಿಂಕಿ ಪಿ., ಪ್ರಣೀತಾ ಪಿ., ವಿನಯ್ ಪಿ., ಜಾಹ್ನವಿ ವಿ., ಭವೇಶ್ ಬಿ., ತೃಪ್ತಿ ಬಿ., ದಿವಿತ್ ಬಿ., ಮಾಳವಿಕಾ ಆರ್. ಸಂಘಾನಿ ಅಮರನಾಥದಲ್ಲಿ ಸಿಲುಕಿಕೊಂಡವರು.

‘ಗುಜರಾತಿ ಸಮಾಜಕ್ಕೆ ಸೇರಿದ ನಾವೆಲ್ಲ ಒಟ್ಟಾಗಿ ಗದಗ ನಗರದಿಂದ ಜುಲೈ 4ರಂದು ಅಮರನಾಥ ಯಾತ್ರೆಗೆ ಬಂದಿದ್ದೆವು. ಹವಾಮಾನ ವೈಪರೀತ್ಯದ ಕಾರಣದಿಂದಾಗಿ ಮಧ್ಯದಲ್ಲೇ ಸಿಕ್ಕಿಹಾಕಿಕೊಂಡು, ಶಿಬಿರದಲ್ಲಿ ಕುಳಿತಿದ್ದೇವೆ. ಎಲ್ಲರೂ ಸುರಕ್ಷಿತವಾಗಿದ್ದೇವೆ. ಕೆಟ್ಟ ಹವಾಮಾನ ಇನ್ನೂ ಎರಡು ದಿನಗಳ ಕಾಲ ಹೀಗೆ ಇರಲಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ’ ಎಂದು ವಿನೋದ್ ಪಟೇಲ್ ‘ಪ್ರಜಾವಾಣಿ’ಗೆ ತಿಳಿಸಿದರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಮಾತನಾಡಿ, ‘ಆ ದಾರಿಯಲ್ಲಿ ಒಟ್ಟು 15 ಸಾವಿರ ಮಂದಿ ಯಾತ್ರಿಕರು ಇದ್ದಾರೆ. ಕನ್ನಡಿಗರು ಇರುವ ಕ್ಯಾಂಪ್‌ನಲ್ಲಿ 880 ಮಂದಿ ಇದ್ದಾರೆ. ಹವಾಮಾನ ಸರಿಯಿಲ್ಲ ಎಂಬ ಕಾರಣಕ್ಕೆ ಯಾತ್ರಿಕರನ್ನು ಮುಂದಕ್ಕೆ ಬಿಡುತ್ತಿಲ್ಲವಷ್ಟೇ, ಯಾತ್ರಿಕರೆಲ್ಲರೂ ಸುರಕ್ಷಿತವಾಗಿದ್ದಾರೆ. ಅಲ್ಲಿನ ಅಧಿಕಾರಿಗಳು ನಮ್ಮ ಜತೆಗೆ ಸಂಪರ್ಕದಲ್ಲಿದ್ದು, ಯಾತ್ರಿಕರ ಕಾಳಜಿಗೆ ಕ್ರಮವಹಿಸಿದ್ದಾರೆ. ಎರಡು ದಿನಗಳ ಬಳಿಕ ಯಾತ್ರಿಕರು ಸುರಕ್ಷಿತವಾಗಿ ಹಿಂತಿರುಗುವ ಭರವಸೆ ಇದೆ’ ಎಂದು ತಿಳಿಸಿದ್ದಾರೆ.

‘ಟೆಂಟ್‌ನಲ್ಲಿ ಸಿಲುಕಿರುವ ಯಾತ್ರಿಕರಿಗೆ ಬೇಕಿರುವ ಅಗತ್ಯ ಸೌಕರ್ಯಗಳನ್ನು ರಾಜ್ಯ ಸರ್ಕಾರದ ವತಿಯಿಂದ ಒದಗಿಸಲಾಗುತ್ತಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ತಿಳಿಸಿದ್ದಾರೆ.

ಅಮರನಾಥ ಮಂದಿರದಿಂದ ಆರು ಕಿ.ಮೀ. ದೂರದಲ್ಲಿರುವ ಪಂಚತಾರ್ನಿ ಟೆಂಟ್‌ನಲ್ಲಿ ಸಿಲುಕಿರುವ ಗದಗದ ಯಾತ್ರಿಕರು

> **ಅಮರನಾಥ ಯಾತ್ರೆಗೆ ತೆರಳಿ ಹವಾಮಾನ ವೈಪರೀತ್ಯದಿಂದ ಸಂಕಷ್ಟಕ್ಕೆ ಸಿಲುಕಿರುವ ಕನ್ನಡಿಗರ ರಕ್ಷಣೆಗೆ ಅಗತ್ಯ ರಕ್ಷಣಾ ಕಾರ್ಯ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

2ನೇ ದಿನವೂ ಯಾತ್ರೆ ಸ್ಥಗಿತ

ಶ್ರೀನಗರ: ಕಾಶ್ಮೀರದಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ, ಅಮರನಾಥ ಯಾತ್ರೆಯನ್ನು ಸತತ ಎರಡನೇ ದಿನವೂ (ಶನಿವಾರ) ಸ್ಥಗಿತಗೊಳಿಸಲಾಗಿದೆ. ಹಲವೆಡೆ ಭೂಕುಸಿತ ಉಂಟಾಗಿದ್ದರಿಂದ ಶ್ರೀನಗರ- ಜಮ್ಮು ರಾಷ್ಟ್ರೀಯ ಹೆದ್ದಾರಿಯನ್ನು ಬಂದ್ ಮಾಡಲಾಗಿದೆ.

‘ಪ್ರತಿಕೂಲ ಹವಾಮಾನದ ಕಾರಣದಿಂದಾಗಿ ಪಹಲ್ಗಾಮ್ ಮತ್ತು ಬಲ್‌ತಾಲ್ ಮಾರ್ಗಗಳಲ್ಲಿ ಎರಡನೇ ದಿನವೂ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಕ್ತರ ನೆರವಿಗೆ ಸಹಾಯವಾಣಿ ಆರಂಭ

ಬೆಂಗಳೂರು: ‘ಅಮರನಾಥ ಯಾತ್ರೆಗೆ ತೆರಳಿರುವ 1,000ಕ್ಕೂ ಹೆಚ್ಚು ಭಕ್ತರು ಹವಾಮಾನ ವೈಪರೀತ್ಯದಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಮಾಹಿತಿ ಲಭ್ಯವಾಗಿದೆ. ಈ ಪೈಕಿ 80ಕ್ಕೂ ಹೆಚ್ಚು ಮಂದಿ ಕರ್ನಾಟಕದವರು ಎಂದು ಪ್ರಾಥಮಿಕ ಮಾಹಿತಿ ಸಿಕ್ಕಿದೆ. ಅವರೆಲ್ಲರೂ ಅಮರನಾಥ ಮಂದಿರದಿಂದ ಆರು ಕಿ.ಮೀ ದೂರದಲ್ಲಿರುವ ಮಿಲಿಟರಿ ಕ್ಯಾಂಪ್ ಪಂಚತಾರ್ನಿ ಟೆಂಟ್‌ನಲ್ಲಿ ಆಶ್ರಯ ಪಡೆದಿದ್ದಾರೆ’ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಸುನೀಲ್‌ಕುಮಾರ್ ತಿಳಿಸಿದರು.

‘ಪ್ರಜಾವಾಣಿ’ ಜೊತೆ ಶನಿವಾರ ಸಂಜೆ ಮಾತನಾಡಿದ ಅವರು, ‘ಕನ್ನಡಿಗರು ಸಿಲುಕಿರುವ ಜಾಗಕ್ಕೆ ತಕ್ಷಣ ತೆರಳಿ ಎಲ್ಲರನ್ನೂ ಸುರಕ್ಷಿತವಾಗಿ ಕರೆದುಕೊಂಡು ಬರಲು ವ್ಯವಸ್ಥೆ ಮಾಡುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಅದರಂತೆ, ಭಾನುವಾರ ಬೆಳಿಗ್ಗೆ ಅಲ್ಲಿಗೆ ತೆರಳುತ್ತೇನೆ’ ಎಂದರು.

‘ನಮಗೆ ಶ್ರೀ ಅಮರನಾಥ ದೇವಸ್ಥಾನ ಮಂಡಳಿಯಿಂದ ಬಂದ ಮಾಹಿತಿ ಪ್ರಕಾರ ಬೇರೆ, ಬೇರೆ ರಾಜ್ಯದ ಅನೇಕ ಮಂದಿ ಅಲ್ಲಿ ಸಿಲುಕಿದ್ದಾರೆ. ಆದರೆ, ಎಲ್ಲರೂ ಸುರಕ್ಷಿತವಾಗಿದ್ದಾರೆ. ಮಂಡಳಿಯವರೇ ಎಲ್ಲ ಸುರಕ್ಷತಾ ವ್ಯವಸ್ಥೆಗಳನ್ನು ಮಾಡಿದ್ದಾರೆ. ಗದಗದಿಂದ ತೆರಳಿದ ಕೆಲವರು ತಮ್ಮ ಕುಟುಂಬ ಸದಸ್ಯರ ಜೊತೆ ಸಂಪರ್ಕ ಸಾಧಿಸಿದ್ದಾರೆ. ಆದರೆ, ಹವಾಮಾನ ವೈಪರೀತ್ಯದಿಂದಾಗಿ ಇಡೀ ಪ್ರದೇಶದಲ್ಲಿ ಕತ್ತಲು ಆವರಿಸಿದೆ. ಆದಷ್ಟು ಬೇಗ ಸ್ಥಳದಿಂದ ತೆರವುಗೊಳಿಸುವಂತೆ ಮನವಿ ಮಾಡುತ್ತಿದ್ದಾರೆ’ ಎಂದರು.

‘ಸಂಕಷ್ಟದಲ್ಲಿರುವವರ ನೆರವಿಗಾಗಿ ಸಹಾಯವಾಣಿಗಳನ್ನು ಆರಂಭಿಸಲಾಗಿದೆ. ಅಮರನಾಥ ದೇವಸ್ಥಾನ ಮಂಡಳಿಯ ಸಹಾಯವಾಣಿ– 14464, 18001807198 (ಟ್ರೋಲ್ ಫ್ರೀ) ಅಥವಾ ಪಂಚತಾರ್ನಿ ಬೇಸ್ ಕ್ಯಾಂಪ್‌ನ ಸಹಾಯವಾಣಿ– 9906037370, 9414121477, 9419123373, ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರದ ಸಹಾಯವಾಣಿ– 1070, 080–22253707, 080–22340676 ಗೆ ಸಂಪರ್ಕಿಸಬಹುದು’ ಎಂದೂ ಅವರು ತಿಳಿಸಿದರು.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಂ. ಶಿಮನಪಾಶಿ:ಕಾವಿ–1:ಟೆಂಡರ್:06/2023–24 ದಿನಾಂಕ: 06.07.2023

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಏಕ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.eproc.karnataka.gov.inನಲ್ಲಿ ಪಡೆದುಕೊಳ್ಳಬಹುದು.

1. ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
2. ಕಾಮಗಾರಿ ಪೂರೈಸುವ ಅವಧಿ: ಕ್ರಸಂ: 1, 2 & 10 - 02 ತಿಂಗಳು, ಕ್ರ.ಸಂ : 2, 3, 4, 5, 6, 12, 13 - 03 ತಿಂಗಳು ಉಳಿದ ಕಾಮಗಾರಿಗಳಿಗೆ 04 ತಿಂಗಳುಗಳು.
3. ಗುತ್ತಿಗೆದಾರರ ದರ್ಜೆ: ಕ್ರಸಂ: 1, 2 & 10 Class IV and above, ಉಳಿದ ಕಾಮಗಾರಿಗಳಿಗೆ Class III and above
4. ಅನುದಾನ :2023–24ನೇ ಸಾಲಿನ ಮಹಾನಗರ ಪಾಲಿಕೆ ಸಾಮಾನ್ಯ ನಿಧಿ ಅನುದಾನ

ಕ್ರ. ಸಂ	ಇಂಡೆಂಟ್ ಸಂಖ್ಯೆ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಮೀಸಲಾತಿ	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	493	ಶಿವಮೊಗ್ಗ ನಗರದ ವಾರ್ಡ್ ನಂ.18ರ ವಿನೋಬನಗರ ಕೆ.ಎಸ್.ಎಸ್.ಐ.ಡಿ.ಸಿ ರಸ್ತೆಗಳಲ್ಲಿರುವ ಯು.ಜಿ.ಡಿ ಛೇಂಬರ್ ಗಳನ್ನು ಎತ್ತರಿಸಿ ದುರಸ್ಥಿ ಪಡಿಸುವ ಕಾಮಗಾರಿ	7.40	9250.00	ಪರಿಶಿಷ್ಟ ಜಾತಿ	14.07.2023 (ಸಂಜೆ 4.00 ಗಂಟೆಗೆ)	15.07.2023 (ಸಂಜೆ 4.30 ಗಂಟೆಗೆ)
2	495	ಶಿವಮೊಗ್ಗ ನಗರದ ವಾರ್ಡ್ ನಂ.06ರಲ್ಲಿನ ಸ್ವಾಮಿ ವಿವೇಕಾನಂದ ಬಡಾವಣೆಯ 'ಎ' ಬ್ಲಾಕ್ ನಲ್ಲಿ ಹೊಸದಾಗಿ ಒಳಚರಂಡಿ ಕೊಳಾಯಿ ಮಾರ್ಗವನ್ನು ಅಳವಡಿಸುವ ಕಾಮಗಾರಿ	9.90	12400.00	ಪರಿಶಿಷ್ಟ ಜಾತಿ		
3	75	i) ಶಿವಮೊಗ್ಗ ನಗರದ ವಾರ್ಡ್ ನಂ.05ರ ಸಿದ್ದೇಶ್ವರ ನಗರದ ಸಿದ್ದೇಶ್ವರ ಉದ್ಯಾನವನ ಅಭಿವೃದ್ಧಿ ಕಾಮಗಾರಿ. 2) ಶಿವಮೊಗ್ಗ ನಗರದ ವಾರ್ಡ್ ನಂ.34ರ ವಿದ್ಯಾನಗರ ಜನರಲ್ ಹಾಸ್ಟೆಲ್ ಹಿಂಭಾಗ ಬಾಕ್ಸ್ ಡೆಕ್ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ. 3) ಶಿವಮೊಗ್ಗ ನಗರದ ವಾರ್ಡ್ ನಂ.05ರ ಗುರುಪುರ ಚಾನಲ್ ಗೆ ಸೋಪನ ಕಟ್ಟೆ ನಿರ್ಮಾಣ ಕಾಮಗಾರಿ, 4) ಶಿವಮೊಗ್ಗ ನಗರದ ವಾರ್ಡ್ ನಂ.04ರ ಅಂಬೇಡ್ಕರ್ ಕಾಲೋನಿಯ ಮುಖ್ಯ ರಸ್ತೆವರೆಗೂ ಡೆಕ್ ಸ್ಲ್ಯಾಬ್ ಮತ್ತು ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ	40.00	80000.00	ಇತರೆ	20.07.2023 (ಸಂಜೆ 4.00 ಗಂಟೆಗೆ)	21.07.2023 (ಸಂಜೆ 4.30 ಗಂಟೆಗೆ)
4	1098	1) ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.34 ವ್ಯಾಪ್ತಿಯ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿ ಕಛೇರಿಯಿಂದ ಕಂಟ್ರಿಕ್ಲಬ್ ವರೆಗೆ ರಸ್ತೆ ಅಭಿವೃದ್ಧಿ, 2) ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.5ರಲ್ಲಿ ಬರುವ ಸಿದ್ದೇಶ್ವರ ಬಡಾವಣೆಯ ಸಿದ್ದೇಶ್ವರ ಪಾರ್ಕ್ ಅಭಿವೃದ್ಧಿ ಪಡಿಸುವುದು 3) ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯ ಅಶ್ವತ್ ನಗರದಲ್ಲಿರುವ ಸ್ವಾಮಿ ವಿವೇಕಾನಂದ ಪಾರ್ಕ್ ಅಭಿವೃದ್ಧಿ ಕಾಮಗಾರಿ	50.00	100000.00	ಇತರೆ		
5	1068	2) ಶಿವಮೊಗ್ಗ ನಗರ ವಾರ್ಡ್ ನಂ.34 ವಿದ್ಯಾನಗರ ಬಲಭಾಗ ಪ್ರಿಯಾಂಕ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ, 2) ಶಿವಮೊಗ್ಗ ನಗರ ವಾರ್ಡ್ ನಂ.01ರ ಖಾಜಿ ಬಡಾವಣೆಯ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆಗಳ ಸಿ.ಸಿ ರಸ್ತೆ ಕಾಮಗಾರಿ. 3) ವಾರ್ಡ್ ನಂ.31ರ ನಿಂಗಪ್ಪ ಬಡಾವಣೆಯ ಸಿಸಿ ರಸ್ತೆಯ ಮುಂದುವರೆದ ಕಾಮಗಾರಿ	50.00	100000.00	ಇತರೆ		
6	697	ವಾರ್ಡ್ ನಂ.15ರ ವಿದ್ಯಾನಗರ 2ನೇ ಕ್ರಾಸ್ ಕನ್ಸರ್ವೆನ್ಸಿ ಅಭಿವೃದ್ಧಿ ಕಾಮಗಾರಿ, ವಿದ್ಯಾನಗರ ಟಿ.ವಿ ಟವರ್ ಪಕ್ಕದ ರಸ್ತೆಗೆ ಸಿ.ಸಿ ರಸ್ತೆ ನಿರ್ಮಾಣ, ಹರಿಗೆ ಚಿಲಾಕಾದ್ರಿಹಳ್ಳಿ ಶಾಲೆಗೆ ಬಯಲು ರಂಗಮಂದಿರ ನಿರ್ಮಾಣ ಹಾಗೂ ಇಂಟರ್ ಲಾಕಿಂಗ್ ಪೇವರ್ ಅಳವಡಿಸಿ ಸುಣ್ಣ ಬಣ್ಣ ಬಳಿಯುವುದು, ಹರಿಗೆ 1ನೇ ಮತ್ತು 2ನೇ ಕ್ರಾಸ್ ಮಧ್ಯಭಾಗದಲ್ಲಿರುವ ಕನ್ಸರ್ವೆನ್ಸಿ ಅಭಿವೃದ್ಧಿ ಕಾಮಗಾರಿ, ವಿದ್ಯಾನಗರ 1ನೇ ಮುಖ್ಯ ರಸ್ತೆ 2ನೇ ಅಡ್ಡ ರಸ್ತೆಯಲ್ಲಿ ಗರಡಿ ಮನೆಯ ಮುಂದುವರೆದ ಅಭಿವೃದ್ಧಿ ಕಾಮಗಾರಿ	50.00	100000.00	ಇತರೆ		
7	916	ಶಿವಮೊಗ್ಗ ನಗರದ ವಾರ್ಡ್ ನಂ.10ರ ಹನುಮಂತನಗರದಲ್ಲಿ ಸಮುದಾಯ ಭವನ ನಿರ್ಮಾಣ ಗಣಪತಿ ದೇವಸ್ಥಾನದ ಪಕ್ಕದ ಪಾರ್ಕ್ ಅಭಿವೃದ್ಧಿ	50.00	100000.00	ಇತರೆ		
8	1087	ವಾರ್ಡ್ ನಂ.02ರ ವ್ಯಾಪ್ತಿಯಲ್ಲಿ ಬರುವ ಅಶ್ವಥ್ ನಗರದಲ್ಲಿರುವ ಯೋಗ ಭವನ ಕಟ್ಟಡದ ಅಭಿವೃದ್ಧಿ ಕಾಮಗಾರಿ ಮತ್ತು ನೇಮತ್ ಲೇಔಟ್ ನಲ್ಲಿರುವ ಶಿವಾಲಯ ಹಿಂಭಾಗದ ಪಾರ್ಕ್ ಅಭಿವೃದ್ಧಿ ಕಾಮಗಾರಿ	50.00	50000.00	ಪರಿಶಿಷ್ಟ ಜಾತಿ		
9	78	ವಾರ್ಡ್ ನಂ.19ರ ಶರಾವತಿ ನಗರ 'ಎ' ಬ್ಲಾಕ್ 6ನೇ ತಿರುವಿನಲ್ಲಿರುವ ವಾಚನಾಲಯ ಕಟ್ಟಡದ ಮುಂದುವರೆದ ಕಾಮಗಾರಿ, ಶರಾವತಿ ನಗರ ಸ್ಮಶಾನದ ಪಕ್ಕದಲ್ಲಿರುವ ಲೈಬ್ರರಿ ಹತ್ತಿರದ ಸಮುದಾಯ ಭವನದ ಮುಂದುವರೆದ ಕಾಮಗಾರಿ, ಶರಾವತಿ ನಗರ ಲೈಬ್ರರಿ ಪಕ್ಕದ ರಸ್ತೆ ಅಭಿವೃದ್ಧಿ ಕಾಮಗಾರಿ	50.00	100000.00	ಇತರೆ		
10	1189	ವಾರ್ಡ್ ನಂ.12ರ ಬಿ ಹೆಚ್ ರಸ್ತೆಯ ಡಿ.ಡಿ.ಪಿ.ಐ ಕಛೇರಿ ಹತ್ತಿರವಿರುವ ಇಂದಿರಾ ಕ್ಯಾಂಟೀನ್ ದುರಸ್ಥಿ ಕಾಮಗಾರಿ	8.35	10500.00	ಪರಿಶಿಷ್ಟ ಪಂಗಡ	14.07.2023 (ಸಂಜೆ 4.00 ಗಂಟೆಗೆ)	15.07.2023 (ಸಂಜೆ 4.30 ಗಂಟೆಗೆ)
11	897	ವಾರ್ಡ್ ನಂ.18ರ ವ್ಯಾಪ್ತಿಯ ವಿನೋಬನಗರದ ಶುಭಮಂಗಳ ಕಲ್ಯಾಣ ಮಂಟಪದ ಎದುರು ರಸ್ತೆಯಲ್ಲಿ ಪಾಲಿಕೆಯ ಆಸ್ತಿ ಸಂಖ್ಯೆ 1527/5272 ನಿ.ನಂ–1389/0 ರಲ್ಲಿರುವ ಸಭಾಭವನ ಕಟ್ಟಡ ಕಾಮಗಾರಿ (ಪಿಐಡಿ ಸಂಖ್ಯೆ: 59279)	50.00	100000.00	ಇತರೆ	20.07.2023 (ಸಂಜೆ 4.00 ಗಂಟೆಗೆ)	21.07.2023 (ಸಂಜೆ 4.30 ಗಂಟೆಗೆ)
12	60/CAL 1.2	1) ವಾರ್ಡ್ ನಂ.16ರ ಮಲವಗೊಪ್ಪದ ಬಲಭಾಗ 2ನೇ ತಿರುವು ರಸ್ತೆ ಅಭಿವೃದ್ಧಿ ಕಾಮಗಾರಿ, 2) ವಾರ್ಡ್ ನಂ.16ರ ವಡ್ಡಿನಕೊಪ್ಪ ಗ್ರಾಮದ ಎನ್.ಆರ್.ಪುರ ರಸ್ತೆಯಿಂದ ಸ್ಮಶಾನಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ, 3) ವಾರ್ಡ್ ನಂ.15ರ ಹರಿಗೆ ಒಪ್ಪತ್ತುಸ್ವಾಮಿ ಮಠದ ಸುತ್ತ ರಸ್ತೆ ಅಭಿವೃದ್ಧಿ ಕಾಮಗಾರಿ, 4) ವಾರ್ಡ್ ನಂ.35ರ ಸೂಳೇಬೈಲಿನ ಬೈಪಾಸ್ ರಸ್ತೆಯಿಂದ ಸಪಾ ಮರ್ವಾ ಲೇಔಟ್ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು ವಾರ್ಡ್ ನಂ.35ರ ಸೂಳೆಬೈಲಿನ ಕುಂಚಿಟಿಗರ ಬೀದಿ ಮಲ್ಲೇಶ್ವರ ದೇವಸ್ಥಾನದ ಕಾಂಪೌಂಡ್ ಕಾಮಗಾರಿ, 5) ಶಿವಮೊಗ್ಗ ನಗರದ ಎಲ್.ಬಿ.ಎಸ್ ನಗರ (2 ನೇ ವಾರ್ಡ್) ಪಾರ್ಕ್ ಅಭಿವೃದ್ಧಿ ಮುಂದುವರೆದ ಕಾಮಗಾರಿ,	50.00	100000.00	ಇತರೆ		
13	39/CAL 1.2	1) ವಾರ್ಡ್ ನಂ.11ರ ವ್ಯಾಪ್ತಿಯಲ್ಲಿ ಬರುವ ಎ.ಎ ಕಾಲೋನಿ, ಟ್ಯಾಂಕ್ ಮೊಹಲ್ಲಾ 1 ಮತ್ತು 2ನೇ ಕ್ರಾಸ್ ನಲ್ಲಿ ಪೇವರ್ ಅಳವಡಿಸುವ ಕಾಮಗಾರಿ, 2) ವಾರ್ಡ್ ನಂ.11ರ ವ್ಯಾಪ್ತಿಯಲ್ಲಿ ಬರುವ ಅಮೀರ್ ಅಹಮ್ಮದ್ ಕಾಲೋನಿ ಮತ್ತು ಬಸವನಗುಡಿಯಲ್ಲಿ ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿ. 3) ವಾರ್ಡ್ ನಂ.11ರ ಬೋವಿ ಸಮುದಾಯ ಭವನದಲ್ಲಿ ಶೆಲ್ಟರ್ ಕಾಮಗಾರಿ, 4) ವಾರ್ಡ್ ನಂ.11ರ ವ್ಯಾಪ್ತಿಯಲ್ಲಿ ಶಿವಮೂರ್ತಿ ವೃತ್ತದಲ್ಲಿ ಆಟೊ ಶೆಲ್ಟರ್ ನಿರ್ಮಾಣ ಕಾಮಗಾರಿ, 5) ವಾರ್ಡ್ ನಂ.11ರ ವ್ಯಾಪ್ತಿಯಲ್ಲಿ ಬರುವ ಟ್ಯಾಂಕ್ ಮೊಹಲ್ಲಾ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಆಟಿಕೆ ಉಪಕರಣ ಅಳವಡಿಸುವ ಕಾಮಗಾರಿ, 6) ವಾರ್ಡ್ ನಂ.11ರ ವ್ಯಾಪ್ತಿಯಲ್ಲಿ ಬರುವ ಚೌಡೇಶ್ವರಿ ದೇವಸ್ಥಾನ ಎ.ಎ ಕಾಲೋನಿ ಹತ್ತಿರ ಮಹಿಳಾ ಕೌಶಲ್ಯ ಅಭಿವೃದ್ಧಿ ಕೇಂದ್ರ ನಿರ್ಮಾಣ ಕಾಮಗಾರಿ, 7) ವಾರ್ಡ್ ನಂ.11ರಲ್ಲಿ ಬರುವ ಸರ್ವಜ್ಞ ವೃತ್ತದ ಹತ್ತಿರ ಶೆಲ್ಟರ್ ನಿರ್ಮಾಣ ಕಾಮಗಾರಿ	50.00	100000.00	ಇತರೆ		

ಸೂಚನೆ: ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಇ–ಪೋರ್ಟಲ್ ಮುಖಾಂತರ ಸೂಚಿಸಲಾಗುವುದು

ಸಹಿ/–

ಕಾರ್ಯಪಾಲಕ ಅಭಿಯಂತರರು ವಿಭಾಗ–1, ಮಹಾನಗರ ಪಾಲಿಕೆ, ಶಿವಮೊಗ್ಗ

ವಾ.ಸಾ.ಸಂ.ಇ/ಶಿ/ನಂ:32-07/ಝೇಂಕಾರ್/2023-24

ಹಂಪಿಗೆ ಹೊಸರೂಪ-ಲಕ ಲಕ ಎನ್ನುತ್ತಿವೆ ರಸ್ತೆಗಳು

ಹಂಪಿಯಲ್ಲಿ ಜಿ20 ಸಭೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಪಾರಂಪರಿಕ ತಾಣ ಹಂಪಿಯಲ್ಲಿ ಭಾನುವಾರದಿಂದ ಜಿ20 ರಾಷ್ಟ್ರಗಳ 3ನೇ ಕಲ್ಚರಲ್ ವರ್ಕಿಂಗ್ ಗ್ರೂಪ್ ಸಭೆ ಆರಂಭವಾಗಲಿದ್ದು, 32 ದೇಶಗಳ 52 ಪ್ರತಿನಿಧಿಗಳು ಹಾಗೂ 200ಕ್ಕೂ ಅಧಿಕ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಕಲ್ಚರಲ್ ವರ್ಕಿಂಗ್ ಗ್ರೂಪ್ ಸಭೆ 12ರಂದು ಕೊನೆಗೊಳ್ಳಲಿದ್ದು, 13ರಿಂದ 3ನೇ ಶೆರ್ಪಾ ಸಭೆ ಆರಂಭವಾಗಲಿದೆ. 16ರಂದು ಸಭೆ ಕೊನೆಗೊಳ್ಳಲಿದೆ.

ಹಂಪಿ ಸಮೀಪದ ಕಮಲಾಪುರದ ಆರೆಂಜ್ ಕೌಂಟಿಯಲ್ಲಿ (ಇವಾಲ್ವ್ ಬ್ಯಾಕ್) ಶೃಂಗಸಭೆ ನಡೆಯಲಿದೆ. ಈ ಎರಡೂ ಸಭೆಗಳು ದೆಹಲಿಯಲ್ಲಿ ಕೊನೆಯದಾಗಿ ನಡೆಯುವ ಜಿ20 ಸಭೆಯ ಪೂರ್ವಭಾವಿ ಸಭೆಗಳಾಗಿರುವುದರಿಂದ ಇಲ್ಲಿ ಹಲವು ಮಹತ್ವದ ಚರ್ಚೆಗಳು ನಡೆಯುವ ನಿರೀಕ್ಷೆ ಇದೆ.

ಸಭೆಯಲ್ಲಿ ಜಿ20 ರಾಷ್ಟ್ರಗಳ ಪೈಕಿ 19 ದೇಶಗಳ 30 ಮಂದಿ ಪ್ರತಿನಿಧಿಗಳು, ಒಂಬತ್ತು ಆಹ್ವಾನಿತ ದೇಶಗಳ 16 ಪ್ರತಿನಿಧಿಗಳು ಹಾಗೂ ನಾಲ್ಕು ಅಂತರರಾಷ್ಟ್ರೀಯ ಸಂಘಟನೆಗಳ ಆರು ಮಂದಿ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

‘ಭಾನುವಾರ ತೋರಣಗಲ್ ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ಕಲ್ಚರಲ್ ವರ್ಕಿಂಗ್ ಗುಂಪಿನ ವಿದೇಶಿ ಗಣ್ಯರು ಬಳಿಕ ಆರೆಂಜ್ ಕೌಂಟಿಗೆ ಬರಲಿದ್ದಾರೆ. ಸೋಮವಾರ ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ನಿರಂತರ ಸಭೆಗಳು ಅಲ್ಲಿ ನಡೆಯಲಿವೆ. ಸಂಜೆ ಹಂಪಿಯ ಎದುರುಬಸವಣ್ಣ ಸಮೀಪ ಗಣ್ಯರಿಗೆ ಒಂದು ಸಾಂಸ್ಕೃತಿಕ ಪ್ರದರ್ಶನ ನಡೆಯಲಿದ್ದು, ಸ್ಥಳೀಯ ಭೋಜನದ ವ್ಯವಸ್ಥೆ ಮಾಡಲಾಗಿದೆ. ಶೆರ್ಪಾ ಸಭೆಯಲ್ಲಿ ಪಾಲ್ಗೊಳ್ಳುವ ವಿದೇಶಿ ಗಣ್ಯರು 13ರಂದು ಬರಲಿದ್ದು, 14ರಂದು ವಿಜಯ ವಿಠ್ಠಲ ದೇವಸ್ಥಾನದ ಬಳಿ ಸಂಜೆ ಸ್ಥಳೀಯ ಭೋಜನ ಸವಿಯಲಿದ್ದಾರೆ’ ಎಂದು ಜಿಲ್ಲಾಧಿಕಾರಿ ವೆಂಕಟೇಶ್ ಟಿ. ತಿಳಿಸಿದ್ದಾರೆ.

‘ಇದೇ 10 ಮತ್ತು 14ರಂದು ಮಾತ್ರ ವಿದೇಶಿ ಗಣ್ಯರು ಹಂಪಿಯ ಕೆಲವು ಸ್ಮಾರಕಗಳನ್ನು ನೋಡಲಿದ್ದು, ಅವರು ಭೇಟಿ ನೀಡುವುದಕ್ಕೆ ಕೇವಲ ಎರಡು ಗಂಟೆ ಮೊದಲು ಇತರ ಪ್ರವಾಸಿಗರಿಗೆ ನಿರ್ಬಂಧ ವಿಧಿಸಲಾಗುವುದು. ಉಳಿದಂತೆ ಪ್ರವಾಸಿಗರಿಗೆ ಹಂಪಿಗೆ ಬರುವುದಕ್ಕೆ ಯಾವುದೇ ನಿರ್ಬಂಧ ಇಲ್ಲ’ ಎಂದು ಅವರು ಹೇಳಿದ್ದಾರೆ.

ಹಂಪಿಯ ವಿರೂಪಾಕ್ಷ ದೇವಸ್ಥಾನ ಮುಂಭಾಗದ ರಥಬೀದಿಗೆ ಡಾಂಬರು ಹಾಕಲಾಗಿದೆ –ಪ್ರಜಾವಾಣಿ ಚಿತ್ರ

ಹಂಪಿಗೆ ಹೊಸ ಮೆರುಗು

ಜಿ20 ಶೃಂಗಸಭೆಗಾಗಿ ಹಂಪಿಯು ಈ ಹಿಂದೆ ಕಂಡು, ಕೇಳರಿಯದ ಮಾದರಿಯಲ್ಲಿ ತನ್ನ ಚಹರೆ ಬದಲಿಸಿಕೊಂಡಿದೆ. ವಿರೂಪಾಕ್ಷ ದೇವಸ್ಥಾನದಿಂದ ಪೊಲೀಸ್ ಠಾಣೆವರೆಗೆ ಡಾಂಬರು ಹಾಕಲಾಗಿದೆ. ಸುತ್ತಮುತ್ತ ಸ್ವಚ್ಛಗೊಳಿಸಲಾಗಿದೆ. ಮತ್ತೊಂದೆಡೆ ವಿಜಯ ವಿಠ್ಠಲ ದೇವಸ್ಥಾನದ ಬಳಿ ಸಹ ಸುಸಜ್ಜಿತ ಮಣ್ಣಿನ ರಸ್ತೆ ನಿರ್ಮಿಸಲಾಗಿದ್ದು, ಹಲವು ಕಡೆಗಳಲ್ಲಿ ಮರಗಿಡಗಳ ಟೊಂಗೆ ಕತ್ತರಿಸಿದ್ದರಿಂದ ಸ್ಮಾರಕಗಳು ದೂರಕ್ಕೆ ಕಾಣಿಸುತ್ತಿವೆ.

ಪಶ್ಚಿಮ ಬಂಗಾಳ ಪಂಚಾಯಿತಿ ಚುನಾವಣೆ • ರಾಜಕೀಯ ಪಕ್ಷಗಳಿಂದ ಪರಸ್ಪರ ಆರೋಪ

ಮತಗಟ್ಟೆಗಳಲ್ಲಿ ದಾಂದಲೆ, ಮತಪತ್ರಕ್ಕೆ ಬೆಂಕಿ

ಕೋಲ್ಕತ್ತ (ಪಿಟಿಐ): ಮತಗಟ್ಟೆ ಗಳಲ್ಲಿ ದಾಂದಲೆ, ಮತಪಟ್ಟಿಗೆ ಹಾಗೂ ಮತಪತ್ರಗಳಿಗೆ ಬೆಂಕಿ, ನಕಲಿ ಮತದಾನಕ್ಕೆ ಅವ್ಯಾಹತವಾಗಿ ನಡೆದ ಯತ್ನ, ಕೇಂದ್ರ ಮೀಸಲು ಪಡೆಗಳ ತ್ವರಿತ ನಿಯೋಜನೆಗೆ ಆಗ್ರಹಪಡಿಸಿ ವಿಷದ ಬಾಟಲಿ ಹಿಡಿದು ಅಧಿಕಾರಿಗಳಿಗೆ ಮಹಿಳೆಯರ ಘೇರಾವ್...

ಪಶ್ಚಿಮ ಬಂಗಾಳದ ವಿವಿಧ ಪಂಚಾಯಿತಿಗಳ ಒಟ್ಟು 73,887 ಸ್ಥಾನಗಳಿಗೆ ಚುನಾವಣೆ ಹಿನ್ನೆಲೆಯಲ್ಲಿ ಶನಿವಾರ ವಿವಿಧ ಮತಗಟ್ಟೆಗಳ ವ್ಯಾಪ್ತಿಯಲ್ಲಿ ನಡೆದ ಹಿಂಸಾಚಾರ ಕೃತ್ಯಗಳ ಸ್ಥೂಲನೋಟ ಇದು.

12 ಜನರನ್ನು ಬಲಿಪಡೆದ, ಹಲವು ಗಾಯಗೊಂಡಿರುವ ಈ ಹಿಂಸಾಕೃತ್ಯಗಳಿಗೆ ಸಂಬಂಧಿಸಿ ಆಡಳಿತ ಪಕ್ಷ ತೃಣಮೂಲ ಕಾಂಗ್ರೆಸ್, ಬಿಜೆಪಿ ಮತ್ತು ಸಿಪಿಎಂ ಪಕ್ಷಗಳು ಪರಸ್ಪರರ ವಿರುದ್ಧ ಆರೋಪದಲ್ಲಿ ತೊಡಗಿವೆ.

ಕಾನೂನು ಸುವ್ಯವಸ್ಥೆ ಕುರಿತ ಪ್ರತ್ಯಕ್ಷದರ್ಶಿ ಮಾಹಿತಿ ಪಡೆಯಲು ವಿವಿಧ ಸ್ಥಳಗಳಿಗೆ ಭೇಟಿ ನೀಡಿದ್ದ ರಾಜ್ಯಪಾಲರಾದ ಸಿ.ವಿ.ಆನಂದ ಬೋಸ್ ಅವರು, 'ಇದು, ಪ್ರಜಾಪ್ರಭುತ್ವದ ಅತ್ಯಂತ ಪವಿತ್ರ ದಿನ. ಇಂಥ ಕೃತ್ಯಗಳ ನಡುವೆಯೂ ಜನ ಹಕ್ಕು ಚಲಾಯಿಸಬೇಕು' ಎಂದು ಹೇಳಿದರು.

'ದೂರು ಹೇಳಿಕೊಳ್ಳಲು ಜನರು ನನ್ನನ್ನು ಅಲ್ಲಲ್ಲಿ ಅಡ್ಡಗಟ್ಟಿದ್ದರು. ನಮ್ಮ ಸುತ್ತಲೇ ಕೊಲೆಗಳು ನಡೆಯುತ್ತಿವೆ ಎಂದು ದೂರಿದ್ದಾರೆ. ಮತಗಟ್ಟೆಗೆ ಹೋಗಲು ಅವಕಾಶ ನೀಡುತ್ತಿಲ್ಲ ಎಂದು ತಿಳಿಸಿದ್ದಾರೆ. ಮತಗಟ್ಟೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದೂ ಹೇಳಿದ್ದಾರೆ. ಇವು ಅಲ್ಲಲ್ಲಿ ನಡೆದಿರುವ ಘಟನೆಗಳು. ಆದರೆ, ರಕ್ತಪಾತದ ಕೃತ್ಯಗಳು ನಡೆದಿದಿರುವುದು ಕಳವಳ ಉಂಟು ಮಾಡುತ್ತಿವೆ' ಎಂದು ರಾಜ್ಯಪಾಲರು ಪ್ರತಿಕ್ರಿಯಿಸಿದರು.

ದಾಂದಲೆ, ಬೆಂಕಿ: ಕೂಚ್ ಬೆಹಾರ್ ಜಿಲ್ಲೆಯ ದಿನ್ಹಾಟಾದ ಸರ್ಕಾರಿ ಶಾಲೆಯ ಮತಗಟ್ಟೆಯಲ್ಲಿ ದಾಂದಲೆ ನಡೆದಿದ್ದು, ಮತಪಟ್ಟಿಗೆಗಳನ್ನು ನಾಶಪಡಿಸಿ, ಮತಪತ್ರಗಳಿಗೆ ಬೆಂಕಿ ಹಾಕಲಾಗಿದೆ. ಬರ್ನಚಿನಾದಲ್ಲಿ ನಕಲಿ ಮತದಾನದ ಆರೋಪ ಮಾಡಿ, ಬೆಂಕಿ ಹಚ್ಚಲಾಗಿದೆ.

ಮತಗಟ್ಟೆ ಬಳಿಯ ಹಿಂಸೆಯಿಂದ ನಲುಗಿದ ಮಹಿಳೆಯರು ಕೇಂದ್ರ ಮೀಸಲು ಪಡೆ ಸಿಬ್ಬಂದಿಯನ್ನು ನಿಯೋಜಿಸಲು ಒತ್ತಾಯಿಸಿ ನಂದಿಗ್ರಾಮದಲ್ಲಿ ವಿಷದ ಬಾಟಲಿ ಹಿಡಿದು ಅಧಿಕಾರಿಗಳಿಗೆ ಘೇರಾವ್ ಹಾಕಿದ್ದಾರೆ. ಇದೇ ಬೇಡಿಕೆಗೆ ಸಂಬಂಧಿಸಿ ವಿವಿಧೆಡೆ ಪ್ರತಿಭಟನೆಗಳು ನಡೆದಿವೆ.

ರಾಜ್ಯಪಾಲರು ಉತ್ತರ 24 ಪರಗಣ, ದಕ್ಷಿಣ 24 ಪರಗಣ ಜಿಲ್ಲೆಗಳು ಸೇರಿ ವಿವಿಧೆಡೆ ಭೇಟಿ ನೀಡಿದ್ದು, ಸಂತ್ರಸ್ತರನ್ನು ಭೇಟಿಯಾಗಿ ಘಟನೆಗಳ ಮಾಹಿತಿಯನ್ನು ಪಡೆದಿದ್ದಾರೆ.

ಚುನಾವಣೆ ಅಸಿಂಧು ಘೋಷಣೆಗೆ ಆಗ್ರಹ: ಈ ಮಧ್ಯೆ, ಕಾಂಗ್ರೆಸ್ ಮುಖಂಡ ಕೌಸ್ತವ್ ಬಾಗ್ಚಿ ಅವರು ಕಲ್ಕತ್ತ ಹೈಕೋರ್ಟ್ ಮೊರೆ ಹೋಗಿದ್ದು, ಚುನಾವಣೆಯನ್ನು ಅಸಿಂಧು ಎಂದು ಘೋಷಿಸಲು ಆಗ್ರಹಪಡಿಸಿದ್ದಾರೆ. ಅರ್ಜಿಯ ತುರ್ತು ವಿಚಾರಣೆಗೂ ಮನವಿ ಮಾಡಿದ್ದಾರೆ.

ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಭಿನ್ನ ಪಕ್ಷಗಳ ಕಾರ್ಯಕರ್ತರು ಶನಿವಾರ ಪಂಚಾಯಿತಿ ಚುನಾವಣೆ ವೇಳೆ ಘರ್ಷಣೆಯಲ್ಲಿ ತೊಡಗಿರುವುದು —ಪಿಟಿಐ ಚಿತ್ರ

ಇದು ಬ್ಯಾಲೆಟ್ಸ್, ಬುಲೆಟ್ಸ್ ಹೋರಾಟ: ರಾಜ್ಯಪಾಲ

ಕೋಲ್ಕತ್ತ (ಪಿಟಿಐ): ರಾಜ್ಯಪಾಲ ಡಾ.ಸಿ.ವಿ.ಆನಂದ ಬೋಸ್ ಅವರು ಹಿಂಸಾಕೃತ್ಯಗಳು ನಡೆದ ವಿವಿಧ ಸ್ಥಳಗಳಿಗೆ ಖುದ್ದು ಭೇಟಿ ನೀಡಿದ್ದು, ಪರಿಸ್ಥಿತಿಯನ್ನು ಅವಲೋಕಿಸಿದರು. ಬಾಂಬ್ ಸ್ಫೋಟ ಕೃತ್ಯದಲ್ಲಿ ಗಾಯಗೊಂಡಿದ್ದ ವ್ಯಕ್ತಿಯನ್ನು ಭೇಟಿ ಮಾಡಿ ಘಟನೆಯ ವಿವರ ಪಡೆದರು.

ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಪಂಚಾಯಿತಿ ಚುನಾವಣೆ ಬ್ಯಾಲಟ್ಸ್ (ಮತಪತ್ರ) ಮತ್ತು ಬುಲೆಟ್ ನಡುವಣ ಹೋರಾಟವಾಗಿದೆ' ಎಂದು ಬಣ್ಣಿಸಿದರು. ನಾನು ಪರಿಸ್ಥಿತಿಯನ್ನು ಅವಲೋಕಿಸಿದ್ದು, ಸೂಕ್ತ ಕ್ರಮ ಕೈಗೊಳ್ಳುತ್ತೇನೆ' ಎಂದು ಪ್ರತಿಕ್ರಿಯಿಸಿದರು.

ಚುನಾವಣೆ ದಿನ ರಾಜ್ಯಪಾಲರ ಪಾತ್ರ ಕುರಿತ ಪ್ರಶ್ನೆಗೆ, 'ಸಾರ್ವಜನಿಕ ಹಿತಾಸಕ್ತಿ ರಕ್ಷಣೆಯಾಗುತ್ತಿದೆ ಹಾಗೂ ಪ್ರತಿಯೊಬ್ಬರು ಸಂವಿಧಾನವನ್ನು ಪಾಲಿಸುತ್ತಿದ್ದಾರೆ ಎಂಬುದನ್ನು ಖಾತರಿಪಡಿಸಿಕೊಳ್ಳುತ್ತಿದ್ದೇನೆ' ಎಂದರು.

'ಜನರು ಮುಕ್ತವಾಗಿ ಬಂದು ಮತ ಚಲಾಯಿಸಬೇಕು. ಮತದಾನದ ದಿನದಂದು ನಾನು ಕೂಡಾ ನನ್ನ ತಂಡದ ಜೊತೆಗೆ ಗಸ್ತು ಮಾಡುತ್ತೇನೆ' ಎಂದು ಅವರು ಶುಕ್ರವಾರವೇ ಭರವಸೆ ನೀಡಿದ್ದರು. ಗಸ್ತುವೇಳೆ ಶನಿವಾರ ಕಮರ್‌ಹಟಿಯಲ್ಲಿ ಅಧಿಕಾರಿಗಳ ಸಭೆ ನಡೆಸಿ ವಿವರವನ್ನು ಪಡದರು.

ನಾಡಿಯಾ ಜಿಲ್ಲೆಗೆ ತೆರಳುವಾಗ ಕಲ್ಯಾಣಿ ಹೆದ್ದಾರಿಯಲ್ಲಿ ರಾಜ್ಯಪಾಲರನ್ನು ಅಡ್ಡಗಟ್ಟಿದ ಬಿಜೆಪಿ ಮತ್ತು ಸಿಪಿಐಎಂ ಬೆಂಬಲಿಗರು, 'ಮತಗಳನ್ನು ಲೂಟಿ ಮಾಡಲಾಗುತ್ತಿದೆ. ಇದನ್ನು ತಡೆಯಬೇಕು' ಎಂದು ಒತ್ತಾಯಿಸಿದರು.

ವಿವಿಧೆಡೆ ಗುಂಪು ಘರ್ಷಣೆ, ಸಾವು

ಕೋಲ್ಕತ್ತ (ಪಿಟಿಐ): ಕೂಚ್‌ಬೆಹಾರ್ ಜಿಲ್ಲೆಯ ಫಲಿಮರಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬಿಜೆಪಿ ಕಾರ್ಯಕರ್ತ ಮದಾಬ್ ಬಿಸ್ವಾಸ್ ಮೃತಪಟ್ಟಿದ್ದಾರೆ. ಮತಗಟ್ಟೆ ಪ್ರವೇಶಿಸದಂತೆ ತಡೆದ ಟಿಎಂಸಿ ಬೆಂಬಲಿಗರು ಹಲ್ಲೆ ಮಾಡಿದರು ಎನ್ನಲಾಗಿದೆ. ಟಿಎಂಸಿ ಈ ಆರೋಪವನ್ನು ನಿರಾಕರಿಸಿದೆ.

ಉತ್ತರ 24 ಪರಗಣ ಜಿಲ್ಲೆಯ ಕದಂಬಗಾಚಿಯಲ್ಲಿ ಪಕ್ಷೇತರ ಅಭ್ಯರ್ಥಿಯ ಬೆಂಬಲಿಗ ಅಬ್ದುಲ್ಲಾ ಅಲಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಕರಗ್ರಾಮ್‌ನಲ್ಲಿ ಟಿಎಂಸಿ ಕಾರ್ಯಕರ್ತ, ತುಫಗಾನಿ ಪಂಚಾಯಿತಿ ಸಮಿತಿ ವ್ಯಾಪ್ತಿಯಲ್ಲಿ ಟಿಎಂಸಿ ಕಾರ್ಯಕರ್ತ, ಮಾಲ್ಡಾ ಜಿಲ್ಲೆಯಲ್ಲಿ ಟಿಎಂಸಿ ನಾಯಕನ ಸಹೋದರ ಮಾಲೇಕ್ ಶೇಖ್ ಹರಿನ್‌ಘಾಟಾದಲ್ಲಿ ಐಎಸ್‌ಎಫ್ ಕಾರ್ಯಕರ್ತನೊಬ್ಬ ಮೃತಪಟ್ಟಿದ್ದಾರೆ.

ಹರಿನ್‌ಘಾಟಾದಲ್ಲಿ ನಡೆದ ಗುಂಪು ಘರ್ಷಣೆಯಲ್ಲಿ ಐಎಸ್‌ಎಫ್ ಕಾರ್ಯಕರ್ತ, 48 ವರ್ಷದ ಸೈದುಲ್ ಶೇಖ್ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ. ಟಿಎಂಸಿ ಕಾರ್ಯಕರ್ತರ ಹಲ್ಲೆಯಿಂದ ಶೇಖ್ ಮೃತಪಟ್ಟರು ಎಂದು ಕುಟುಂಬದ ಸದಸ್ಯರು ಆರೋಪಿಸಿದ್ದಾರೆ.

ಆದರೆ, ಟಿಎಂಸಿ ನಾಡಿಯಾ ಘಟಕದ ಅಧ್ಯಕ್ಷ ದೇಬಶೀಶ್ ಗಂಗೂಲಿ ಇದನ್ನು ನಿರಾಕರಿಸಿದ್ದಾರೆ. 'ಐಎಸ್‌ಎಫ್ ಬೆಂಬಲಿಗರು ಟಿಎಂಸಿ ಕಾರ್ಯಕರ್ತರ ಮೇಲೆ ಕಚ್ಚಾ ಬಾಂಬ್ ಪ್ರಯೋಗಿಸಿದರು. ಒಂದು ಬಾಂಬ್ ಕೈತಪ್ಪಿ ಬಿದ್ದು ಸ್ಫೋಟಿಸಿ ಶೇಖ್ ಮೃತಪಟ್ಟರು' ಎಂದಿದ್ದಾರೆ.

ಅಂತೆಯೇ ದಕ್ಷಿಣ 24 ಪರಗಣ ಜಿಲ್ಲೆಯ ಬಸಂತಿಯಲ್ಲಿ 38 ವರ್ಷದ ವ್ಯಕ್ತಿ, ಮುರ್ಷಿದಾಬಾದ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತ ಯಾಸ್ಮಿನ್ ಗುಂಪು ಘರ್ಷಣೆಯಲ್ಲಿ ಮೃತಪಟ್ಟರೆ, ಪೂರ್ವ ವರ್ಧಮಾನ್ ಜಿಲ್ಲೆಯ ಔಷ್‌ಗ್ರಾಮ್ 2ನೇ ಬ್ಲಾಕ್‌ನಲ್ಲಿ ಟಿಎಂಸಿ ಕಾರ್ಯಕರ್ತರೊಬ್ಬರು ಗಾಯಗೊಂಡರು.

> 13-14 ಜಿಲ್ಲೆಗಳಲ್ಲಿ ಮತದಾನ ಸುಗಮವಾಗಿ ನಡೆದಿದೆ. ಕೇವಲ 60 ಮತಗಟ್ಟೆಗಳಲ್ಲಿ ಅಂದರೆ ಶೇ 0.00097ರಷ್ಟು ಮತಗಟ್ಟೆಗಳಲ್ಲಷ್ಟೇ ಹಿಂಸಾಚಾರಗಳು ನಡೆದಿವೆ. ಇದರ ಹಿಂದೆಯೂ ಪ್ರತಿಪಕ್ಷಗಳ ಕೈವಾಡವಿದೆ
>
> **ತೃಣಮೂಲ ಕಾಂಗ್ರೆಸ್ ಪಕ್ಷ**

ಸುದ್ದಿ 2 ನಿಮಿಷ

'ಯುಸಿಸಿ ಜಾರಿ ಸುಲಭವಲ್ಲ'

ಶ್ರೀನಗರ (ಪಿಟಿಐ): 'ಏಕರೂಪ ನಾಗರಿಕ ಸಂಹಿತೆ (ಯುಸಿಸಿ)ಯನ್ನು ಜಾರಿಗೊಳಿಸುವುದು 370ನೇ ವಿಧಿಯನ್ನು ರದ್ದುಪಡಿಸಿದಷ್ಟು ಸುಲಭವಲ್ಲ' ಎಂದು ಪ್ರಜಾಸತ್ತಾತ್ಮಕ ಪ್ರಗತಿಪರ ಆಜಾದ್ ಪಕ್ಷದ ಗುಲಾಂ ನಬಿ ಆಜಾದ್ ಶನಿವಾರ ಎಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯುಸಿಸಿ ಎಲ್ಲ ಧರ್ಮಗಳ ಮೇಲೂ ಪರಿಣಾಮ ಬೀರುತ್ತದೆ' ಎಂದು ಹೇಳಿದರು.

'ಏಕರೂಪ ನಾಗರಿಕ ಸಂಹಿತೆ ಜಾರಿಯಿಂದ ಮುಸ್ಲಿಮರಿಗೆ ಮಾತ್ರವಲ್ಲ, ಕ್ರೈಸ್ತರು, ಸಿಖ್ಖರು, ಬುಡಕಟ್ಟು ಜನರು, ಜೈನರು, ಪಾರ್ಸಿ ಸಮುದಾಯದವರಿಗೂ ತೊಂದರೆಯಾಗುತ್ತದೆ. ಒಂದೇ ಬಾರಿಗೆ ಇಷ್ಟೊಂದು ಸಮುದಾಯಗಳಿಗೆ ಕಿರುಕುಳ ಕೊಡುವುದರಿಂದ ಯಾವುದೇ ಸರ್ಕಾರಕ್ಕೆ ಒಳ್ಳೆಯದಾಗುವುದಿಲ್ಲ. ಆದ್ದರಿಂದ ಈ ಸಂಹಿತೆಯನ್ನು ಜಾರಿ ಮಾಡಬಾರದು ಎಂಬುದು ಸರ್ಕಾರಕ್ಕೆ ನನ್ನ ಸಲಹೆ' ಎಂದು ತಿಳಿಸಿದರು.

ಭತ್ತ ನಾಟಿ ಮಾಡಿದ ರಾಹುಲ್

ಚಂಡೀಗಢ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹರಿಯಾಣದ ಸೋನಿಪತ್ ಜಿಲ್ಲೆಯ ಮದಿನಾ ಗ್ರಾಮಕ್ಕೆ ಶನಿವಾರ ದಿಢೀರ್ ಭೇಟಿ ನೀಡಿ ಅಲ್ಲಿಯ ಜನರೊಂದಿಗೆ ಸಂವಾದ ನಡೆಸಿದ್ದು, ಕೃಷಿ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ರೈತರೊಂದಿಗೆ ಸಮಯ ಕಳೆದಿದ್ದಾರೆ.

ರಾಹುಲ್ ಅವರು ಭತ್ತ ನಾಟಿ ಮಾಡಿದ್ದಾರೆ. ಜೊತೆಗೆ ಟ್ರ್ಯಾಕ್ಟರ್‌ಅನ್ನೂ ಚಲಾಯಿಸಿದ್ದಾರೆ ಎಂದು ಪಕ್ಷದ ಹಿರಿಯ ನಾಯಕ ಜಗ್ಬೀರ್ ಸಿಂಗ್ ಮಲಿಕ್ ತಿಳಿಸಿದ್ದಾರೆ.

ರಾಹುಲ್ ಅವರು ಭತ್ತದ ಪೈರುಗಳನ್ನು ನಾಟಿ ಮಾಡುತ್ತಿರುವ ಚಿತ್ರಗಳನ್ನು ಕಾಂಗ್ರೆಸ್ ತನ್ನ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದೆ.

ಪಶ್ಚಿಮ ಬಂಗಾಳ: ಹಿಂಸೆಗೆ 12 ಬಲಿ

ಒಂದನೇ ಪುಟದಿಂದ

ರಾಜ್ಯಪಾಲ ಡಾ.ಸಿ.ವಿ.ಆನಂದ ಬೋಸ್ ಅವರು, ಒಟ್ಟಾರೆ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದು, ಬಾಂಬ್ ಸ್ಫೋಟ ಘಟನೆ ನಡೆದಿದ್ದ ಉತ್ತರ 24 ಪರಗಣ ಜಿಲ್ಲೆ ಸೇರಿ ವಿವಿಧೆಡೆಗೆ ಭೇಟಿ ನೀಡಿದ್ದು, ಪರಿಸ್ಥಿತಿಯ ಕುರಿತು ಪ್ರತ್ಯಕ್ಷದರ್ಶಿಗಳಿಂದ ವಿವರ ಪಡೆದಿದ್ದಾರೆ.

ಬಿಗಿ ಭದ್ರತೆಯಲ್ಲಿ ಮತದಾನ: ವಿವಿಧ ಜಿಲ್ಲೆಗಳಲ್ಲಿ ಮೂರು ಹಂತದ ಸ್ಥಳೀಯ ಪಂಚಾಯಿತಿಗಳಿಗೆ ಹಿಂಸಾಕೃತ್ಯಗಳ ನಡುವೆಯೇ ಬಿಗಿ ಭದ್ರತೆಯಲ್ಲಿ ಶನಿವಾರ ಮತದಾನ ನಡೆಯಿತು. ಒಟ್ಟು 73,887 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, 2.06 ಲಕ್ಷ ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಪ್ರಾಬಲ್ಯ ಪ್ರದರ್ಶನಕ್ಕೆ ವೇದಿಕೆ: 2024ರ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷಗಳಿಗೆ ಪ್ರಾಬಲ್ಯ ಸಾಬೀತುಪಡಿಸಲು, ಮತದಾರರ ನಾಡಿಮಿಡಿತ ಅರಿಯಲು ಇದು ವೇದಿಕೆ ಎಂದು ಭಾವಿಸಿರುವ ಕಾರಣ ಪಂಚಾಯಿತಿ ಚುನಾವಣೆಯು ಮಹತ್ವ ಪಡದುಕೊಂಡಿದೆ. ರಾಜ್ಯದಲ್ಲಿ ಮೂರನೇ ಅವಧಿಗೆ ಟಿಎಂಸಿ ಪಕ್ಷವು ಅಧಿಕಾರದ ಚುಕ್ಕಾಣಿಯನ್ನು ಹಿಡಿದ ಎರಡು ವರ್ಷಗಳ ತರುವಾಯ ಈ ಚುನಾವಣೆ ನಡೆದಿದೆ.

ಆಡಳಿತಪಕ್ಷ ತೃಣಮೂಲ ಕಾಂಗ್ರೆಸ್, ಬಿಜೆಪಿ, ಸಿಪಿಎಂ ಪಕ್ಷಗಳು ಪ್ರಮುಖವಾಗಿ ಕಣದಲ್ಲಿದ್ದು, ಅಸ್ತಿತ್ವ ಸಾಬೀತಿಗೆ ಚುನಾವಣೆಯನ್ನು ಸವಾಲಾಗಿ ಪರಿಗಣಿಸಿವೆ. ರಾಜ್ಯದ 70 ಸಾವಿರ ಪೊಲೀಸರಲ್ಲದೆ, ಕೇಂದ್ರ ಮೀಸಲು ಪಡೆಯ 600 ತುಕಡಿಗಳನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ರಾಜಸ್ಥಾನದ ಬಿಕಾನೇರ್‌ನಲ್ಲಿ ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರಿದ್ದ ಕಾರು ಸೈಕಲ್ ಪಟುಗಳ ಗುಂಪಿನ ಜೊತೆ ಸಾಗಿತು —ಪಿಟಿಐ ಚಿತ್ರ

ಉದ್ರಿಕ್ತ ಗುಂಪಿನಿಂದ ವಾಹನಗಳಿಗೆ ಬೆಂಕಿ

ಮಣಿಪುರ: ಪೊಲೀಸರಿಂದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಲು ಯತ್ನ • ಭದ್ರತಾ ಪಡೆಗಳ ನಿಯೋಜನೆ

ಇಂಫಾಲ್ (ಪಿಟಿಐ): ಸಂಘರ್ಷಪೀಡಿತ ಮಣಿಪುರದಲ್ಲಿ ಹಿಂಸಾಚಾರ ಮುಂದುವರಿದಿದ್ದು, 150–200 ಜನರಿದ್ದ ಗುಂಪೊಂದು ಇಲ್ಲಿನ ಕಂಗ್ಲಾ ಕೋಟೆ ಸಮೀಪ ಎರಡು ವಾಹನಗಳಿಗೆ ಶುಕ್ರವಾರ ರಾತ್ರಿ ಬೆಂಕಿ ಹಚ್ಚಿದೆ ಮತ್ತು ಪೊಲೀಸರಿಂದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಲು ಯತ್ನಿಸಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಗಲಭೆ ತೀವ್ರವಾಗುತ್ತಿದ್ದಂತೆಯೇ ಭದ್ರತಾಪಡೆಗಳು ಉದ್ರಿಕ್ತ ಗುಂಪಿನೆಡೆಗೆ ಗುಂಡು ಹಾರಿಸಿವೆ. ಬಳಿಕ ಗುಂಪು ಚದುರಿದೆ. ಘಟನೆಯಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ ಎಂದು ತಿಳಿಸಿವೆ.

ಘಟನೆ ಬೆನ್ನಲ್ಲೇ ಹಿಂಸಾಚಾರ ತಡೆಗೆ ಸೇನೆ ಮತ್ತು ಅಸ್ಸಾಂ ರೈಫಲ್ಸ್ ಪಡೆಗಳನ್ನು ಸೊಂಗ್ದೊ ಗ್ರಾಮದಲ್ಲಿ ನಿಯೋಜಿಸಲಾಗಿದೆ. ವಿಷ್ಣುಪುರ ಮಾರುಕಟ್ಟೆ ಪ್ರದೇಶದಲ್ಲಿ ಗಡಿ ಭದ್ರತಾ ಪಡೆಯನ್ನು ನಿಯೋಜಿಸಲಾಗಿದೆ ಎಂದೂ ತಿಳಿಸಿವೆ.

100–200 ಜನರಿದ್ದ ಮತ್ತೊಂದು ಗುಂಪು ಹಿಂಸಾಚಾರ ನಡೆಸುವ ಉದ್ದೇಶದಿಂದಲೇ ಇಲ್ಲಿನ ಅರಮನೆ ಕಾಂಪೌಂಡ್ ಸಮೀಪ ಸೇರಿತ್ತು. ಸೇನೆ ಮತ್ತು ಕ್ಷಿಪ್ರ ಕಾರ್ಯಪಡೆಯು ಗುಂಪನ್ನು ಚದುರಿಸಿದವು. ಅಲ್ಲದೆ ಯಯಿನ್‌ಗಾಂಗ್‌ಪೋಕ್ಪಿ ಸಮೀಪ ಗುಂಡಿನ ದಾಳಿ-ಪ್ರತಿದಾಳಿ ನಡೆದಿದೆ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ತಿಳಿಸಿವೆ.

ವಿಷ್ಣುಪುರ ಜಿಲ್ಲೆಯಲ್ಲಿ ಗುರುವಾರ ಮಧ್ಯರಾತ್ರಿ ಮೈತೇಯಿ ಮತ್ತು ಕುಕಿ ಸಮುದಾಯದ ನಡುವಣ ನಡೆದ ಸಂಘರ್ಷದಲ್ಲಿ ಮಣಿಪುರ ಪೊಲೀಸ್ ಕಮಾಂಡೊ ಸೇರಿದಂತೆ ನಾಲ್ವರು ಹತ್ಯೆಗೀಡಾಗಿದ್ದರು.

ಉಭಯ ಸಮುದಾಯದೊಡನೆ ಮೇ 3ರಿಂದ ಆರಂಭವಾಗಿರುವ ಸಂಘರ್ಷದಲ್ಲಿ ಈವರೆಗೆ ಕನಿಷ್ಠ 120 ಮಂದಿ ಮೃತಪಟ್ಟು, 3,000ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ. ಶಾಂತಿ ಮರುಸ್ಥಾಪನೆ ಉದ್ದೇಶದಿಂದ ರಾಜ್ಯಾದ್ಯಂತ 40,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಇಂಟರ್‌ನೆಟ್ ನಿಷೇಧ ಭಾಗಶಃ ತೆರವಿಗೆ ಆದೇಶ: ಮೇ 3ರಿಂದ ಜಾರಿ ಮಾಡಿರುವ ಇಂಟರ್‌ನೆಟ್ ಸೇವೆ ನಿಷೇಧವನ್ನು ಭಾಗಶಃ ತೆರವು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ಎಡಪಕ್ಷಗಳ ಸಂಸದರ ನಿಯೋಗ ಭೇಟಿ

ಎಡಪಕ್ಷಗಳ ರಾಜ್ಯಸಭಾ ಸದಸ್ಯರು ಮತ್ತು ಸಂಸದರ ನಿಯೋಗವು ಶನಿವಾರ ಹಿಂಸಾಚಾರಪೀಡಿತ ಮಣಿಪುರಕ್ಕೆ ಭೇಟಿ ನೀಡಿದೆ. ಈ ವೇಳೆ, ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಧ್ವನಿ ಎತ್ತುವುದಾಗಿ ಸದಸ್ಯರು ತಿಳಿಸಿದರು. ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟೆ ಅವರ ರಾಜ್ಯದ ವಿದ್ಯಮಾನಗಳ ಕುರಿತು ನೀಡಿರುವ ಹೇಳಿಕೆಯನ್ನು ಖಂಡಿಸಿದರು.

ಸಿಪಿಎಂ ಮತ್ತು ಸಿಪಿಐ ಸಂಸದರ ನಿಯೋಗವು ಮೂರು ದಿನಗಳ ಕಾಲ ಮಣಿಪುರಕ್ಕೆ ಭೇಟಿ ನೀಡಿದೆ.

ಈ ವೇಳೆ ಮಾತನಾಡಿದ ಸಿಪಿಐ (ಎಂ) ರಾಜ್ಯಸಭಾ ಸದಸ್ಯ ವಿಕಾಸ್ ಭಟ್ಟಾಚಾರ್ಯ, 'ಮಣಿಪುರ ಸಮಸ್ಯೆಯನ್ನು ಪರಿಹರಿಸುವಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಿಫಲವಾಗಿವೆ ಎಂದು ಆರೋಪಿಸಿದರು.

'ಎರಡು ತಿಂಗಳುಗಳಿಂದ ರಾಜ್ಯ ಹೊತ್ತಿ ಉರಿಯುತ್ತಿದ್ದರೂ ಪ್ರಧಾನಿ ಈ ಬಗ್ಗೆ ಮೌನವಾಗಿದ್ದಾರೆ. ರಾಜ್ಯದ ಬಗ್ಗೆ ಪ್ರಧಾನಿಗಿರುವ ಅಸಡ್ಡೆಯನ್ನು ಇದು ತೋರಿಸುತ್ತದೆ' ಎಂದು ಟೀಕಿಸಿದರು.

'ರಾಜ್ಯದಲ್ಲಿ ಶಾಂತಿ ಪುನಃಸ್ಥಾಪನೆಯಾಗಬೇಕೆಂದರೆ ಮೊದಲಿಗೆ ಜನರ ನಡುವೆ ಪರಸ್ಪರ ನಂಬಿಕೆ ಮತ್ತು ವಿಶ್ವಾಸ ಮೂಡಬೇಕು. ಮುಖ್ಯಮಂತ್ರಿ ಎನ್.ಬಿರೆನ್ ಸಿಂಗ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು' ಎಂದು ಸಂಸದ ಜಾನ್ ಬ್ರಿಟ್ಟಾಸ್ ಆಗ್ರಹಿಸಿದರು.

ನಿಯೋಗದಲ್ಲಿ ರಾಜ್ಯಸಭಾ ಸದಸ್ಯರಾದ ವಿಶ್ವಂ, ಸಂತೋಷ್ ಕುಮಾರ್ ಪಿ. ಮತ್ತು ಸಿಪಿಐ ಸಂಸದ ಕೆ.ಸುಬ್ಬರಾಯನ್ ಇದ್ದಾರೆ.

ತೆಲಂಗಾಣ: ವಿವಿಧ ಯೋಜನೆಗಳಿಗೆ ಪ್ರಧಾನಿ ಶಿಲಾನ್ಯಾಸ

ಬಿಆರ್‌ಎಸ್, ಎಎಪಿ ವಿರುದ್ಧ ವಾಗ್ದಾಳಿ

ವರಂಗಲ್ (ಪಿಟಿಐ): ಎರಡು ರಾಜ್ಯ ಸರ್ಕಾರಗಳ ಮಧ್ಯೆ ಭ್ರಷ್ಟಾಚಾರಕ್ಕೆ ಸಂಬಂಧಿಸಿ ಒಪ್ಪಂದಗಳು ನಡೆದಿರುವುದು ಇದೇ ಮೊದಲು ಎಂದು ಎಎಪಿ ಮತ್ತು ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಗುರಿಯಾಗಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ನಗರದಲ್ಲಿ ₹6.100 ಕೋಟಿ ವೆಚ್ಚದ ವಿವಿಧ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದ ಬಳಿಕ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಹೀಗೆ ಹೇಳಿದರು.

ದೆಹಲಿ ಅಬಕಾರಿ ನೀತಿ ಹಗರಣವನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ ಅವರು, 'ಮೊದಲೆಲ್ಲಾ, ಎರಡು ದೇಶಗಳ ಅಥವಾ ರಾಜ್ಯಗಳ ನಡುವೆ ಅಭಿವೃದ್ಧಿ ವಿಚಾರಕ್ಕೆ ಏರ್ಪಟ್ಟಿರುವ ಒಪ್ಪಂದಗಳ ಕುರಿತು ಸುದ್ದಿಗಳಿರುತ್ತಿದ್ದವು. ಆದರೆ, ಇದೇ ಮೊದಲ ಬಾರಿಗೆ ಎರಡು ಪಕ್ಷಗಳು ಹಾಗೂ ರಾಜ್ಯ ಸರ್ಕಾರಗಳು ಭ್ರಷ್ಟಾಚಾರದ ವಿಚಾರವಾಗಿ ಒಪ್ಪಂದ ಮಾಡಿಕೊಂಡ ಆರೋಪದ ಕುರಿತ ಸುದ್ದಿ ಕೇಳುತ್ತಿದ್ದೇವೆ' ಎಂದರು.

> ತೆಲಂಗಾಣದ ವಿರುದ್ಧ ಪ್ರಧಾನಿ ಮೋದಿ ಅವರು ಮಾಡಿರುವ ಆರೋಪಗಳು ಇದ್ದಲಿಯು ಮಸಿಗೆ ಬುದ್ಧಿ ಹೇಳಿದಂತಿದೆ
>
> **ಕೆ.ಟಿ. ರಾಮ ರಾವ್,** ತೆಲಂಗಾಣ ಸಚಿವ

ತೆಲಂಗಾಣದ ಆಡಳಿತಾರೂಢ ಬಿಆರ್‌ಎಸ್ ವಿರುದ್ಧ ಟೀಕಾಪ್ರಹಾರ ನಡೆಸಿದ ಅವರು, ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ನೇತೃತ್ವದ ಸರ್ಕಾರವು ಕಡು ಭ್ರಷ್ಟ ಸರ್ಕಾರವಾಗಿದೆ. 'ಈ ಬಾರಿ ಬಿಜೆಪಿ ಸರ್ಕಾರ' ಎಂದು ತೆಲಂಗಾಣವು ಹೇಳುತ್ತಿದೆ ಎಂದರು.

ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಾತನಾಡಿ, ₹1.10 ಲಕ್ಷ ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳ ಕಾಮಗಾರಿಯು ತೆಲಂಗಾಣದಲ್ಲಿ ಸಂಪೂರ್ಣವಾಗಿವೆ ಅಥವಾ ಇನ್ನೂ ಪ್ರಗತಿಯಲ್ಲಿದೆ ಎಂದರು.

ಇದಕ್ಕೂ ಮೊದಲು ಮೋದಿ ಅವರು ಇಲ್ಲಿಯ ಪ್ರಸಿದ್ಧ ಭದ್ರಕಾಳಿ ದೇವಸ್ಥಾನಕ್ಕೆ ಭೇಟಿ ನೀಡಿದ್ದರು.

(ಜೈಪುರ ವರದಿ): ರಾಜಸ್ಥಾನದ ಬಿಕಾನೇರ್ ಜಿಲ್ಲೆಯಲ್ಲಿ ₹24,300 ಕೋಟಿಗೂ ಹೆಚ್ಚು ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಮೋದಿ ಅವರು ಶನಿವಾರ ಚಾಲನೆ ಮತ್ತು ಶಿಲಾನ್ಯಾಸ ನೆರವೇರಿಸಿದರು.

ಸಂಕ್ಷಿಪ್ತ ಸುದ್ದಿ

ತಮಿಳುನಾಡು ರಾಜ್ಯಪಾಲ, ಅಮಿತ್ ಶಾ ಭೇಟಿ

ಚೆನ್ನೈ/ನವದೆಹಲಿ (ಪಿಟಿಐ): ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಶನಿವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜೊತೆಗೆ ದೆಹಲಿಯಲ್ಲಿ 'ಉದ್ದೇಶಪೂರ್ವಕ ಸಭೆ' ನಡೆಸಿದ್ದಾರೆ ಎಂದು ರಾಜಭವನ ತಿಳಿಸಿದೆ.

ರಾಜ್ಯಪಾಲ ಮತ್ತು ರಾಜ್ಯ ಸರ್ಕಾರದ ನಡುವಿನ ಭಿನ್ನಮತದ ಹಿನ್ನೆಲೆಯಲ್ಲಿ ಈ ಭೇಟಿ ಮಹತ್ವ ಪಡೆದಿದೆ. ರಾಜ್ಯಪಾಲರು ಈಚೆಗೆ, ಬಂಧನದಲ್ಲಿರುವ ಸಚಿವ ಸೆಂಥಿಲ್ ಬಾಲಾಜಿ ಅವರನ್ನು ಸಂಪುಟದಿಂದ ವಜಾ ಮಾಡಿದ್ದು, ಬಳಿಕ ಆದೇಶ ಹಿಂಪಡೆದಿದ್ದರು.

ಕೇಂದ್ರ ಗೃಹ ಸಚಿವಾಲಯದ ಸಲಹೆ ಆಧರಿಸಿಯೇ ರಾಜ್ಯಪಾಲರು ವಜಾ ಆದೇಶ ಹಿಂಪಡೆದರು ಎಂದು ಆಡಳಿತಪಕ್ಷ ಡಿಎಂಕೆ ಆರೋಪಿಸಿತ್ತು.

ಇನ್ನೊಂದೆಡೆ, ಭ್ರಷ್ಟಾಚಾರ ಪ್ರಕರಣದಲ್ಲಿ ಎಐಎಡಿಎಂಕೆಯ, ಮಾಜಿ ಸಚಿವರ ವಿರುದ್ಧ ಕ್ರಮಕ್ಕೆ ಅನುಮತಿ ನೀಡುವಂತೆಯೂ ಕೋರುತ್ತಿದೆ.

ಬೇಹುಗಾರಿಕೆ: ಬಿಎಸ್‌ಎಫ್ ನೌಕರ ಬಂಧನ

ಅಹಮದಾಬಾದ್: ಭಾರತದ ರಹಸ್ಯ ಮತ್ತು ಸೂಕ್ಷ್ಮ ಮಾಹಿತಿಗಳನ್ನು ಪಾಕಿಸ್ತಾನದ ಗೂಢಚಾರಿಗೆ ರವಾನಿಸುತ್ತಿದ್ದ ಆರೋಪದಲ್ಲಿ ಕಛ್ ಜಿಲ್ಲೆಯಲ್ಲಿ ನಿಲೇಶ್ ವಲ್ಜಿಭಾಯಿ ಬಲಿಯಾ ಎಂಬಾತನನ್ನು ಗುಜರಾತ್‌ನ ಭಯೋತ್ಪಾದಕ ನಿಗ್ರಹ ದಳವು (ಎಟಿಎಸ್) ಶನಿವಾರ ಬಂಧಿಸಿದೆ.

ಭುಜ್ ನಗರದಲ್ಲಿರುವ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಬೆಟಾಲಿಯನ್‌ನ ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ (ಸಿಪಿಡಬ್ಲ್ಯುಡಿ) ಈತ ಕಚೇರಿ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಣಕ್ಕಾಗಿ ನಿಲೇಶ್ ಪಾಕಿಸ್ತಾನದ ಮಹಿಳಾ ಏಜೆಂಟ್‌ಗೆ ವಾಟ್ಸ್‌ಆ್ಯಪ್ ಮೂಲಕ ಮಾಹಿತಿ ರವಾನಿಸುತ್ತಿದ್ದ ಎಂದು ವಿವರಿಸಿದ್ದಾರೆ.

ವಸ್ತ್ರ ಸಂಹಿತೆ: ಕರಣ್ ಸಿಂಗ್ ಬೆಂಬಲ

ಜಮ್ಮು(ಪಿಟಿಐ): ದೇಗುಲದಲ್ಲಿ ವಸ್ತ್ರ ಸಂಹಿತೆ ಜಾರಿಗೊಳಿಸುವುದನ್ನು ಕಾಂಗ್ರೆಸ್‌ನ ಹಿರಿಯ ನಾಯಕ ಕರಣ್ ಸಿಂಗ್ ಬೆಂಬಲಿಸಿದ್ದಾರೆ. ಪವಿತ್ರ ಸ್ಥಳಕ್ಕೆ ಭೇಟಿ ನೀಡುವವರು ಸೂಕ್ತ ವಸ್ತ್ರ ಧರಿಸಬೇಕು ಎಂದು ಪ್ರತಿಪಾದಿಸಿದ್ದಾರೆ.

ವಸ್ತ್ರಸಂಹಿತೆಯನ್ನು ಈಚೆಗಷ್ಟೇ ಜಾರಿಗೊಳಿಸಿರುವ ಬಾವೆ ವಾಲಿ ಮಾತಾಮಂದಿರ ಆಡಳಿತ ಮಂಡಳಿ, ಶಾರ್ಟ್ಸ್, ಮಿನಿಸ್ಕರ್ಟ್ ಧರಿಸಿ ದೇಗುಲ ಆವರಣ ಪ್ರವೇಶಿಸದಂತೆ ಸೂಚಿಸಿದೆ. ವಿವಿಧೆಡೆಯ ದೇಗುಲಗಳಲ್ಲೂ ಸೂಚನಾ ಫಲಕ ಅಳವಡಿಸಲಾಗಿದೆ.

ಪ್ರವೇಶ್‌ನನ್ನು ಬಿಡುಗಡೆ ಮಾಡಿ: ಸಂತ್ರಸ್ತ ರಾವತ್

ಭೋಪಾಲ್ (ಪಿಟಿಐ): 'ಪ್ರವೇಶ್ ಶುಕ್ಲಾನಿಗೆ ತನ್ನ ತಪ್ಪಿನ ಅರಿವಾಗಿದೆ. ಆತನನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರುವೆ' ಎಂದು ಮಧ್ಯಪ್ರದೇಶದ ಸೀದೀಯಲ್ಲಿ ನಡೆದಿದ್ದ ಮೂತ್ರ ವಿಸರ್ಜನೆ ಪ್ರಕರಣದ ಸಂತ್ರಸ್ತ ದಶಮತ್ ರಾವತ್ ಹೇಳಿದ್ದಾರೆ.

ಬುಡಕಟ್ಟು ಜನಾಂಗಕ್ಕೆ ಸೇರಿರುವ ದಶಮತ್ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಆರೋಪಿ ಪ್ರವೇಶ್ ಶುಕ್ಲಾ ಅವರನ್ನು ಪೊಲೀಸರು ಬುಧವಾರ ಬಂಧಿಸಿದ್ದರು.

'ಪ್ರವೇಶ್ ಶುಕ್ಲಾಗೆ ತನ್ನ ತಪ್ಪಿನ ಅರಿವಾಗಿದೆ. ಅವರು ನಮ್ಮ ಗ್ರಾಮದ ಪಂಡಿತರಲ್ಲಿ ಒಬ್ಬರು. ಹಾಗಾಗಿ ಅವರನ್ನು ಬಿಡುಗಡೆ ಮಾಡಬೇಕು' ಎಂದು ಸುದ್ದಿಗಾರರಿಗೆ ತಿಳಿಸಿದರು.

'ನಮ್ಮ ಹಳ್ಳಿಗೆ ರಸ್ತೆ ನಿರ್ಮಿಸಿಕೊಡುವ ಹೊರತು ಸರ್ಕಾರಕ್ಕೆ ನನ್ನಿಂದ ಬೇರೆ ಯಾವುದೇ ಬೇಡಿಕೆ ಇಲ್ಲ' ಎಂದೂ ರಾವತ್ ಹೇಳಿದ್ದಾರೆ.

ಟೈಟ್ಲರ್ ವಿಚಾರಣೆ 19ಕ್ಕೆ ನಿರ್ಧಾರ

ವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆ ಸಂದರ್ಭದಲ್ಲಿ ಇಲ್ಲಿನ ಪುಲ್ ಬಂಗಶ್ ಬಳಿ ನಡೆದಿದ್ದ ಹತ್ಯೆಗಳಿಗೆ ಸಂಬಂಧಿಸಿ ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧದ ದೋಷಾರೋಪ ಪಟ್ಟಿ ಅನುಸಾರ ಕ್ರಮ ಕೈಗೊಳ್ಳುವ ಕುರಿತು ದೆಹಲಿ ಹೈಕೋರ್ಟ್ ಜುಲೈ 19ರಂದು ನಿರ್ಧಾರ ಪ್ರಕಟಿಸಲಿದೆ.

ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ವಿಧಿ ಗುಪ್ತಾ ಆನಂದ್ ಅವರು ಜುಲೈ 7ರಂದು ಸಿಬಿಐ ಮತ್ತು ಆರೋಪಿ ಪರ ವಕೀಲರ ವಾದ ಪ್ರತಿವಾದವನ್ನು ಆಲಿಸಿ ತೀರ್ಪನ್ನು ಕಾಯ್ದಿರಿಸಿದ್ದರು.

ಖರ್ಗೆ ಸಲಹೆಯಂತೆ ಭಿನ್ನಮತ ಮರೆತಿದ್ದೇನೆ: ಸಚಿನ್ ಪೈಲಟ್

ನವದೆಹಲಿ (ಪಿಟಿಐ): 'ಎಐಸಿಸಿ ಅಧ್ಯಕ್ಷರ ಸಲಹೆಯಂತೆ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಜೊತೆಗಿನ ಭಿನ್ನಮತವನ್ನು ಕೈಬಿಟ್ಟಿದ್ದೇನೆ. ವಿಧಾನಸಭೆ ಚುನಾವಣೆಗೆ ಸಾಮೂಹಿಕ ನಾಯಕತ್ವದಡಿ ಹೋಗುವುದೇ ಈಗಿರುವ ಏಕೈಕ ಮಾರ್ಗ' ಎಂದು ಸಚಿನ್ ಪೈಲಟ್ ಹೇಳಿದ್ದಾರೆ.

ಈ ಮೂಲಕ ರಾಜಸ್ಥಾನ ಕಾಂಗ್ರೆಸ್‌ನಲ್ಲಿ ಮೂಡಿದ್ದ ಭಿನ್ನಮತ ಸದ್ಯಕ್ಕೆ ಶಮನವಾಗಿದೆ. 'ಚುನಾವಣಾ ಕಾರ್ಯತಂತ್ರ ರೂಪಿಸಲು ಸೇರಿದ್ದ ಸಭೆಯಲ್ಲಿ 'ಎಲ್ಲವನ್ನು ಮರೆತು, ಕ್ಷಮಿಸಿ ಮುನ್ನಡೆಯಿರಿ' ಎಂದು ಖರ್ಗೆ ಅವರು ಸಲಹೆ ಮಾಡಿದ್ದಾರೆ. ಅದು ನಿರ್ದೇಶನ ರೂಪದ ಸಲಹೆ' ಎಂದರು.

'ಗೆಹಲೋತ್ ಅವರು ನನಗಿಂತ ಹಿರಿಯರು. ಹೆಚ್ಚು ಅನುಭವಿಗಳು. ದೊಡ್ಡ ಜವಾಬ್ದಾರಿಗಳಿವೆ. ನಾನು ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗ ಎಲ್ಲರನ್ನು ಒಟ್ಟಿಗೆ ಕರೆದೊಯ್ಯಲು ಯತ್ನಿಸಿದ್ದೆ. ಈಗ ಅವರು ಸಿ.ಎಂ. ಅವರೂ ಎಲ್ಲರನ್ನು ಒಟ್ಟಿಗೆ ಕರೆದೊಯ್ಯಲು ಯತ್ನಿಸುತ್ತಿದ್ದಾರೆ' ಎಂದರು.

6 ಟನ್ ಕಬ್ಬಿಣ ಸೇತುವೆ ಕಳವು: ನಾಲ್ವರ ಬಂಧನ

ಮುಂಬೈ(ಪಿಟಿಐ): ಮಲಾಡ್‌ನಲ್ಲಿ (ಪಶ್ಚಿಮ) ಅದಾನಿ ಎಲೆಕ್ಟ್ರಿಸಿಟಿ ಕಂಪನಿಯು ಚರಂಡಿಯೊಂದರ ಮೇಲೆ ತಾತ್ಕಾಲಿಕವಾಗಿ ಅಳವಡಿಸಿದ್ದ 90 ಅಡಿ ಉದ್ದದ, 6 ಟನ್ ತೂಕದ ಕಬ್ಬಿಣದ ಸೇತುವೆಯನ್ನು ಕದ್ದೊಯ್ದಿದ್ದ ಕಳ್ಳರನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ ಎಂದು ಬಂಗೂರ್ ನಗರ ಪೊಲೀಸ್ ಠಾಣೆಯ ಅಧಿಕಾರಿ ಶನಿವಾರ ತಿಳಿಸಿದ್ದಾರೆ.

ಚರಂಡಿಗೆ ಶಾಶ್ವತ ಸೇತುವೆ ನಿರ್ಮಿಸಿದ ಬಳಿಕ ತಾತ್ಕಾಲಿಕವಾಗಿ ಅಳವಡಿಸಿದ್ದ ಕಬ್ಬಿಣದ ಸೇತುವೆಯನ್ನು ಕೆಲ ತಿಂಗಳ ಹಿಂದಷ್ಟೇ ಬೇರೆಡೆಗೆ ಸ್ಥಳಾಂತರಿಸಲಾಗಿತ್ತು. ಇದು ಕಳವಾಗಿದೆ ಎಂದು ಪವರ್ ಕಂಪನಿ ಜೂನ್ 26ರಂದು ದೂರು ದಾಖಲಿಸಿತ್ತು.

'ಜೂನ್ 6ರಿಂದ ಸೇತುವೆ ನಾಪತ್ತೆಯಾಗಿರುವುದು ತನಿಖೆಯಿಂದ ಖಚಿತಪಟ್ಟಿತು. ಸುತ್ತಮುತ್ತಲಿನ ಸ್ಥಳದಲ್ಲಿದ್ದ ಸಿ.ಸಿ ಟಿವಿ ಕ್ಯಾಮೆರಾದ ದೃಶ್ಯಾವಳಿ ಪರಿಶೀಲಿಸಿದಾಗ, 11ರಂದು ಬೃಹತ್ ವಾಹನವೊಂದು ಚಲಿಸಿರುವುದು ಪತ್ತೆಯಾಯಿತು. ಈ ವಾಹನದ ನೋಂದಣಿ ಸಂಖ್ಯೆ ಪತ್ತೆ ಹಚ್ಚಿ, ವಿಚಾರಣೆ ನಡೆಸಿದಾಗ, ಗ್ಯಾಸ್ ಕಟರ್ ಬಳಸಿ ಕಳವು ಮಾಡಿರುವುದು ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಸೇತುವೆ ನಿರ್ಮಾಣದ ಗುತ್ತಿಗೆ ಪಡೆದಿದ್ದ ಕಂಪನಿಯ ಉದ್ಯೋಗಿ ಈ ಕೃತ್ಯದಲ್ಲಿ ಭಾಗಿಯಾಗಿದ್ದು, ಈತನು ಸೇರಿದಂತೆ ನಾಲ್ವರನ್ನು ಬಂಧಿಸಿ, ಕಳವಾದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ನಾರ್ವೇಕರ್ ಕ್ರಮ

ಅನರ್ಹತೆ: ಶಿವಸೇನೆ ಶಾಸಕರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಮುಂಬೈ: ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸಕರನ್ನು ಸದಸ್ಯತ್ವ ದಿಂದ ಅನರ್ಹಗೊಳಿಸಬೇಕು ಎಂಬ ಅರ್ಜಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಸಚಿವಾಲಯವು ಶನಿವಾರ ಶಿವಸೇನೆಯ ಶಿಂದೆ ಮತ್ತು ಉದ್ಧವ್ ಬಣದ ಸದಸ್ಯರಿಗೆ ನೋಟಿಸ್ ಜಾರಿ ಮಾಡಿದೆ.

ಮಹಾರಾಷ್ಟ್ರ ವಿಧಾನಸಭೆಯ ಅಧಿವೇಶನ ಜುಲೈ 17ರಿಂದ ಆರಂಭವಾಗಲಿದೆ. ಅದಕ್ಕೆ ಒಂದು ವಾರ ಮೊದಲು ಈ ಬೆಳವಣಿಗೆ ನಡೆದಿದೆ. ಅವಿಭಜಿತ ಶಿವಸೇನೆಯು ಒಟ್ಟು 55 ಶಾಸಕರನ್ನು ಹೊಂದಿದೆ.

ಶಾಸಕರ ಅನರ್ಹತೆ ಕೋರಿರುವ ಅರ್ಜಿಗಳ ಸಂಬಂಧ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಕೂಡಾ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ ಸೂಚಿಸಿತ್ತು.

ಶಾಸಕ ರಮೇಶ್ ಲಟ್ಕೆ ಅವರ ನಿಧನಾನಂತರ ತೆರವಾಗಿದ್ದ ಕ್ಷೇತ್ರದಲ್ಲಿ ನಡೆದಿದ್ದ ಉಪಚುನಾವಣೆಯಲ್ಲಿ ಅವರ ಪತ್ನಿ ರುತುಜಾ ಅವರು ಉದ್ಧವ್ ಬಣದ ಚಿಹ್ನೆಯಡಿ ಆಯ್ಕೆಯಾಗಿದ್ದಾರೆ.

ಮುಖ್ಯಮಂತ್ರಿ ಏಕನಾಥ ಶಿಂದೆ, ಉದ್ಧವ್ ಠಾಕ್ರೆ ಅವರ ಪುತ್ರ ಆದಿತ್ಯ ಅವರೂ ಅನರ್ಹತೆ ವಿಚಾರಣೆ ಎದುರಿಸಲಿದ್ದಾರೆ. ಶಿಂದೆ ಬಣವು ತನಗೆ 40 ಶಾಸಕರ ಬೆಂಬಲವಿದೆ ಎಂದು ಹೇಳಿಕೊಂಡಿದೆ.

ಪಕ್ಷದಿಂದ ಬಂಡಾಯವೆದ್ದಿದ್ದ ಶಿಂದೆ ಬಣವು ಬಿಜೆಪಿಯ ಬೆಂಬಲ ಪಡೆದು ಉದ್ಧವ್ ಠಾಕ್ರೆ ನೇತೃತ್ವದ ಮೈತ್ರಿ ಸರ್ಕಾರವನ್ನು ಪದಚ್ಯುತಗೊಳಿಸಿತ್ತು. ನಂತರ ಸಿಎಂ ಆಗಿ ಶಿಂದೆ, ಡಿಸಿಎಂ ಆಗಿ ದೇವೇಂದ್ರ ಫಡಣವೀಸ್ ಪ್ರಮಾಣವಚನ ಸ್ವೀಕರಿಸಿದ್ದರು.

ಬಣ ರಾಜಕಾರಣವು ಚುನಾವಣಾ ಆಯೋಗ ಹಾಗೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಫೆಬ್ರುವರಿ 17ರಂದು ಆಯೋಗವು ಶಿಂದೆ ಬಣಕ್ಕೆ ಮೂಲ ಶಿವಸೇನೆ ಎಂದು ಮಾನ್ಯ ಮಾಡಿದ್ದು, ಬಿಲ್ಲು-ಬಾಣದ ಚಿಹ್ನೆ ಹಂಚಿಕೆ ಮಾಡಿತ್ತು.

ಪ್ರಕರಣ ಕುರಿತು ಮೇ 11ರಂದು ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, 'ಠಾಕ್ರೆ ಅವರು ರಾಜೀನಾಮೆ ಸಲ್ಲಿಸಿದ್ದು, ಅವರನ್ನು ಮತ್ತೆ ಮುಖ್ಯಮಂತ್ರಿ ಆಗಿ ನಿಯುಕ್ತಿಗೊಳಿಸಲಾಗದು ಎಂದಿತ್ತು. ಅಲ್ಲದೆ, ರಾಜ್ಯಪಾಲ ಭಗತ್ ಸಿಂಗ್ ಕೊಶಿಯಾರಿ ಕಾರ್ಯಶೈಲಿಗೆ ಅಸಮಾಧಾನ ವ್ಯಕ್ತಪಡಿಸಿ ಆದೇಶಿಸಿತ್ತು.

ಶಾಸಕರ ಅನರ್ಹತೆ ಅರ್ಜಿ ಕುರಿತಂತೆ ವಿಧಾನಸಭೆಯ ಸ್ಪೀಕರ್ ಅವರೇ ನಿಗದಿತ ಅವಧಿಯಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು ಎಂದೂ ತಿಳಿಸಿತ್ತು.

ಛಗನ್ ಕ್ಷೇತ್ರದಲ್ಲಿ ಬಲಪ್ರದರ್ಶನ

ಮುಂಬೈ: 'ನನಗೆ ಆಯಾಸವು ಆಗಿಲ್ಲ, ನಾನು ನಿವೃತ್ತಿಯೂ ಆಗಿಲ್ಲ' ಎಂದು ಹೇಳಿರುವ ಎನ್‌ಸಿಪಿ ಸ್ಥಾಪಕ ಶರದ್ ಪವಾರ್ ಶನಿವಾರ ನಾಸಿಕ್‌ನ ಯೆಯೋಲಾದಲ್ಲಿ ಸಾರ್ವಜನಿಕ ರ್‍ಯಾಲಿ ನಡೆಸಿ ತಮ್ಮ ಬಲಪ್ರದರ್ಶನ ಮಾಡಿದರು.

ಪುತ್ರಿ, ಸಂಸದೆ ಸುಪ್ರಿಯಾ ಸುಳೆ ಜೊತೆಗೂಡಿ ಮುಂಬೈನಿಂದ ಯೆಒಲಾಗೆ ಪ್ರಯಾಣಿಸಿದ ಅವರು, ಮಳೆಯ ನಡುವೆಯೂ ರ್‍ಯಾಲಿ ಉದ್ದೇಶಿಸಿ ಮಾತನಾಡಿದರು. ಮಳೆಯಲ್ಲಿ ಭಾಷಣ ಮಾಡುತ್ತಿರುವ ಪವಾರ್ ಚಿತ್ರ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಯಿತು.

ಸದ್ಯ, ಅಜಿತ್ ಬಣದಲ್ಲಿ ಗುರುತಿಸಿಕೊಂಡಿರುವ ಛಗನ್ ಭುಜಬಲ್ ಅವರು ಯೆಯೋಲಾ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. 'ಪಕ್ಷದಲ್ಲಿನ ಬೆಳವಣಿಗೆಯನ್ನು ನಾನು ಸೂಕ್ಷ್ಮವಾಗಿ ಗಮನಿಸಲಿಲ್ಲ. ಕೆಲವರ ಮೇಲೆ ವಿಶ್ವಾಸವಿಟ್ಟು ತಪ್ಪಾಗಿ ಅಂದಾಜು ಮಾಡಿದೆ' ಎಂದು ಪವಾರ್ ಹೇಳಿದರು.

'ಕೆಲವರು ನನ್ನ ವಯಸ್ಸು ಪ್ರಶ್ನಿಸಿದ್ದಾರೆ. ನಿಜ, ನನಗೆ 82 ವರ್ಷ ವಯಸ್ಸಾಗಿದೆ. ಆದರೆ, ವಯಸ್ಸಿನ ಬಗ್ಗೆ ಮಾತನಾಡುವವರು ಖಂಡಿತ ಅದಕ್ಕಾಗಿ ತಕ್ಕ ಬೆಲೆ ತೆರಬೇಕಾಗುತ್ತದೆ' ಎಂದೂ ಎಚ್ಚರಿಕೆ ನೀಡಿದರು.

ವಿದರ್ಭ: 2 ದಿನ ಉದ್ಧವ್ ಪ್ರವಾಸ

ಮುಂಬೈ: ಮುಖ್ಯಮಂತ್ರಿಯಾಗಿ ಅಧಿಕಾರ ಕಳೆದುಕೊಂಡ ಒಂದು ವರ್ಷದ ನಂತರ ಉದ್ಧವ್ ಠಾಕ್ರೆ ಅವರು, ಬಿಜೆಪಿಯ ಭದ್ರಕೋಟೆ ಎಂದೇ ಪರಿಗಣಿಸಲಾಗಿರುವ ವಿದರ್ಭ ವಲಯದಲ್ಲಿ ಬಿರುಸಿನ ಪ್ರವಾಸ ನಡೆಸಲು ತೀರ್ಮಾನಿಸಿದ್ದಾರೆ.

ವಿದರ್ಭ ವಲಯದಲ್ಲಿ 62 ಕ್ಷೇತ್ರಗಳಿವೆ. 2019ರ ಚುನಾವಣೆಯಲ್ಲಿ ಬಿಜೆಪಿ ಈ ಪೈಕಿ 29 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರೆ, ಬಿಜೆಪಿ ಜೊತೆಗಿನ ಮೈತ್ರಿಯಲ್ಲಿ ಸ್ಪರ್ಧಿಸಿದ್ದ ಶಿವಸೇನೆ 4 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹60,700
ಒಡವೆ ಚಿನ್ನ 1ಗ್ರಾಂ	₹5,584
ಬೆಳ್ಳಿ ಕೆ.ಜಿಗೆ	₹72,900

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹154
ಆರ್‌ಎಸ್‌ಎಸ್-5	₹147.50
ಗುಡ್ ಲಾಟ್	₹131

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1720 (1715)
ಸೋಯಾ (ರಿಫೈನ್ಡ್)	₹950 (960)
ಸೂರ್ಯಕಾಂತಿ (ರಿಫೈನ್ಡ್)	₹950 (950)
ಪಾಮೋಲಿನ್	₹860 (860)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹213-409
ದ್ವಿತಳಿ (ಬಿ.ವಿ)	₹285-557

ಹಣಕಾಸು ಸೇವೆಗಳ ವಲಯದತ್ತ ಹೆಚ್ಚು ಗಮನ; ಐ.ಟಿ. ಕಂಪನಿಗಳ ಷೇರು ಮಾರಾಟ

ಎಫ್‌ಪಿಐ: ಭಾರತದಲ್ಲಿ ಹೆಚ್ಚಿದ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಹಣ ತೊಡಗಿಸಲು ವಲಯಗಳಿಗಿಂತಲೂ ಹೆಚ್ಚಾಗಿ ದೇಶದಲ್ಲಿನ ಹಣದುಬ್ಬರ, ಜಿಡಿಪಿ ಬೆಳವಣಿಗೆಯಂತಹ ನಿರ್ದಿಷ್ಟ ಅಂಶಗಳತ್ತ ಗಮನ ಹರಿಸುತ್ತಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ಹೂಡಿಕೆದಾರರು ಜನವರಿ–ಫೆಬ್ರುವರಿ ಅವಧಿಯಲ್ಲಿ ಭಾರತದಲ್ಲಿ ಷೇರುಗಳನ್ನು ಮಾರಾಟ ಮಾಡಿದ್ದು, ಚೀನಾದಲ್ಲಿ ಷೇರುಗಳನ್ನು ಖರೀದಿಸಿದ್ದಾರೆ. ಈ ಅವಧಿಯಲ್ಲಿ ಭಾರತದಿಂದ ₹34,626 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಆ ಬಳಿಕ ಮಾರ್ಚ್‌ನಿಂದಲೂ ಚೀನಾದಲ್ಲಿ ಷೇರುಗಳನ್ನು ಮಾರಾಟ ಮಾಡುವ

ಮತ್ತು ಭಾರತದಲ್ಲಿ ಖರೀದಿಸುವ ಪ್ರವೃತ್ತಿಯನ್ನು ಹೂಡಿಕೆದಾರರು ಅನುಸರಿಸುತ್ತಿದ್ದಾರೆ ಎಂದು ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಜನವರಿ–ಫೆಬ್ರುವರಿ ಅವಧಿಯಲ್ಲಿ ಹಣಕಾಸು ಸೇವೆಗಳ ವಲಯದಿಂದ ₹15,744 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿತ್ತು. ಆದರೆ, ಜೂನ್‌ನಲ್ಲಿ ₹19,229 ಕೋಟಿ ಹೂಡಿಕೆ ಮಾಡಲಾಗಿದೆ. ಹೀಗಾಗಿ ಹಣಕಾಸು ವಲಯದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದ ಹೂಡಿಕೆ ಆಗುವ ನಿರೀಕ್ಷೆ ಇದೆ ಎಂದು ತಿಳಿಸಿದರು.



ಭಾರತದ ಷೇರುಪೇಟೆಗಳ ಮುನ್ನೋಟದ ಕುರಿತು ಹೂಡಿಕೆದಾರರು ಆಶಾವಾದ ಹೊಂದಿದ್ದಾರೆ. ಇದರ ಜೊತೆಗೆ ಭಾರತದ ಆರ್ಥಿಕ ಬೆಳವಣಿಗೆ ಉತ್ತಮವಾಗಿರುವುದು ಹಾಗೂ ಕಾರ್ಪೊರೇಟ್ ವಲಯದ ಗಳಿಕೆ ಹೆಚ್ಚಾಗುವ ನಿರೀಕ್ಷೆಯು ಸಹ ಷೇರುಪೇಟೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ತೊಡಗಿಸಲು ಉತ್ತೇಜನ ನೀಡುತ್ತಿವೆ. ಅಮೆರಿಕವು ಆರ್ಥಿಕ ಹಿಂಜರಿತ ಅನುಭವಿಸುವ ಸಾಧ್ಯತೆಯೂ ಕಡಿಮೆ ಆಗುತ್ತಿರುವುದು ಹೂಡಿಕೆದಾರಲ್ಲಿ ಸಕಾರಾತ್ಮಕ ಭಾವನೆ ಮೂಡಿಸಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದರು.

ಜುಲೈ 7ರವರೆಗೆ ನಡೆದಿರುವ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು ಭಾರತದಲ್ಲಿ ₹21,943 ಕೋಟಿ ಬಂಡವಾಳ ಹೂಡಿಕೆ ಮಾಡಿದ್ದಾರೆ. ಹೂಡಿಕೆಯ ಈ ಪ್ರಮಾಣವನ್ನು ಗಮನಿಸಿದರೆ ಮೇ ಮತ್ತು ಜೂನ್ ತಿಂಗಳಿಗಿಂತಲೂ ಜುಲೈನಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಆಗುವ ನಿರೀಕ್ಷೆ ಇದೆ ಎಂದು ವಿಜಯಕುಮಾರ್ ಅಭಿಪ್ರಾಯಪಟ್ಟರು. ಮೇನಲ್ಲಿ ₹43,838 ಕೋಟಿ ಮತ್ತು ಜೂನ್‌ನಲ್ಲಿ ₹47,148 ಕೋಟಿ ಹೂಡಿಕೆ ಆಗಿದೆ.

ಹಣಕಾಸು ಸೇವೆಗಳು, ಆಟೊಮೊಬೈಲ್, ಬಂಡವಾಳ ಸರಕುಗಳು ಮತ್ತು ನಿರ್ಮಾಣ ವಲಯಗಳಲ್ಲಿನ ಷೇರುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅವರು ಖರೀದಿಸುತ್ತಿದ್ದಾರೆ. ಐ.ಟಿ. ವಲಯದ ಷೇರುಗಳನ್ನು ಮಾರಾಟ ಮಾಡುವುದನ್ನು ಮುಂದುವರಿಸಿದ್ದಾರೆ ಎಂದು ಅವರು ತಿಳಿಸಿದರು.

ಐಪಿಒ: ಎನ್‌ಎಸ್‌ಡಿಎಲ್ ಸಿದ್ಧತೆ

ನವದೆಹಲಿ (ಪಿಟಿಐ): ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್), ಆರಂಭಿಕ ಸಾರ್ವಜನಿಕ ಹೂಡಿಕೆ (ಐಪಿಒ) ಮೂಲಕ ಷೇರುಗಳನ್ನು ಮಾರಾಟ ಮಾಡಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿದೆ.

ಈ ಐಪಿಒ ಸಂಪೂರ್ಣವಾಗಿ ಆಫರ್ ಫಾರ್ ಸೇಲ್ (ಒಎಫ್‌ಎಸ್) ಆಗಿರಲಿದೆ. ಹಾಲಿ ಷೇರುದಾರರ 5.72 ಕೋಟಿಗೂ ಅಧಿಕ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲಾಗುವುದು ಎಂದು ಕರಡು ದಾಖಲೆ ಪತ್ರದಲ್ಲಿ ತಿಳಿಸಿದೆ.

ಈಕ್ವಿಟಿ ಷೇರುಗಳಲ್ಲಿ ಒಂದಷ್ಟು ಭಾಗವನ್ನು ಕಂಪನಿಯ ಅರ್ಹ ಉದ್ಯೋಗಿಗಳಿಗೆ ಮೀಸಲಿಡಲಾಗುವುದು. ಐಪಿಒ ದರದಲ್ಲಿ ರಿಯಾಯಿತಿಯನ್ನೂ ನೀಡುವ ಸಾಧ್ಯತೆ ಇದೆ.

ಐಸಿಐಸಿಐ ಸೆಕ್ಯುರಿಟೀಸ್, ಎಕ್ಸಿಸ್ ಕ್ಯಾಪಿಟಲ್, ಎಚ್‌ಎಸ್‌ಬಿಸಿ ಸೆಕ್ಯುರಿಟೀಸ್ ಆ್ಯಂಡ್ ಕ್ಯಾಪಿಟಲ್ ಮಾರ್ಕೆಟ್,ಎಸ್‌ಬಿಐ ಕ್ಯಾಪಿಟಲ್ ಮಾರ್ಕೆಟ್ಸ್ ಕಂಪನಿಗಳು ಈ ಐಪಿಒದ ನಿರ್ವಹಣೆ ಮಾಡಲಿವೆ. 2022–23ನೇ ಹಣಕಾಸು ವರ್ಷದಲ್ಲಿ ಎನ್‌ಎಸ್‌ಡಿಎಲ್ ವರಮಾನ ₹1,099.81 ಕೋಟಿ ಇದ್ದು, ನಿವ್ವಳ ಲಾಭ ₹234.81 ಕೋಟಿ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000- 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿಉತ್ತಮ	1600-1650
ಕಾಳು ಮೆಣಸು	495-500

ಅಡಿಕೆ

ಕುಂದಾಪುರ

ಹಳೆಚಾಲಿ	43500-47000
ಹೊಸಚಾಲಿ	37000-41500

ತಿಪಟೂರು ಕೊಬ್ಬರಿ

ಕನಿಷ್ಠ	6800
ಗರಿಷ್ಠ	8600
ಮಾದರಿ	8000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14400	14400	14250	160.90
ಎಸಿ	7280	7200	7300	
ಆರ್‌ಪಿ	10100	10500	10350	ಲಂಡನ್
ಆರ್‌ಸಿ	5960	232on OT	5950	2621 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

8–7-2023

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730 (1725)
ಒಂದು ವಾರದ ಡೆಲಿವರಿ	1725 (1720)
ಸೋಯಾ ಕಚ್ಚಾ	892 (892)
ಪಾಮ್ ವಾರದ ಡೆಲಿವರಿ	858 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

58,550 (58,400)

ಬೆಳ್ಳಿ ಕೆ.ಜಿ 70,500 (69,775)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಟ್ರೈನ್‌ಮ್ಯಾನ್‌ನ ಶೇ 30ರಷ್ಟು ಷೇರು ಖರೀದಿಸಿದ ಅದಾನಿ

ನವದೆಹಲಿ (ಪಿಟಿಐ): ರೈಲ್ವೆ ಟಿಕೆಟ್ ಬುಕಿಂಗ್ ಪ್ಲಾಟ್‌ಫಾರಂ ಆಗಿರುವ ಟ್ರೈನ್‌ಮ್ಯಾನ್ ಕಂಪನಿಯು ಒಡೆತನ ಹೊಂದಿರುವ ಸ್ಟಾರ್ಕ್ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ನ (ಎಸ್‌ಇಪಿಎಲ್) ಶೇ 29.81ರಷ್ಟು ಷೇರುಗಳನ್ನು ಖರೀದಿ ಮಾಡಿರುವುದಾಗಿ ಅದಾನಿ ಎಂಟರ್‌ಪ್ರೈಸಸ್ ಶನಿವಾರ ಹೇಳಿದೆ.

ತನ್ನ ಅಂಗಸಂಸ್ಥೆ ಅದಾನಿ ಡಿಜಿಟಲ್ ಲ್ಯಾಬ್ಸ್, ₹3.56 ಕೋಟಿಗೆ ಷೇರುಗಳನ್ನು ಖರೀದಿಸಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಎಸ್‌ಇಪಿಎಲ್ 2022–23ರಲ್ಲಿ ₹4.51 ಕೋಟಿ ಮೊತ್ತದ ವಹಿವಾಟು ನಡೆಸಿದೆ.

ಎಸ್‌ಇಪಿಎಲ್‌ನ ಶೇ 100ರಷ್ಟು ಷೇರುಗಳನ್ನು ಖರೀದಿಸುವ ಒಪ್ಪಂದಕ್ಕೆ ಸಹಿ ಮಾಡಿರುವುದಾಗಿ ಅದಾನಿ ಎಂಟರ್‌ಪ್ರೈಸಸ್ ಕಳೆದ ತಿಂಗಳು ಹೇಳಿತ್ತು. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಅದಾನಿಯು ಟ್ರೈನ್‌ಮ್ಯಾನ್ ಸ್ವಾಧೀನಪಡಿಸಿಕೊಂಡ ಬಳಿಕ ಅಂತಿಮವಾಗಿ ಐಆರ್‌ಸಿಟಿಸಿಯನ್ನು ಸ್ವಾಧೀನ ಮಾಡಿಕೊಳ್ಳಲು ಕಾರಣವಾಗಬಹುದು ಎನ್ನುವುದನ್ನು ಸೂಚಿಸುತ್ತಿದೆ ಎಂದು ಹೇಳಿದ್ದರು.

ಈ ಆರೋಪವನ್ನು ಐಆರ್‌ಸಿಟಿಸಿ ತಳ್ಳಿಹಾಕಿತ್ತು. ನಿತ್ಯವೂ 14.5 ಲಕ್ಷ ಟಿಕೆಟ್‌ಗಳು ಬುಕ್ ಆಗುತ್ತಿದ್ದು, ಅದರಲ್ಲಿ ಶೇ 81ರಷ್ಟು ಐಆರ್‌ಟಿಸಿ ಮೂಲಕವೇ ಬುಕ್ ಮಾಡಲಾಗುತ್ತಿದೆ. ಹೀಗಾಗಿ ಐಆರ್‌ಸಿಟಿಸಿ ಮತ್ತು ಅದರ ಏಜೆಂಟ್‌ಗಳ (ಟ್ರೈನ್‌ಮ್ಯಾನ್ ಒಳಗೊಂಡು) ಮಧ್ಯೆ ಯಾವುದೇ ಸ್ಪರ್ಧೆ ಇಲ್ಲ ಎಂದು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿತ್ತು. ಬುಕಿಂಗ್ ಆಗುತ್ತಿರುವ ಒಟ್ಟು ಟಿಕೆಟ್‌ಗಳಲ್ಲಿ ಟ್ರೈನ್‌ಮ್ಯಾನ್ ಪಾಲು ಶೇ 0.13ರಷ್ಟು ಮಾತ್ರವೇ ಇದೆ ಎಂದು ತಿಳಿಸಿದೆ.

ಟ್ರಾವೆಲ್ ಬುಕಿಂಗ್ ವಹಿವಾಟಿನಲ್ಲಿ ಅದಾನಿ ಎಂಟರ್‌ಪ್ರೈಸಸ್ ಹೂಡಿಕೆ ಮಾಡುತ್ತಿರುವುದು ಇದು ಎರಡನೇ ಬಾರಿ. 2021ರ ಅಕ್ಟೋಬರ್‌ನಲ್ಲಿ ಫ್ಲಿಪ್‌ಕಾರ್ಟ್ ಒಡೆತನದ ಕ್ಲಿಯರ್‌ಟ್ರಿಪ್ ಪ್ರೈವೇಟ್ ಲಿ.ನಲ್ಲಿ ಅಲ್ಪ ಪ್ರಮಾಣದ ಷೇರುಗಳನ್ನು ಖರೀದಿ ಮಾಡಿತ್ತು.

‘ಸ್ಥಳೀಯ ಕರೆನ್ಸಿಗಳಲ್ಲಿ ಭಾರತ, ತಾಂಜಾನಿಯಾ ವ್ಯವಹಾರ’

ದಾರ್ ಎಸ್ ಸಲಾಮ್ (ತಾಂಜಾನಿಯಾ) (ಪಿಟಿಐ): ಭಾರತ ಮತ್ತು ತಾಂಜಾನಿಯಾ ಸ್ಥಳೀಯ ಕರೆನ್ಸಿ ಮೂಲಕ ವ್ಯವಹಾರ ಆರಂಭಿಸಿವೆ. ಇದರಿಂದ ಉಭಯ ದೇಶಗಳ ವಾಣಿಜ್ಯ ವ್ಯವಹಾರಗಳಿಗೆ ಉತ್ತೇಜನ ದೊರಕಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶನಿವಾರ ಹೇಳಿದರು.

ಕಾರ್ಯಕ್ರಮದಲ್ಲಿ ಕೈಗಾರಿಕೋದ್ಯಮಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಉಭಯ ದೇಶಗಳ ನಡುವಣ ದ್ವಿಪಕ್ಷೀಯ ವ್ಯಾಪಾರವು ಬಲಿಷ್ಠವಾಗಿ ಬೆಳೆಯುತ್ತಿದೆ. 2022–23ನೇ ಸಾಲಿನಲ್ಲಿ ₹52,873 ಕೋಟಿ ತಲುಪಿದೆ ಎಂದರು.

ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡ ಮತ್ತು ಕೆನರಾ ಬ್ಯಾಂಕ್‌ಗಳು ತಾಂಜಾನಿಯಾದಲ್ಲಿ ಕಾರ್ಯನಿರ್ವಹಿಸುತ್ತಿವೆ.

ತಾಂಜಾನಿಯಾ ಅಧ್ಯಕ್ಷೆ ಭೇಟಿ: ಜೈಶಂಕರ್ ಅವರು ತಾಂಜಾನಿಯಾ ಅಧ್ಯಕ್ಷೆ ಸಮಿಯಾ ಹಸನ್ ಅವರನ್ನು ಭೇಟಿ ಮಾಡಿದರು. ಈ ವೇಳೆ ರಕ್ಷಣೆ, ಭದ್ರತೆ, ಸಾಮರ್ಥ್ಯ ವೃದ್ಧಿ ಸೇರಿದಂತೆ ವಿವಿಧ ವಲಯಗಳ ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಚರ್ಚೆ ನಡೆಸಿದರು.

ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ತಾಂಜಾನಿಯಾ ಅಧ್ಯಕ್ಷೆ ಸಮಿಯಾ ಹಸನ್ ಅವರನ್ನು ಭೇಟಿ ಮಾಡಿದರು –ಪಿಟಿಐ ಚಿತ್ರ

ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಸ್ಟೆರ್ಗೋಮೆನಾ ಟಾಕ್ಸ್ ಅವರೊಂದಿಗೂ ಮಾತುಕತೆ ನಡೆಸಿದರು. ಈ ವೇಳೆ ತಾಂಜಾನಿಯಾ ಜತೆಗಿನ ಬಾಂಧವ್ಯ ವೃದ್ಧಿಗೆ ಭಾರತ ಬದ್ಧ ಎಂದು ಹೇಳಿದರು.

ವಿವೇಕಾನಂದ ಪುತ್ಥಳಿ ಅನಾವರಣ: ಇಲ್ಲಿನ ಭಾರತೀಯ ಸಾಂಸ್ಕೃತಿಕ ಕೇಂದ್ರದಲ್ಲಿ ಸ್ಥಾಪಿಸಲಾದ ಸ್ವಾಮಿ ವಿವೇಕಾನಂದ ಪುತ್ಥಳಿಯನ್ನು ಜೈಶಂಕರ್ ಅನಾವರಣಗೊಳಿಸಿದರು.

ಸಂಕ್ಷಿಪ್ತ ಸುದ್ದಿ

ಯುವಕನ ಹತ್ಯೆ: ಪ್ರತಿಭಟನೆಗೆ ಪೊಲೀಸರ ನಿಷೇಧ

ಪ್ಯಾರಿಸ್ (ರಾಯಿಟರ್ಸ್): ಕಾರು ಚಾಲನೆ ಮಾಡುತ್ತಿದ್ದ 17 ವರ್ಷದ ಯುವಕನನ್ನು ಪೊಲೀಸ್ ಅಧಿಕಾರಿಗಳು ಟ್ರಾಫಿಕ್‌ನಲ್ಲಿ ತಪಾಸಣೆ ವೇಳೆ ಗುಂಡಿಟ್ಟು ಕೊಂದ ಘಟನೆ ಖಂಡಿಸಿ ಮೃತ ಯುವಕನ ಕುಟುಂಬ ಶನಿವಾರ ಕರೆ ನೀಡಿದ್ದ ಪ್ರತಿಭಟನಾ ರ‍್ಯಾಲಿಗೆ ಪೊಲೀಸರು ಅನುಮತಿ ನೀಡಲಿಲ್ಲ.

ಈ ಕುರಿತು ಪ್ಯಾರಿಸ್ ಪೊಲೀಸ್ ಇಲಾಖೆ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಣೆ ನೀಡಿದ್ದು, ‘ಸಾರ್ವಜನಿಕ ಸುವ್ಯವಸ್ಥೆಗೆ ತೊಂದರೆಯಾಗುವ ಹಿನ್ನೆಲೆಯಲ್ಲಿ ‘ದ ಲಾ ರಿಪಬ್ಲಿಕ್’ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ನಿಷೇಧಿಸಲಾಗಿದೆ’ ಎಂದು ತಿಳಿಸಿದೆ.

ರಾಕೆಟ್ ದಾಳಿಗೆ 8 ಮಂದಿ ಸಾವು

ಕೀವ್, ಉಕ್ರೇನ್ (ಎಎಫ್‌ಪಿ): ರಷ್ಯಾ ನಡೆಸಿದ ರಾಕೆಟ್ ದಾಳಿಯಲ್ಲಿ ಪೂರ್ವ ಉಕ್ರೇನ್‌ನ ಲೈಮನ್ ನಗರದಲ್ಲಿ 8 ನಾಗರಿಕರು ಮೃತಪಟ್ಟಿದ್ದು, 13 ಜನ ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಆಂತರಿಕ ಸಚಿವಾಲಯ ತಿಳಿಸಿದೆ.

ಬೆಳಿಗ್ಗೆ 10 ಗಂಟೆ ಸಮಯದಲ್ಲಿ ನಡೆದ ರಾಕೆಟ್ ದಾಳಿಯಲ್ಲಿ ವಸತಿ ಕಟ್ಟಡ, ಒಂದು ಮುದ್ರಣಾಲಯ ಮೂರು ಕಾರುಗಳಿಗೆ ಬೆಂಕಿ ತಗುಲಿ ಹಾನಿಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

ವೈಮಾನಿಕ ದಾಳಿ: 22 ಮಂದಿ ಸಾವು

ಕೈರೋ(ರಾಯಿಟರ್ಸ್): ಪಶ್ಚಿಮ ಒಮದ್ರುಮನ್‌ನಲ್ಲಿ ಸುಡಾನ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 22 ಜನರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಖಾರ್ಟೂಮ್ ರಾಜ್ಯದ ಆರೋಗ್ಯ ಸಚಿವಾಲಯ ಶನಿವಾರ ತಿಳಿಸಿದೆ.

ಸೇನೆ ಮತ್ತು ಅರೆಸೇನಾ ಪಡೆಗಳ ನಡುವಿನ ಸಂಘರ್ಷ 12ನೇ ವಾರಕ್ಕೆ ಕಾಲಿಟ್ಟಿದೆ. 1,133 ಜನರು ಮೃತಪಟ್ಟಿದ್ದು, 29 ಲಕ್ಷ ಜನರು ನೆರೆಯ ದೇಶಗಳಿಗೆ ವಲಸೆ ಹೋಗಿದ್ದಾರೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ವ್ಯಾನ್ ಸ್ಫೋಟ: ಏಳು ಪ್ರಯಾಣಿಕರ ದುರ್ಮರಣ

ಲಾಹೋರ್ (ಎಪಿ): ಪೂರ್ವ ಪಾಕಿಸ್ತಾನದಲ್ಲಿ ಶನಿವಾರ ಪ್ರಯಾಣಿಕರ ವ್ಯಾನ್ ಸ್ಫೋಟಗೊಂಡು ಇಬ್ಬರು ಮಕ್ಕಳು ಸೇರಿ 7 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮೃತರಲ್ಲಿ ಒಂದೇ ಕುಟುಂಬದ ನಾಲ್ವರು ಸದಸ್ಯರು ಸೇರಿದ್ದಾರೆ.

‘ರಾಸಾಯನಿಕ ಶಸ್ತ್ರಾಸ್ತ್ರ ಸಂಪೂರ್ಣ ನಾಶ’

ವಾಷಿಂಗ್ಟನ್ (ಎಎಫ್‌ಪಿ): ಮೂರು ದಶಕದಷ್ಟು ಹಳೆಯದಾದ ರಾಸಾಯನಿಕ ಶಸ್ತ್ರಾಸ್ತ್ರ ಒಪ್ಪಂದದ ಪ್ರಕಾರ, ದಾಸ್ತಾನು ಹೊಂದಿದ್ದ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಶುಕ್ರವಾರ ಘೋಷಿಸಿದ್ದಾರೆ.

‘ದಾಸ್ತಾನಿನಲ್ಲಿ ಬಾಕಿ ಉಳಿದಿದ್ದ ಶಸ್ತ್ರಾಸ್ತ್ರಗಳನ್ನು ಅಮೆರಿಕವು ಸುರಕ್ಷಿತವಾಗಿ ನಾಶಪಡಿಸಿದೆ. ಈ ಮೂಲಕ ಭೀತಿ ಮತ್ತು ರಾಸಾಯನಿಕ ಶಸ್ತ್ರಾಸ್ತ್ರ ಮುಕ್ತ ಜಗತ್ತಿಗೆ ಒಂದು ಹೆಜ್ಜೆ ಹತ್ತಿರವಾಗಿದ್ದೇವೆ’ ಎಂದು ಹೇಳಿದ್ದಾರೆ.

1993ರಲ್ಲಿ ಮಾಡಿಕೊಳ್ಳಲಾಗಿದ್ದ ಈ ಒಪ್ಪಂದ 1997ರಲ್ಲಿ ಕಾರ್ಯರೂಪಕ್ಕೆ ಬಂದಿತ್ತು. 2023ರ ಸೆಪ್ಟೆಂಬರ್ ಒಳಗಾಗಿ ನಾಶಪಡಿಸುವಂತೆ ರಾಸಾಯನಿಕ ಶಸ್ತ್ರಾಸ್ತ್ರ ನಿಷೇಧ ಸಂಘಟನೆಯು ಅಮೆರಿಕಕ್ಕೆ ಹೇಳಿತ್ತು.

ಪ್ರಜಾವಾಣಿ
ಭಾನುವಾರದ
ಪುರವಣಿ



ಮುಸ್ಸಂಜೆಯಲ್ಲಿ ಮಾನ್ಸೂನ್ ರಾಗ! 11
ಕಲೆಯ ಬಲೆ, ಕಲಾವಿದರಿಗೂ ಬೆಲೆ! 12
ತುಂಗಭದ್ರೆಯ ಬತ್ತಿದೊಡಲು... 13

ವಿಜಯಪುರ ಜಿಲ್ಲೆಯ ಕಾಗ್ಜಿ ನಿಂಬೆಯು 'ಭೌಗೋಳಿಕ ಸೂಚ್ಯಂಕ' ಪಟ್ಟ ಗಿಟ್ಟಿಸಿಕೊಂಡಿದೆ. ಹಾಗೆಂದು ಇದೇ ಮೊದಲ ಉತ್ಪನ್ನವೇನಲ್ಲ. ಆದರೆ, 'ಜಿಐ ನೋಂದಣಿ' ಪಡೆದ ನಂತರ ಮುಂದೇನು? ರೈತ ಸಮುದಾಯಕ್ಕೆ ಅದರಿಂದ ಹೆಚ್ಚು ಪ್ರಯೋಜನ ಹೇಗೆ ಸಿಕ್ಕೀತು?

ಜಿಐ ನೋಂದಣಿ ಮುಂದೇನ್ಹೇಳಿ?

ಆನಂದತೀರ್ಥ ಪ್ಯಾಟಿ

ಪಾರಂಪರಿಕ ಉತ್ಪನ್ನಕ್ಕೊಂದು ವಿಶೇಷ ಮುದ್ರೆಯೊತ್ತುವ ಸುದ್ದಿ ಆಗಾಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾಗುತ್ತದೆ. ಸಾಂಪ್ರದಾಯಿಕ ತಿಂಡಿ-ತಿನಿಸುಗಳು, ನೈಸರ್ಗಿಕ ಪದಾರ್ಥಗಳು, ಕರಕುಶಲ ವಸ್ತುಗಳು ಪಡೆಯುವ 'ಜಿಐ ಟ್ಯಾಗ್'ಗೆ ಸಂಬಂಧಿಸಿದಂತೆ ಒಂದಷ್ಟು ಚರ್ಚೆಯಾಗುತ್ತವೆ. ಅದರ ಪ್ರಯೋಜನಗಳು ಜನರಿಗೆ ಗೊತ್ತಾಗುವುದು ಅಸ್ಪಷ್ಟ. ಚರ್ಚೆಯು ಕಾವು ಕಳೆದುಕೊಂಡೊಡನೆ ಪ್ರಯೋಜನದ ಸಂಗತಿಯೂ ಹಿನ್ನೆಲೆಗೆ ಸರಿದುಬಿಡುತ್ತದೆ. ಮತ್ತೆ 'ಜಿಐ ಟ್ಯಾಗ್' ಕಾಣಿಸುವುದು ಇನ್ನೊಂದು ಉತ್ಪನ್ನಕ್ಕೆ ಆ ಪಟ್ಟ ಸಿಕ್ಕಾಗಲೇ!

ವಿಶ್ವವೇ ಒಂದು ಅಂಗಡಿಯಾಗಿರುವಾಗ ಒಂದೂರಿನ ಸರಕು ಇನ್ನೊಂದೂರಿಗೆ ಬರಲೆಷ್ಟು ಹೊತ್ತು? ಆದರೆ, ಉತ್ಪನ್ನಗಳ ಪ್ರವಾಹದಲ್ಲಿ ಸ್ಥಳೀಯ ಸೊಗಡಿನ ಸರಕುಗಳು ಅಸ್ತಿತ್ವಕ್ಕೆ ಪರದಾಡಬೇಕಿದೆ. ಪಾರಂಪರಿಕ ಸಾಮಗ್ರಿಗಳಿಗೆ ವಿಶೇಷ ಮೊಹರು ಹಾಕಿ, ಆ ಮೂಲಕ ಜಾಗತಿಕ ಮಟ್ಟದ ಸಂತೆಯಲ್ಲೂ ಸ್ಥಳೀಯ ಸೊಗಡು ಉಳಿಸುವ ಪ್ರಯತ್ನಕ್ಕೆ 'ಜಿಐ ಟ್ಯಾಗ್' ರೆಕ್ಕೆಪುಕ್ಕ ಹಚ್ಚುತ್ತದೆ.

ಕೆಲವು ದಿನಗಳ ಹಿಂದೆ ವಿಜಯಪುರ ಜಿಲ್ಲೆಯ ಕಾಗ್ಜಿ ನಿಂಬೆಗೆ 'ಜಿಐ' ಹಣೆಪಟ್ಟಿ ಸಿಕ್ಕಾಗ ಮತ್ತೆ ಆ 'ಟ್ಯಾಗ್' ಚರ್ಚೆಗೆ ಬಂದಿತು. ನಾಡಿನಲ್ಲಿ ಈವರೆಗೆ ಹತ್ತಾರು ಉತ್ಪನ್ನಗಳಿಗೆ ಈ ಪಟ್ಟ ಸಿಕ್ಕಿದ್ದರೂ, ಹೆಚ್ಚೇನೂ ಮಾಹಿತಿ ಸಿಗದು. ಜನಸಾಮಾನ್ಯರ ಭಾಷೆಯಲ್ಲಿ 'ಜಿಐ ಟ್ಯಾಗ್' ಎಂದು ಹೇಳಲಾಗುತ್ತಿದೆ; ವಾಸ್ತವದಲ್ಲಿ ಇದು ನೋಂದಣಿ-'ಜಿಯಾಗ್ರಫಿಕಲ್ ಇಂಡಿಕೇಶನ್ ರಿಜಿಸ್ಟ್ರಿ' (ಜಿಐ ನೋಂದಣಿ). ಚೆನ್ನೈನ ಜಿಯಾಗ್ರಫಿಕಲ್ ಇಂಡಿಕೇಶನ್ಸ್ ರಿಜಿಸ್ಟ್ರಿ ಪ್ರಾಧಿಕಾರವು ಈ ಕೆಲಸ ನಿರ್ವಹಿಸುತ್ತಿದೆ.

ಪೇಟೆಂಟ್ ಮತ್ತು ಜಿಐ ಟ್ಯಾಗ್ ಒಂದೇ ಎನ್ನುವುದು ಸಾಮಾನ್ಯ ವ್ಯಾಖ್ಯಾನ. ಅದು ಸರಿಯಲ್ಲ. ಹೊಸ ಸಂಶೋಧನೆ ಅಥವಾ ತಂತ್ರಜ್ಞಾನಕ್ಕೆ ಪೇಟೆಂಟ್ ಕೊಟ್ಟರೆ, ಸಾಂಪ್ರದಾಯಿಕ ಅಥವಾ ಪಾರಂಪಾರಿಕ ಸಾಮಗ್ರಿಗಳಿಗೆ 'ಜಿಐ ನೋಂದಣಿ' ಕೊಡಲಾಗುತ್ತದೆ. ಅದರಲ್ಲೂ ಸ್ಥಳೀಯ ವೈಶಿಷ್ಟ್ಯ ಪ್ರತಿನಿಧಿಸುವ ಕೃಷಿ, ತೋಟಗಾರಿಕೆ, ಕರಕುಶಲ ಕಲಾಕೃತಿ ಅಥವಾ ನೈಸರ್ಗಿಕ ಉತ್ಪನ್ನಗಳಿಗೆ 'ಜಿಐ ನೋಂದಣಿ' ಸಿಗುತ್ತದೆ.

ಭಾರತವು ವಿಶ್ವ ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ, ಮಾರುಕಟ್ಟೆಯ ಗಡಿ ಅಳಿಸಿಹೋಯಿತು. ಈಗ ಇಡೀ ಜಗತ್ತು ಒಂದು ಅಂಗಡಿ! ಮಳಿಗೆಗೆ ಎಲ್ಲೆಲ್ಲಿಂದಲೋ ಬಂದುಬೀಳುವ ಸಾಮಗ್ರಿಗಳಂತೆ, ದೇಶವಿದೇಶಗಳಿಂದ ತರಹೇವಾರಿ ಸರಕು-ಸರಂಜಾಮು ಭಾರತದ ಮಾರುಕಟ್ಟೆಗೆ ಆಮದಾಗುತ್ತಿವೆ. ಹೀಗೆ ಬೇರೆ ಕಡೆಯ ಉತ್ಪನ್ನಗಳು ದೇಶದೊಳಗೆ ಬಂದಾಗ, ನಮ್ಮ ಪಾರಂಪರಿಕ ಉತ್ಪನ್ನಗಳ ಗತಿ ಏನಾದೀತು? ಮಾರುಕಟ್ಟೆಯಲ್ಲಿ ಇವುಗಳನ್ನು ಉಳಿಸಿಕೊಳ್ಳುವುದು ಹೇಗೆ? ಈ ಪ್ರಶ್ನೆಗೆ ಉತ್ತರವಾಗಿ ನಮ್ಮದೇ ಸೊಗಡಿನ ಉತ್ಪನ್ನಗಳು ದೇಶ-ವಿದೇಶದ ಮಾರುಕಟ್ಟೆಗಳಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಂಡು, ಅವುಗಳಿಗೆ ವಿಶೇಷ ವಹಿವಾಟಿನ ಅವಕಾಶ ಒದಗಿಸುವ ಹಿನ್ನೆಲೆಯಲ್ಲಿ ಭಾರತ ಸರ್ಕಾರವು 2003ರಲ್ಲಿ 'ಜಿಐ ನೋಂದಣಿ' ಶುರು ಮಾಡಿತು.

12ನೇ ಪುಟಕ್ಕೆ...

ತೆಳು ಸಿಪ್ಪೆಯ ಕಾಗ್ಜಿ ನಿಂಬೆ

ಈಚೆಗಷ್ಟೇ 'ಜಿಐ' ಪಡೆದ ಕಾಗ್ಜಿ ನಿಂಬೆಯನ್ನು ವಿಜಯಪುರ ಜಿಲ್ಲೆಯ ಇಂಡಿ ಭಾಗದಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಈ ನಿಂಬೆಹಣ್ಣಿನ ಸಿಪ್ಪೆ ತೆಳುವಾಗಿದ್ದು, ಅಧಿಕ ಆಮ್ಲೀಯ ಗುಣ ಮತ್ತು ರಸ ಹೊಂದಿದೆ. ಈ ವಿಶೇಷ ತಳಿ ನಿಂಬೆಯ ಇತಿಹಾಸ, ಸಾಗುವಳಿ ಪ್ರದೇಶ, ಗುಣಲಕ್ಷಣ ಹಾಗೂ ಇನ್ನಿತರ ವಿಸ್ತೃತ ಅಧ್ಯಯನದ ಜತೆಗೆ ಅನೇಕ ತಾಂತ್ರಿಕ ವಿವರಗಳನ್ನು ಸಲ್ಲಿಸಿ, 'ಜಿಐ ನೋಂದಣಿ' ಮಾಡುವಂತೆ ಪ್ರಸ್ತಾವ ಸಲ್ಲಿಸಲಾಗಿತ್ತು. ಮೈಸೂರು ರೇಷ್ಮೆ, ಚೆನ್ನಪಟ್ಟಣ ಬೊಂಬೆ, ಇಳಕಲ್ ಸೀರೆ, ಕಿನ್ನಾಳ ಗೊಂಬೆ, ಹಡಗಲಿ ಮಲ್ಲಿಗೆ, ಬೆಂಗಳೂರಿನ ನೀಲಿ ದ್ರಾಕ್ಷಿ, ಕಲಬುರ್ಗಿ ತೊಗರಿ ಬೇಳೆ ಇತರೆ ಉತ್ಪನ್ನಗಳು ಕನ್ನಡ ನಾಡಿನಲ್ಲಿ 'ಜಿಐ ಟ್ಯಾಗ್' ಪಡೆದಿವೆ.

ಕಲ್ಲ ಬೇಟೆಯ ಕೊನೆಯ ತಲೆಮಾರು

ನಿರಂಜನ ವಾನಳ್ಳಿ

ಲೀಲಕ್ಕಳಿಗೆ ಈಗ ಎಪ್ಪತ್ತರ ಮೇಲೆ ಆಗಿದೆ. ಅವಳನ್ನು ಕೇಳಿದರೆ ಅರವತ್ತು ಎನ್ನುತ್ತಾಳೆ. ತೆಳ್ಳನೆಯ ಶರೀರ, ಶಿಸ್ತಿನ ದಿನಚರಿ, ತಣಿಯದ ಜೀವನೋತ್ಸಾಹ, ಅವಳ ವಯಸ್ಸನ್ನು ಮರೆಸುತ್ತದೆ. ಲೀಲಕ್ಕನ ವಿಶೇಷವೆಂದರೆ, ಮೂಲ್ಕಿ ತಾಲ್ಲೂಕಿನಲ್ಲಿ ನದಿಗಳು ಸಮುದ್ರ ಸೇರುವ ಅಳವೆಗಳ ಉಪ್ಪು ನೀರಲ್ಲಿ ಇಳಿದು ತಿನ್ನಬಹುದಾದ ಕಲ್ಲ ಹುಡುಕುವ ಹೆಂಗಸರ ಪೈಕಿ ಆಕೆ ಕೆಲಸದಲ್ಲೂ ಮಾತಿನಲ್ಲೂ ಎದ್ದು ಕಾಣುವ ವ್ಯಕ್ತಿ. ಈಗ ಹೀಗೆ ಕಲ್ಲ ಹುಡುಕುವ ಕಾಯಕದ ಆರು ಜನ ಹೆಂಗಸರು ಮಾತ್ರ ಉಳಿದಿದ್ದಾರೆ. ಇವರೂ ಈ ಕೆಲಸ ಕೈಬಿಟ್ಟರೆ ನದಿಯಾಳದಲ್ಲಿ ಕಪ್ಪೆಚಿಪ್ಪು ಹೆಕ್ಕುವ ಕಷ್ಟದ ಕಾಯಕ ಚರಿತ್ರೆಗೆ ಸೇರಿಹೋಗುತ್ತದೆ. ಲೀಲ, ಲಲಿತ, ವಾಸಂತಿ, ಗಿರಿಜಾ, ಕುಸುಮ, ವನಜಾ-ಈ ಆರು ಜನ ಮಹಿಳೆಯರು ಮುಲ್ಕಿ ಸಮುದ್ರ ತಟದಲ್ಲಿ ನೀರೊಳಗಿಳಿದು, 'ಕಲ್ಲ' ಎಂದು ಕರೆಸಿಕೊಳ್ಳುವ ಮೃದ್ವಂಗಿಗಳನ್ನು ಕಿತ್ತು, ಮಾಂಸ ಬಿಡಿಸಿ, ಪೇಟೆಗಳಲ್ಲಿ ಮಾರುವವರ ಕೊನೆಯ ತಲೆಮಾರು.

'ಕಾಣದ ಕಡಲಿಗೆ ಹಂಬಲಿಸಿದೆ ಮನ, ಹೋಗಿ ಸೇರುವೆನೇ ಒಂದು ದಿನ' ಎಂದು ಹಾಡುವ ನದಿ ಘಟ್ಟದಿಂದ ಇಳಿದಿಳಿದು ಬಂದು ಸಮುದ್ರ ಸೇರಿ ಒಂದಾಗುವಾಗ, ಸಮುದ್ರದ ನೀರು ಕೂಡ ನದಿಯೊಳಕ್ಕೆ ಸೇರಿಹೋಗಿ ನದಿಯ ಸಿಹಿ ನೀರನ್ನು ಉಪ್ಪಾಗಿಸುತ್ತದೆ. ಅಗಾಧ ಮರಳಿನ ದಿನ್ನೆಗಳನ್ನು ಸೃಷ್ಟಿಸುತ್ತದೆ. ಇದನ್ನು ಅಳವೆ ಎನ್ನುತ್ತಾರೆ. ಈ ಅಳವೆಗಳಲ್ಲಿ ವಿಶಿಷ್ಟ ರೀತಿಯ ಮೃದ್ವಂಗಿಗಳು ಬೆಳೆಯುತ್ತವೆ. ಅವುಗಳನ್ನು 'ಕಲ್ಲ' ಎಂದು ಸ್ಥಳೀಯವಾಗಿ ಕರೆಯುತ್ತಾರೆ. ಅಳವೆಗಳ ಆಳದಲ್ಲಿ ನೀರೊಳಗೆ ಬೆಳೆಯುವ ಈ ಕಲ್ಲಗಳು ನೆಲಕ್ಕೆ ಅಥವಾ ಕಲ್ಲುಗಳಿಗೆ ಗಟ್ಟಿಯಾಗಿ ಅಂಟಿಕೊಂಡು ಬೆಳೆದಿರುವುದರಿಂದ ಇವುಗಳನ್ನು ಕೆತ್ತಿ ತೆಗೆಯುವುದು ಬಹಳ ಕಷ್ಟ. ಆಳವಿದ್ದರೆ ಮುಳುಗಿ ನದಿಯಾಳಕ್ಕೆ ಹೋಗಿ ಇವುಗಳನ್ನು ಎತ್ತಬೇಕು. ಕಲ್ಲ ತರಲು ಹೋಗಿ ಜೀವ ತೆತ್ತವರಿದ್ದಾರೆ.

ಕಲ್ಲಗಳನ್ನು ಬಾಚುವ ಕೆಲಸ ವಿಜ್ಞಾನ, ಸಂಪ್ರದಾಯ, ಸಾಮಾನ್ಯ ಜ್ಞಾನಗಳ ಸಮನ್ವಯ. ಈ ಹೆಂಗಸರು ಕಲ್ಲ ಬೇಟೆಗೆ ಮುಳುಗುವುದಕ್ಕೆ ಒಂದು ಕ್ರಮವಿದೆ. ಅಮಾವಾಸ್ಯೆಯಿಂದ ಆರಂಭಿಸಿ ಇವರು ನೀರಿಗೆ ಇಳಿಯುವ ಗಳಿಗೆ ನದಿಯಲ್ಲಿ ನೀರು ಇಳಿಯುವುದನ್ನೇ ಅವಲಂಬಿಸಿದೆ. ಸಮುದ್ರದಲ್ಲಿ ತೆರೆಗಳ ಅಬ್ಬರ ಹೆಚ್ಚಿದಾಗ ನದಿ ನೀರಲ್ಲಿ ಉಬ್ಬರ-ನಂತರ ಇಳಿತ. ಹೀಗೆ ನದಿಯ ನೀರು ಇಳಿಯುವುದನ್ನೇ ಕಾಯುವ ಈ ಹೆಂಗಸರು ಎದೆ ಮಟ್ಟದ ನೀರಲ್ಲಿ ಇಳಿದು ನೆಲದಲ್ಲಿ ಕಲ್ಲಗಳನ್ನು ಹುಡುಕುತ್ತಾರೆ. ಅವು ನದಿಯಾಳದ ಬಂಡೆಗೆ ಅಂಟಿಕೊಂಡು ಬೆಳೆದಿರುತ್ತವೆ. ಎಷ್ಟು ಗಟ್ಟಿಯಾಗಿ ಈ ಚಿಪ್ಪುಗಳು ಕಲ್ಲಿಗೆ ಅಂಟಿಕೊಂಡಿರುತ್ತವೆಯೆಂದರೆ, ಅವನ್ನು ಬಾಚಿ ಕೀಳಲು ಕೆಲವೊಮ್ಮೆ ಕತ್ತಿ, ಗುದ್ದಲಿ, ಪಿಕಾಸಿಗಳೇ ಬೇಕಾಗುತ್ತವೆ. ಈ ಆಯುಧಗಳನ್ನು ಹಿಡಿದು ನೀರಲ್ಲಿ ಮುಳುಗಿ ಕಪ್ಪೆ ಚಿಪ್ಪಿನ ಗುಪ್ಪೆಯನ್ನು ಹೆರೆದು ತರುವವರೆಗೂ ಉಸಿರು ಬಿಗಿಹಿಡಿದಿರಬೇಕು. ಅದಕ್ಕೇ ಇದು ಈ ಕಾಲದವರಿಗೆ ಆಗದ ಸಾಹಸ.

ಮೂಲ್ಕಿ ತಾಲೂಕಿನ ಚಿತ್ರಾಪು ಅಳವೆ, ಕಲ್ಲಗಳಿಗೆ ಬಹಳ ಕಾಲದಿಂದ ಪ್ರಸಿದ್ಧ. ತಿನ್ನಬಹುದಾದ ಮೃದ್ವಂಗಿಗಳು ಬೆಳೆಯಲು ಇಲ್ಲಿ ಅನುಕೂಲಕರ ವಾತಾವರಣವಿದೆ. ಇಲ್ಲಿ ಹರಿಯುವ ನದಿ ಶಾಂಭವಿ. ನದಿಯ ನೀರು ಬಹಳ ಆಳವಿಲ್ಲ. ಕಲ್ಲಗಳನ್ನು ಹೆಕ್ಕುವವರಿಗೂ ಈ ಜಾಗ ಪ್ರಶಸ್ತ. ಹೀಗಾಗಿ ನೂರಾರು ವರ್ಷಗಳಿಂದ ಚಿತ್ರಾಪು ಹಾಗೂ ಸುತ್ತಮುತ್ತಲ ಅಳವೆಗಳಲ್ಲಿ ಕಲ್ಲಗಳನ್ನು ಹಿಡಿಯುವ ಕಾಯಕ ನಡೆದುಬಂದಿದೆ. ವಿಶೇಷವೆಂದರೆ ಆದಿ ಕಾಲದಿಂದಲೂ ಇಲ್ಲಿ ಕಲ್ಲಗಳನ್ನು ಹಿಡಿಯುವವರು ಹೆಂಗಸರೇ. ಬೆಳಿಗ್ಗೆ ಬೇಗ ಮನೆ ಕೆಲಸ ಮುಗಿಸಿ ಈ ಹೆಂಗಸರು ನದಿ ದಡಕ್ಕೆ ಬರುತ್ತಾರೆ. ಅಲ್ಲಿ ಒಂದು ಕಡೆ ಬಟ್ಟೆ ಬದಲಿಸಿ ನೀರಿಗಿಳಿಯುವ ಬಟ್ಟೆ ತೊಡುತ್ತಾರೆ. ಕೈಕಾಲುಗಳಿಗೆ ಗವಸು ತೊಡುತ್ತಾರೆ. ಯಾಕೆಂದರೆ ಇವರು ದೋಣಿಗಳಲ್ಲಿ ಸಾಗಿ ನದಿ ಮಧ್ಯದಲ್ಲಿ ಹೊಳೆಗೆ ಇಳಿಯುತ್ತಾರೆ. ಅಲ್ಲಿ ಕಲ್ಲಗಳು ಬೆಳೆದಿದ್ದರೆ ಅವುಗಳ ಅಂಚುಗಳು ಬಹಳ ಹರಿತವಾಗಿದ್ದು, ಕೈ-ಕಾಲು ಕೊರೆಯುತ್ತವೆ. ಚಾಕುವಿನಲ್ಲಿ ಕೊಯ್ದಂತೆ ರಕ್ತ ಚಿಮ್ಮಿ, ಹುಶಾರಾಗಲು ಅನೇಕ ದಿನ ಬೇಕಾಗುತ್ತವೆ. ಮುಂಡಾಸು ಕಟ್ಟಿ, ಕೈಕಾಲುಗಳಿಗೆ ಗವಸು ಹಾಕಿ ಕಲ್ಲಗಳನ್ನು ಹಾಕಲು ಚೀಲವನ್ನು ಸೊಂಟಕ್ಕೆ ಕಟ್ಟಿಕೊಂಡು ಈ ಮಹಿಳೆಯರು ನದಿಗೆ ಇಳಿದರೆಂದರೆ ಅವತ್ತಿನ ಕೈಕಾಸು ಸಿಕ್ಕಿದಂತೆಯೇ.

ಈ ಮಹಿಳೆಯರು ಕಲ್ಲಗಳನ್ನು ಹಿಡಿದು ತಂದು ಮೂಲ್ಕಿ ಪೇಟೆಯಲ್ಲಿ ಮಾರುತ್ತಾರೆ. ಅಲ್ಲಿ ಇವಕ್ಕೆ ಈಗ ನೂರಕ್ಕೆ ಇನ್ನೂರ ಐವತ್ತು ರೂಪಾಯಿ ಸಿಗುತ್ತವೆ. ಇನ್ನೂರು ಮುನ್ನೂರು ಕಲ್ಲಗಳನ್ನು ಒಂದು ದಿನ ಬಾಚಲು ಸಾಧ್ಯವಾದರೆ ಅಂದು ಲಾಟರಿ ಹೊಡೆದಂತೆ. ಲೀಲಕ್ಕ ಹೇಳುವ ಹಾಗೆ ಆಕೆ ಕಲ್ಲ ಹೆಕ್ಕಲು ಆರಂಭಿಸಿದ ಕಾಲ ಬಹಳ ಕಷ್ಟದ್ದಾಗಿತ್ತು. ಕಲ್ಲಕ್ಕೆ ಆಗ ಸಿಗುತ್ತಿದ್ದುದು ಐದು ಪೈಸೆ ಮಾತ್ರ. ಮನೆ ಮನೆಗೆ ಹೋಗಿ ದುಂಬಾಲು ಬಿದ್ದು ಮಾರಬೇಕಿತ್ತು. ಈಗ ಹಾಗಲ್ಲ. ಕಲ್ಲಕ್ಕೆ ತುಂಬ ಬೇಡಿಕೆ. ಆದರೆ ಹೆಕ್ಕಿ ತೆಗೆಯುವವರೇ ಇಲ್ಲ. ಗಂಡಸರು ಮೀನು ಹಿಡಿಯಲು ಹೋಗುತ್ತಾರೆ, ಕಲ್ಲಕ್ಕೆ ಬರುವುದಿಲ್ಲ. ಕಲಿತ ಮಕ್ಕಳು ಇತ್ತ ತಲೆಹಾಕುವುದಿಲ್ಲ. ಹೀಗಾಗಿ ಲೀಲಕ್ಕನದು ಕಲ್ಲ ಹಿಡಿಯುವ ಕೊನೆಯ ತಲೆಮಾರು.

ಅನಾದಿ ಕಾಲದಿಂದ ಕಡು ಬಡವರ ಜೀವನೋಪಾಯವಾಗಿರುವ ಕಲ್ಲ ಬೇಟೆಗೆ ಸರ್ಕಾರ ಹೊಸ ರೂಪ ನೀಡಲು ಪ್ರಯತ್ನಿಸುತ್ತಿದೆ. ಈ ಆರು ಮಹಿಳೆಯರಿಗೆ ಉಚಿತವಾಗಿ ದೋಣಿ ಒದಗಿಸಿದೆ. ನದಿ ದಂಡೆಯಲ್ಲೇ ಚಪ್ಪರ ಕಟ್ಟಿ ಕಲ್ಲ ಬೆಳೆಸುವ ತರಬೇತಿ ನೀಡಿದೆ. ಆದರೂ ಬಿರುಮಳೆಯಿಂದ ಚಪ್ಪರವೇ ಉರುಳಿ ಬೀಳುವ ಸಾಧ್ಯತೆಯಿದೆ. ಪ್ರಾಕೃತಿಕವಾಗಿ ಬೆಳೆಯುವ ಕಲ್ಲಗಳಷ್ಟು ಚಪ್ಪರದಲ್ಲಿ ಬೆಳೆಯುವ ಕಲ್ಲಗಳು ರುಚಿಯಲ್ಲ ಎಂದು ಗ್ರಾಹಕರು ಹೇಳುತ್ತಾರೆ. ಆದರೆ ಹೀಗೆ ಪ್ರಾಕೃತಿಕವಾಗಿ ಅಳವೆಗಳಲ್ಲಿ ಬೆಳೆಯುವ ಕಲ್ಲಗಳು ಇನ್ನೆಷ್ಟು ದಿನ ಸಿಕ್ಕಾವು?-ಕಾಲವೇ ಹೇಳಬೇಕು.

ಕಲ್ಲ ಬೇಟೆಯಲ್ಲಿ ಲೀಲಕ್ಕ

ಮೂಲ್ಕಿ ತಾಲ್ಲೂಕಿನ ಚಿತ್ರಾಪುವಿನಲ್ಲಿ ತಿನ್ನಬಹುದಾದ ಮೃದ್ವಂಗಿಗಳು ಬೆಳೆಯಲು ಅನುಕೂಲಕರ ವಾತಾವರಣವಿದೆ. ಇಲ್ಲಿನ ಶಾಂಭವಿ ನದಿಯಲ್ಲಿ ಕಲ್ಲಗಳನ್ನು ಹೆಕ್ಕಿ, ಚಿಕ್ಕಾಸು ಸಂಪಾದಿಸುವ ಮಹಿಳೆಯರದ್ದು ಸಾಹಸಗಾಥೆಯೇ ಸರಿ.

ಕಲ್ಲ ಹುಡುಕಲು ಆಳಕ್ಕೆ ಇಳಿದವರು

ಡ್ಯಾಂ ಒಳಗೊಂದು ಡ್ಯಾಂ



ಹಿರೇಭಾಸ್ಕರ (ಮಡೇನೂರು) ಜಲಾಶಯದ ನೋಟ

ವೆಂಕಟೇಶ ಜಿ.ಎಚ್

ಇವನು ಇರುಳಿಗೆ ಹಾದಿ ಮಾಡಿಕೊಡಲು ನಿತ್ಯ ಮುಳುಗುವ ಬಾನ ಭಾಸ್ಕರನಲ್ಲ. ಬದಲಿಗೆ ನಾಡಿನ ಬೆಳಕ ಬೇಡಿಕೆ ನೀಗಿಸಲು ಶರಾವತಿಯ ಒಡಲಲ್ಲಿ ಶಾಶ್ವತವಾಗಿ ಮುಳುಗಿದ ಹಿರೇಭಾಸ್ಕರ..

ಆರು ದಶಕಗಳ ಹಿಂದೆ ಶರಾವತಿ ನದಿಗೆ ಅಡ್ಡಲಾಗಿ ಲಿಂಗನಮಕ್ಕಿ ಅಣೆಕಟ್ಟು ಎದ್ದು ನಿಲ್ಲುತ್ತಿದ್ದಂತೆಯೇ ಸಾಗರ ತಾಲ್ಲೂಕಿನ ಮಡೇನೂರು ಬಳಿಯ ಹಿರೇಭಾಸ್ಕರ ಜಲಾಶಯ ಅದರೊಳಗೆ ಮುಳುಗಿತ್ತು. ಈಗಲೂ ಮುಳುಗಡೆಯಾಗಿದ್ದ ಹಿರೇಭಾಸ್ಕರ ಜಲಾಶಯದ ಅವಶೇಷಗಳು ಪ್ರತಿ ವರ್ಷ ಬೇಸಿಗೆಯಲ್ಲಿ ಕಾಣಸಿಗುತ್ತವೆ. ದಶಕಗಳ ನೀರಿನಲ್ಲಿ ಮುಳುಗಿದ್ದರೂ ಅವು ಈಗಲೂ ಗಟ್ಟಿಮುಟ್ಟಾಗಿದ್ದು, ಆಗಿನ ಉತ್ಕೃಷ್ಟ ನಿರ್ಮಾಣ ತಾಂತ್ರಿಕತೆಗೆ ಕೈಗನ್ನಡಿಯಾಗಿವೆ.

ಈ ಬಾರಿಯ ಕಡು ಬೇಸಿಗೆ, ಮಳೆಯ ವಿಳಂಬದ ಕಾರಣ ಶರಾವತಿ ಬಸವಳಿದ್ದಾಳೆ. ಹೀಗಾಗಿ ಹಿರೇಭಾಸ್ಕರ ಜಲಾಶಯದ ದರ್ಶನ ಕಳೆದ ಮೂರು ತಿಂಗಳಿಂದ ಅಬಾಧಿತವಾಗಿದೆ. ನೋಡ ಬಂದವರಿಗೆ ತನ್ನ ವೈಭವದ ದಿನಗಳನ್ನು ಮೆಲುಕು ಹಾಕಲು ಜಲಾಶಯದ ಅವಶೇಷಗಳು ನೆರವಾಗುತ್ತಿವೆ. ಹಿನ್ನೀರ ಹಾದಿಯಲ್ಲಿ, ಹಾಳುಬಿದ್ದ ಕಟ್ಟಡಗಳಲ್ಲಿ ಹೆಜ್ಜೆ ಹಾಕಿದರೆ ಡ್ಯಾಂನೊಳಗೊಂದು ಡ್ಯಾಂ ಮುಳುಗಿದ ವಿಶಿಷ್ಟ ಕಥನ ಬಿಚ್ಚಿಕೊಳ್ಳುತ್ತದೆ.

ಮೈಸೂರು ಮಹಾರಾಜರಿಂದ ಅಡಿಗಲ್ಲು..

ಜೋಗದಲ್ಲಿ ಜಲವಿದ್ಯುತ್ ಉತ್ಪಾದನೆಗೆ ನೀರು ಸಂಗ್ರಹಿಸಿ ಬಳಕೆ ಮಾಡಲು 1939ರ ಫೆಬ್ರುವರಿ 5ರಂದು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಶರಾವತಿ ನದಿಗೆ ಅಡ್ಡಲಾಗಿ ಸಾಗರ ತಾಲ್ಲೂಕಿನ ಮಡೇನೂರು ಬಳಿ ಹಿರೇಭಾಸ್ಕರ ಜಲಾಶಯ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದರು.

ಅಂದಿನ ಮೈಸೂರು ಸಂಸ್ಥಾನದ ನೀರಾವರಿ ಇಲಾಖೆಯ ಮುಖ್ಯ ಎಂಜಿನಿಯರ್ ಎಂ.ನರಸಿಂಹಯ್ಯ ಮಾರ್ಗದರ್ಶನದಲ್ಲಿ ಈ ಜಲಾಶಯದ ನಿರ್ಮಾಣ ಕಾಮಗಾರಿ ಆರಂಭವಾಗಿತ್ತು. ಅಧೀಕ್ಷಕ ಎಂಜಿನಿಯರ್ ಸುಬ್ಬರಾವ್ ಅದರ ಉಸ್ತುವಾರಿ ವಹಿಸಿದ್ದರು. 25 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ, 114 ಅಡಿ ಎತ್ತರದ ಈ ಜಲಾಶಯದ ನಿರ್ಮಾಣ ಕಾರ್ಯ 1947ರಲ್ಲಿ ಪೂರ್ಣಗೊಂಡು, ನೀರು ಸಂಗ್ರಹ ಆರಂಭವಾದದ್ದು ಅದೇ ವರ್ಷ. ಜಲಾಶಯದ ನೀರು ಬಳಕೆ ಮಾಡಿ ವಿದ್ಯುತ್ ಉತ್ಪಾದಿಸುವ ಮಹಾತ್ಮಾ ಗಾಂಧಿ ಜಲ ವಿದ್ಯುದಾಗಾರ 1948ರ ಫೆಬ್ರುವರಿ 21ರಂದು ಪ್ರಾರಂಭವಾಗಿ, 120 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಶುರುವಾಯಿತು.

1956ರಲ್ಲಿ ಹಳೆಯ ಮೈಸೂರು ಸಂಸ್ಥಾನ ವಿಶಾಲ ಕರ್ನಾಟಕದ ಸ್ವರೂಪ ಪಡೆದಾಗ, ರಾಜ್ಯದಲ್ಲಿ ಹೆಚ್ಚಿದ ವಿದ್ಯುತ್ ಬೇಡಿಕೆ ನೀಗಿಸಲು ಸರ್ಕಾರ ಮುಂದಾಯಿತು. ಅದಕ್ಕಾಗಿ ಶರಾವತಿ ನದಿಯಲ್ಲಿ ವಿದ್ಯುತ್ ಉತ್ಪಾದಿಸುವ ಅವಕಾಶವನ್ನು ಪೂರ್ಣಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲು ನಿರ್ಧರಿಸಿದ್ದೇ ಮತ್ತೊಂದು ಜಲಾಶಯ ನಿರ್ಮಾಣದ ಆಲೋಚನೆ. ಅದರ ಫಲ ಲಿಂಗನಮಕ್ಕಿ ಜಲಾಶಯ ನಿರ್ಮಾಣ.

1964ರಲ್ಲಿ ಲಿಂಗನಮಕ್ಕಿ ಆಣೆಕಟ್ಟೆ ನಿರ್ಮಾಣ ಕಾರ್ಯ ಪೂರ್ಣಗೊಂಡು ನೀರು ನಿಲ್ಲಿಸಲು ಆರಂಭಿಸಿದಾಗ ಹಿರೇಭಾಸ್ಕರ ಜಲಾಶಯ ಅದರಲ್ಲಿ ಪೂರ್ತಿ ಮುಳುಗಡೆಯಾಯಿತು. ನಿರ್ಮಾಣವಾಗಿ ಎರಡು ದಶಕ ಪೂರ್ಣಗೊಳ್ಳುವ ಮುನ್ನವೇ ತನ್ನ ಅಸ್ತಿತ್ವವನ್ನೂ ಕಳೆದುಕೊಂಡಿತು.

13ನೇ ಪುಟಕ್ಕೆ...

ಬಸ್ ಇಳಿದು ಹೋಗುತ್ತಿದ್ದ ಅನುಭವ

ಡಾ.ನಾ.ಡಿಸೋಜ

'1950ರ ದಶಕದಲ್ಲಿ ನಾನು ಹೈಸ್ಕೂಲ್ ಓದುತ್ತಿದ್ದೆ. ಸಾಗರ-ಮಡೇನೂರು-ಜೋಗದ ನಡುವೆ ಸಿಕೆಎಂಎಸ್ ಹೆಸರಿನ ಬಸ್ ಓಡಾಡುತ್ತಿತ್ತು. ಜೋಗ ಜಲಪಾತ ನೋಡಲು ತಾಳಗುಪ್ಪ ರೈಲಿಗೆ ಬಂದವರು ಇದೇ ಬಸ್ ಏರುತ್ತಿದ್ದರು. ಮಧ್ಯಾಹ್ನ 3 ಗಂಟೆಗೆ ಮಡೇನೂರಿಗೆ ಬರುತ್ತಿತ್ತು. ಅಣೆಕಟ್ಟು ಮೇಲಿನ ರಸ್ತೆಯ ಮೂಲಕ ಬಸ್ ಸಾಗುತ್ತಿತ್ತು. ಅಣೆಕಟ್ಟು ಬರುತ್ತಿದ್ದಂತೆಯೇ ಜನರನ್ನು ಇಳಿಸಿ ಬಸ್ ಮಾತ್ರ ಮುಂದೆ ಹೋಗುತ್ತಿತ್ತು. ಜನರು ನಡೆದು ಅಣೆಕಟ್ಟನ್ನು ದಾಟಿ ಬಸ್ ಹತ್ತಿ ಹೋಗುತ್ತಿದ್ದರು' ಎಂದು ಹಿರಿಯ ಸಾಹಿತಿ ನಾ.ಡಿಸೋಜಾ ನೆನಪಿಸಿಕೊಳ್ಳುತ್ತಾರೆ.

ಆರಂಭದಿಂದಲೂ ಈ ಜಲಾಶಯ ದುರ್ಬಲವಾಗಿದೆ ಎಂಬ ಸುದ್ದಿ ಹಬ್ಬಿತ್ತು. ಹೀಗಾಗಿ ಪರ್ಯಾಯ ಅಣೆಕಟ್ಟು ಯೋಜನೆ ಇಟ್ಟುಕೊಂಡೇ ಇದ್ದರು. ಹಿರೇಭಾಸ್ಕರ ಪೂರ್ತಿ ಗಾರೆಯಲ್ಲಿ ಕಟ್ಟಿದ ಜಲಾಶಯ. ಆಗ 12 ಹಳ್ಳಿಗಳು ಮುಳುಗಡೆ ಅಗಿದ್ದವು. ಅದರಲ್ಲಿ ಮಡೇನೂರು ಕೂಡ ಒಂದು. ಅಲ್ಲಿಯ ಹಿರೇಬತ್ತಿಗಾರು ಎಂಬಲ್ಲಿ ಗಣಪತಿ ಗುಡಿ ಇತ್ತು. ಅದನ್ನು ನಂತರ ಕಾರ್ಗಲ್ ಬಳಿಗೆ ಸ್ಥಳಾಂತರಿಸಿದರು. ಅದಕ್ಕೆ ಈಗಲೂ ಬತ್ತಿಗಾರು ದೇವಸ್ಥಾನ ಎಂದೇ ಕರೆಯುತ್ತಾರೆ ಎಂದು ತಿಳಿಸಿದರು.

ಮುಸ್ಸಂಜೆಯಲ್ಲಿ ಮಾನ್ಸೂನ್ ರಾಗ!

ಉಮಾ ಅನಂತ್

• ಮೇಘ, ಮಲ್ಹಾರ್ ಮುಂತಾದ ಮಳೆರಾಗಗಳು ಕೇಳುಗರಿಗೆ ಕಚಗುಳಿ ಇಡುತ್ತವೆ. ಈ ರಾಗಗಳನ್ನು ಕೇಳುವುದು ಎಂದಿಗೂ ಪರಮಾನಂದವೇ. 'ಮಾನ್ಸೂನ್ ರಾಗ'ಗಳ ಬಗ್ಗೆ ನಿಮ್ಮ ವ್ಯಾಖ್ಯಾನ ಏನು?

ಮಳೆಯ ನೀರ ಧಾರೆ, ರಾಗದ ರಸಧಾರೆ ಎರಡೂ ಪುಳಕ ಕೊಡುವಂಥದ್ದು. 'ಮಳೆ ಹನಿಗಳ ಧಾರೆ ಆತ್ಮವನ್ನೂ ದ್ರವಿಸುತ್ತದೆ' ಎಂಬ ಮಾತಿದೆ. ಮಳೆಗಾಲ ಮತ್ತು ಸಂಗೀತದ ಮಧ್ಯೆ ಎಂದಿಗೂ ಅವಿನಾಭಾವ ಸಂಬಂಧವಿದೆ. ಮೇಘ ರಾಗ ನನಗೆ ಬಹಳ ಇಷ್ಟ. ಮಲ್ಹಾರ್, ಮಿಯಾ ಮಲ್ಹಾರ್ ಮುಂತಾದ ರಾಗಗಳು ಹಾಡುಗಾರ-ಕೇಳುಗರ ಮಧ್ಯೆ ಹೊಸ ಮೂಡ್ ಅನ್ನು ಕ್ರಿಯೇಟ್ ಮಾಡುತ್ತವೆ. ಹೀಗಾಗಿಯೇ ಮಳೆಗೂ ಸಂಗೀತಕ್ಕೂ ಎಲ್ಲಿಲ್ಲದ ಅನುಬಂಧವಿರುವುದು.

> ವರ್ಷಧಾರೆ ಪ್ರಕೃತಿಯಲ್ಲಿ ನವೋಲ್ಲಾಸ ತುಂಬಿದರೆ, ಮಳೆರಾಗಗಳ ನಾದಧಾರೆ ಮನಸ್ಸನ್ನು ಮುದಗೊಳಿಸುತ್ತದೆ. ಇದಕ್ಕಾಗಿ 'ಬನ್ಯಾನ್ ಟ್ರೀ' ಸಂಸ್ಥೆಯು 'ವರ್ಷ ಋತು' ಶೀರ್ಷಿಕೆಯಡಿಯಲ್ಲಿ ಪುಣೆಯ ಗಾಯಕ ಪಂ.ಸಂಜೀವ್ ಅಭ್ಯಂಕರ್ ಅವರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಜುಲೈ 14ರಂದು ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಏರ್ಪಡಿಸಿದೆ. ಮೇಘರಾಗಗಳ ಕುರಿತು ಅವರೊಡನೆ ನಡೆಸಿದ ಸಂವಾದದ ಸಾರವಿದು.

ಮಳೆ ರಾಗಗಳಲ್ಲಿರುವ ರಸಪೂರ್ಣತೆ ಅತ್ಯಂತ ವಿಶಿಷ್ಟ. ಅಲ್ಲಿ ಲಾಲಿತ್ಯವಿದೆ, ಲಾಸ್ಯವಿದೆ, ಸೊಗಸಿದೆ. ಮಿಂಚು-ಗುಡುಗುಗಳ ಆರ್ಭಟ, ಆಟ ಪ್ರಕೃತಿಯ ಸೊಬಗಾದರೆ, ರಾಗಾಲಾಪ, ಸ್ವರ ತಾನ್‌ಗಳ ಸುರಿಮಳೆ, ಆಕಾರ್ ತಾನ್‌ಗಳ ಭೋರ್ಗರೆತ ಎಲ್ಲವೂ ಸಂಗೀತದ ಭಾಗವಾಗಿ ಸಮ್ಮಿಳಿತಗೊಂಡಿವೆ. ಹಿಂದೂಸ್ತಾನಿ ಸಂಗೀತದ ಮೇರುಗಾಯಕ ತಾನ್‌ಸೇನ್ ಹಾಡುತ್ತಿದ್ದ ಮಳೆರಾಗ 'ಮಲ್ಹಾರ್' ಇದೇ ಕಾರಣಕ್ಕಾಗಿ ಎಂದಿಗೂ ಸುಪ್ರಸಿದ್ಧವಾದುದು.

ಮಳೆರಾಗಗಳಿಗೆ ನಮ್ಮದು ಮೊದಲ ಆದ್ಯತೆ. ಈ ಮಾನ್ಸೂನ್ ರಾಗಗಳು ಭಾವನೆಗಳೊಂದಿಗೆ ಬೆಸೆದುಕೊಂಡಿವೆ ಎನ್ನಬಹುದು. ಈ ರಾಗಗಳು ಶೃಂಗಾರ, ಭಕ್ತಿ, ವಿರಹ, ವೀರರಸ... ಮುಂತಾದ ರಸಗಳನ್ನು ಸೇರಿಸಿಕೊಂಡು ಹೊಸ ನಾದಭಾಷ್ಯ ಬರೆಯುತ್ತವೆ. 'ಎ ಗ್ಲೂಮಿ ಕೈಂಡ್ ಆಫ್ ಅಟ್ಮಾಸ್ಮಿಯರ್' (ನಸುಕು ಕವಿದಂತಹ ವಾತಾವರಣ) ಅಲ್ಲಿ ಸೃಷ್ಟಿಯಾಗುತ್ತದೆ. ಬೆಂಗಳೂರಿನಲ್ಲಿ ನಡೆಯುವ ನನ್ನ ಕಛೇರಿಯಲ್ಲಿ ಮಳೆರಾಗಗಳ ಜೊತೆಗೆ 'ಮಾನ್ಸೂನ್ ಮೂಡ್' ಕ್ರಿಯೇಟ್ ಮಾಡುವ ಇತರ ಸನಿಹದ ರಾಗಗಳನ್ನು ಹಾಡಬೇಕೆಂದಿದ್ದೇನೆ.

• ಪಂ. ಜಸರಾಜ್... ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ವಿಶ್ವವಿಖ್ಯಾತರಾದವರು. ಅವರ ಅಚ್ಚುಮೆಚ್ಚಿನ ಶಿಷ್ಯರಾದ ನೀವು ಅವರನ್ನು ಹೇಗೆ ಸ್ಮರಿಸುತ್ತೀರಿ?

ಹಿಂದೂಸ್ತಾನಿ ಸಂಗೀತದ ಮೇವಾತಿ ಘರಾಣೆಯಲ್ಲಿ ಹಾಡುತ್ತಿದ್ದ ನನ್ನ ಗುರು ಪಂ. ಜಸರಾಜ್ ಗಾಯನದಲ್ಲಿ ಮೇರು ಶಿಖರ. ಅವರೊಂದು ರೀತಿಯ 'ಮ್ಯಾಜಿಕಲ್ ಮ್ಯಾನ್' ಎಂಬುದನ್ನು ನಾನು ಸದಾ ಹೇಳುತ್ತಲೇ ಬಂದಿದ್ದೇನೆ. ಅವರನ್ನು ಕೇಳುಗರು 'ಪಂ. ರಸರಾಜ್' ಎಂದೇ ಕರೆಯುತ್ತಿದ್ದುದು. ಎಂದರೆ ಅವರ 'ಗಾಯಕಿ'ಯಲ್ಲಿ ಹೊಮ್ಮುತ್ತಿದ್ದ ರಾಗರಸ ಕೇಳುಗರನ್ನು ಹಿಡಿದಿಡುತ್ತಿದ್ದ ಪರಿ ಅಚ್ಚರಿ ಮೂಡಿಸುವಷ್ಟು ಆಪ್ಯಾಯಮಾನವಾಗಿರುತ್ತಿತ್ತು. ಅವರ ಗಾಯನದ ಪರಿ ಅನನ್ಯ. ಸಂಗೀತದ ಮೂರೂ ಆಕ್ಟೇವ್‌ಗಳಲ್ಲಿ (ಸ್ಥಾಯಿ) ವಿಶಿಷ್ಟ ಸಂಚಲನ ಮೂಡಿಸುತ್ತಿದ್ದ ನನ್ನ ಗುರೂಜಿ, ಮಂದ್ರ ಹಾಡುವಾಗ ಸಮುದ್ರದ ಆಳಕ್ಕಿಳಿದು ಈಜಾಡಿದಂತಹ ಅನುಭವ, ಮಧ್ಯ ಸ್ಥಾಯಿಯಲ್ಲಿ ಅಯಸ್ಕಾಂತದಂತೆ ಸೆಳೆಯುವ ಇಂಪು ಹಾಗೂ ಧ್ಯಾನಸ್ಥ ಗುಣ ಸೃಷ್ಟಿಸುವ ಚಮತ್ಕಾರ ಮತ್ತು ತಾರಸ್ಥಾಯಿಯಲ್ಲಿ ಹಾಡುತ್ತಿದ್ದಾಗ ಅವರ ಧ್ವನಿ ದೈವತ್ವವನ್ನು ಮೀರಿಸಿದಂತಿದ್ದವು. ಹೀಗೆ ಮೂರೂ ಸ್ಥಾಯಿಗಳಲ್ಲಿ ಲೀಲಾಜಾಲವಾಗಿ ಹಾಡುತ್ತಿದ್ದ ಅವರ ಚಾಕಚಕ್ಯತೆ ಅವಿಸ್ಮರಣೀಯ. ಅವರ ಆಲಾಪ, ರಾಗ ವಿಸ್ತಾರ, ತಾನ್‌ಗಳ ಪ್ರಸ್ತುತಿಯಲ್ಲಿ ಪರಿಪೂರ್ಣತೆ ಎದ್ದುಕಾಣುತ್ತಿತ್ತು. ಅವರು ಹಾಕಿಕೊಟ್ಟ ಸಂಗೀತದ ಮೆಟ್ಟಿಲುಗಳೇ ನಮಗೆಂದಿಗೂ ದಾರಿದೀಪ.



• ಮೇವಾತಿ ಘರಾಣೆಯಲ್ಲಿ ಸಂಗೀತದ ಅದ್ಭುತ ರಸ ಹೊರಹೊಮ್ಮುತ್ತದೆ. ನಿಮ್ಮ ಈ 'ಗಾಯಕಿ' ಬಗ್ಗೆ ಹೇಳುವುದಾದರೆ..?

ನನ್ನ ಗುರು ಪಂ. ಜಸರಾಜ್, ತಾಯಿ ಶೋಭಾ ಅಭ್ಯಂಕರ್ ಮೇವಾತಿ ಘರಾಣೆಯಲ್ಲೇ ಹಾಡುತ್ತಿದ್ದುದು. ಇದರಲ್ಲಿರುವ ರಾಗರಸ ಎಂಥ ಕೇಳುಗರಲ್ಲೂ 'ಸಂಗೀತ ಪ್ರೀತಿ' ಹುಟ್ಟಿಸುತ್ತದೆ. ಈ 'ಗಾಯಕಿ'ಯಲ್ಲಿ ಹಾಡುವಾಗ ಶಾಂತಿ, ಸಹನೆ, ಅನುಭೂತಿ ಮುಂತಾದ ಭಾವನೆಗಳು ಸೃಷ್ಟಿಯಾಗುತ್ತವೆ. ವೀರರಸದ ಸಂದರ್ಭ ಬಂದಾಗ ಮಾತ್ರ 'ಅಗ್ರೆಷನ್' ಇರಬೇಕಾಗುತ್ತದೆ. ಗಾಯನದಲ್ಲಿ ಕಣ್‌ನೋಟ್ಸ್, ಮೀಂಡ್, ಗಮಕ್, ಲಯಕಾರಿ, ರಿದಂ, ಸರಗಮ್ ಎಲ್ಲವೂ ಅತ್ಯಂತ ಸೊಗಸಾಗಿರುತ್ತವೆ. ಇವು ಸಂಗೀತದ ಏಕತಾನತೆಯನ್ನು ಮರೆಸುತ್ತವೆ. ಶುದ್ಧ ಸಾಹಿತ್ಯ, ಆಕಾರ, ಈಕಾರ, ಊಕಾರ, ಓಂಕಾರಗಳಲ್ಲಿ ಹಾಡುವಾಗ ವಿಶಿಷ್ಟ ಮೂಡ್ ಸೃಷ್ಟಿಯಾಗುತ್ತದೆ. ಅಲ್ಲದೆ ಈ ಘರಾಣೆಯ ಗಾಯನದಲ್ಲಿ ತಂತ್ರಗಾರಿಕೆ, ಆಲಂಕಾರಿಕ ಅಂಶಗಳು ಬಹಳ ಕಷ್ಟಕರ. ಇವುಗಳನ್ನು ಮೂರೂ ಸ್ಥಾಯಿಗಳಲ್ಲಿ ಸಾಮಾನ್ಯ ಜನರ ಹೃದಯ ತಟ್ಟುವ ಹಾಗೆ ಹಾಡುವುದು ಕೂಡ ಸವಾಲೇ. ಇದು 'ಮಾಸ್ ಅಪೀಲ್' ಆಗುವಂತೆ ಮಾಡುವುದು ಕೂಡ ಸುಲಭದ ಮಾತಲ್ಲ.

• ಶಾಸ್ತ್ರೀಯ ಸಂಗೀತದಲ್ಲಿ ಗುರು-ಶಿಷ್ಯ ಪರಂಪರೆ ಅನಾದಿ ಕಾಲದಿಂದಲೂ ಬಂದಿರುವಂಥದ್ದು. ದಿಗ್ಗಜರೂ ಈ ಪರಂಪರೆಗೆ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ. ನಿಮ್ಮ ಪ್ರಕಾರ ಗುರು-ಶಿಷ್ಯ ಪರಂಪರೆಯ ಈಗಿನ ಔಚಿತ್ಯ ಏನು?

ಜಗತ್ತು ಡಿಜಿಟಲ್ ಯುಗದಲ್ಲಿದೆ. ಆಧುನಿಕತೆಯತ್ತ ದಾಪುಗಾಲು ಹಾಕುತ್ತಿದೆ. ಇಷ್ಟಾದರೂ ನಾನು ಗುರು-ಶಿಷ್ಯ ಪರಂಪರೆಗೆ ಹೆಚ್ಚಿನ ಒತ್ತಾಸೆ ನೀಡುತ್ತೇನೆ. ಬಹಳ ಹಿಂದಿನಿಂದಲೇ ಬೆಳೆದುಬಂದಿರುವ ಈ ಪದ್ಧತಿಯತ್ತ ನಾನೂ ನನ್ನ ಶಿಷ್ಯರೂ ಒಲವು ತೋರುತ್ತಿದ್ದೇವೆ, ಇದಕ್ಕಾಗಿ ಶಿಷ್ಯಂದಿರೊಂದಿಗೆ ಆಪ್ತ ಸಂಬಂಧ ಇಟ್ಟುಕೊಂಡಿದ್ದೇನೆ. ನನ್ನ ಕಛೇರಿಗಳಿಗೆ ಶಿಷ್ಯರನ್ನೂ ಕರೆದುಕೊಂಡು ಹೋಗ್ತೇನೆ. ನನ್ನ ಗುರುಗಳೊಂದಿಗೆ ನಾನು ಹಲವಾರು ಕಛೇರಿಗಳಲ್ಲಿ ಹಾಡಿದಂತೆ ಶಿಷ್ಯರಿಗೂ ಅವಕಾಶ ನೀಡುತ್ತಿದ್ದೇನೆ. ಇದರಿಂದ ಮಕ್ಕಳಿಗೆ ಪ್ರಾಯೋಗಿಕ ಜ್ಞಾನ ಸಿಕ್ಕಿದಂತಾಗುತ್ತದೆ.

• ಸಂಗೀತ ಕಛೇರಿಗಳಿಗಾಗಿ ದೇಶ ವಿದೇಶಗಳಿಗೆ ಸದಾ ಪ್ರಯಾಣ ಮಾಡುತ್ತಿರುವ ನೀವು ಧ್ವನಿ ನಿಯಂತ್ರಣ ಹಾಗೂ ಆರೋಗ್ಯ ಕಾಳಜಿ ಹೇಗೆ ಮಾಡುತ್ತೀರಿ?

ಗಾಯಕ ತನ್ನ ಶಾರೀರ ಕಾಪಾಡಿಕೊಳ್ಳುವುದು, ಆರೋಗ್ಯ ಕಾಳಜಿ ವಹಿಸುವುದು ಬಹಳ ಮುಖ್ಯ. ಕಠಿಣ ಡಯಟ್ ಪಾಲಿಸುತ್ತಾ ಬಂದಿದ್ದೇನೆ. ಚಿಕ್ಕ ವಯಸ್ಸಿನಿಂದಲೇ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಇಟ್ಟುಕೊಂಡಿದ್ದೇನೆ. ಸೇಬು, ಬಾಳೆಹಣ್ಣು, ಮೊಸರು, ಬಟಾಟೆ ವಡಾ, ಬಜ್ಜಿ ಇವಿಷ್ಟನ್ನು ತಿನ್ನುವುದೇ ಇಲ್ಲ. ನನ್ನ ಡಾಕ್ಟರ್ ಹೇಳಿರುವುದಿಷ್ಟು...'ಈದರ್ ಯು ಲೀವ್ ಸಿಂಗಿಂಗ್ ಆರ್ ಯು ಲೀವ್ ಈಟಿಂಗ್ ಫ್ರೈಡ್ ಐಟಮ್ಸ್' ಅಂತ. ಹೀಗಾಗಿ ಆರೋಗ್ಯ ಬಗ್ಗೆ ಬಹಳ ಕೇರ್ ತಗೋತೀನಿ.

• ಸಂಗೀತವಲ್ಲದೆ ನಿಮ್ಮ ಇತರ ಹವ್ಯಾಸಗಳೇನು?

ಕ್ರೀಡೆ ಇಷ್ಟ. ಟೆನಿಸ್, ಕ್ರಿಕೆಟ್ ನೋಡುತ್ತೇನೆ. ಸ್ನೇಹಿತರೊಂದಿಗೆ, ಶಿಷ್ಯರೊಂದಿಗೆ ಕಾಲ ಕಳೆಯುವುದು, ಪಿಕ್‌ನಿಕ್ ಹೋಗೋದು, ಸಿನಿಮಾ ನೋಡೋದು ಇಷ್ಟ. ತಿಂಗಳಿಗೆ ಸುಮಾರು 20 ಸಿನಿಮಾಗಳನ್ನು ನೋಡುತ್ತೇನೆ. ಪತ್ನಿ ಅಶ್ವಿನಿ ಜೊತೆ ಲಾಂಗ್ ಡ್ರೈವ್ ಹೋಗೋದು ಇಷ್ಟ. ❖

ಪಠ್ಯದಾಚೆಯ ಪಟ್ಟಾಭಿ ಮೇಷ್ಟ್ರು

ಮಹಮ್ಮದ್ ಶರೀಫ್

ನುಡಿ ನಮನ



ಪ್ರೊ. ಪಟ್ಟಾಭಿರಾಮ ಸೋಮಯಾಜಿ

> ಡಾ.ಯು.ಆರ್ ಅನಂತಮೂರ್ತಿ ಅವರೇ ಹೇಳಿದಂತೆ ಅವರ 'ಮಾನಸಪುತ್ರ', 'ಶಿಷ್ಯಂದಿರಲ್ಲಿ ಅತ್ಯಂತ ಪ್ರಾಜ್ಞರೂ, ಪ್ರಾಮಾಣಿಕರೂ ಆದ' ಪ್ರೊ.ಎಚ್. ಪಟ್ಟಾಭಿರಾಮ ಸೋಮಯಾಜಿ ಜುಲೈ 1ರಂದು ನಮ್ಮನ್ನಗಲಿದರು. ಜುಲೈ 5 ಅವರ ಜನ್ಮದಿನ. ಅಗಲಿದ ಗುರು ಪಟ್ಟಾಭಿಯವರಿಗೆ ಅಕ್ಷರ ನಮನ.

ಒಮ್ಮೆ ಅನಂತಮೂರ್ತಿಯವರು 'ರುಜುವಾತು' ಪತ್ರಿಕೆಯಲ್ಲಿ ತಮ್ಮ ಲೇಖನಕ್ಕೆ ಪ್ರತಿಕ್ರಿಯೆ ಬರೆಯುವಂತೆ ಪಟ್ಟಾಭಿಯವರನ್ನು ಕೇಳಿದರು. ಕೋಮುದಳ್ಳುರಿಯಿಂದ ಮಂಗಳೂರು ಉರಿಯುತ್ತಿದ್ದ ದಿನಗಳವು. ಕೋಮುಗಲಭೆ ವಿರುದ್ಧ ಹರಿತ ಭಾಷೆ ಬಳಸಿದ್ದರಿಂದ, 'ಪಟ್ಟಾಭಿ, ಇದು ಬಹಳ ತೀಕ್ಷ್ಣವಾಗಿದೆ. ಸ್ವಲ್ಪ ಸಾಫ್ಟ್ ಆಗಿ ಬದಲಿಸಿ ಕೊಡಬಹುದಾ?' ಎಂದು ಅನಂತಮೂರ್ತಿ ಕೇಳಿದರು. 'ನೀವು ಬರಹ ಬಳಸಿದರೂ ಅಥವಾ ಬಳಸದಿದ್ದರೂ ನನಗೆ ಬೇಸರವಾಗದು. ಆದರೆ, ಬದಲಿಸುವುದಿಲ್ಲ' ಎಂದರು. 'ಹಾಗಾದರೆ ನಾನು ಮರುಪ್ರತಿಕ್ರಿಯೆ ಬರೆಯುವೆ' ಎಂದು ಹೇಳಿ ಅನಂತಮೂರ್ತಿ ಮೌನವಾದರು. ಮರುಕ್ಷಣವೇ 'ಖಂಡಿತಾ ಬರೆಯಿರಿ, ಅದಕ್ಕೆ ಮರು ಪ್ರತಿಕ್ರಿಯಿಸುವೆ' ಎಂಬ ಉತ್ತರ ಬಂತು.

ಕಾಲೇಜು ಒಂದರಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಪಟ್ಟಾಭಿ ಅವರಿಗೆ ಇಬ್ಬರು ವಿದ್ಯಾರ್ಥಿಗಳನ್ನು ಪಾಸು ಮಾಡುವಂತೆ ಕಾಲೇಜು ಆಡಳಿತ ಮಂಡಳಿ ಒತ್ತಾಯಿಸಿತು. 'ವೇತನರಹಿತವಾಗಿ ವಿಶೇಷ ತರಗತಿ ಮಾಡಿ ಕಲಿಸಲು ಸಿದ್ಧ. ಅವರು ದಡ್ಡರಲ್ಲ, ಸಾಮರ್ಥ್ಯ ಇದೆ. ಓದಿ ಪಾಸಾಗಲಿ. ಕನಿಷ್ಠ 5 ಅಂಕ ಪಡೆಯದವರನ್ನು ಪಾಸು ಮಾಡಿ, ಅವರಿಗೆ ದ್ರೋಹ ಬಗೆಯಲ್ಲ' ಎಂದರು. ನಂತರ ಆಡಳಿತ ಮಂಡಳಿಯು ಇನ್ನೊಬ್ಬ ಇಂಗ್ಲಿಷ್ ಅಧ್ಯಾಪಕರಿಗೆ ಉತ್ತರಪತ್ರಿಕೆ ಕೊಟ್ಟು ಆ ವಿದ್ಯಾರ್ಥಿಗಳನ್ನು ಪಾಸು ಮಾಡಿಸಿತು. ಪಟ್ಟಾಭಿಯವರು ರಾಜೀನಾಮೆ ಕೊಟ್ಟು ಹೊರಬಂದರು!

ಪ್ರೊ.ಎಚ್. ಪಟ್ಟಾಭಿರಾಮ ಸೋಮಯಾಜಿ ಇದ್ದುದೇ ಹೀಗೆ. ಕಿಂಚಿತ್ತೂ ರಾಜಿಯಾಗದ ವ್ಯಕ್ತಿತ್ವ. ಎಲ್ಲಿ, ಯಾವುದು ಸರಿಯಿಲ್ಲ ಅನ್ನಿಸುತಿತ್ತೋ, ಅಲ್ಲಿ ಅವರು ಇರುತ್ತಿರಲಿಲ್ಲ. ವ್ಯವಸ್ಥೆ ಜೊತೆಗಿನ ಹೊಂದಾಣಿಕೆಯ ಕಡು ವಿರೋಧಿಯಾಗಿದ್ದರು. ಕೋಮುವಾದ, ಜಾತಿವಾದ, ಅನ್ಯಾಯದ ವಿಷಯದಲ್ಲಿ ಅವರಿಗೆ ಸ್ಪಷ್ಟ ನಿಲುವಿತ್ತು. 'ಜಾತ್ಯತೀತ ದೇಶದಲ್ಲಿ ಎಲ್ಲರಿಗೂ ನೆಮ್ಮದಿಯಿಂದ ಬದುಕುವ ಹಕ್ಕು ಇದೆ. ಅದನ್ನು ಕಸಿದುಕೊಳ್ಳುವುದು ಅಥವಾ ಬೆದರಿಕೆಯೊಡ್ಡಿ ಹಿಂಸಿಸುವುದು ಸಲ್ಲದು' ಎನ್ನುತ್ತಿದ್ದರು.

ಮಂಗಳೂರಿನಲ್ಲಿ ಪ್ರಗತಿಪರ ಸಂಘಟನೆಗಳ ಪ್ರತಿಭಟನೆಗಳಲ್ಲಿ ಸದಾ ಇರುತ್ತಿದ್ದ ಅವರು ಅನ್ಯಾಯವನ್ನು ತೀಕ್ಷ್ಣವಾಗಿ ಖಂಡಿಸುತ್ತಿದ್ದರು. ಭಾಷಣ ಮುಗಿಸಿ ಜನರ ನಡುವೆಯೇ ಜಾಗ ಮಾಡಿಕೊಂಡು ಬಸ್ ಹತ್ತಿ ಹೊರಟು ಬಿಡುತ್ತಿದ್ದರು. ನಿರ್ಭೀತ ನಡೆ, ನುಡಿ, ಹಠ, ಜಗಳ, (ಸೃಜನಾತ್ಮಕವಾಗಿ) ಬೈಯುವುದು ಅವರ ಸಾಮಾನ್ಯ ಗುಣಗಳಾದರೂ ಅವೆಲ್ಲಕ್ಕೂ ಮೀರಿದ ಅಪಾರವಾದ ಪ್ರೀತಿಯಿತ್ತು. ಅವರಲ್ಲಿ ದ್ವೇಷ ಇರಲಿಲ್ಲ. 'ಪ್ರೀತಿಗೆ ವಿರುದ್ಧವಾದದ್ದು ದ್ವೇಷ ಅಲ್ಲ, ಅಪ್ರಿಯ' ಎನ್ನುತ್ತಿದ್ದರು.

ಅವರ ಮನೆಯ ಬಾಲ್ಕನಿಯಲ್ಲಿ ಹಕ್ಕಿಗಳು ಗೂಡು ಕಟ್ಟಿದ್ದವು. ಬಾಲ್ಕನಿಯ ಎದುರು ಮರಗಳಿದ್ದವು. ಹಕ್ಕಿಗಳು ತಮ್ಮದೇ ಗೂಡಿಗೆ ಬಂದಂತೆ ನಿರಾತಂಕವಾಗಿ ಮನೆಗೆ ಬಂದುಹೋಗುತ್ತಿದ್ದವು. ಹಕ್ಕಿಗಳ ಜೊತೆ ಒಡನಾಟವಿತ್ತು. ಅವುಗಳನ್ನು ಅವರು ಎಂದಿಗೂ ಓಡಿಸಲಿಲ್ಲ. ಆದರೆ, ಹಕ್ಕಿಯೊಂದು ಏಕಾಏಕಿ ಹಾರಿ ಹೋದಂತೆ ಅವರೇ ಖಾಲಿತನ ಸೃಷ್ಟಿಸಿ ಹೋಗಿಬಿಟ್ಟರು. ❖

ಮೌನದ ಹೆಣಿಗೆಯಲ್ಲಿ ಸತ್ಯದರ್ಶನದ ಹಂಬಲ

ಕೋಡಿಬೆಟ್ಟು ರಾಜಲಕ್ಷ್ಮಿ

ಟಾರ್‌ಟಾಯಿಸ್ ಅಂಡರ್‌ದ ಅರ್ಥ್– ಸಿನಿಮಾದ ದೃಶ್ಯ ಚಿತ್ರ: ನಿಹಾಲ್ ಪ್ರಭು ದೇಸಾಯಿ

'ಪ್ರತಿಯೊಂದು ಊರಿನಲ್ಲಿ ಅಥವಾ ಭೂಪ್ರದೇಶದಲ್ಲಿ ಮನುಷ್ಯನ ಇರುವಿಕೆ ಇರಲಿ, ಇಲ್ಲದಿರಲಿ ಆ ಪ್ರದೇಶವು ಸದಾ ಜೀವಂತಿಕೆಯಿಂದ ಕೂಡಿರುತ್ತದೆ. ಮರಗಳು ಚಿಗುರುತ್ತವೆ. ಕೀಟಗಳು ಹಾರುತ್ತವೆ... ಈ ಜೀವಂತಿಕೆಯು ತನ್ನದೇ ಆದೊಂದು ಗತಿ ಅಥವಾ ಗಡಿಯಾರವನ್ನು ಹೊಂದಿದೆ. ಹಾಗೆಂದು ಎಲ್ಲ ಜೀವಿಗಳಿಗೂ ಒಂದೇ ಗಡಿಯಾರವನ್ನು ಅನ್ವಯಿಸುವಷ್ಟು ಒರಟಾದ ಗತಿಯಲ್ಲ ಅದು. ಈ ಜೀವಲೋಕದ ಗತಿಶೀಲತೆಯನ್ನು ಗಡಿಯಾರದ ಹಂಗಿಲ್ಲದೆಯೇ ಚಿತ್ರೀಕರಿಸುವ ಉದ್ದೇಶದೊಂದಿಗೆ ನಾನು ಸಿನಿಮಾ ಮಾಡಿದ್ದೇನೆ' ಎಂದು ಶಿಶಿರ್ ಝಾ ಮಾತಿನ ಮಧ್ಯೆ ಹೇಳಿದರು.

'ಧರ್ತಿ ಲತಾರ್ ರೆ ಹೊರೊ' (tortoise under the earth) ಎಂಬ ಸಂತಾಲಿ ಭಾಷೆಯ ಚಿತ್ರ ನಿರ್ದೇಶಕ ಶಿಶಿರ್ ಝಾ ತಮ್ಮ ವಿಳಂಬಗತಿಯ ಚಿತ್ರದ ಬಗ್ಗೆ ಅಷ್ಟೇ ನಿಧಾನವಾಗಿ ವಿವರಿಸಿದರು. ಮಂಗಳೂರಿನಲ್ಲಿ ನಡೆದ 'ನಿಟ್ಟೆ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವೆಲ್'ನಲ್ಲಿ ಈ ಚಿತ್ರ ಪ್ರದರ್ಶನ ಆರಂಭವಾದಾಗ ಚಿತ್ರವೇಕೋ ಬಹಳ ನಿಧಾನಗತಿಯಲ್ಲಿದೆ ಎಂದು ಅನಿಸಲಾರಂಭಿಸಿತು. ಆ ಗತಿಯ ಬಗೆಗೆ ಅವರು ಹೇಳುತ್ತಾ ಹೋದರು: 'ಜಾರ್ಖಂಡ್‌ನ ತುರಮ್‌ಧಿ ಎಂಬ ಆ ಊರಿನಲ್ಲಿ ವರ್ಷ ಕಾಲ ಜೀವನ ಮಾಡಿದ್ದೇನೆ. ರೈತ ದಂಪತಿಯ ಜೊತೆಗೇ ವಾಸಿಸುತ್ತಾ ಅವರ ಬದುಕನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದೇನೆಯೇ ಹೊರತು ಅವರಿಗೆ ನಟಿಸುವಂತೆ ಸೂಚನೆ ಕೊಟ್ಟಿಲ್ಲ. ಜೀವನಕ್ಕೆ ತನ್ನದೇ ಆದ ಸಮಯಗತಿ ಇದೆಯಲ್ಲವೇ. ಸಮಯದ ಸಂವೇದನೆಯನ್ನು ಈ ಸಿನಿಮಾದಲ್ಲಿ ಸೆರೆ ಹಿಡಿಯಬೇಕಿತ್ತು. ಜೀವಲೋಕದ ಗತಿಯು ಜೆಸಿಬಿ ಓಡಿದಷ್ಟು ವೇಗವಾಗಿ ಇರುವುದಿಲ್ಲ. ದೃಶ್ಯಗಳನ್ನು ಎಡಿಟ್ ಮಾಡಿದಷ್ಟು ಕ್ಷಿಪ್ರವಾಗಿಯೂ ಸಾಗುವುದಿಲ್ಲ. ರೈತರ ಜೀವನ ಹೇಗೆ ನಡೆಯುತ್ತದೆ ಎನ್ನುವುದನ್ನು ಒಂದೆರಡು ದಿನಗಳ ಶೂಟಿಂಗ್‌ನಲ್ಲಿ ಸೆರೆ ಹಿಡಿಯಬಹುದು ಎಂದು ನನಗೆ ಅನಿಸಿದ್ದಿಲ್ಲ. ಅವರೊಂದಿಗೆ ದೀರ್ಘಕಾಲದ ಒಡನಾಟವಿದ್ದಾಗ ಮಾತ್ರ ಅವರ ಸುಖ ದುಃಖದ ಅಭಿವ್ಯಕ್ತಿ ಹೇಗಿರುತ್ತದೆ ಎಂದು ಅರಿಯಬಹುದು. ಅವರ ಬದುಕಿನ ಕ್ಷಣಗಳಿಗೆ ಮತ್ತಷ್ಟು ಭಾವತೀವ್ರತೆಯನ್ನು ಹೇರಿ, ಅಲ್ಲಿ ನಮ್ಮ ಮನರಂಜನೆಗೆ ಬೇಕಾದ ರಸವನ್ನು ಸೇರಿಸಿಲ್ಲ. ಹಾಗಾಗಿ ಚಿತ್ರವು ಬಹಳ ನಿಧಾನಗತಿಯಲ್ಲಿದೆ ಎಂದು ಆರಂಭಕ್ಕೆ ಅನಿಸಬಹುದು. ಆದರೆ ಸಾಗುತ್ತಿದ್ದಂತೆಯೇ ನೋಡುಗರು ಸಹಜವಾಗಿಯೇ ಭಾವುಕರಾಗಿ ಬಿಡುತ್ತಾರೆ. ಇದು ಡಾಕ್ಯುಮೆಂಟರಿಯಂತಹುದೇ ಚಿತ್ರ. ನೋಡುವಿಕೆಗೆ ಅನುಕೂಲವಾಗುವಂತೆ ವಿಷಯವನ್ನು ಹೇಳುತ್ತಾ ಸಾಗಿದ್ದೇವೆ.'

ಶಿಶಿರ್ ಝಾ

ಚಿತ್ರಪಟ

ಮಗಳನ್ನು ಕಳೆದುಕೊಂಡ ನೋವಿನಲ್ಲಿದ್ದ ಆ ರೈತ ದಂಪತಿಯು, ಯುರೇನಿಯಂ ಗಣಿಗಾರಿಕೆಗಾಗಿ ತಮ್ಮ ಜಮೀನನ್ನೂ ಕಳೆದುಕೊಳ್ಳಲಿಕ್ಕಿದ್ದರು. ಹಾಗೆಂದು ಗಣಿಗಾರಿಕೆಯ ವಿರುದ್ಧದ ಹೋರಾಟಗಳನ್ನು ಸೆರೆಹಿಡಿಯುವ ಗೋಜಿಗೆ ಹೋಗದ ಶಿಶಿರ್, ದುಃಖಿತಳಾದ ಅಮ್ಮ ಗುನುಗುವ ಹಾಡುಗಳನ್ನು ಬಳಸಿಕೊಂಡಿದ್ದಾರೆ. ಊರಿನಿಂದ ಒಕ್ಕಲೆಬ್ಬಿಸುತ್ತಿದ್ದಾರೆ ಎಂಬ ಸುದ್ದಿಕೇಳಿದ ಕೂಡಲೇ ದಂಪತಿ ಕಂಗಾಲಾಗುತ್ತಾರೆ. ಮಡದಿಯ ಮನಸ್ಸಿನಲ್ಲೇನಿದೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುವ ಅವನು, ಆಕೆ ಪುನರ್ವಸತಿ ಕೇಂದ್ರಕ್ಕೆ ಹೋಗಲು ಮನಸ್ಸು ಮಾಡಿರುವುದನ್ನು ಅರಿಯುತ್ತಾನೆ. ಅವಳಿಂದ ಕಣ್ಮರೆಯಾಗುತ್ತಾನೆ. ಅವಳೋ ತಂತುಕಡಿದಂತೆ ಕುಸಿದು, ಗಂಡನನ್ನು ಹುಡುಕುತ್ತಾಳೆ. ಸಾವಿರ ವರ್ಷಗಳಷ್ಟು ದೀರ್ಘಕಾಲ ಬಾಳಿದ ಮರದ ಬಳಿಗೆ ಬಂದು ಕೈಮುಗಿದು ಕೇಳುತ್ತಾಳೆ: 'ಎಲ್ಲವನ್ನೂ ಬಲ್ಲ, ಎಲ್ಲ ಸುದ್ದಿಯನ್ನು ಹೊಟ್ಟೆಯೊಳಗೆ ಹೊತ್ತುಕೊಂಡ ಓ ಮರವೇ, ನನ್ನ ಪತಿಯಿಲ್ಲದೆ ನಾನು ಬಾಳಲಾರೆ.. ಇಷ್ಟು ಎತ್ತರಕ್ಕೆ ಬೆಳೆದ ನೀನು ಅವನು ಹೋದ ದಾರಿಯನ್ನು ನೋಡಿರುತ್ತಿ. ಆ ದಾರಿಯನ್ನು ತೋರುವೆಯಾ..' ಈ ಪ್ರಾರ್ಥನೆಯು ನೋಡುಗರ ಕಣ್ಣಲ್ಲಿ ನೀರು ಜಿನುಗುವಂತೆ ಮಾಡದೇ ಇರದು.

ಕೊಯ್ಲಿನ ನಂತರ ಪ್ರಕೃತಿಗೆ ಧನ್ಯವಾದ ಹೇಳುವ ಸೊಹ್ರಾಯಿ ಪೂಜೆಯೊಂದಿಗೆ ಆರಂಭವಾಗುವ ಚಿತ್ರವು, ಬಿತ್ತನೆಯ ಆಚರಣೆ 'ಬಹಾ'ದೊಂದಿಗೆ ಮುಕ್ತಾಯವಾಗುತ್ತದೆ. ❖

ಯಾರು ಈ ಶಿಶಿರ್ ಝಾ?

ಅಹಮದಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್‌ನಲ್ಲಿ ಓದಿದವರು ಶಿಶಿರ್. ಹನ್ಸ್‌ದಾ ಸೌವೇಂದ್ರ ಶೇಖರ್ ಬರೆದ 'ಆದಿವಾಸಿಸ್ ವಿಲ್‌ನಾಟ್ ಡಾನ್ಸ್' ಪುಸ್ತಕ ಓದಿ, ಸಾಮಾಜಿಕ ಕಾರ್ಯಕರ್ತ ಜೇತ್ರಾಯಿ ಹನ್ಸದಾ ಜೊತೆ ಪ್ರವಾಸಗಳನ್ನು ಮಾಡಿದಾಗ ಯುರೇನಿಯಂ ಗಣಿಗಾರಿಕೆಯಿಂದ ಆದಿವಾಸಿ ಸಂತಾಲಿ ಸಮುದಾಯದ ಮೇಲೆ ಆಗುತ್ತಿರುವ ಕೆಟ್ಟ ಪರಿಣಾಮಗಳ ವಿರಾಟ್ ರೂಪದ ಅರಿವಾಯಿತು. ಕಾರ್ಪೊರೇಟ್ ಕೆಲಸ ಬಿಟ್ಟು ಸಿನಿಮಾ ಮಾಡಲು ಹೊರಟಾಗ ಶಿಶಿರ್‌ಗಿನ್ನೂ ಮೂವತ್ತು ಆಗಿರಲಿಲ್ಲ.

ಸಾಮಾನ್ಯವಾಗಿ ಹೋರಾಟಕ್ಕೆ ಸಂಬಂಧಿಸಿದ ಸಿನಿಮಾಗಳಲ್ಲಿ ಪ್ರತಿಭಟನೆ, ಶೋಷಣೆಯ ಅನೇಕ ದೃಶ್ಯಗಳಿರುತ್ತವೆ. 'ಅವೆಲ್ಲವೂ ಮಾಹಿತಿಗಳು. ಅದು ಇಂದು ನಮಗೆ ಎಲ್ಲಿ ಬೇಕಾದರೂ ಸಿಗುತ್ತದೆ. ಆದರೆ ಗಣಿಗಾರಿಕೆಯ ದೆಸೆಯಿಂದ ನಾಶವಾಗುತ್ತಿರುವ ಭಾವಲೋಕ, ನಂಬಿಕೆಗಳು ಯಾವುವು ಎಂಬುದನ್ನು ಗ್ರಹಿಸಬೇಕಿದ್ದರೆ ಮೌನವೇ ಉತ್ತಮ ಮಾಧ್ಯಮ. ಆ ಊರಿನ ಮೌನ ಹಾಗೂ ಪ್ರಕೃತಿಯ ಜೀವಂತಿಕೆಯ ರೂಪಕಗಳನ್ನು ಸೆರೆಹಿಡಿಯುವ ಪ್ರಯತ್ನ ಮಾಡಿದ್ದೇನೆ' ಎಂದು ಶಿಶಿರ್ ಹೇಳುತ್ತಾರೆ.

ಬಿಹಾರದ ದರ್ಭಂಗಾ ಮೂಲದವರಾದ ಶಿಶಿರ್, ಮೈಥಿಲಿ ಸಮುದಾಯಕ್ಕೆ ಸೇರಿದವರು. 2016ರಲ್ಲಿ ಅವರು ಕ್ಯೂಬಾದಲ್ಲಿ ಇರಾನಿ ಚಿತ್ರ ನಿರ್ದೇಶಕ ಅಬ್ಬಾಸ್ ಕಿರುಸ್ತೋಮಿ ಅವರು ನಡೆಸಿದ ಒಂದು ಸಿನಿಮಾ ಕಾರ್ಯಾಗಾರಕ್ಕೆ ತೆರಳಿದ್ದರು. ಅಲ್ಲಿಯೇ 'ಥಿಯಾಮೋ' ಎಂಬ ಸ್ಪಾನಿಷ್ ಚಿತ್ರವೊಂದನ್ನು ನಿರ್ದೇಶಿಸಿದ್ದರು. ಬದುಕನ್ನು ಅರ್ಥ ಮಾಡಿಕೊಳ್ಳಲು ಭಾಷೆಯು ಗೊತ್ತಿರಲೇಬೇಕೆಂದೇನಿಲ್ಲ ಎನ್ನುವ ಅವರ ಥಿಯರಿ ಕೇಳಿ ಅಬ್ಬಾಸ್ ಕೂಡ ಅಚ್ಚರಿಪಟ್ಟಿದ್ದರಂತೆ. ಇದೀಗ ಶಿಶಿರ್ ತಮ್ಮೂರಿಗೆ ಮರಳಿ, ಮೈಥೇಯಿ ಭಾಷೆಯಲ್ಲಿ ಚಿತ್ರವೊಂದನ್ನು ನಿರ್ದೇಶಿಸುತ್ತಿದ್ದಾರೆ. 'ಗೊತ್ತಿರುವ ಭಾಷೆಯನ್ನೂ ಅರಿಯುವ ಅವಕಾಶವಿದು' ಎಂದು ನಕ್ಕರು.

ಮುನ್ನೋಟ 09-07-2023 ರಿಂದ 15-07-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೋಪ ನಿಮ್ಮ ಹಿಡಿತದಲ್ಲಿರದೆ ಪ್ರದರ್ಶನ ಮಾಡುತ್ತಿರುತ್ತದೆ. ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳಿಗೆ ಅವಕಾಶಗಳು ದೊರೆಯುತ್ತವೆ. ವೃತ್ತಿರಂಗದಲ್ಲಿ ಉನ್ನತ ಸ್ಥಾನ ಸಿಗಬಹುದು, ಆದರೆ ಸಾಕಷ್ಟು ಆಲೋಚನೆ ಮಾಡಿ ಮುಂದಡಿ ಇಡಿ. ರಾಜಕೀಯ ವ್ಯಕ್ತಿಗಳಿಗೆ ಬಿರುಸಿನ ಓಡಾಟಗಳಿರುತ್ತವೆ. ಹೆಚ್ಚು ಜನರ ಸಂಪರ್ಕದಿಂದ ಉತ್ತಮ ಹೆಸರು ಬರುತ್ತದೆ. ಹಿರಿಯರ ಸಹಕಾರ ನಿಮಗೆ ಸಕಾಲದಲ್ಲಿ ಒದಗಿ ಬರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಭೂಮಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ ಹಾಗೂ ಭೂಮಿಯನ್ನು ಕೊಳ್ಳುವ ಯೋಗವಿದೆ. ಆರ್ಥಿಕ ಸ್ಥಿತಿ ಸುಧಾರಿಸುತ್ತದೆ, ಆದಾಯದಷ್ಟೇ ಖರ್ಚು ಇರುವುದರಿಂದ ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡಿ. ಪ್ರೇಮಿಗಳಿಗೆ ಪ್ರೇಮವು ಫಲ ಕೊಡುವ ಸಾಧ್ಯತೆ ಇದೆ. ನಿಮಗೆ ಕಣ್ಣಿನ ತೊಂದರೆ ಸರಿಯಾಗುವ ಸಾಧ್ಯತೆ ಇದೆ. ಗಣಿಗಾರಿಕೆ ಮಾಡುವವರಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಅಧಿಕಾರಿ ವರ್ಗದವರಿಗೆ ಅವರ ಸಹೋದ್ಯೋಗಿಗಳಿಂದ ನಿರೀಕ್ಷೆಗೂ ಮೀರಿ ಸಹಕಾರ ದೊರೆಯುತ್ತದೆ. ಹಣ್ಣಿನ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ ಲಾಭವಿರುತ್ತದೆ. ವಿದೇಶಿ ವ್ಯಾಪಾರ ವ್ಯವಹಾರ ಮಾಡುವವರಿಗೆ ಉತ್ತಮ ಲಾಭವಿರುತ್ತದೆ. ವಾಹನ ಮಾರಾಟ ಮಾಡುವವರಿಗೆ ವ್ಯಾಪಾರ ವೃದ್ಧಿಸುತ್ತದೆ. ಸಮಾಜ ಸೇವೆಯನ್ನು ಮಾಡುವವರಿಗೆ ಉತ್ತಮ ಜನಬೆಂಬಲ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಕುಟುಂಬದಲ್ಲಿ ಮೂಡಿದ್ದ ಭಿನ್ನಾಭಿಪ್ರಾಯಗಳನ್ನು ತಂದೆ ತಾಯಿಯರು ಬಗೆಹರಿಸುವರು. ಬಂದಿದ್ದ ಅಪವಾದಗಳು ನಿಮ್ಮಿಂದ ದೂರವಾಗುತ್ತವೆ. ಸಂಗಾತಿಯು ನಿಮ್ಮ ಕೆಲಸಗಳಿಗೆ ಬೆನ್ನೆಲುಬಾಗಿ ನಿಲ್ಲುವರು. ಹಿರಿಯ ಅಧಿಕಾರಿಗಳಿಗೆ ಅನುಭವದಿಂದ ಗೌರವ ಹೆಚ್ಚಾಗುತ್ತದೆ. ನಿಮ್ಮ ಆಶಾವಾದ ನಿಮ್ಮ ಗುರಿಯನ್ನು ತಲುಪಿಸಲು ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟಿನ ಮುನ್ನಡೆ ಸಿಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವೈದ್ಯರಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ ಹಾಗೂ ಸಂಪಾದನೆ ಇರುತ್ತದೆ. ಕೆಲವೊಂದು ಕುಟುಂಬ ಸಮಸ್ಯೆಗಳಿಗೆ ತಾಳ್ಮೆಯೇ ಪರಿಹಾರ. ನಿಮ್ಮ ಬಂಧುಗಳೊಡನೆ ನಿಮ್ಮ ಗೌಪ್ಯ ವಿಷಯಗಳನ್ನು ಹಂಚಿಕೊಳ್ಳ ಬೇಡಿ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿದವರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ಕೆಲವರಿಗೆ ಸರ್ಕಾರಿ ಸಂಸ್ಥೆಗಳಲ್ಲಿ ಉಪನ್ಯಾಸ ಮಾಡುವಂತಹ ಅವಕಾಶ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕೆಲಸದ ಮೇಲೆ ದೂರ ಸಂಚಾರ ಮಾಡಬೇಕಾಗಬಹುದು. ಸಿಗುತ್ತಿದ್ದ ಬಂಧುಗಳ ಸಹಕಾರ ಕಡಿಮೆಯಾಗುವ ಸಾಧ್ಯತೆ ಇದೆ. ಉದ್ಯೋಗದಲ್ಲಿ ಸ್ವಲ್ಪ ಪ್ರಗತಿ ಇರುತ್ತದೆ. ಸಂಪಾದನೆ ಮಾಡಲು ಕೆಲವು ಅವಕಾಶಗಳು ಒದಗಿ ಬರುತ್ತವೆ, ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಿ. ಹೋಟೆಲ್ ಉದ್ಯಮದವರಿಗೆ ಉತ್ತಮ ವ್ಯವಹಾರ ನಡೆಯುವ ಸಾಧ್ಯತೆಗಳಿವೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಸತತ ಪ್ರಯತ್ನದಿಂದ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ನಿಮ್ಮ ಶತ್ರುಗಳು ಹೆಚ್ಚಾಗುವ ಸಂದರ್ಭವಿದೆ. ಪ್ರಭಾವಿ ವ್ಯಕ್ತಿಗಳ ಸಂಪರ್ಕಕ್ಕೆ ಪ್ರಯತ್ನ ಪಡುವಿರಿ. ಸಾಲ ಅಥವಾ ಸಹಾಯ ರೂಪದಲ್ಲಿ ಜನರಿಂದ ಹಣ ಪಡೆಯುವಿರಿ. ಷೇರು ವ್ಯವಹಾರಗಳು ಅಷ್ಟು ಹಿತಕರವಲ್ಲ,ನಷ್ಟಕ್ಕೆ ಕಾರಣವಾಗಬಹುದು. ನಿಮ್ಮ ನಡವಳಿಕೆಯಿಂದ ನಿಮ್ಮ ಬಂಧುಗಳು ದೂರ ಉಳಿಯುವರು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ರಂಗ ನಟರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಕೃಷಿ ಕೆಲಸಗಾರರಿಗೆ ಹೆಚ್ಚು ಕೆಲಸ ದೊರೆತು ಸಂಪಾದನೆ ಹೆಚ್ಚುತ್ತದೆ. ನಂಬಿಕೆಯಲ್ಲಿ ದುಡ್ಡು ಕೊಟ್ಟು ಮೋಸ ಹೋಗುವ ಸಾಧ್ಯತೆ ಇದೆ,ಎಚ್ಚರ ವಹಿಸಿ. ಸ್ವಂತ ಉದ್ಯೋಗ ಮಾಡುವವರು ತಮ್ಮ ಕಾರ್ಯ ಕ್ಷೇತ್ರಗಳನ್ನು ವಿಸ್ತರಿಸಲು ಪ್ರಯತ್ನ ಪಡಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಅಷ್ಟು ಹಿತಕರವಾದ ವಾರ್ತೆಗಳು ಕೇಳಿ ಬರುವುದಿಲ್ಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸಿಹಿ ತಿಂಡಿಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಗೃಹಾಲಂಕಾರ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಉತ್ತಮ ಲಾಭವಿರುತ್ತದೆ. ವಿದೇಶದಿಂದ ಮಕ್ಕಳ ಆಗಮನವಾಗುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುತ್ತದೆ. ರೋಗದಿಂದ ಬಳಲುತ್ತಿರುವ ಹಿರಿಯರಿಗೆ ಆರೋಗ್ಯ ಸುಧಾರಿಸುತ್ತದೆ. ಧಾರ್ಮಿಕ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ ಮೂಡುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವೃತ್ತಿಯಲ್ಲಿ ಕೆಲವೊಂದು ಸನ್ನಿವೇಶಗಳು ನಿಮ್ಮ ಪರವಾಗಿ ಮೂಡುವುದರಿಂದ ನಿಮಗೆ ಹೆಚ್ಚು ಅನುಕೂಲವಾಗುತ್ತದೆ. ಕೆಲವರು ನಿಮಗೆ ಮೋಸ ಮಾಡಲೆಂದೇ ಬರುತ್ತಾರೆ, ಅಂತಹವರ ಬಗ್ಗೆ ಎಚ್ಚರ ವಹಿಸಿ. ತಾಂತ್ರಿಕ ವಿಷಯಗಳಲ್ಲಿ ಸಂಶೋಧನೆಯನ್ನು ಮಾಡುತ್ತಿರುವವರಿಗೆ ಹೆಚ್ಚು ಆತ್ಮವಿಶ್ವಾಸ ಮೂಡುತ್ತದೆ. ಸಂಶೋಧನಾಕಾರರಿಗೆ ಬೇಕಾದ ಎಲ್ಲಾ ರೀತಿಯ ಸವಲತ್ತುಗಳು ಸಿಗಲಾರಂಭಿಸುತ್ತವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ನೂತನವಾಗಿ ಉದ್ಯೋಗಕ್ಕೆ ಸೇರುವವರು ಯಾವುದೇ ರೀತಿಯ ಕರಾರಿಗೆ ಸಹಿ ಮಾಡುವುದು ಅಷ್ಟು ಒಳಿತಲ್ಲ. ಕ್ರೀಡಾಪಟುಗಳಿಗೆ ಉತ್ತಮ ಸಾಧನೆ ಹಾಗೂ ಪ್ರದರ್ಶನ ನೀಡುವ ಸಂದರ್ಭವಿದೆ. ಸಂಗೀತಗಾರರಿಗೆ ಈಗ ಅನಿರೀಕ್ಷಿತ ಅವಕಾಶಗಳು ಒದಗುವ ಸಂದರ್ಭವಿದೆ. ಮಕ್ಕಳ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಸಂತೋಷವಿರುತ್ತದೆ. ಮಹಿಳೆಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಸಂತೋಷ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶವಿದೆ. ನಡವಳಿಕೆಯಲ್ಲಿ ಹಾಗೂ ಮಾತಿನಲ್ಲಿ ಮೃದುತ್ವವನ್ನು ಅಳವಡಿಸಿಕೊಳ್ಳುವುದು ಬಹಳ ಅಗತ್ಯ. ಭಾಷಣಕಾರರು ಸಮೂಹದಲ್ಲಿ ಮಾತನಾಡುವಾಗ ಬಹಳ ಎಚ್ಚರಿಕೆ ಇರಲಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ. ಬೆಂಕಿಯೊಡನೆ ಕೆಲಸ ಮಾಡುವವರು ಸಾಕಷ್ಟು ಎಚ್ಚರ ವಹಿಸಿರಿ. ದಾಯಾದಿ ಕಲಹಗಳ ಬಿಸಿ ತಟ್ಟುವ ಸಾಧ್ಯತೆ ಇದೆ.

ಪದಬಂಧ 2797



ಮೇಲಿನಿಂದ ಕೆಳಕ್ಕೆ

1. ಜನ ಮಾಡುವ ಯಜ್ಞ ಕಾರ್ಯ 3
2. ಬೆಲೆ ಮತ್ತು ಸುದ್ದಿ ಹೀಗೆ ಸ್ಪಷ್ಟ ಹಾಗು ಖಚಿತ 3
3. ಒಳ್ಳೆಯದನ್ನು ಮಾಡುವ ಸರ್ವೇಶ್ವರನ ಎರಡು ಹೆಸರುಗಳು 5
4. ಸಾಗಾಣಿಕೆಗೆ ಸಂಕೇತವಾದ ಗಜ 3
6. ಆರು ಪಾದದ ಚಂದದ ಸುಂದರಿ 3
7. ತಾಪದಿಂದ ಉರಿದು ಹೋಗುತ್ತಿರುವ ತಂದೆ 3
9. ತಿಂದದ್ದು ಜೀರ್ಣವಾಗುವ ಕ್ರಿಯೆ 3
11. ಕೈಲಾಸಕ್ಕೆ ಸಮನಾದ ಕೆಲಸ 3
12. ಬಿಡುವಿನಲ್ಲಿ ಬಟ್ಟೆ ಒಗೆಯುವ ಅಗಸ 3
14. ಕೋಗಿಲೆ ಕಂಠಸಿರಿಗೆ ಸಾಕ್ಷಿಯಾದ ವೃಕ್ಷ 3
15. ತಲೆಕೆಳಕಾದ ಚರ್ಮವಸ್ತು 3
17. ಕೃಷ್ಣನನ್ನು ತುಳಸಿಯಿಂದ ತೂಗಿದ ಧರ್ಮಪತ್ನಿ 3
18. ಸರಸ ಕಲೆತು ದ್ರವದಿಂದ ಕೂಡಿದ ಸ್ವಾರಸ್ಯಕರ ಹೊತ್ತು 5
19. ಶಾಲು ಹೊದಿಸುವಳೇ ಇವಳು 3
20. ಪ್ರಸಾದಿಸಿ ಕೊಡುವವನೇ ಈತ? 3
22. ಜಿದ್ದಿನಿಂದ ಉಂಟಾಗುವ ಹಗರಣ 3
24. ಬೇಡವೆಂದು ಬಿಟ್ಟುಬಿಡು 3
25. ಕಾಡಿನಲಿ ನಡೆವ ಹೋಮ 3

ಎಡದಿಂದ ಬಲಕ್ಕೆ

1. ಸದಾ ಗೆಲುವು ಇವಳಿಗೆ ಕಟ್ಟಿಟ್ಟದ್ದು 4
3. ಎಳೆ ಮಕ್ಕಳು ಆಟವಾಡುತ್ತಾ ಕಲಿಯುವ ಮಂದಿರ 5
5. ಹೊಸ ಭಾರವನ್ನು ಹೊತ್ತಿರುವ ನಮ್ಮ ದೇಶ 5
8. ಈ ಸಾಗರೋತ್ಪನ್ನ ವಾದ್ಯವನ್ನು ಮೊಳಗಿಸಿ ಕಟ್ಟಡಕ್ಕೆ ಮಾಡುವ ಶಿಲಾನ್ಯಾಸ 5
10. ಈಶ್ವರನ ಕೈಲಿರುವ ಆಯುಧ 3
11. ಕೆಲಸದಲ್ಲಿ ಸಂಪೂರ್ಣವಾಗಿ ಮಗ್ನನಾದವ 5
13. ವಿಷ್ಣು ಪತ್ನಿಯ ಮಗ 5
16. ದಯೆಯನ್ನು ಕರುಣಿಸುವ ಕೈ 5
19. ರಾಮಕೃಷ್ಣ ಪರಮಹಂಸರ ಧರ್ಮಪತ್ನಿ 5
21. ಉತ್ತರ ಭಾರತದ ಗೆಳತಿ 3
22. ರಾಜನ ಅರಸಿ ಇರುವ ಮನೆಯೇ ಇದು 5
23. ಪ್ರತಿ ದಿನವೂ ನಡೆವ ಜಗಳ 5
26. ಈ ಕರ ಕೊಡುವವರಿಗೆ ಶಿರ ಇರಲೇಬೇಕು 5
27. ಮೇಲೆ ಕಾಣಿಸದೆ ಒಳಗೇ ಅಡಗಿರುವ ಅಂತರ್ಯ 4

ಪದಬಂಧ ಉತ್ತರ -2796

ಮೇಲಿಂದ ಕೆಳಕ್ಕೆ

1.ಸಾಲಿಗ 2.ತರುಣ 3.ಆಗಸ 4.ಯಕಾರ 7.ತಲಾತಲ 9.ವಾರಿಜ 11.ಮೀನಾಕ್ಷಿ 12.ನಿಸ್ಸೀಮ 13. ತಿಸವ 15.ಪಾಮರ 16.ಕಾಮಧೇನು 17. ಜಕ್ಕಣ 19.ಕರುಳು 20.ಅಸುರ 21.ಕರಣ 22.ಅಣಬೆ 23.ಜಿನುಗು

ಎಡದಿಂದ ಬಲಕ್ಕೆ

1.ಸಾರಸ್ವತ 3.ಆಶಯ 5.ರುದ್ರಯಾಗ 6. ಕಾಮಿತ 8.ಗಟವಾಣ 10.ಸಮೀರ 12.ನಿಜಸಂಗತಿ 14.ಕ್ಷಿತಿಪಾಲ 16.ಕಾಮರಾಜ 18.ವರ್ಣಸಂಕರ 20.ಅಣಕ 22.ಅಳುಮುಂಜಿ 24.ನುಗ್ಗಿಸು 25.ರವಿಗಣ 26.ರಮಣ 27.ಬೆರಗಾಗು

ಹ್ಯಾಂಡಿಕ್ರಾಫ್ಟ್ಸ್ ಸೇಲ್ಸ್ ಎಂಪೋರಿಯಮ್ ಹೆಸರಿನಲ್ಲಿ ಮೈಸೂರು ಮೃಗಾಲಯದ ಎದುರು 1966ರಲ್ಲಿ ರಾಮ್‌ಸಿಂಗ್ ಅವರು ಒಂದು ಪುಟ್ಟ ಕರಕುಶಲಕಲಾ ಮಳಿಗೆಯನ್ನು ಹುಟ್ಟುಹಾಕಿದ್ದರು. ಇಂದು ಈ ಮಳಿಗೆಯು 'ರಾಮ್‌ಸನ್ಸ್' ಹೆಸರಿನಿಂದ ಹೆಮ್ಮರವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ನಿಂತಿದೆ...

ಕಲೆಯ ಬಲೆ, ಕಲಾವಿದರಿಗೂ ಬೆಲೆ!

ಕಾರ್ತಿಕ್ ವಿ. ಕಾಳೆ

ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಪ್ರವೇಶ ದ್ವಾರವನ್ನು ನಾವು ಪ್ರವೇಶಿಸಿದೊಡನೆ ಎರಡು ಬೃಹತ್ ಗಾತ್ರದ ಹಾಗೂ ಮಧ್ಯಮ ಗಾತ್ರದ ಬೀಟೆ ಮರದಲ್ಲಿ ಕೆತ್ತನೆ ಮಾಡಿದ ಆನೆಗಳು ಸ್ವಾಗತಿಸುತ್ತವೆ. ಒಳಕ್ಕೆ ಹೋದಂತೆ ತರಹೇವಾರಿ ಬೊಂಬೆಗಳ ಸಂಗ್ರಹ ಮಂತ್ರಮುಗ್ಧರನ್ನಾಗಿ ಮಾಡುತ್ತದೆ. ಇಲ್ಲಿ ಸಂಗ್ರಹಿಸಿದ ಮರ, ಕಂಚಿನ, ಕಲ್ಲಿನ ಪ್ರತಿಮೆಗಳು ಅಲ್ಲದೇ ಬೇರೆ ಬೇರೆ ಮಾಧ್ಯಮಗಳಲ್ಲಿ ತಯಾರಿಸಿದ ಕಲಾಕೃತಿಗಳು ಕಣ್ಣು ಕೀಲಿಸಿಕೊಳ್ಳುತ್ತವೆ. ಒಳ ಗೋಡೆಗಳು, ಹೊರ ಗೋಡೆಗಳ ಮೇಲೆ ಪಾರಂಪರಿಕ ಶೈಲಿಯ ಭಿತ್ತಿಚಿತ್ರಗಳ ಆಕರ್ಷಣೆ. ಒಬ್ಬ ಖಾಸಗಿ ಕಲಾಪ್ರೇಮಿ ಇಂಥ ಸಂಗ್ರಹವನ್ನು ಮಾಡಲು ಸಾಧ್ಯವೇ ಎಂದು ಸಹಜವಾಗಿಯೇ ಹುಬ್ಬೇರೀತು. ಆ ಕಲಾಪ್ರೇಮಿಯೇ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ. ಸಿಂಗ್.



ಆರ್.ಜಿ ಸಿಂಗ್ ಅವರೇ ಹೇಳುವಂತೆ ಇಲ್ಲಿ ಸಂಗ್ರಹಿಸಿದ ಎಲ್ಲ ಕರಕುಶಲ ಕಲಾಕೃತಿಗಳು ಕರ್ನಾಟಕದ ಜನಪದ ಕಲಾಕೃತಿಗಳು ಮಾತ್ರವಲ್ಲ, ಅಖಂಡ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ತಯಾರಿಸಿದ ಜನಪದ ಶೈಲಿಯ ಕರಕುಶಲ ಕಲಾಕೃತಿಗಳು. ಆರ್.ಜಿ. ಸಿಂಗ್ ಅವರಲ್ಲದೆ ಪ್ರತಿಷ್ಠಾನದ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ರಘು ಧರ್ಮೇಂದ್ರ ಪ್ರೇಕ್ಷಕರಿಗೆ ಪ್ರತಿಯೊಂದು ಕಲಾಕೃತಿಯು ಎಲ್ಲಿ, ಯಾರಿಂದ ಮತ್ತು ಯಾವ ಮಾಧ್ಯಮದಲ್ಲಿ ತಯಾರಿಸಿದೆ ಎಂಬ ಪರಿಪೂರ್ಣ ಮಾಹಿತಿಯನ್ನು ನೀಡುತ್ತಾರೆ.

ಇದು ಕಲಾಕೃತಿಗಳ ಮಾರಾಟದ ಕೇಂದ್ರವಾಗಿದ್ದರೂ ಸಂಗ್ರಹಿತ ಕಲಾಕೃತಿಗಳೆಲ್ಲ ಮಾರಾಟವಾಗುತ್ತವೆ ಎಂಬ ಭರವಸೆ ಆರ್. ಜಿ. ಸಿಂಗ್ ಅವರಿಗಿಲ್ಲ. ಮೈಸೂರು, ವಿಜಯನಗರ, ತಂಜಾವೂರು, ಮೊಗಲ್ ಶೈಲಿಯ ಕಲಾಕೃತಿಗಳನ್ನೂ ಇಲ್ಲಿ ಕಾಣಬಹುದು. ಪ್ರತಿ ದಸರಾ ಹಬ್ಬದಲ್ಲಿ ಬೊಂಬೆಗಳನ್ನು ಪ್ರದರ್ಶಿಸುವ ಪರಿಪಾಟವನ್ನು ಈ ಕೇಂದ್ರ ಉಳಿಸಿಕೊಂಡು ಬಂದಿದೆ. ಕಳೆದ ವರ್ಷ ಪ್ರದರ್ಶಿಸಿದ ಬೊಂಬೆಗಳನ್ನು ಈ ವರ್ಷ ಮತ್ತೆ ಪ್ರದರ್ಶಿಸುವುದಿಲ್ಲ.

ದಸರಾ ಹಬ್ಬದ ದಿನಗಳಲ್ಲದೇ ವರ್ಷದ ಬೇರೆ ದಿನಗಳಲ್ಲಿ ಬೇರೆ ಬೇರೆ ವಿಶಿಷ್ಟ ಪ್ರದರ್ಶನಗಳನ್ನು ಏರ್ಪಡಿಸುತ್ತದೆ. 'ಹಸ್ತಿ ಮಂಗಲ' ಎಂಬ ಕಾರ್ಯಕ್ರಮದಲ್ಲಿ ನಾನೂ ಭಾಗಿಯಾಗಿದ್ದೆ. ಈ ಪ್ರದರ್ಶನದಲ್ಲಿ ವಿವಿಧ ಮಾದರಿಯ ಸಾವಿರಾರು ಆನೆಗಳ ಶಿಲ್ಪ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು. ಈ ಎಲ್ಲ ಕರಕುಶಲ ವಸ್ತುಗಳೂ ಮಿನಿಯೇಚರ್ ಕೃತಿಗಳಾಗಿದ್ದವು. ಆರ್.ಜಿ. ಸಿಂಗ್ ಅವರ ಅಚ್ಚುಕಟ್ಟುತನದ ಪಾರಮ್ಯವನ್ನು ನಾನು ಈ ಪ್ರದರ್ಶನದಲ್ಲಿ ಕಂಡುಕೊಂಡೆ. ಒಪ್ಪೋರಣವಾಗಿ, ವಿವೇಚನೆಯಿಂದ ಯಾವ ಕಲಾಕೃತಿ ಎಲ್ಲಿರಬೇಕೋ ಹೇಗಿರಬೇಕೋ ಹಾಗೆಯೇ ಅವುಗಳ ಜೋಡಣೆಯಾಗಿರುವುದು ಸೌಂದರ್ಯಾಭಿವ್ಯಕ್ತಿಯೇ ಹೌದು.

ಹ್ಯಾಂಡಿಕ್ರಾಫ್ಟ್ಸ್ ಸೇಲ್ಸ್ ಎಂಪೋರಿಯಮ್ ಹೆಸರಿನಲ್ಲಿ ಮೈಸೂರಿನ ಮೃಗಾಲಯದ ಎದುರು 1966ರಲ್ಲಿ ರಾಮ್‌ಸಿಂಗ್ ಅವರು ಒಂದು ಪುಟ್ಟ ಕರಕುಶಲ ಕಲಾ ಮಳಿಗೆಯನ್ನು ಹುಟ್ಟುಹಾಕಿದ್ದರು. ಇಂದು ಈ ಮಳಿಗೆಯು 'ರಾಮ್‌ಸನ್ಸ್' ಹೆಸರಿನಿಂದ ಹೆಮ್ಮರವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ನಿಂತಿದೆ. ಈ ಮಳಿಗೆಯ 25ನೆಯ ವರ್ಷದ ಸವಿ ನೆನಪಿಗಾಗಿ ರಾಮ್‌ಸಿಂಗ್ ಅವರು ಅಣ್ಣ, ಹಿರಿಯ ಪತ್ರಕರ್ತ ಎಂ.ಬಿ. ಸಿಂಗ್ ಅವರ ಸಲಹೆಯಂತೆ 'ರಾಮ್‌ಸನ್ಸ್ ಕಲಾ ಪ್ರತಿಷ್ಠಾನ' ಎಂಬ, ನಾಡಿನ ಕಲೆಯ ಅಭಿವೃದ್ಧಿಗಾಗಿ ಸೇವಾಪರವಾದ ಸಂಸ್ಥೆಯನ್ನು ಹುಟ್ಟುಹಾಕಿದರು. ಇದಕ್ಕೆ ಕಾರಣೀಭೂತರಾದವರು ಆರ್. ಜಿ. ಸಿಂಗ್. ತಮ್ಮ ತಂದೆ ಹಾಗೂ ದೊಡ್ಡಪ್ಪನವರ ಕನಸಿನ ಈ ಸಂಸ್ಥೆಯನ್ನು ಆರ್.ಜಿ. ಅವರು ಬಹಳ ಸಮರ್ಪಕವಾಗಿ ನಡೆಸುತ್ತಿದ್ದಾರೆ.

ಮೈಸೂರಿನ ಅರಸರು ಆಡಳಿತ ಮಾತ್ರವಲ್ಲದೆ ಸಂಗೀತ, ಸಾಹಿತ್ಯ, ಜನಪದ ಕಲೆಗಳ ಪೋಷಣೆಯಲ್ಲಿ ಕೂಡ ಸಾರ್ವಭೌಮರಾಗಿದ್ದರು. ಅರಸರ ಕೃಪಾಶ್ರಯದಲ್ಲಿ ಕಲೆಗಳಿಗೆ ಸರ್ವತೋಮುಖ ಬೆಳವಣಿಗೆಯಾಯಿತಲ್ಲದೇ ಕಲಾವಿದರೂ ಬೆಳೆದರು. ಆರ್.ಜಿ. ಸಿಂಗ್ ಅವರು ಕರ್ನಾಟಕದ ಅನೇಕ ಕಲಾವಿದರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ದೇಶದ ಮೂಲೆ ಮೂಲೆಗಳಲ್ಲಿ ತಿರುಗಾಡಿದ್ದಾರೆ. ಅವರಿಗೆ ಇಂತಹದೇ ರಾಜ್ಯದಲ್ಲಿ ಇಂತಹದೇ ಊರಿನಲ್ಲಿ ಇಂತಹದೇ ಶೈಲಿಯಲ್ಲಿ ಕಲಾಕೃತಿಗಳನ್ನು ತಯಾರಿಸುವ ಕಲಾವಿದರಿದ್ದಾರೆ ಎನ್ನುವ ಪಕ್ಕಾ ಜ್ಞಾನವಿದೆ. ಆಧುನಿಕ ಕಲಾವಿದರಿಂದಲೂ ಸಾವಿರಾರು ಚಿತ್ರಗಳನ್ನು ಮಾಡಿಸಿಕೊಂಡಿದ್ದಾರೆ.

ಕೆಲ ವರ್ಷಗಳ ಹಿಂದೆ ಹೆಸರಾಂತ ಚಿತ್ರಕಲಾವಿದರಾದ ಆದ ಜಿ.ಎಲ್.ಎನ್.ಸಿಂಹ, ಕೆ.ಎಸ್.ಶ್ರೀಹರಿ, ವಿಜಯ ಹಾಗರಗುಂಡಗಿ, ಕಮಲ್ ಅಹ್ಮದ್, ಕೆ.ವಿ. ಕಾಳೆ, ಮುಂತಾದ ಕಲಾವಿದರಿಂದ ವಿಷ್ಣುವಿನ ದಶಾವತಾರದ, ಅದರಲ್ಲೂ ಮುಖ್ಯವಾಗಿ ನರಸಿಂಹ ಅವತಾರದ ಚಿತ್ರಗಳನ್ನು ಮಾಡಿಸಿದರು. ಬೆಲ್ಜಿಯಮ್ ದೇಶದಲ್ಲಿರುವ ಇಸ್ಕಾನಿನ ಅಂಗವಾದ ರಾಧಾದೇಶ್ ದೇವಾಲಯಕ್ಕೆ ಸೇರಿದ 'ಮ್ಯೂಸಿಯಮ್ ಆಫ್ ಸೇಕ್ರೆಡ್ ಆರ್ಟ್ಸ್' ಸಂಗ್ರಹಾಲಯಕ್ಕಾಗಿ ವಿಶೇಷವಾಗಿ ಈ ಚಿತ್ರಗಳನ್ನು ಮಾಡಿಸಲಾಯಿತು. ಈ ಕಲಾವಿದರ ಜೊತೆಗೆ ಇನ್ನೂ ಹತ್ತಾರು ಭಾರತೀಯ ಮತ್ತು ಅಂತರರಾಷ್ಟ್ರೀಯ ಕಲಾವಿದರ ನೂರಾರು ಚಿತ್ರಗಳನ್ನು 'ನರಸಿಂಹ ಅವತಾರ' ಎಂಬ ಹೆಸರಿನಡಿ ಒಂದು ವರ್ಷದ ಪರ್ಯಂತ ನಡೆಯುವ ಬೃಹತ್ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಈ ಕಲಾ ಪ್ರದರ್ಶನವನ್ನು ಸುಷ್ಮಾ ಕೆ. ಬಹಲ್ ಕ್ಯುರೇಟ್ ಮಾಡಿದ್ದರು. ಈ ಪ್ರದರ್ಶನಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಶುಭ ಕೋರಿ ಪತ್ರವನ್ನು ಬರೆದಿದ್ದಾರೆ.

ತಮ್ಮ ಸಂಪರ್ಕದಲ್ಲಿರುವ ಕಲಾವಿದರನ್ನು ಸ್ವತಃ ಆರ್. ಜಿಯವರೇ ಫೋನ್ ಮಾಡಿ ಕರೆಸಿಕೊಳ್ಳುತ್ತಾರೆ. ಸದ್ಯ ಏನಾದರೂ ಕೆಲಸವಿದೆಯಾ? ಎಂದು ಕೇಳುತ್ತಾರೆ. ಕೆಲವು ಕಲಾವಿದರು ಕೆಲಸವಿಲ್ಲದೇ ಖಾಲಿ ಇದ್ದಾಗ ಅವರನ್ನು ಕರೆದು ಅಥವಾ ಸ್ವತಃ ಅವರೇ ಕಲಾವಿದರಿದ್ದಲ್ಲಿಗೇ ಹೋಗಿ ಕೆಲಸವನ್ನು ಕೊಟ್ಟು, ಹಣವನ್ನೂ ಕೊಟ್ಟು ಕಾರ್ಯ ಪ್ರವೃತ್ತರಾಗುವಂತೆ ಪ್ರಚೋದಿಸುತ್ತಾರೆ. ನಿಸ್ವಾರ್ಥ ಜೀವಿಯಾದ ಆರ್.ಜಿಯವರು ಪ್ರತಿ ವರ್ಷ ತಮ್ಮ ಕಲಾ ಪ್ರತಿಷ್ಠಾನದಿಂದ ಕಲಾವಿದರಿಗೆ ರಾಮಸನ್ಸ್ ಕಲಾ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಾರೆ.

ರಾಮಸನ್ಸ್ ಕಲಾ ಪ್ರತಿಷ್ಠಾನವು ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಲ್ಲಿ ಸಂಶೋಧಕರೂ ಇತಿಹಾಸ ತಜ್ಞರೂ ಆದ ರಘು ಧರ್ಮೇಂದ್ರ ಅವರ ಕೊಡುಗೆಯೂ ಇದೆ.

ಅಣಕಿಸುವವರಿಗೂ ಪ್ರೀತಿ ನೀಡುವ 'ಟ್ರಂಕು'

ಡಿ. ಸುಮನ್ ಕಿತ್ತೂರು

ಕವಿ, ಕತೆಗಾರ ಗುರುಪ್ರಸಾದ್ ಕಂಟಲಗೆರೆ ಅವರ ಪುಸ್ತಕ 'ಟ್ರಂಕು-ತಟ್ಟೆ' ಹಾಸ್ಟೆಲ್ ಅನುಭವದ ಕಥನ, ಕನ್ನಡ ಸಾಹಿತ್ಯಕ್ಕೆ ದೊರೆತಿರುವ ವಿಶಿಷ್ಟ ಅನುಭವದ ಕೃತಿ.

ಅದೂ, ಸರ್ಕಾರದ ಉಚಿತ ಸೌಲಭ್ಯಗಳ ಕುರಿತು ಏರುದನಿಯಲ್ಲಿ ಚರ್ಚೆಗಳಾಗುತ್ತಿರುವ ಸಂದರ್ಭದಲ್ಲಿ ಈ ಕೃತಿ ಹೊರಬಂದಿದೆ. ಬಿಟ್ಟಿ ಸೌಲಭ್ಯಗಳು ಅದೆಷ್ಟು ಕಳಪೆ, ಘನಘೋರವಾಗಿರುತ್ತವೆ ಎನ್ನುವುದು ಕೃತಿಯ ಮೂಲಕ ನಮಗೆ ತಾಕುತ್ತದೆ. ದುಡಿಯುವ ತಳವರ್ಗದ ಕುಟುಂಬದ ಮಗುವೊಂದು ಅಕ್ಷರದ ಕನಸಿಗಾಗಿ ಈ ತರತಮದ ಸಮಾಜದಲ್ಲಿ ನಡೆಸುವ ಹೋರಾಟದ ಮಜಲುಗಳನ್ನು ಕಣ್ಣಿಗೆ ರಾಚುವಂತೆ ಕಟ್ಟಿಕೊಟ್ಟಿದ್ದಾರೆ ಲೇಖಕ ಗುರುಪ್ರಸಾದ್.

ಈ ಕೃತಿ ವಿಶಿಷ್ಟ ಯಾಕೆಂದರೆ, ಗುರುಪ್ರಸಾದ್ ಅವರ ಬಾಲ್ಯದ ಕಣ್ನೋಟದಿಂದ ದಕ್ಕುವ 'ಟ್ರಂಕು-ತಟ್ಟೆ'ಯು ನಂತರ ಯೌವನಾವಸ್ಥೆಗೆ ತಲುಪುವ ವೇಳೆಗೆ ಸಮುದಾಯದ ಅಂತರಾಳದ ಪ್ರತಿಬಿಂಬವಾಗುತ್ತಾ ಸಾಗುತ್ತದೆ. ಅಂದರೆ, ಲೇಖಕರ ಬಾಲ್ಯ, ಯೌವನಗಳೆರಡೂ 'ಹಾಸ್ಟೆಲ್' ಎಂಬ ಉಚಿತ ತಾಣದ ಜಗತ್ತಿನೊಡನೆ ಮಿಳಿತಗೊಂಡ ನಿರೂಪಣೆ ಹೊಸ ರೀತಿಯದು.

'ಅಪ್ಪ ಒಂದು ದಿನ ನನ್ನನ್ನು ಮತ್ತು ನನ್ನ ತಮ್ಮ ಜೇಪಿಯನ್ನು ಎಡಕ್ಕೆ-ಬಲಕ್ಕೆ ಹಾಕಿಕೊಂಡು, ತಂದಿದ್ದ ಬಟ್ಟೆ ಬರೆಯ ಲಗೇಜನ್ನು ಹೊತ್ತುಕೊಂಡು ತಿಪಟೂರು ಬಸ್‌ಸ್ಟ್ಯಾಂಡಿನಲ್ಲಿ ಇಳಿದು, ರೈಲ್ವೇ ಸ್ಟೇಷನ್ ರೋಡಿನಲ್ಲಿದ್ದ ಹಾಸ್ಟೆಲ್ ಕಡೆಗೆ ಮುಖ ಮಾಡಿತು. ರೈಲ್ವೇ ಸ್ಟೇಷನ್ ರೋಡಿನ ಎಡಗಡೆಗಿದ್ದ ತಿಪಟೂರಿನ ಸರ್ಕಾರಿ ಶಾಲೆಗೆ ಊರ ಶಾಲೆಯಿಂದ ಪಡೆದು ತಂದಿದ್ದ ಟೀಸಿಯನ್ನು ಕೊಟ್ಟು ನನ್ನನ್ನು ಏಳನೇ ತರಗತಿಗೆ, ತಮ್ಮನನ್ನು ಐದನೇ ತರಗತಿಗೆ ಅಡ್ಮಿಷನ್ ಮಾಡಿಸಿತು.' (ಪುಟ-1) ಹೀಗೆ ಆರಂಭವಾಗುವ ಈ ಕಥನ ಮೊದಲಿಗೆ ಕುಟುಂಬದ ಅಂತಃಕರಣ, ತಂದೆ ಮತ್ತು ಮಕ್ಕಳ ಆರ್ದ್ರ ಅನುಭವಗಳನ್ನು ಕಟ್ಟಿಕೊಡುತ್ತದೆ. ಆನಂತರದ್ದು, 'ನಾವಿದ್ದ ಹಾಸ್ಟೆಲ್ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದೆ ಹಂದಿಗೂಡಿಗೂ ಕಡೆಯಾಗಿತ್ತು. ಶೌಚಾಲಯ-ಸ್ನಾನಗೃಹವಿರಲಿ, ಕುಡಿಯುವ ನೀರು ಸಹ ಇರಲಿಲ್ಲ...' (ಪುಟ-7)



ಟ್ರಂಕು ತಟ್ಟೆ
ಹಾಸ್ಟೆಲ್ ಅನುಭವ ಕಥನ
ಲೇ: ಗುರುಪ್ರಸಾದ್ ಕಂಟಲಗೆರೆ
ಪ್ರ: ರಂಗಧಾಮಯ್ಯ ಜೆ.ಸಿ.
ಸಂ.: **9964076203**
ಪು: 136 ₹180

ಒಳನೋಟ

ಸಮ ಸಮಾಜದಲ್ಲಿ ಮನುಷ್ಯನ ಇಷ್ಟು ಕನಿಷ್ಠ ಅವಶ್ಯಕತೆಗೂ ಸ್ಪಂದಿಸದ ಕುರುಡುತನ, ಹಸಿವು ನೀಗಿಸಿಕೊಳ್ಳಲು ವಿದ್ಯಾರ್ಥಿಗಳು ನಡೆಸುವ ಹರಸಾಹಸ, ಎಂಜಲು ಉಪಾಯ, ಬಾಲ್ಯ ಕಾಲದ ಹುಡುಗಾಟಿಕೆಗಳು, ಸಿನಿಮಾ, ಚಿತ್ರಾನ್ನದಲ್ಲಿ ಕಡ್ಲೆಬೀಜಕ್ಕಾಗಿ ನಡೆಸುವ ಹೋರಾಟ, ಶಾಲೆಯ ಕಿರಿಕಿರಿ, ಯಾರದೋ ಮದುವೆಗೆ ಹೋಗಿ ಹಸಿವು ನೀಗಿಕೊಳ್ಳುವ ಸಂಕಟ, ಮೊದಲ ಬಾರಿ ಕದ್ದ ಸೋಪು... ಹೀಗೆ ಟ್ರಂಕಿನೊಳಗೆ ತುಂಬಿದ್ದ ಹಲವಾರು ಘಟನೆಗಳು ಮತ್ತು ನೆನಪುಗಳ ತೇರು ಈ ಕಥನದ ಆರಂಭದಲ್ಲಿ ಹಾದು ಹೋಗುತ್ತದೆ.

ದಲಿತ ಮಗುವೊಂದು, ಅಕ್ಷರದ ಕನಸು ಹೊತ್ತು ಸರ್ಕಾರಿ ಸವಲತ್ತುಗಳೆಂಬ ಕ್ರೌರ್ಯದ ಅಂಗಳದಿಂದ ಜಾತಿ ಕಾರಣದ ಬೇಲಿ ದಾಟಿ ಸಮಾಜದ ಪಡಸಾಲೆಗೆ ಬಂದು ನಿಂತುಕೊಳ್ಳುವ ಅನುಭವ ಕಥನವಿದು. ಇದನ್ನು ಗುರುಪ್ರಸಾದ್ ಅವರು ಎಲ್ಲಿಯೂ ಸಂಯಮ ಕಳೆದುಕೊಳ್ಳದೆ, ತಟಸ್ಥರಾಗಿ, ಕಂಡದ್ದನ್ನು ಕಂಡಂತೆಯೇ ನಿರೂಪಿಸಿರುವ ರೀತಿ ನಮ್ಮ ಅಂತಃಕರಣವನ್ನು ಕದಡುತ್ತದೆ.

'ಟ್ರಂಕು-ತಟ್ಟೆ' ಕಥನದಲ್ಲಿ ಎದ್ದು ಕಾಣುವ ವ್ಯಕ್ತಿತ್ವವೆಂದರೆ, ಲೇಖಕರ ತಂದೆಯವರಾದ ಚನ್ನಬಸವಯ್ಯನವರು.

ಉಳ್ಳವರೇ ಗಂಡು-ಹೆಣ್ಣಿನ ತರತಮದಲ್ಲಿ ಮುಳುಗಿರುವಾಗ, ದುಡಿತವನ್ನೇ ನಂಬಿರುವ ಚನ್ನಬಸವಯ್ಯನವರು ಐವತ್ತು ತೆಂಗಿನಮರ, ಮೂರು ಮಾವಿನಹಣ್ಣಿನ ಮರಗಳ ನೆರವಿನಿಂದ ಮೂವರು ಗಂಡುಮಕ್ಕಳ ಜೊತೆಗೆ ತಮ್ಮಿಬ್ಬರು ಹೆಣ್ಣುಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸಿದ್ದಾರೆ. ಅವರ ತ್ಯಾಗ ಅನನ್ಯ ಮತ್ತು ಇಡೀ ಕಥನದಲ್ಲಿ ಕಾರುಣ್ಯದ ಬೆಳದಿಂಗಳಂತೆ ಅವರು ಕಂಗೊಳಿಸುತ್ತಾರೆ.

ತುಮಕೂರು ಸೀಮೆಯ ಆಡುಭಾಷೆಯ ವಾಕ್ಯಗಳ ಸೌಂದರ್ಯ ಈ ಕಥನಕ್ಕಿದೆ. ವಿಷ್ಣುಕುಮಾರ್ ಅವರ ಮುಖಪುಟ ವಿನ್ಯಾಸ ಲೇಖಕರ ಮಕ್ಕಳ ಒಳಪುಟಗಳಲ್ಲಿನ ರೇಖಾಚಿತ್ರಗಳು ಕೂಡ ಇಲ್ಲಿ ಮಾತನಾಡುತ್ತವೆ.

'ನನ್ನನ್ನು ದ್ವೇಶಿಸುವ
ನನ್ನ ಪ್ರೀತಿಯ ಗೆಳತಿಗೆ
ನಮ್ಮೂರ ಗುಡಿ ಮುಂದೆ
ಬಂಧುಗಳ ಪಂತಿಯಲ್ಲಿ ಬಾಡೂಟ
ಇಕ್ಕುವಾಸೆ...'

ಎಂಬ ಸಾಲುಗಳೊಂದಿಗೆ ಪುಸ್ತಕದ ಬರಹ ಮುಕ್ತಾಯಗೊಳ್ಳುತ್ತದೆ.

ದ್ವೇಷಿಸುವ ಗೆಳತಿ ಮಾತ್ರವಲ್ಲ, ಧರ್ಮ, ಜಾತಿ ಎಂದೆಲ್ಲ ಕಾರಿಕೊಳ್ಳುವ, ದ್ವೇಷವನ್ನೇ ಉಸಿರಾಡುವ, ಸರ್ಕಾರಿ ಸೌಲಭ್ಯಗಳನ್ನು ಅಣಕಿಸುವವರಿಗೂ ಈ ಕೃತಿ ಪ್ರೀತಿಯನ್ನೇ ಉಣಿಸುತ್ತದೆ.

ಮೊದಲ ಓದು

ಚುಕ್ಕಿ ಚಿತ್ತಾರದಲ್ಲಿ ಮೂಡಿದ ಡಾ.ರಾಜ್

ತಮ್ಮ ಅದ್ಭುತ ಅಭಿನಯ, ವಿಭಿನ್ನ ಪಾತ್ರಗಳಿಂದಲೇ ಲಕ್ಷಾಂತರ ಅಭಿಮಾನಿಗಳನ್ನು ಗಳಿಸಿದವರು ರಾಜಕುಮಾರ್. ಇಂತಹ ಅಭಿಮಾನಿಗಳಲ್ಲೊಬ್ಬರು ರಚಿಸಿದ ಬಲು ಅಪರೂಪದ ಕೃತಿಯೇ 'ಅಮೂಲ್ಯ ಮುತ್ತು'. ರಾಜಕುಮಾರ್ ಅವರ ನೂರಾರು ಚುಕ್ಕಿಚಿತ್ರಗಳನ್ನು ಹೊಂದಿರುವ ಕೃತಿಯಿದು. ರಾಯಚೂರಿನ ಚುಕ್ಕಿಚಿತ್ರದ ಕಲಾವಿದ ಎಚ್.ಎಚ್.ಮ್ಯಾದಾರ್ ಇದರ ಕರ್ತೃ.

'ಎಳೆಗೂಸಿನ; ನಸುಗೆಂಪಿನ; ಮೃದುವಾದ ಕೆನ್ನೆಯನ್ನು ಅವರುವಂತೆ; ಪ್ರತಿ ಪುಟವನ್ನು ಮೆಲ್ಲಮೆಲ್ಲನೆ 'ತಿರುವು' ಎಂದು ಮನಸು ಹೇಳುತ್ತದೆ...ಪ್ರತಿ ತಿರುವುಗಳೂ ಮನಸ್ಸನ್ನು ದಶಕಗಳಷ್ಟು ನೆನಪಿನಾಳಕ್ಕಿಳಿಸಿ ನಮ್ಮ ಕಣ್ತುಂಬಿಸುತ್ತದೆ' ಎಂದು ಹಂಸಲೇಖ ಅವರು ಕೃತಿಯ ಬೆನ್ನುಡಿಯಲ್ಲಿ ಹೇಳಿದ್ದಾರೆ. ರಾಜಕುಮಾರ್ ಅವರ ಅಷ್ಟು ಮುದ್ದಾದ ಚಿತ್ರಗಳಿವೆ.

1954ರಲ್ಲಿ ತೆರೆಕಂಡ 'ಬೇಡರ ಕಣ್ಣಪ್ಪ' ಚಿತ್ರದಿಂದ ಕೃತಿ ಪ್ರಾರಂಭವಾಗುತ್ತದೆ. ಪ್ರತಿ ಪುಟದಲ್ಲಿಯೂ ರಾಜ್‌ಕುಮಾರ್ ನಟಿಸಿದ್ದ ಪಾತ್ರದ ಒಂದು ಚುಕ್ಕಿಚಿತ್ರವಿದೆ. ಪಕ್ಕದಲ್ಲಿ ಚಿಕ್ಕದಾಗಿ ಆ ಸಿನಿಮಾ ಕುರಿತಾಗಿ ಮಾಹಿತಿ ಇದೆ. 2000 ದಲ್ಲಿ ಬಿಡುಗಡೆಗೊಂಡ ಅಣ್ಣಾವ್ರ ಕೊನೆಯ ಚಿತ್ರ 'ಶಬ್ದವೇದಿ'ವರೆಗೂ ಅವರು ಅಭಿನಯಿಸಿದ ಪ್ರತಿ ಚಿತ್ರದ ಪಾತ್ರವೂ ಮ್ಯಾದಾರ್ ಅವರ ಚಿತ್ತಾರದಲ್ಲಿ ಮೂಡಿದೆ. ಅದಲ್ಲದೇ ರಾಜ್ ಅವರ ಬದುಕಿನ ಒಂದಷ್ಟು ಅಪರೂಪದ ಚಿತ್ರಗಳನ್ನೂ ಚುಕ್ಕಿಯಲ್ಲಿ ಮೂಡಿಸಿದ್ದಾರೆ.

'ಮಂತ್ರಾಲಯ ಮಹಾತ್ಮೆ'ಯಲ್ಲಿ ರಾಘವೇಂದ್ರ ಸ್ವಾಮಿಗಳ ಪಾತ್ರದಲ್ಲಿ ರಾಜ್ ಅವರ ಚಿತ್ತಾರ ಮೂಡಿದೆ. ಫ್ರೇಮ್ ಹಾಕಿಸಿಡಬಹುದಾದಷ್ಟು ಸೊಗಸಾಗಿದೆ ಈ ಚಿತ್ರ. 2018ರಿಂದ 2022ರವರೆಗೆ ಮ್ಯಾದಾರ್ ಈ ಚಿತ್ರಗಳನ್ನು ರಚಿಸಿದ್ದಾರೆ. ಪ್ರತಿ ಚಿತ್ರದಲ್ಲಿಯೂ ಅವರ ಶ್ರದ್ಧೆ, ಶ್ರಮ, ಕೌಶಲ ಕಾಣಿಸುತ್ತದೆ. 'ಈ ಕೃತಿಯು ಒಂದು ಚಾರಿತ್ರಿಕ ದಾಖಲೆಯಾಗಲಿದೆ. ಡಾ.ರಾಜಕುಮಾರ್ ಅವರ ಬಗ್ಗೆ ಬಂದ ಅಕ್ಷರಸ್ಥ ಕೃತಿಗಳಿಗಿಂತ ಹೊರತಾದ ಈ ಚುಕ್ಕಿ ಚಿತ್ರ ಸಂಪುಟಕ್ಕೆ ತನ್ನದೇ ಆದ ಮಹತ್ವವಿದೆ' ಎಂದು ಮುನ್ನುಡಿಯಲ್ಲಿ ಡಾ.ಬರಗೂರು ರಾಮಚಂದ್ರಪ್ಪನವರು ಬರೆದಿದ್ದಾರೆ. ರಾಜ್ ಅಭಿಮಾನಿಗಳು ಮನೆಯಲ್ಲಿಟ್ಟುಕೊಳ್ಳಬಹುದಾದಷ್ಟು ಸೊಗಸಾದ ಚಿತ್ರಗಳು ಇದರಲ್ಲಿ ಸಿಗುತ್ತವೆ.



ಅಮೂಲ್ಯ ಮುತ್ತು
ಲೇ: ಎಚ್.ಎಚ್.ಮ್ಯಾದಾರ್
ಪ್ರ: ಮ್ಯಾದಾರ್ ಲಲಿತಾ ಕಲಾ ಪ್ರತಿಷ್ಠಾನ, ರಾಯಚೂರು
ಸಂ: **9916938843**
ಪು: 136 ₹600

ಪರಿಣಾಮಕಾರಿ ಕಥೆಗಳ ಗುಚ್ಛ

ರಂಗಕರ್ಮಿ, ಕಥೆಗಾರ ಮಲ್ಲಿಕಾರ್ಜುನ ಕಡಕೋಳ ಅವರು ಬರೆದ ಕಥೆಗಳ ಗುಚ್ಛ ಈ 'ಮುಟ್ಟು'. ಕೃತಿಯ ಶೀರ್ಷಿಕೆ ಹೊತ್ತ ಕಥೆ 40 ವರ್ಷಗಳ ಹಿಂದೆ ಮಾಸಿಕ ಪತ್ರಿಕೆಯೊಂದರ ಯುಗಾದಿ ವಿಶೇಷಾಂಕಕ್ಕೆ ಬರೆದ ಆಮಂತ್ರಿತ ಕತೆ. ಅಲ್ಲಿಂದಿತ್ತೀಚೆಗೆ ಬರೆದ ಹದಿನೈದು ಕಥೆಗಳು ಈ ಸಂಕಲನದಲ್ಲಿವೆ.

ಪತ್ರಿಕೆಗಳು, ಮಾಸಿಕಗಳಲ್ಲಿ ಪ್ರಕಟವಾದ ಕಥೆಗಳ ಜೊತೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಬರೆದ ಕಥೆಗಳೂ ಇಲ್ಲಿ ಅಡಕವಾಗಿದೆ. ಕಡಕೋಳ ಅವರ ಅನುಭವದ, ಅನುಭಾವದ ಸಾರ ಇಲ್ಲಿನ ಕಥೆಗಳ ಜೀವಾಳದಂತಿದೆ. ಕಥೆಗಳಲ್ಲಿನ ಪಾತ್ರಗಳ ಆಯಾಮ, ಅವುಗಳ ಬರವಣಿಗೆ ಪ್ರತಿ ಪುಟಕ್ಕೂ ಜೀವತುಂಬುತ್ತಾ ಸಾಗಿದೆ. ಅಲ್ಲಿ ಬಳಸಿರುವ ಭಾಷೆ, ವಸ್ತುವಿನ ನಿರ್ವಹಣೆ ಓದಿಸಿಕೊಂಡು ಹೋಗುತ್ತದೆ.

ಉದಾಹರಣೆಗೆ ಶೀರ್ಷಿಕೆ ಹೊತ್ತ ಕಥೆ 'ಮುಟ್ಟು' ಜನರೆದುರಿಗೆ ಇಡುವ ಪ್ರಶ್ನೆ ಇಂದಿಗೂ ಪ್ರಸ್ತುತವಾಗಿದೆ. ಅದರ ಬರವಣಿಗೆಯೂ ಅಷ್ಟೇ ಸೂಕ್ಷ್ಮವಾಗಿದೆ. ಮಣ್ಣೆವ್ವ, ಚಿತ್ತಪ್ಪ ನೆನಪಿನಲ್ಲಿ ಉಳಿಯುವಂತೆ ಅಲ್ಲಿನ ನಿರೂಪಣೆಯಿದೆ. ಹಳ್ಳಿಯ ವಾತಾವರಣಕ್ಕೆ ವೇದಿಕೆ ಕಟ್ಟುತ್ತಾ ಕಡಲೇಬೇಳೆ ಮೈಬಣ್ಣದ ಪಾತ್ರವೊಂದನ್ನು ಸೃಷ್ಟಿಸಿ, ಮಿನಿ ವಿಧಾನಸೌಧದಲ್ಲಿ ನಡೆಯುವ ಚರ್ಚೆಗಳನ್ನು ಮೆಲುಕು ಹಾಕುತ್ತಾ ಲಘು ದಾಟಿಯಿಂದ ಗಂಭೀರವಾಗುತ್ತಾ ಸಾಗುತ್ತದೆ ಈ ಕಥೆ. ಇದು ಅವರ ಚಿತ್ರಕಶಕ್ತಿಗೂ ಇರುವ ಸಾಕ್ಷ್ಯ. ಕನ್ನಡದ ಸಣ್ಣಕತೆಗಳ ಭಂಡಾರದ ಪ್ರಮುಖ ಕಥೆಗಳನ್ನಾಗಿ ಇಲ್ಲಿನ ಕಥಾಗುಚ್ಛವನ್ನು ನೋಡಬಹುದು. ಇವುಗಳ ಬರವಣಿಗೆ ಸರಳವಾಗಿದ್ದರೂ, ಅವು ಪರಿಣಾಮಕಾರಿಯೆನಿಸುತ್ತವೆ.



ಮುಟ್ಟು (ಕಥಾ ಸಂಕಲನ)
ಲೇ: ಮಲ್ಲಿಕಾರ್ಜುನ ಕಡಕೋಳ
ಪ್ರ: ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ
ಸಂ: **9448124431**
ಪು: 164 ₹170

ವೈಜ್ಞಾನಿಕ ನೆಲೆಗಟ್ಟಿನಲ್ಲಿ ಭರಪೂರ ಮಾಹಿತಿ

ದೇಸಿ ಕೌಶಲವನ್ನೇ ವೃತ್ತಿ ಮಾಡಿಕೊಂಡವರು ಹಲವರಿದ್ದಾರೆ. ಈ ದೇಶಿಜ್ಞಾನವನ್ನು ಕುರಿತು ವಿದ್ವಾಂಸರಿಂದ ಬರೆಯಿಸುವ 'ವಿಜ್ಞಾನಗಳ ಇತಿಹಾಸ ವಿಭಾಗ' ಮಾಲೆಯಡಿ ಹಂಪಿ ಕನ್ನಡ ವಿಶ್ವವಿದ್ಯಾಲಯವು ಕೆಲವು ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಒಂದು 'ಬಡಿಗವೃತ್ತಿ: ವೈಜ್ಞಾನಿಕ ಚಿಂತನೆ'. ವಿಶ್ವಕರ್ಮ ಎಂಬ ಪರಿಕಲ್ಪನೆಯಿಂದ ಹಿಡಿದು ಬಡಿಗ ವೃತ್ತಿ ಚಾರಿತ್ರಿಕವಾಗಿ ಬೆಳೆದು ಬಂದ ಬಗೆ, ನಗರ ಮತ್ತು ಗ್ರಾಮ ನಿರ್ಮಾಣಗಳಲ್ಲಿ ಈ ಕುಶಲಕರ್ಮಿಗಳ ಪಾತ್ರ, ದೇವಸ್ಥಾನ ನಿರ್ಮಾಣದ ಸೂಕ್ಷ್ಮಗಳು, ಯಂತ್ರಜ್ಞಾನ, ಪಚ್ಚೆ ಕೌಶಲಗಳು, ಮಾಪನಗಳು, ಮರ ಹಾಗೂ ಉಪಕರಣ ಸಂಸ್ಕೃತಿ ಹೀಗೆ ಕೃತಿಯು ಮಾಹಿತಿಯ ಕಣಜವಾಗಿದೆ. ಬಡಿಗವೃತ್ತಿಯ ಕುಶಲತೆ, ಇತಿಹಾಸ, ಕಾಲಾಂತರದಲ್ಲಿ ಈ ವೃತ್ತಿ ಹೇಗೆಲ್ಲ ಪರಿವರ್ತಿತವಾಯಿತು ಎನ್ನುವುದನ್ನು ಲೇಖಕರು ಅಧ್ಯಯನ ಆಕರಗಳನ್ನು ಆಧರಿಸಿ ದಾಖಲಿಸಿದ್ದಾರೆ. ಸುದೀರ್ಘವಾದ ಪ್ರಸ್ತಾವನೆಯು ಕೃತಿಯ ಆಂತರ್ಯಕ್ಕೆ ಬೆಳಕು ಚೆಲ್ಲುವಷ್ಟು ಗಟ್ಟಿಯಾಗಿದೆ. ಇತಿಹಾಸದ ಪುಟಗಳಲ್ಲಿ ಅಡಗಿರುವ ಕಲೆಯ ಭಾಗವಾದ ದೇಸಿ ಕೌಶಲದ ಅನೇಕ ಆಸಕ್ತಿಕರ ವಿವರಗಳು ಈ ಕೃತಿಯಲ್ಲಿವೆ.

'ಸಂಸ್ಕೃತ ಮತ್ತು ಕನ್ನಡ ಮಹಾಭಾರತಗಳಲ್ಲಿ ಇಂದ್ರಪ್ರಸ್ಥ, ಅರಗಿನ ಮನೆ, ಮಯ ಸಭಾಂಗಣ ಮತ್ತು ನಗರ ರಚನೆ ಸಂದರ್ಭದಲ್ಲಿ ಮಯ ಮತ್ತು ಆತನ ಸಹೋದರರಾದ ಶಿಲ್ಪಿಗಳು ಮತ್ತು ಕಾಂಶ್ಯಕಾರರ ಉಲ್ಲೇಖಗಳಿವೆ. ಮಯ ಅಂದರೆ ಬಡಿಗ, ಈಗಾಗಲೇ ಗುರುತಿಸಿದಂತೆ ಬಡಿಗನನ್ನು ಭಾರತೀಯ ಸಾಹಿತ್ಯದಲ್ಲಿ ಧಾರುಕ ವರ್ಧಕಿ ಇತ್ಯಾದಿ ಪರ್ಯಾಯ ಹೆಸರುಗಳಿಂದ ಕರೆಯಲಾಗಿದೆ. ಮಯ ಅಥವಾ ಬಡಿಗನೆಂದರೆ ಸಕಲ ಕರ್ಮಗಳಿಂದ ಲೋಕೋಪಕಾರಿಯಾದವನು ಎಂದು ಅರ್ಥ. ಗ್ರಾಮ ಮತ್ತು ನಗರ ರಚನಾ ತಂತ್ರಜ್ಞಾನದಲ್ಲಿ ಬಡಿಗ ಹರಪ್ಪ ಸಂಸ್ಕೃತಿಗಿಂತ ಮೊದಲೇ ಪಳಗಿದವನಾಗಿದ್ದ.'–ಕೃತಿಯ ಮಾಹಿತಿಪೂರ್ಣತೆಗೆ ಈ ಸಾಲುಗಳು ಉದಾಹರಣೆಗಳಷ್ಟೆ. ಇತಿಹಾಸದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿ ಮನಸ್ಸಿನವರಿಗೆ ಇಂತಹ ಭರಪೂರ ಮಾಹಿತಿ ಈ ಕೃತಿಯಲ್ಲಿ ದೊರೆಯುತ್ತಾ ಹೋಗುತ್ತದೆ. ದೇಸಿ ಕಲೆ, ಇತಿಹಾಸದ ಅಧ್ಯಯನ ಮಾಡುವವರಿಗೆ ಆಕರಗ್ರಂಥವಾಗಬಲ್ಲ ಲಕ್ಷಣವೂ ಈ ಕೃತಿಗೆ ಇದೆ.



ಬಡಿಗವೃತ್ತಿ: ವೈಜ್ಞಾನಿಕ ಚಿಂತನೆ
ಲೇ: ಡಾ. ವೀರೇಶ ಬಡಿಗೇರ
ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಹಂಪಿ
ಸಂ: **9448166990**
ಪು: 190 ₹160

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಶಂಕರ ಬೈಚಬಾಳ ಅವರ ನನ್ನವ್ವ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಚಂದ್ರಿಕಾ ಹೆಗಡೆ ಅವರ ಪಕ್ಷಿ ಪ್ರಲಾಪ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಜಿಐ ನೋಂದಣಿ: ಮುಂದೇನ್ಲೇಳಿ?

10ನೇ ಪುಟದಿಂದ...

ಅರ್ಧ ದಾರಿಯಷ್ಟೇ: ಕರ್ನಾಟಕ ನಿಂಬೆ ಅಭಿವೃದ್ಧಿ ಮಂಡಳಿಯು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳ ಸಹಯೋಗದೊಂದಿಗೆ ನಡೆಸಿದ ಐದು ವರ್ಷಗಳ ಪ್ರಯತ್ನದ ಫಲವಾಗಿ ಇಂಡಿ (ಕಾಗ್ಜಿ) ನಿಂಬೆಗೆ 'ಜಿಐ ಟ್ಯಾಗ್' ಸಿಕ್ಕಿದೆ. ಉತ್ಪನ್ನವೊಂದಕ್ಕೆ 'ಜಿಐ ನೋಂದಣಿ' ಪಡೆಯುವುದು ಅರ್ಧ ದಾರಿಯಷ್ಟೇ; ಅದಕ್ಕಿಂತ ಹೆಚ್ಚಿನ ಕೆಲಸ ಆ ನಂತರದ್ದೇ ಆಗಿರುತ್ತದೆ. ಆದರೆ ಆ ದ್ವಿತೀಯಾರ್ಧ ಪ್ರಕ್ರಿಯೆ ಬಗ್ಗೆ ಗಂಭೀರವಾಗಿ ಯೋಚಿಸುವವರಿಲ್ಲ ಎಂಬುದು ವಿಪರ್ಯಾಸ! 'ಜಿಐ ಟ್ಯಾಗ್' ಪಡೆಯುವುದು ತುಸು ಸಂಕೀರ್ಣವಾದ ಪ್ರಕ್ರಿಯೆ. ಇದರ ಬಗ್ಗೆ ಅಧಿಕಾರಿಗಳು, ವಿಜ್ಞಾನಿಗಳು ಹಾಗೂ ಒಂದಷ್ಟು ಅಧ್ಯಯನ ಮಾಡಿದ ಕೆಲವು ರೈತರಿಗೆ ಗೊತ್ತೇ ವಿನಾ, ಅದರ ನಿಜವಾದ ಪ್ರತಿಫಲ ಪಡೆಯಬೇಕಿರುವ ಸಮುದಾಯಗಳಿಗೆ ಆ ಬಗ್ಗೆ ಮಾಹಿತಿಯೇ ಇರುವುದಿಲ್ಲ! 'ಜಿಐ' ಲೇಬಲ್ ಪಡೆಯುವ ಉತ್ಪನ್ನದಿಂದ ರೈತ ಸಮುದಾಯ ಲಾಭ ಪಡೆಯದೇ ಇರುವುದಕ್ಕೆ ಮುಖ್ಯ ಕಾರಣ ಇದೇ!

ಮಾರ್ಕೆಟ್ ತಜ್ಞರ ಪ್ರಕಾರ, 'ಜಿಐ ನೋಂದಣಿ ಎಂಬುದು ವಹಿವಾಟಿಗೊಂದು ಅತ್ಯುತ್ತಮ ಟೂಲ್'. ಉತ್ಪಾದಕನ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಸಂರಕ್ಷಿಸಲು ಇದೊಂದು ಉತ್ತಮ 'ಅಸ್ತ್ರ'. ತಳಮಟ್ಟದಲ್ಲಿ ರೈತ, ಕುಶಲಕರ್ಮಿ ಅಥವಾ ಸಮುದಾಯಗಳ ಪರಂಪರಾಗತ ಸಂಪತ್ತು ಹಾಗೂ ಜ್ಞಾನದ ರಕ್ಷಣೆ ಮಾಡುತ್ತಲೇ, 'ಜಿಐ ನೋಂದಣಿ'ಯನ್ನು ಮಾರುಕಟ್ಟೆ ಅವಕಾಶ ವಿಸ್ತರಿಸಲು ಬಳಸಬೇಕು. ಆದರೆ 'ಜಿಐ ಟ್ಯಾಗ್' ಪಡೆದ ನಂತರದ ಚಟುವಟಿಕೆಗೆ ಆಸಕ್ತಿ ತೋರಿಸುವುದೇ ಇಲ್ಲ ಎಂಬುದನ್ನು ತೋಟಗಾರಿಕೆ ಇಲಾಖೆ ಅಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ.

ನಿಂತಲ್ಲೇ ನಿಂತಿವೆ!: ಕರ್ನಾಟಕದ ಹಲವಾರು ಉತ್ಪನ್ನಗಳಿಗೆ 'ಭೌಗೋಳಿಕ ಸೂಚ್ಯಂಕ ನೋಂದಣಿ' ಸಿಕ್ಕಿದೆ. ನಂಜನಗೂಡಿನ ರಸಬಾಳೆ, ಮೈಸೂರು ವೀಳ್ಯದೆಲೆ, ಕೊಡಗಿನ ಕಿತ್ತಲೆ, ದೇವನಹಳ್ಳಿಯ ಚಕ್ಕೋತ ಇತ್ಯಾದಿ ಈ ಪಟ್ಟಿಯಲ್ಲಿವೆ. ಆ ಪೈಕಿ ಉಡುಪಿಯ ಮಲ್ಲಿಗೆಯೂ ಒಂದಾಗಿದ್ದು, 'ಜಿಐ ಟ್ಯಾಗ್' ಸಿಕ್ಕ ಬಳಿಕ ಮಾರುಕಟ್ಟೆ ವಿಸ್ತಾರಗೊಂಡು ವಿದೇಶಕ್ಕೂ ರಫ್ತಾಗುತ್ತಿದೆ. ಅದು ರೈತ ಸಮುದಾಯಕ್ಕೆ ಸಿಕ್ಕ ಹೆಚ್ಚುವರಿ ಆದಾಯ.

ಹಾಗಾದರೆ ಉಳಿದ ಉತ್ಪನ್ನಗಳ ಪಾಡು? 'ಅಲ್ಲೇ ನಿಂತಿವೆ' ಎಂದು ನಿಸ್ಸಹಾಯಕರಾಗಿ ಹೇಳುತ್ತಾರೆ ತೋಟಗಾರಿಕೆ ಅಧಿಕಾರಿಗಳು. ಇದಕ್ಕೆ ಕಾರಣಗಳು ಹಲವು.

ಉತ್ಪನ್ನವೊಂದಕ್ಕೆ 'ಜಿಐ ಟ್ಯಾಗ್' ಸಿಕ್ಕಾಗ, ಆಮೇಲಷ್ಟೇ ಅದರ ನಿಜವಾದ ಬಳಕೆಯ ಆರಂಭವಾಗುತ್ತದೆ. ಅದಕ್ಕಾಗಿ ಸುದೀರ್ಘ ಪ್ರಕ್ರಿಯೆಯೇ ನಡೆಯಬೇಕು. ಕೃಷಿ, ತೋಟಗಾರಿಕೆ ಅಥವಾ ಕರಕುಶಲ ಕಲಾಕೃತಿಗೆ ಈ 'ಟ್ಯಾಗ್' ದಕ್ಕುವುದರಲ್ಲಿ ಸರ್ಕಾರದ ಸಂಬಂಧಿತ ಇಲಾಖೆಗಳ ಪಾತ್ರ ಹೆಚ್ಚಾಗಿರುತ್ತದೆ. ಆ ಉತ್ಪನ್ನವು 'ಭೌಗೋಳಿಕ ಸೂಚ್ಯಂಕ' ಪಡೆಯಲು ಹೇಗೆ ಅರ್ಹ ಎಂಬುದನ್ನು ಸಾಕ್ಷಿ-ಪುರಾವೆ ಒದಗಿಸಿ 'ಜಿಯಾಗ್ರಫಿಕಲ್ ಇಂಡಿಕೇಶನ್ಸ್ ರಿಜಿಸ್ಟ್ರಿ' ಪ್ರಾಧಿಕಾರಕ್ಕೆ ಮನದಟ್ಟು ಮಾಡಿಸಬೇಕು. ಬೇರೆ ಸಮುದಾಯ ಅಥವಾ ಪ್ರದೇಶದ ಜನರಿಂದ ಆಕ್ಷೇಪ ಎದುರಾದರೆ, ಸಮಜಾಯಿಷಿ ಒದಗಿಸಬೇಕು. ಇಷ್ಟೆಲ್ಲ ಮಾಡುವ ಹೊತ್ತಿಗೆ ಇಲಾಖೆಗಳ ಅಧಿಕಾರಿಗಳು ಸುಸ್ತಾಗಿರುತ್ತಾರೆ.

ಮೈಸೂರು ವೀಳ್ಯದೆಲೆ

ವ್ಯಾಪಕ ಪ್ರಚಾರ ಅಗತ್ಯ: ದ್ವಿತೀಯಾರ್ಧದ ಪ್ರಯತ್ನಗಳು ನಡೆಯದೇ ಹೋದರೆ, ಆ ಪಟ್ಟ ಗಿಟ್ಟಿಸಿಕೊಂಡ ಉತ್ಪನ್ನಕ್ಕೆ ಹೆಚ್ಚೇನೂ 'ಮೌಲ್ಯ' ಸಿಗದು. ಇದಕ್ಕಾಗಿ ಮೊದಲಿಗೆ ರೈತರಲ್ಲಿ 'ಜಿಐ' ಮಹತ್ವದ ಬಗ್ಗೆ ಅರಿವು ಮೂಡಿಸಬೇಕು. ಅದರ ಹಿಂದಿರುವ ಕಾನೂನುಗಳು, ಪ್ರಯೋಜನ, ಮಾರುಕಟ್ಟೆ ಸ್ವರೂಪ, ಕಾರ್ಯತಂತ್ರದ ಬಗ್ಗೆ ರೈತರ ಜತೆಜತೆಗೆ ವಿಜ್ಞಾನಿಗಳಲ್ಲೂ, ಜನಪ್ರತಿನಿಧಿಗಳಲ್ಲೂ ಜಾಗೃತಿ ಮೂಡಿಸಬೇಕು. ಈ ಟ್ಯಾಗ್ ಪಡೆದ ಉತ್ಪನ್ನದ ವೈಶಿಷ್ಟ್ಯ ಏನೇನು ಎಂದು ಎಲ್ಲ ಬಗೆಯ ಮಾಧ್ಯಮಗಳಲ್ಲೂ ಪ್ರಚಾರ ಕೊಡಬೇಕು.

ಆಸಕ್ತ ಗ್ರಾಹಕರು ಗುಣಮಟ್ಟದ ಉತ್ಪನ್ನವನ್ನು ತುಸು ಹೆಚ್ಚು ದರ ನೀಡಿಯೂ ಖರೀದಿಸುತ್ತಾರೆ. ಆದರೆ ಈ ತೆರನಾದ ಜಿಐ ಟ್ಯಾಗಿನ ಉತ್ಪನ್ನಗಳ ಖರೀದಿ- ಮಾರಾಟಕ್ಕೊಂದು ವಿಶೇಷ ವೇದಿಕೆಯೇ ಇಲ್ಲ. ಇದರಿಂದಾಗಿಯೇ ನಕಲಿ ಉತ್ಪನ್ನಗಳು ಅಸಲಿ ಹೆಸರಿನಲ್ಲೇ ಮಾರುಕಟ್ಟೆಗೆ ಬಂದು ಬೀಳುತ್ತವೆ. ಅಂಥ ಸಂದರ್ಭದಲ್ಲಿ ಕಾನೂನು ಕ್ರಮ ಜರುಗಿಸುವ ತಂಡದ ಬೆಂಬಲವೂ ಸಮುದಾಯಕ್ಕೆ ಅಗತ್ಯ.

ಇನ್ನು, ಉತ್ತಮ ಮತ್ತು ನಂಬಿಕಾರ್ಹ ಗುಣಮಟ್ಟದ ಪದಾರ್ಥಕ್ಕೆ ದಿಢೀರ್ ಬೇಡಿಕೆ ಕಂಡುಬಂದರೆ ಅದನ್ನು ಪೂರೈಸಲು ರೈತ ಸಮುದಾಯಕ್ಕೆ ಆಗದು. ಇದನ್ನು ಪರಿಗಣಿಸಿ, ರೈತರ ಸಾಮರ್ಥ್ಯ ವೃದ್ಧಿಗೆ ತರಬೇತಿ ಕೊಡಬೇಕು. 'ಮೂಲತಃ ಜಿಐ ನೋಂದಣಿ ಶುರುವಾಗಿದ್ದೇ ಸ್ಥಳೀಯ ಅಥವಾ ಪಾರಂಪರಿಕ ಸಂಪತ್ತನ್ನು ಗುರುತಿಸಿ, ಅದಕ್ಕೊಂದು ವಹಿವಾಟಿನ ಸ್ವರೂಪ ಕೊಟ್ಟು ರೈತ ಸಮುದಾಯಕ್ಕೆ ಹೆಚ್ಚಿನ ಆದಾಯ ಕೊಡುವ ದೃಷ್ಟಿಯಿಂದ' ಎನ್ನುತ್ತಾರೆ, ತೋಟಗಾರಿಕೆ ಇಲಾಖೆಯ ನಿವೃತ್ತ ಅಧಿಕಾರಿ ಡಾ. ಕೆ.ರಾಮಕೃಷ್ಣಪ್ಪ. ಟ್ಯಾಗ್ ಮುಂದಿಟ್ಟುಕೊಂಡು ಸಮುದಾಯ ಅಥವಾ ರೈತ ಗುಂಪುಗಳು ಆ ಉತ್ಪನ್ನದ ವಹಿವಾಟಿಗೆ ಮತ್ತೊಂದು ಹೆಜ್ಜೆ ಮುಂದೆ ಹೋಗಬೇಕು ಎಂಬ ಸಲಹೆ ಅವರದು. ಕಮಲಾಪುರದ ಕೆಂಪುಬಾಳೆ, ಮಲೆನಾಡಿನ ಅಪ್ಪೆಮಿಡಿ, ನಂಜನಗೂಡಿನ ರಸಬಾಳೆಗೆ 'ಜಿಐ ನೋಂದಣಿ' ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಅನುಭವ ಹಂಚಿಕೊಳ್ಳುವ ಡಾ. ರಾಮಕೃಷ್ಣಪ್ಪ, ಗ್ರಾಹಕರಲ್ಲಿ ಅರಿವು ಮೂಡಿಸುವುದು ಹಾಗೂ ರೈತಮಟ್ಟದಲ್ಲಿ ಇದಕ್ಕೊಂದು ವಾಣಿಜ್ಯ ಸ್ವರೂಪ ಕೊಡುವುದು- ಈ ಎರಡನ್ನೂ ಪರಿಣಾಮಕಾರಿಯಾಗಿ ನಿರ್ವಹಿಸಿದರೆ ಜಿಐ ನೋಂದಣಿಗೆ ಅರ್ಥ ಬಂದೀತು ಎನ್ನುತ್ತಾರೆ.

ವಿಶೇಷ ಮಹತ್ವವುಳ್ಳ ಪದಾರ್ಥವೊಂದರ ಉತ್ಪಾದನೆಗೆ ಭೌಗೋಳಿಕ ಸೀಮೆಯನ್ನು ಗುರುತಿಸಿ, ಅದಕ್ಕೆ ಸ್ಥಳ ಪರಂಪರೆಯ ಮೊಹರು ಒತ್ತುವುದರ ಹಿಂದೆ 'ವಿಶ್ವ ವಾಣಿಜ್ಯ ಒಪ್ಪಂದ'ದ ನೆರಳು ಇದೆ ಎಂಬುದೂ ಚೋದ್ಯ. ಆದರೆ, ಅದನ್ನು ರೈತ ಸಮುದಾಯದ ಒಳಿತಿಗೆ ಬಳಸಿಕೊಳ್ಳಲು ಸಾಧ್ಯ ಎಂಬುದನ್ನು ಕರ್ನಾಟಕದ ತೋಟಗಾರಿಕೆ ಇಲಾಖೆಯು ಉಡುಪಿಯ ಮಲ್ಲಿಗೆ ಬೆಳೆಗೆ ತೋರಿಸಿಕೊಟ್ಟಿದೆ. ಕೇರಳದಲ್ಲಂತೂ ಕೃಷಿ ವಿಜ್ಞಾನಿ ಡಾ. ಸಿ.ಆರ್. ಎಲ್ಸಿ ಅವರ ಸತತ ಪರಿಶ್ರಮದಿಂದಾಗಿ ಚೆಂಗಲಿಕೋದನ್ ಬಾಳೆ, ಪೊಕ್ಕಾಳಿ ಅಕ್ಕಿ, ಮರಯೂರು ಬೆಲ್ಲ, ಎಡಯೂರು ಮೆಣಸು ಇನ್ನಿತರ ಉತ್ಪನ್ನಗಳು 'ಜಿಐ' ಹಣೆಪಟ್ಟಿ ಪಡೆದು ರೈತರಿಗೆ ಹೊಸ ದಾರಿ ತೋರಿಸಿವೆ.

ಶುಕ್ರವಾರ(ಜು.7) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ಚಿಕ್ಕಮಗಳೂರು, ಕೊಡಗು ಹಾಗೂ ಬಾಬಾಬುಡನ್‌ಗಿರಿಯ ಜಿಐ ಟ್ಯಾಗ್ ಹೊಂದಿರುವ ಅರೇಬಿಕಾ ಕಾಫಿ ವೈವಿಧ್ಯವನ್ನು ಜನಪ್ರಿಯಗೊಳಿಸಲು 'ಕಾಫಿ ಎಕೊ ಟೂರಿಸಂ' ಪ್ರಾರಂಭಿಸುವ ಅಂಶವಿದೆ. ಮೈಸೂರು ಮಲ್ಲಿಗೆ, ನಂಜನಗೂಡು ರಸಬಾಳೆ, ಮೈಸೂರು ವೀಳ್ಯದೆಲೆ ಇವುಗಳ ಉತ್ಪಾದನೆ, ಸಂಶೋಧನೆ, ಮಾರುಕಟ್ಟೆ ಉತ್ತಮಪಡಿಸುವ ಕಾರ್ಯಕ್ರಮಗಳನ್ನು ರೂಪಿಸುವುದಾಗಿಯೂ ಬಜೆಟ್‌ನಲ್ಲಿ ಪ್ರಸ್ತಾವ ಇದೆ. ಅವು ಎಷ್ಟರಮಟ್ಟಿಗೆ ಸಾಕಾರಗೊಳ್ಳಲಿವೆ ಎಂದು ನೋಡಬೇಕು.

ಜಿಐ ಪಡೆದು ಯಶಸ್ಸು ಸಾಧಿಸಿದ ಮಾದರಿಗಳಂತೂ ಕಣ್ಣ ಮುಂದಿವೆ. ಆದರೆ, ಸಾಲು ಸಾಲು ಉತ್ಪನ್ನಗಳನ್ನು 'ಜಿಐ ನೋಂದಣಿ' ಪಟ್ಟಿಗೆ ಸೇರಿಸಲು ಉತ್ಸುಕತೆ ತೋರಿಸುವ ಸರ್ಕಾರದ ವಿವಿಧ ಇಲಾಖೆಗಳು, ನಂತರ ಯಾಕೆ 'ವಿಶ್ರಾಂತಿ ಮೂಡ್'ಗೆ ಜಾರಿಬಿಡುತ್ತವೋ ಎಂಬುದು ಬಗೆಹರಿಯಲಾಗದ ಪ್ರಶ್ನೆಯಂತೂ ಹೌದು!

ತುಂಗಭದ್ರೆಯ ಬತ್ತಿದೊಡಲು



ಸುಲಭವಾಗಿ ಸಿಗುವ ಮೀನಿಗೆ ಹೊಂಚುಹಾಕಿದವರು

ನದಿಗಿಳಿದು ಅದೆಷ್ಟು ಕಾಲವಾಯಿತೋ...

ಕಪ್ಪೆಚಿಪ್ಪುಗಳು

– ಪ್ರಜಾವಾಣಿ ಚಿತ್ರಗಳು / ತಾಜುದ್ದೀನ್ ಆಜಾದ್

ಹೊಸಪೇಟೆಯ ಗುಂಡಾ ಅರಣ್ಯ ಪ್ರದೇಶ ಮತ್ತು ಕೊಪ್ಪಳ ಜಿಲ್ಲೆಯ ಕಾಸನಕಂಡಿ ಗ್ರಾಮದ ಬಳಿ ಇರುವ ತುಂಗಭದ್ರೆಯ ಒಡಲೀಗ ಬಡಕಲು. 2018ರ ನಂತರ ಈ ವರ್ಷವೇ ನೀರು ಬತ್ತಿದ ನೆಲ ಇಷ್ಟು ದೀರ್ಘಾವಧಿ ಸೂರ್ಯನ ಕಂಡಿದ್ದು. ಈಗ ರಾಜ್ಯದ ಒಂದಿಷ್ಟು ಪ್ರದೇಶಗಳಲ್ಲಿ ಮಳೆ ಜೋರಾಗಿ ಸುರಿಯುತ್ತಿದೆ. ತುಂಗೆ, ಭದ್ರೆ ಎರಡೂ ನದಿಗಳು ತುಂಬಿ ಹರಿದು ತನ್ನೊಡಲ ತುಂಬುವ ಶುಭಗಳಿಗೆಗಾಗಿ ತುಂಗಭದ್ರೆ ಕಾಯುತ್ತಿರುವ ಈ ಚಿತ್ರಿಕೆಗಳು ನೋಡಲಷ್ಟೇ ಸುಂದರ, ಅನುಭವಿಸಿದವರಿಗೆ ಸಂಕಟ. ನೀರು ತಗ್ಗಿದ ಕಡೆಯಲ್ಲೆಲ್ಲ ಸುಲಭವಾಗಿ ದಕ್ಕುವ ಮೀನುಗಳ ಶಿಕಾರಿಯಲ್ಲಿ ರೆಕ್ಕೆಬಿಚ್ಚಿದ ಹಕ್ಕಿಗಳು, ಮೀನುಗಾರಿಕೆಗಾಗಿ ನದಿಗಿಳಿಯದೆ ದಡದಲ್ಲೇ ಉಳಿದ ದೋಣಿಗಳು, ನದಿಯಾಳದಲ್ಲಿ ಕಡಲುವಾಸಿಗಳು ಉಳಿಸಿರುವ ತರಹೇವಾರಿ ಚಿಪ್ಪುಗಳು ಪ್ರಕೃತಿ ಪಲ್ಲಟದ ಕಥೆಗಳನ್ನು ಅರುಹುತ್ತಿವೆ.

ಮೀನು ಬೇಟೆಯಲ್ಲಿ ಹಕ್ಕಿ ಹಿಂಡು

ಡ್ಯಾಂ ಒಳಗೊಂದು...

ಹಿರೇಭಾಸ್ಕರ (ಮಡೇನೂರು) ಜಲಾಶಯದ ಹಿನ್ನೀರು

10ನೇ ಪುಟದಿಂದ

ಲಿಂಗನಮಕ್ಕಿ ಜಲಾಶಯದ ಪೂರ್ಣಮಟ್ಟ ಇರುವುದು ಸಮುದ್ರಮಟ್ಟದಿಂದ 1819 ಅಡಿ ಎತ್ತರದಲ್ಲಿ. ಹಿರೇಭಾಸ್ಕರ ಸಮುದ್ರಮಟ್ಟದಿಂದ 1774 ಅಡಿ ಎತ್ತರದಲ್ಲಿದೆ. ಹೀಗಾಗಿ ಹಳೆಯ ಅಣೆಕಟ್ಟೆಯ ಮೇಲೆ 45 ಅಡಿ ನೀರು ಸಂಗ್ರಹವಾಗುತ್ತಿದೆ. ಶರಾವತಿ ನೀರ ಹಾದಿಯಲ್ಲಿ ಮರೆಯಾಗಿರುವ ಈ ಪುಟ್ಟ ಜಲಾಶಯ ನಿರ್ಮಾಣದ ಸೊಬಗು ಆಕರ್ಷಣೀಯ. ದೂರ ನಿಂತು ಅದರ ಅಸ್ತಿತ್ವವನ್ನು ಕಣ್ತುಂಬಿಕೊಳ್ಳಬಹುದು. ಆದರೆ ಹತ್ತಿರ ಹೋಗಲು ಅರಣ್ಯ ಇಲಾಖೆಯ ಅನುಮತಿ ಕಡ್ಡಾಯ.

ಹೊರ ರಾಜ್ಯಕ್ಕೆ ವಿದ್ಯುತ್ ಪೂರೈಸಿದ ಶ್ರೇಯ

ಹಿರೇಭಾಸ್ಕರ ಜಲಾಶಯದಿಂದ ಉತ್ಪಾದಿಸುತ್ತಿದ್ದ ವಿದ್ಯುತ್ ಅನ್ನು ಮುಂಬೈ ಪ್ರಾಂತ್ಯಕ್ಕೆ ಸೇರಿದ್ದ ಪಕ್ಕದ ಕಾರವಾರ ಹಾಗೂ ಮದ್ರಾಸ್ ಪ್ರೆಸಿಡೆನ್ಸಿಗೂ ಪೂರೈಸಲಾಗುತ್ತಿತ್ತು. ಹೊರ ರಾಜ್ಯಗಳಿಗೆ ವಿದ್ಯುತ್ ಪೂರೈಸಿದ ಮೊದಲ ಯೋಜನೆ ಎಂಬ ಖ್ಯಾತಿಯೂ ಇಲ್ಲಿಯದಾಗಿತ್ತು. ಆಗ ಅಲ್ಲಿಂದ ₹1.5 ಕೋಟಿ ವೆಚ್ಚದಲ್ಲಿ ಭದ್ರಾವತಿಗೆ ವಿದ್ಯುತ್ ತಂದು ಅಲ್ಲಿನ ಸ್ವೀಕರಣಾ ಕೇಂದ್ರದಿಂದ ಅಲ್ಲಿನ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸೇರಿದಂತೆ ಬೆಂಗಳೂರು ಹಾಗೂ ಮೈಸೂರು ನಗರಗಳಿಗೂ ವಿದ್ಯುತ್ ಪೂರೈಸಲಾಗುತ್ತಿತ್ತು ಎಂದು ಇತಿಹಾಸ ಸಂಶೋಧಕ ಅಜಯ್ ಶರ್ಮಾ ಹೇಳುತ್ತಾರೆ.



ಜಲಾಶಯದ ಕಟ್ಟಡದ ಸದೃಢ ಸ್ತಂಭಗಳು

ವಿಶಿಷ್ಟ ತಾಂತ್ರಿಕತೆ: ಅಣೆಕಟ್ಟೆಯ ಸಿವಿಲ್ ಕಾಮಗಾರಿಗೆ ಆ ಕಾಲದಲ್ಲಿ ₹2.85 ಕೋಟಿ ಖರ್ಚು ಆಗಿದೆ. ವಿದ್ಯುತ್ ಉತ್ಪಾದನೆಗೆ ಜಲಾಶಯದ ನೀರನ್ನು ನಿಯಂತ್ರಿತವಾಗಿ ಹೊರಬಿಡಲು ಆರು ಕ್ರಸ್ಟ್‌ಗೇಟುಗಳನ್ನು ಅಳವಡಿಸಲಾಗಿದೆ. ಪ್ರವಾಹದ ವೇಳೆ ಹೆಚ್ಚುವರಿ ನೀರು ಹೊರಗೆ ಹಾಕಲು ತಲಾ 58 ಅಡಿಯ ವಿಶೇಷ ಮಾದರಿಯ 11 ಕಿಂಡಿಗಳಿವೆ (ಸೈಫನ್). ಈ ಕಿಂಡಿಗಳು ವೊಲ್ಯೂಟ್ ಮಾದರಿಯಲ್ಲಿ ರೂಪುಗೊಂಡಿವೆ. ಇವು 18 ಅಡಿ ವ್ಯಾಸ ಹೊಂದಿವೆ. ಈ ಕಿಂಡಿಗಳ ನಿರ್ಮಾಣಕ್ಕೆ ಆರ್‌ಸಿಸಿ ಬಳಸಲಾಗಿದೆ. ಒಳಗೆ ಮರಮುಟ್ಟು ಸೇರಿದಂತೆ ಯಾವುದೇ ವಸ್ತು ಸಿಕ್ಕಿಕೊಳ್ಳದಂತೆ ಅವುಗಳ ಬಾಯಿಗೆ ಜಾಲರಿ ಹಾಕಲಾಗಿದೆ. ಪ್ರತಿ ಕಿಂಡಿಯಿಂದ 12,750 ಕ್ಯುಸೆಕ್ ನೀರು ಹೊರಹೋಗುವಂತೆ ವಿನ್ಯಾಸ ಮಾಡಲಾಗಿದೆ. ಈ ಡ್ಯಾಂ 65.73 ಲಕ್ಷ ಕ್ಯೂಬಿಕ್ ಅಡಿ ಜಲ ಸಂಗ್ರಹ ಸಾಮರ್ಥ್ಯ ಹೊಂದಿತ್ತು. ಪ್ರತಿ ವರ್ಷ ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಮಟ್ಟ ಏರುತ್ತಿದ್ದಂತೆ ಕಣ್ಮರೆಯಾಗುವ ಈ ಜಲಾಶಯ, ನೀರು ಕಡಿಮೆಯಾದಾಗ ವೀಕ್ಷಣೆಗೆ ತೆರೆದುಕೊಳ್ಳುತ್ತದೆ. ಮೇ ತಿಂಗಳ ಅಂತ್ಯ ಇದನ್ನು ನೋಡಲು ಸೂಕ್ತ ಕಾಲ.

ಆ ಅಣೆಕಟ್ಟು ನೀರಿನಲ್ಲಿ ಮುಳುಗಿ ಆರು ದಶಕ ಕಳೆದರೂ ಈಗಲೂ ಅತ್ಯಂತ ಸುಸ್ಥಿತಿಯಲ್ಲಿ ಇದೆ. ಆದರೆ ಡ್ಯಾಂನ ಎರಡು ಬದಿಯಲ್ಲಿ ಕಟ್ಟಲಾಗಿರುವ ಪಿಚ್ಚಿಂಗ್ ಕಲ್ಲುಗಳು ಕಣ್ಮರೆಯಾಗುತ್ತಿವೆ. ಕಲ್ಲುಗಳು ಉದುರಿ ಹಿನ್ನೀರಿನ ತಳ ಸೇರುತ್ತಿವೆಯೋ ಇಲ್ಲವೇ ಕಿತ್ತು ಸಾಗಾಟ ಮಾಡಲಾಗುತ್ತಿದೆಯೋ ಗೊತ್ತಿಲ್ಲ. ಆ ಬಗ್ಗೆ ಸಂಬಂಧಿಸಿದವರು ಗಮನಹರಿಸಬೇಕಿದೆ.

ಪೂರಕ ಮಾಹಿತಿ: ಅಜಯ್ ಶರ್ಮಾ, ಇತಿಹಾಸ ಸಂಶೋಧಕ, ಶಿವಮೊಗ್ಗ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಮೀನಿಗೆ ಗಾಳ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡನಿಗೆ ಒಮ್ಮೆ ಮೀನು ಹಿಡಿಯುವುದು ಹೇಗಿರಬಹುದೆಂದು ಅನುಭವಿಸುವ ಬಯಕೆಯಾಯಿತು. ಮನೆಯ ಹತ್ತಿರದಲ್ಲಿದ್ದ ನದಿಯೊಂದರ ಬಳಿ ಹೋಗಿ ಮೀನಿಗಾಗಿ ಗಾಳ ಹಾಕಿ ಕಾಯುತ್ತ ಕುಳಿತ

ಗುಂಡನ ನಿರೀಕ್ಷೆ ಸುಳ್ಳಾಗಲಿಲ್ಲ. ಗಾಳ ಹಾಕಿ ಕುಳಿತ ಸ್ವಲ್ಪ ಹೊತ್ತಿನಲ್ಲಿಯೇ ಏನೋ ಸಿಕ್ಕಿಬಿದ್ದಂತಾಯಿತು. ನೀರಿನಿಂದ ಗಾಳವನ್ನು ನಿಧಾನವಾಗಿ ಮೇಲೆತ್ತಲು ಪ್ರಾರಂಭಿಸಿದ. ಗಾಳದಲ್ಲಿದ್ದ ಮೀನು ಕಂಡು ಗುಂಡ ಖುಷಿಯಾದ.

ಗುಂಡನಿಗೆ ಅದ್ಯಾಕೊ ಭಾರ ಹೆಚ್ಚಿದಂತೆ ಭಾಸವಾಯಿತು. ಗಾಳವನ್ನು ತುಸು ಮೇಲಕ್ಕೆ ಎತ್ತಿದರೆ ಗಾಳಕ್ಕೆ ಬಿದ್ದ ಮೀನಿಗೆ ಕಪ್ಪೆಯೊಂದು ಬಾಯಿ ಹಾಕಿ ನುಂಗಲು ಪ್ರಯತ್ನಿಸುತ್ತಿತ್ತು. ಗುಂಡ ಗಾಳವನ್ನು ಮತ್ತಷ್ಟು ಮೇಲಕ್ಕೆ ಎತ್ತಿದ.

ಮೀನನ್ನು ಕಪ್ಪೆಯ ಬಾಯಿಯಿಂದ ಬಿಡಿಸಿಕೊಳ್ಳಬಹುದೆಂದುಕೊಂಡಿದ್ದ ಗುಂಡನಿಗೆ ಆಘಾತ ಕಾದಿತ್ತು. ಮೀನಿಗೆ ಬಾಯಿಗೆ ಹಾಕಿದ್ದ ಕಪ್ಪೆಗೆ ಹಾವೊಂದು ಬಾಯಿ ಹಾಕಿ ಕುಳಿತಿತ್ತು. ಹಾವನ್ನು ಕಂಡ ಗುಂಡ ಕಂಪಿಸತೊಡಗಿದ.

ಗಣಿತದಲ್ಲಿ ಗರ್ದಿ ಗಮ್ಮತ್ತು

2ರ ಮಗ್ಗಿಯೊಂದಿರಲು ಸಾಕು

ಬೇರಾವ ಮಗ್ಗಿಯ ಗೊಡವೆ ನಮಗೇಕಯ್ಯ!

ಎರಡು ಸಂಖ್ಯೆಗಳ ಗುಣಾಕಾರವನ್ನು ಕೇವಲ 2ರ ಮಗ್ಗಿಯಿಂದಲೇ ಮಾಡಬಹುದು. ಇದು ನಿಮಗೆ ಗೊತ್ತೇ?

ಹೀಗೆ ಮಾಡಿ: ಗುಣ್ಯ ಗುಣಕಗಳನ್ನು ಕಂಬ ಸಾಲಿನಲ್ಲಿ ಹಚ್ಚಿಕೊಳ್ಳಿ. ಗುಣ್ಯವನ್ನು 2ರಿಂದ ಕಡಿತ ಹೊಡೆಯುತ್ತ 1 ಬರುವವರೆಗೆ ಮುಂದುವರೆಯಿರಿ. ಶೇಷ ಉಳಿದರೆ ಅದನ್ನು ಬಿಟ್ಟುಬಿಡಿ. ಹಾಗೆ ಗುಣಕವನ್ನು 2ರಿಂದ ಗುಣಿಸುತ್ತ ಗುಣ್ಯಕ್ಕೆ ಎಷ್ಟು ಬಾರಿ ಕಡಿತ ಹೊಡೆದಿದ್ದೀರಿ ಅಷ್ಟು ಬಾರಿ ಗುಣಿಸುತ್ತ ಹೋಗಿರಿ. ಈಗ ಎಡಭಾಗದ ಗುಣ್ಯದಲ್ಲಿರುವ ಸಮ ಸಂಖ್ಯೆ ಕಾಟು ಹೊಡೆಯುತ್ತ ಬಲ ಸಂಖ್ಯೆಗೂ ಕಾಟು ಹೊಡೆಯಿರಿ. ಈಗ ಉಳಿದಿರುವ ಬಲ ಸಂಖ್ಯೆಗಳನ್ನು ಕೂಡಿಸಿ ನೋಡಿ, ಉತ್ತರ ಸಿದ್ಧ. ಮೊದಲಿನ ಕ್ರಮದಂತೆ ತಾಳೆ ನೋಡಿ ಖಾತ್ರಿ ಮಾಡಿಕೊಳ್ಳಿ.

ಉದಾ: 35 x 24

(2ರಿಂದ ಕಡಿತ ಹೊಡೆದಾಗ)			(2ರಿಂದ ಗುಣಿಸುತ್ತ ಹೋದಾಗ)
	35	24	
	17	48	
	~~8~~	~~96~~	
	~~4~~	~~192~~	
	~~2~~	~~384~~	
	1	768	
		840	

ತಾಳೆ:

```
   35
 x 24
-----
  140
   70
-----
  840
```

ಹೇಗಾದರೂ ಓದಿ

1. WAS IT A RAT I SAW?
2. RISE TO VOTE SIR

ಪುಟಾಣಿ ಪದಬಂಧ

ಸುಳಿವು					
1			ನ	ಯ	ನಯ ನಾಜೂಕಿನಿಂದ ಮಾಡುವ ನಟನೆ
2			ದಾ	ರಿ	ದಾರಿಯನ್ನು ಅಳೆಯುತ್ತಿದ್ದ ಹಿಂದಿನ ಕಾಲದ ಒಂದು ಅಳತೆ
3			ಕ	ರ	ಕರದಲ್ಲಿ ಹಿಡಿದು ವಾರಪತ್ರಿಕೆ ಓದುತ್ತಿರುವ ಈತ ಯಾರು?
4			ವಾ	ಣಿ	ವಾಣಿ ಓದುತ್ತಿರುವ ಪತ್ರಿಕೆ ಈಗ ನಿಮ್ಮ ಕೈಯಲ್ಲೇ ಇದೆ
5			ವಾ	ಣಿ	ವಾಣಿ ಓದುವ ದಿನಪತ್ರಿಕೆ

ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಅನುಸ್ವಾರಯುಕ್ತ 'ಡ'ಕಾರ ಅಕ್ಷರಗಳ ಹಿಂದೆ ಪಟ್ಟಿಯಲ್ಲಿ ಕೊಟ್ಟಿರುವ ಅಕ್ಷರಗಳಿಂದ ಆಯ್ದು ಒಂದಕ್ಷರ ಹಿಂದೆ ತುಂಬಿ ಅರ್ಥಬದ್ಧಪದ ಮಾಡಿ.

ಗ	ರು	ತಿ	ಗ	ಹ
ಚೆ	ಕಿ	ದ	ಉ	ದ
ಬೆ	ಖ	ದ	ಭ	ಬ
ತು	ಗು	ಬ	ಮ	ಮ

	ಂಡ		ಂಡಿ		ಂಡು		ಂಡೆ
	ಂಡ		ಂಡಿ		ಂಡು		ಂಡೆ
	ಂಡ		ಂಡಿ		ಂಡು		ಂಡೆ
	ಂಡ		ಂಡಿ		ಂಡು		ಂಡೆ
	ಂಡ		ಂಡಿ		ಂಡು		ಂಡೆ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಅಮೋಘ ನಾಯಕರ
ಗದಗ



ಸಾನ್ನಿಧ್ಯ ಡಿ
ಮೈಸೂರು

ಅಯಾನ್ ಎಂ.ಎನ್
ಕೊಪ್ಪಳ

ಚಿಣ್ಣರ ಚುಟುಕು



ಮರ ಕಡಿಯುವುದು
ಕಂಡಾಗ ನನ್ನ ಜೀವ
ಮರ ಮರ
ಮರಗುತ್ತದೆ

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1. ಸದಾವಿಜಯ: ___________
2. ಆಹಾ ರವಿ ಜ್ಞಾನಿ: ___________
3. ನರಿಯ ಹಿತ: ___________
4. ಜಯರಾಮ: ___________

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1. ಬನಾರಸ 2. ಹಿಂಬಾಲಕ 3. ವ್ಯವಹಾರ
4. ತಾರಾಗಣ 5. ಯಜಮಾನ

ಅದಲು ಬದಲು ಕಂಚಿ ಕದಲು
1. ಮುಳುಗು 2. ಮುಂದಿನಭಾಗ
3. ರಮಾ ಮನವಿ
4. ಹಣಕಾಸು ಬೇಕು

ಜಾಣಪದ ಆಟ
1: 1. ವಿವರ 2. ವಿವಸ್ತ್ರ 3. ವಿವಾದ
4. ವಿವಾಹ 5. ವಿವಿಧ 6. ವಿವೇಕ
2: 1. ಶರೀರ 2. ಪರಾರಿ 3. ಜರೂರ
4. ಮುರಾರಿ 5. ಕರಾರು 6. ಊರೂರು

ಸ್ವಲ್ಪ ಹೊತ್ತು ಯೋಚ್ನೆ ಮಾಡಿ
1. ಹಲಗಿ 2. ಉದ್ದಗಿ 3. ಜತಿಗಿ
4. ಡಂಬರಗಿ 5. ಬೊಟಗಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ದುಲೀಪ್ ಟ್ರೋಫಿ: ಉತ್ತರ ವಲಯದ 'ವಿಳಂಬ ತಂತ್ರ'ಕ್ಕೆ ದಕ್ಷಿಣ ತಿರುಗೇಟು

ವಿಹಾರಿ ಪಡೆಗೆ ಫೈನಲ್ ರಹದಾರಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಮಳೆ, ಗಾಳಿ, ಉತ್ತರ ವಲಯದ ಬೌಲರ್‌ಗಳ ದಾಳಿ ಹಾಗೂ ವಿಳಂಬ ತಂತ್ರಗಳನ್ನು ಮೆಟ್ಟಿನಿಂತ ದಕ್ಷಿಣ ವಲಯ ತಂಡವು ದುಲೀಪ್ ಟ್ರೋಫಿ ಸೆಮಿಫೈನಲ್‌ನಲ್ಲಿ ರೋಚಕ ಜಯ ಸಾಧಿಸಿತು. ಫೈನಲ್‌ಗೆ ಲಗ್ಗೆಯಿಟ್ಟಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶನಿವಾರ ದಿನದಾಟದ ಬಹುತೇಕ ಸಮಯವು ಮಳೆಗೆ ವ್ಯರ್ಥವಾಯಿತು. ಆದರೂ ಮಯಂಕ್ ಅಗರವಾಲ್ (54; 57ಎ, 4X7) ಮತ್ತು ಹನುಮವಿಹಾರಿ (43; 42ಎ, 4X8) ಉತ್ತಮ ಅಡಿಪಾಯ ಹಾಕಿದರು. ಇದರಿಂದಾಗಿ ತಂಡವು 2 ವಿಕೆಟ್‌ಗಳ ಗೆಲುವು ಸಾಧಿಸಿತು. ಆದರೆ ಪಂದ್ಯದ ಕೊನೆಯ ಅರ್ಧಗಂಟೆಯ ಆಟದಲ್ಲಿ ಹತ್ತಾರು ನಾಟಕೀಯ ತಿರುವುಗಳಿದ್ದವು. ಸಂಜೆ ದಕ್ಷಿಣದ ಬ್ಯಾಟರ್ ಸಾಯಿಕಿಶೋರ್ 'ವಿಜಯದ ಸಿಕ್ಸರ್' ಬಾರಿಸುವವರೆಗೂ ಫಲಿತಾಂಶವು ತೂಗುಯ್ಯಾಲೆಯಾಗಿತ್ತು.

ಚಹಾ ವಿರಾಮಕ್ಕೂ ಕೆಲಹೊತ್ತಿನ ಮುನ್ನ ಮಳೆ ಸುರಿದಿದ್ದರಿಂದ ಆಟ ಸ್ಥಗಿತವಾದಾಗ ದಕ್ಷಿಣ ವಲಯ ತಂಡಕ್ಕೆ ಗೆಲುವಿಗಾಗಿ 32 ರನ್‌ಗಳು ಅವಶ್ಯಕವಾಗಿದ್ದವು. ತಂಡವು 183 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಕ್ರೀಸ್‌ನಲ್ಲಿ ತಿಲಕ್ ವರ್ಮಾ (18 ರನ್) ಮತ್ತು ರಿಕಿ ಭುಯ್ (33) ಇದ್ದರು. ಮಧ್ಯಾಹ್ನ 3.50ಕ್ಕೆ ಆಟ ಮರುಆರಂಭವಾಯಿತು. ಜಯಂತ್ ಯಾದವ್ ನಾಯಕತ್ವದ ಉತ್ತರ ತಂಡವು ಹನುಮವಿಹಾರಿ ಬಳಗದ ಮೇಲೆ 'ಸರ್ವ ರೀತಿ'ಯಿಂದಲೂ ಒತ್ತಡ ಹೇರಿತು. ಕಾರ್ಮೋಡಗಳೂ ತೇಲುತ್ತಿದ್ದ ಕಾರಣ ಮಳೆ ಬರುವ ಅಥವಾ ಬೆಳಕು ಮಂದವಾಗುವ ನಿರೀಕ್ಷೆಯಲ್ಲಿದ್ದ ಜಯಂತ್ ಬಳಗವು ಸಮಯ ವ್ಯರ್ಥ ಮಾಡುವ ತಂತ್ರಗಳನ್ನೂ ಅನುಸರಿಸಿತು. ಬೌಲರ್ ನಾಯಕನ ಮಾತುಕತೆ, ಅಂಪೈರ್ ಜೊತೆಗೆ ಚರ್ಚೆ ಮತ್ತು ಅಪೀಲ್‌ಗಳನ್ನು ಮಾಡುತ್ತ ಬ್ಯಾಟರ್‌ಗಳ ಏಕಾಗ್ರತೆಗೆ ಭಂಗ ತರುವ ಪ್ರಯತ್ನ ಮಾಡಿದರು. ಮೊದಲ ಇನಿಂಗ್ಸ್‌ನಲ್ಲಿ ಮೂರು ರನ್‌ಗಳ ಮುನ್ನಡೆ ಗಳಿಸಿದ್ದರಿಂದ ಪಂದ್ಯ ಡ್ರಾ ಆದರೂ ಉತ್ತರ ವಲಯಕ್ಕೆ ಫೈನಲ್ ಅರ್ಹತೆ ಲಭಿಸುತ್ತಿತ್ತು.

ಮಯಂಕ್ ಅಗರವಾಲ್ ಬ್ಯಾಟಿಂಗ್ ವೈಖರಿ – ಪ್ರಜಾವಾಣಿ ಚಿತ್ರಗಳು/ಪುಷ್ಕರ್ ವಿ

'ತಂತ್ರಗಾರಿಕೆ ಸರ್ವೇಸಾಮಾನ್ಯ'

ಹನುಮವಿಹಾರಿ

'ಉತ್ತರ ವಲಯ ತಂಡವು ಕೊನೆಯ ಹಂತದಲ್ಲಿ ಸಮಯ ವ್ಯರ್ಥ ಮಾಡುವ ತಂತ್ರವನ್ನು ಅನುಸರಿಸುತ್ತಾರೆಂಬುದು ನಮಗೆ ಮೊದಲೇ ಗೊತ್ತಿತ್ತು. ಅದಕ್ಕೆ ತಿರುಗೇಟು ನೀಡಲು ನಾವೂ ಸಿದ್ಧರಾಗಿದ್ದೆವು. ಪಂದ್ಯದಲ್ಲಿ ಇದೆಲ್ಲವೂ ಸಾಮಾನ್ಯ. ಅವರ ಸ್ಥಾನದಲ್ಲಿ ನಾನಿದ್ದರೂ ಅದನ್ನೇ ಮಾಡುತ್ತಿದ್ದೆ' ಎಂದು ದಕ್ಷಿಣ ವಲಯ ತಂಡದ ನಾಯಕ ಹನುಮವಿಹಾರಿ ಹೇಳಿದರು.

'ಪಂದ್ಯದಲ್ಲಿ ಸೋಲು ತಪ್ಪಿಸಿಕೊಳ್ಳಲು ಇಂತಹ ತಂತ್ರಗಾರಿಕೆಗಳೂ ನಡೆಯುತ್ತವೆ. ಅದೆಲ್ಲವನ್ನೂ ಮೀರಿ ನಿಂತು ಸಾಧಿಸಿದ ಗೆಲುವು ತೃಪ್ತಿ ಮತ್ತು ಸಂತೋಷ ನೀಡುತ್ತದೆ. ಇವತ್ತು ಮಯಂಕ್ ಅಗರವಾಲ್ ಉತ್ತಮ ಆಟದಿಂದ ಗೆಲುವು ಸಾಧ್ಯವಾಗಿದೆ' ಎಂದರು. ಈ ಪಂದ್ಯದಲ್ಲಿ ಮಯಂಕ್ ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧಶತಕ ಗಳಿಸಿದರು. ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು. ಇದೇ 12ರಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ಆರಂಭವಾಗಲಿದೆ.

ಫೈನಲ್‌ಗೆ ಪಶ್ಚಿಮ ವಲಯ

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಸೆಮಿಫೈನಲ್ ಡ್ರಾ ಅಯಿತು. ಕೇಂದ್ರ ವಲಯದ ವಿರುದ್ಧದ ಈ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿದ್ದ ಪಶ್ಚಿಮ ವಲಯ ತಂಡವು ಫೈನಲ್ ಪ್ರವೇಶಿಸಿತು.

261 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಕೇಂದ್ರ ವಲಯವು 35 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 128 ರನ್ ಗಳಿಸಿತು. ಈ ನಡುವೆ ಮಳೆಯಿಂದಾಗಿ ಪಂದ್ಯದಲ್ಲಿ ಕೆಲ ಸಮಯ ಆಟ ನಿಂತಿತ್ತು. ಮಧ್ಯಾಹ್ನ ಪಶ್ಚಿಮ ತಂಡದ ನಾಯಕ ಪೃಥ್ವಿ ಶಾ ಪಂದ್ಯ ಡ್ರಾ ಮಾಡಿಕೊಳ್ಳಲು ಸಮ್ಮತಿಸಿದ್ದರು.

2022ರಲ್ಲಿಯೂ ಪಶ್ಚಿಮ ಮತ್ತು ದಕ್ಷಿಣ ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದವು. ಈಗ ಮತ್ತೊಮ್ಮೆ ಪ್ರಶಸ್ತಿಗಾಗಿ ಸೆಣಸಲಿವೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 92.6 ಓವರ್‌ಗಳಲ್ಲಿ 220. ಕೇಂದ್ರ ವಲಯ: 31 ಓವರ್‌ಗಳಲ್ಲಿ 128. ಎರಡನೇ ಇನಿಂಗ್ಸ್: ಪಶ್ಚಿಮ ವಲಯ: 93.2 ಓವರ್‌ಗಳಲ್ಲಿ 297. ಕೇಂದ್ರ ವಲಯ: 35 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 128 (ರಿಂಕು ಸಿಂಗ್ 40, ಉಪೇಂದ್ರ ಯಾದವ್ ಔಟಾಗದೆ 18) ಪಂದ್ಯ ಡ್ರಾ.

ಇದನ್ನು ಅರಿತಿದ್ದ ಬ್ಯಾಟರ್‌ಗಳು ದೊಡ್ಡ ಹೊಡೆತಗಳಿಗೆ ಕೈಹಾಕಿದರು. ಬೌಲರ್ ಹರ್ಷಿತ್ ರಾಣಾ ಆಫ್‌ಸ್ಟಂಪ್ ಹೊರಗೆ ಬೌನ್ಸರ್‌ಗಳನ್ನು ಹಾಕುತ್ತ ಬ್ಯಾಟರ್‌ಗಳನ್ನು ನಿಯಂತ್ರಿಸುವ ಪ್ರಯತ್ನ ಮಾಡಿದರು. ತಿಲಕ್ ವರ್ಮಾ ಮತ್ತು ವಾಷಿಂಗ್ಟನ್ ಸುಂದರ್ ವಿಕೆಟ್‌ಗಳನ್ನೂ ಕಬಳಿಸಿದರು. ಬಲ್ತೇಜ್ ಸಿಂಗ್ ಕೂಡ ಇದೇ ತಂತ್ರ ಅನುಸರಿಸಿ ರಿಕಿ ಭುಯ್ ವಿಕೆಟ್ ಪಡೆದರು.

ಆದರೆ ಸಾಯಿ (ಔಟಾಗದೆ 15) ಶಾಂತಚಿತ್ತರಾಗಿ ಆಡಿದರು. ಅವರಿಗೆ ಕೆ.ವಿ. ಶಶಿಕಾಂತ್ (9 ರನ್) ಉತ್ತಮ ಜೊತೆ ನೀಡಿದರು. ಒಂದು ಮತ್ತು ಎರಡು ರನ್‌ಗಳನ್ನು ಗಳಿಸುವಲ್ಲಿ ಯಶಸ್ವಿಯಾದರು. ಅಲ್ಲದೇ ಸಾಯಿ ಎರಡು ಮತ್ತು ಶಶಿಕಾಂತ್ ಒಂದು ಸಿಕ್ಸರ್ ಹೊಡೆದಿದ್ದು ತಂಡದ ಜಯಕ್ಕೆ ಕಾರಣವಾದವು. ವಿಜಯಕ್ಕೆ ಎರಡು ರನ್‌ಗಳ ಅಗತ್ಯವಿದ್ದಾಗ ಶಶಿಕಾಂತ್ ಅವರು ಸಿಂಗ್ ಬೌಲಿಂಗ್‌ನಲ್ಲಿ ಔಟಾದಾಗ ಆತಂಕ ಉಂಟಾಗಿತ್ತು. ಕೊನೆಯಲ್ಲಿ ವಿಜಯಕುಮಾರ್ ವೈಶಾಖ ಮೂರು ಎಸೆತಗಳನ್ನು ಎದುರಿಸಿ ವಿಕೆಟ್ ಉಳಿಸಿಕೊಂಡರು. 37ನೇ ಓವರ್‌ನ ಮೊದಲ ಎಸೆತವನ್ನು ಸಾಯಿ ಸಿಕ್ಸರ್‌ಗೆ ಎತ್ತಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರ ವಲಯ: 58.3 ಓವರ್‌ಗಳಲ್ಲಿ198. ದಕ್ಷಿಣ ವಲಯ: 54.4 ಓವರ್‌ಗಳಲ್ಲಿ 195. ಎರಡನೇ ಇನಿಂಗ್ಸ್: ಉತ್ತರ ವಲಯ: 56.4 ಓವರ್‌ಗಳಲ್ಲಿ 211. ದಕ್ಷಿಣ ವಲಯ: 36.1 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 219 (ಸಾಯಿ ಸುದರ್ಶನ್ 17, ಮಯಂಕ್ ಅಗರವಾಲ್ 54, ಹನುಮವಿಹಾರಿ 43, ರಿಕಿ ಭುಯ್ 34, ತಿಲಕ್ ವರ್ಮಾ 25, ಸಾಯಿಕಿಶೋರ್ 15, ಹರ್ಷಿತ್ ರಾಣಾ 84ಕ್ಕೆ3, ಬಲ್ತೇಜ್ ಸಿಂಗ್ 47ಕ್ಕೆ2, ವೈಭವ್ ಅರೋರಾ 46ಕ್ಕೆ2, ಜಯಂತ್ ಯಾದವ್ 38ಕ್ಕೆ1) ಫಲಿತಾಂಶ: ದಕ್ಷಿಣ ವಲಯಕ್ಕೆ 2 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ಮಯಂಕ್ ಅಗರವಾಲ್.

ವಿಂಬಲ್ಡನ್ ಟೆನಿಸ್: ಮೆಡ್ವೆಡೇವ್ ಜಯಭೇರಿ

ಕ್ವಿಟೊವಾ, ಅಲ್ಕರಾಜ್ ಮುನ್ನಡೆ

ಕಾರ್ಲೋಸ್ ಅಲ್ಕರಾಜ್ ಜಯದ ಸಂಭ್ರಮ –ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ): ಎರಡು ಬಾರಿ ವಿಂಬಲ್ಡನ್ ಚಾಂಪಿಯನ್ ಆಗಿದ್ದ ಪೆಟ್ರಾ ಕ್ವಿಟೊವಾ ಈ ಬಾರಿಯೂ ಪ್ರಶಸ್ತಿಯತ್ತ ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದಾರೆ. ಪುರುಷರ ವಿಭಾಗದಲ್ಲಿ ಅಗ್ರಶ್ರೇಯಾಂಕದ ಆಟಗಾರ ಕಾರ್ಲೋಸ್ ಅಲ್ಕರಾಜ್ ಮುನ್ನಡೆ ಸಾಧಿಸಿದ್ದಾರೆ.

ಗ್ರಾಸ್ ಕೋರ್ಟ್‌ನಲ್ಲಿ ನಡೆದ ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಕ್ವಿಟೊವಾ 6–3, 7–5ರಿಂದ ಸರ್ಬಿಯಾದ ನತಾಲಿಯಾ ಸ್ಟಿವಾನೊವಿಚ್ ಎದುರು ಗೆದ್ದರು.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ 2014ರಲ್ಲಿ ಎರಡನೇ ಬಾರಿ ವಿಂಬಲ್ಡನ್ ಪ್ರಶಸ್ತಿ ಜಯಿಸಿದ್ದರು. ಅದರ ನಂತರದ ಟೂರ್ನಿಗಳಲ್ಲಿ ಅವರು ಮೂರನೇ ಸುತ್ತು ದಾಟಲು ಪರದಾಡಿದ್ದಾರೆ.

ಒಂಬತ್ತನೇ ಶ್ರೇಯಾಂಕದ ಕ್ವಿಟೊವಾ ಹೋದ ತಿಂಗಳು ಬರ್ಲಿನ್‌ನಲ್ಲಿ ಗ್ರಾಸ್‌ಕೋರ್ಟ್ ನಲ್ಲಿ ನಡೆದಿದ್ದ ಡಬ್ಲ್ಯುಟಿಎ ಟೂರ್ನಿಯಲ್ಲಿ ಗೆದ್ದ ನಂತರ ಇಲ್ಲಿಗೆ ಬಂದಿದ್ದಾರೆ. ಈ ಪಂದ್ಯದಲ್ಲಿ ಸರ್ಬಿಯಾದ ಅಟಗಾರ್ತಿ ಮೊದಲ ಸೆಟ್‌ನಲ್ಲಿ ಹೆಚ್ಚು ಪ್ರತಿರೋಧ ಕಂಡುಬರಲಿಲ್ಲ. ಆದರೆ ಎರಡನೇ ಸೆಟ್ ಟೈಬ್ರೇಕರ್ ಆಯಿತು. ಅದರಲ್ಲಿಯೂ ಕ್ವಿಟೊವಾ ಮೇಲುಗೈ ಸಾಧಿಸಿದರು.

ಅಲ್ಕರಾಜ್‌ಗೆ ಮುನ್ನಡೆ

ಸ್ಪೇನ್ ದೇಶದ ಕಾರ್ಲೋಸ್ ಅಲ್ಕರಾಜ್ ಪುರುಷರ ಸಿಂಗಲ್ಸ್‌ನಲ್ಲಿ ಜಯದ ಓಟ ಮುಂದುವರಿಸಿದ್ದಾರೆ.

ಮೂರನೇ ಸುತ್ತಿನಲ್ಲಿ ಅಲ್ಕರಾಜ್ 6–3, 6–7, 6–3, 7–5ರಿಂದ ಚಿಲಿಯ ನಿಕೊಲಸ್ ಜೆರಿ ವಿರುದ್ಧ ಗೆದ್ದರು.

ಅಗ್ರಶ್ರೇಯಾಂಕದ ಆಟಗಾರ ಅಲ್ಕರಾಜ್ ಅವರಿಗೆ ಎರಡು ಮತ್ತು ನಾಲ್ಕನೇ ಸೆಟ್‌ನಲ್ಲಿ 28ನೇ ಶ್ರೇಯಾಂಕದ ನಿಕೊಲಸ್ ಕಠಿಣ ಪೈಪೋಟಿಯೊಡ್ಡಿದರು. ಇದರಿಂದಾಗಿ ಅಲ್ಕರಾಜ್ ಎರಡನೇ ಸೆಟ್‌ನಲ್ಲಿ ನಿರಾಶೆ ಅನುಭವಿಸಿದರು. ಆದರೆ ನಾಲ್ಕನೇ ಸೆಟ್‌ನಲ್ಲಿ ಟೈಬ್ರೇಕರ್‌ನಲ್ಲಿ ಜಯಸಾಧಿಸುವಲ್ಲಿ ಅಲ್ಕರಾಜ್ ಯಶಸ್ವಿಯಾದರು.

ಮೂರನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಮೇಲುಗೈ ಸಾಧಿಸಿದರು. ಈ ಪಂದ್ಯದಲ್ಲಿ ಅವರು 4–6, 6–3, 6–4, 6–4ರಿಂದ ಫ್ರಾನ್ಸ್‌ನ ಆಡ್ರಿನೊ ಮನಾನಿನೊ ವಿರುದ್ಧ ಜಯಭೇರಿ ಬಾರಿಸಿದರು.

ಮಳೆಯಿಂದ ಅಡ್ಡಿ

ವಿಂಬಲ್ಡನ್ ಟೂರ್ನಿಯ ಆರನೇ ದಿನದಾಟಕ್ಕೆ ಮಳೆಯಿಂದಾಗಿ ಅಡಚಣೆಯಾಯಿತು.

ಶನಿವಾರ ಕೇವಲ ಒಂದು ಪಂದ್ಯ ಮಾತ್ರ ನಡೆಯಿತು. ಮೂರನೇ ಸುತ್ತಿನ ಪಂದ್ಯದಲ್ಲಿ ಬ್ರೆಜಿಲ್‌ನ 13ನೇ ಶ್ರೇಯಾಂಕದ ಹದಾದ್ ಮಯಾ 6–2, 6–2ರಿಂದ ಸೊರಾನಾ ಕ್ರಿಸ್ಟಾ ವಿರುದ್ಧ ಜಯಿಸಿದರು. ನಂತರದ ಪಂದ್ಯಗಳು ನಡೆಯಲಿಲ್ಲ.

ಕರಣವೀರ್ ಸಿಂಗ್ ಉದ್ದೀಪನ ಮದ್ದು ಸೇವನೆ ದೃಢ

ನವದೆಹಲಿ (ಪಿಟಿಐ): ಶಾಟ್‌ಪಟ್ ಅಥ್ಲೀಟ್ ಕರಣವೀರ್ ಸಿಂಗ್ ಅವರು ಉದ್ದೀಪನ ಮದ್ದು ಸೇವನೆ ಮಾಡಿರುವುದು ದೃಢಪಟ್ಟಿದೆ. ಇದರಿಂದಾಗಿ ಅವರು ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಅವಕಾಶ ಕಳೆದುಕೊಂಡಿದ್ದಾರೆ.

ಬ್ಯಾಂಕಾಕ್‌ನಲ್ಲಿ ಮುಂದಿನ ವಾರ ಏಷ್ಯನ್ ಅಥ್ಲೆಟಿಕ್ಸ್ ನಡೆಯಲಿದೆ. ಪಟಿಯಾಲದಲ್ಲಿರುವ ರಾಷ್ಟ್ರೀಯ ಕ್ರೀಡಾ ಸಂಸ್ಥೆ (ಎನ್‌ಐಎಸ್)ಯಲ್ಲಿ ಕರಣವೀರ್ ತರಬೇತಿ ಪಡೆಯುತ್ತಿದ್ದಾರೆ. ಇತ್ತೀಚೆಗೆ ಏಷ್ಯನ್ ಚಾಂಪಿಯನ್‌ಷಿಪ್ ಗಾಗಿ ಪ್ರಕಟಿಸಿದ 54 ಆಟಗಾರರ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದರು.

ಸ್ಪರ್ಧೆಯಿಂದ ಹೊರಗಿದ್ದಾಗ ನಡೆಸುವ ಪರೀಕ್ಷೆಯಲ್ಲಿ ಅವರು ಉದ್ದೀಪನ ಮದ್ದು ಸೇವನೆ ಮಾಡಿರುವುದು ಖಚಿತವಾಗಿದೆ. ಈ ವಿಷಯವನ್ನು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷ ಅದಿಲೆ ಸುಮರಿವಾಲಾ ಖಚಿತಪಡಿಸಿದ್ದಾರೆ. ಕಳೆದ ಮೇ ತಿಂಗಳಲ್ಲಿ ನಡೆದಿದ್ದ ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನಲ್ಲಿ 25 ವರ್ಷದ ಕರಣವೀರ್ ಸಿಂಗ್ ಅವರು ಕಂಚಿನ ಪದಕ ಪಡೆದಿದ್ದರು.

ಆ್ಯಷಸ್: ಮುನ್ನಡೆಯತ್ತ ಆಸ್ಟ್ರೇಲಿಯಾ

ಲೀಡ್ಸ್ (ಎಎಫ್‌ಪಿ): ಆಸ್ಟ್ರೇಲಿಯಾ ತಂಡವು ಆ್ಯಷಸ್ ಸರಣಿಯ ಮೂರನೇ ಟೆಸ್ಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಉತ್ತಮ ಮುನ್ನಡೆ ಸಾಧಿಸಿದೆ.

ಮಳೆಯಿಂದಾಗಿ ತಡವಾಗಿ ಆರಂಭವಾದ ಮೂರನೇ ದಿನದಾಟದಲ್ಲಿ ಆಸ್ಟ್ರೇಲಿಯಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 67.1 ಓವರ್‌ಗಳಲ್ಲಿ 224ಕ್ಕೆ ಆಲೌಟ್ ಆಗಿದೆ. ಗೆಲುವಿಗೆ 250 ರನ್‌ಗಳ ಗುರಿ ಪಡೆದಿರುವ ಇಂಗ್ಲೆಂಡ್ ಎರಡನೇ ಇನ್ನಿಂಗ್ಸ್‌ನಲ್ಲಿ 5 ಓವರ್‌ಗೆ ವಿಕೆಟ್ ನಷ್ಟವಿಲ್ಲದೆ 27 ರನ್ ಗಳಿಸಿದೆ.

ಟ್ರಾವಿಸ್ ಹೆಡ್ (43; 88ಎ) ಮತ್ತು ಮಿಚೆಲ್ ಮಾರ್ಷ್ (28; 52ಎ) ಅವರು ಮಹತ್ವದ ಕಾಣಿಕೆ ನೀಡಿದರು. ಆದರೆ ಪ್ರಮುಖ ಬ್ಯಾಟರ್‌ಗಳನ್ನು ಇಂಗ್ಲೆಂಡ್ ಬೌಲರ್‌ಗಳಾದ ಕ್ರಿಸ್ ವೋಕ್ಸ್ (60ಕ್ಕೆ3) ಮತ್ತು ಮಾರ್ಕ್ ವುಡ್ (39ಕ್ಕೆ2) ಕಟ್ಟಿ ಹಾಕಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 60.4 ಓವರ್‌ಗಳಲ್ಲಿ 263. ಇಂಗ್ಲೆಂಡ್: 52.3 ಓವರ್‌ಗಳಲ್ಲಿ 237. ಎರಡನೇ ಇನಿಂಗ್ಸ್: 67.1 ಓವರ್‌ಗಳಲ್ಲಿ 224 (ಉಸ್ಮಾನ್ ಖ್ವಾಜಾ 43, ಮಾರ್ನಸ್ 33, ಟ್ರಾವಿಸ್ ಹೆಡ್ 34, ಮಿಚೆಲ್ ಮಾರ್ಷ್ 28, ಮಿಚೆಲ್ ಸ್ಟಾರ್ಕ್ 16, ಕ್ರಿಸ್ ವೋಕ್ಸ್ 68ಕ್ಕೆ3, ಸ್ಟುವರ್ಟ್ ಬ್ರಾಡ್ 45ಕ್ಕೆ 3)

ಭಾರತಕ್ಕೆ ಪಾಕ್ ಕ್ರಿಕೆಟ್ ತಂಡ: ಉನ್ನತ ಮಟ್ಟದ ಸಮಿತಿ ರಚನೆ

ಕರಾಚಿ (ಪಿಟಿಐ): ಭಾರತದ ಆತಿಥ್ಯದಲ್ಲಿ ನಡೆಯಲಿರುವ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡ ಆಡುವ ಕುರಿತು ನಿರ್ಧರಿಸಲು ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ನೇತೃತ್ವದಲ್ಲಿ ಉನ್ನತಮಟ್ಟದ ಸಮಿತಿಯನ್ನು ಪ್ರಧಾನಿ ಶಹಬಾಜ್ ಷರೀಫ್ ರಚಿಸಿದ್ದಾರೆ.

ಭಾರತಕ್ಕೆ ಪ್ರಯಾಣಿಸಲು ಅಧಿಕೃತ ಅನುಮತಿ ಕೋರಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ), ಪ್ರಧಾನಿಗೆ ಪತ್ರ ಬರೆದಿತ್ತು. ಅದರ ಬೆನ್ನಲ್ಲೇ ತಂಡವನ್ನು ಭಾರತಕ್ಕೆ ಕಳುಹಿಸಲು ಇರುವ ಸಾಧಕ-ಬಾಧಕ ಕುರಿತು ವರದಿ ನೀಡಲು ಸಮಿತಿಯನ್ನು ರಚನೆ ಮಾಡಿದೆ.

ಮಹಿಳೆಯರ ಆರೋಗ್ಯ
ಸಮಸ್ಯೆಗಳ ಚಿಕಿತ್ಸೆಗಾಗಿ
ಸಂಪರ್ಕಿಸಿ
7710644444

ಸಂಕ್ಷಿಪ್ತ ಸುದ್ದಿ

ಎನ್‌ಎಸಿಗೆ ಆಸ್ಟ್‌ಸ್ವಿಮ್ ಅಂತರರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು: ನಗರದ ನೆಟ್ಟಕಲ್ಲಪ್ಪ ಅಕ್ವೆಟಿಕ್ ಕೇಂದ್ರವು (ಎನ್‌ಎಸಿ) ಪ್ರತಿಷ್ಠಿತ ಆಸ್ಟ್‌ಸ್ವಿಮ್ ಅಂತರರಾಷ್ಟ್ರೀಯ ಪ್ರಶಸ್ತಿ ಗಳಿಸಿದೆ.

ಈಜು ಮತ್ತು ಜಲ ಸುರಕ್ಷತೆಯ ಶಿಕ್ಷಣ ನೀಡುವ ಆಸ್ಟ್ರೇಲಿಯಾದ ರಾಷ್ಟ್ರೀಯ ಸಂಸ್ಥೆ (ಆಸ್ಟ್‌ಸ್ವಿಮ್) ಯು ನೆಟ್ಟಕಲ್ಲಪ್ಪ ಈಜುಕೇಂದ್ರದ ಉತ್ಕೃಷ್ಟವಾದ ಕಾರ್ಯದಕ್ಷತೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಿದೆ.

2023ನೇ ಸಾಲಿನ ಈ ಪ್ರಶಸ್ತಿಯನ್ನು ಈಚೆಗೆ ಗೋಲ್ಡ್ ಕೋಸ್ಟ್‌ನಲ್ಲಿ ನಡೆದ 'ಸೋಕ್ ಇಟ್ ಅಪ್' ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರದಾನ ಮಾಡಲಾಯಿತು.

ಹಲವು ವರ್ಷಗಳಿಂದ ನೆಟ್ಟಕಲ್ಲಪ್ಪ ಈಜು ಸಂಸ್ಥೆಯು ಜಲ ಕ್ರೀಡೆಗಳ ಕುರಿತ ತರಬೇತಿ, ಶಿಕ್ಷಣ ನೀಡುತ್ತಿದೆ. ಹಲವಾರು ಈಜುಪಟುಗಳಿಗೆ ಮತ್ತು ಸಮುದಾಯಕ್ಕೆ ಈಜು ಕುರಿತು ಅರಿವು ಮೂಡಿಸುತ್ತಿರುವ ಶ್ರೇಷ್ಠ ಕೇಂದ್ರವಾಗಿದೆ. ಈ ಪ್ರಶಸ್ತಿ ಗಳಿಸಿದ ಭಾರತದ ಪ್ರಥಮ ಅಕ್ವೆಟಿಕ್ ಸೆಂಟರ್ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ ಎಂದು ಕೇಂದ್ರದ ಮುಖ್ಯಸ್ಥ ಡಾ. ವರುಣ್ ನಿಜವಾನ್ ತಿಳಿಸಿದ್ದಾರೆ.

ಆನಂದ್ ವಿರುದ್ಧ ಗುಕೇಶ್‌ಗೆ ಗೆಲುವು

ಜಗ್ರೆಬ್ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಡಿ. ಗುಕೇಶ್ ಅವರು ಸೂಪರ್ ಯುನೈಟೆಡ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ರ್‍ಯಾಪಿಡ್ ಈವೆಂಟ್‌ನ ಎಂಟನೇ ಸುತ್ತಿನಲ್ಲಿ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ವಿರುದ್ಧ ಗೆಲುವು ದಾಖಲಿಸಿದರು.

17 ವರ್ಷದ ಗುಕೇಶ್ ಅವರು ಐದು ಬಾರಿಯ ವಿಶ್ವ ಚಾಂಪಿಯನ್ ವಿರುದ್ಧ 40 ನಡೆಗಳ ಗೆಲುವು ಸಾಧಿಸಿದರು. ಇಬ್ಬರು ಭಾರತೀಯ ಆಟಗಾರರು ತಲಾ 10 ಅಂಕಗಳನ್ನು ಹೊಂದಿದ್ದು, ನಾಲ್ಕನೇ ಸ್ಥಾನದೊಂದಿಗೆ ಸಮಬಲ ಸಾಧಿಸಿದ್ದಾರೆ.

ಕೆನಡಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿ

ಸೆಮಿಫೈನಲ್‌ಗೆ ಸಿಂಧು, ಸೇನ್

ಕ್ಯಾಲ್ಗರಿ, (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಇಲ್ಲಿ ನಡೆಯುತ್ತಿರುವ ಕೆನಡಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆ ಇಟ್ಟರು.

ಶುಕ್ರವಾರ ತಡರಾತ್ರಿ ನಡೆದ ಮಹಿಳೆಯರ ಸಿಂಗಲ್ಸ್‌ನ ಕ್ವಾರ್ಟರ್‌ಫೈನಲ್‌ನಲ್ಲಿ ಸಿಂಧು 21-13, 21-7 ಅಂತರದಿಂದ ಚೀನಾದ ಫಾಂಗ್ ಜೀ ವಿರುದ್ಧ ಗೆಲುವು ಸಾಧಿಸಿದರು. ಈ ಹಿಂದೆ ಸಿಂಧು– ಫಾಂಗ್ ನಾಲ್ಕು ಬಾರಿ ಮುಖಾಮುಖಿಯಾಗಿದ್ದು, ಇದೇ ಮೊದಲ ಬಾರಿಗೆ ಭಾರತದ ಆಟಗಾರ್ತಿ ಜಯಿಸಿದರು.

ಆರಂಭದಲ್ಲಿಯೇ 5-1 ಮುನ್ನಡೆ ಸಾಧಿಸಿದ ಸಿಂಧು, ಜಾಗರೂಕತೆಯಿಂದ ಆಡಿದರು. ಸಿಂಧು ಅವರ ಪರಿಣಾಮಕಾರಿ ಸ್ಮ್ಯಾಷ್‌ಗಳು ಮತ್ತು ಡ್ರಾಪ್‌ಗಳು ಫಾಂಗ್ ಜೀಯನ್ನು ಇಕ್ಕಟ್ಟಿಗೆ ಸಿಲುಕಿಸಿದವು. ಎದುರಾಳಿಯಿಂದ ಹೆಚ್ಚಿನ ಪ್ರತಿರೋಧ ಇಲ್ಲದೆ ಸಿಂಧು ಮುಂದಿನ ಸುತ್ತಿಗೆ ಪ್ರವೇಶಿಸಿದರು.

ಪಿ.ವಿ. ಸಿಂಧು

ಪುರುಷರ ಸಿಂಗಲ್ಸ್‌ನ ಕ್ವಾರ್ಟರ್‌ಫೈನಲ್‌ನಲ್ಲಿ ಲಕ್ಷ್ಯ ಸೇನ್ ಅವರು 21-8, 17-21, 21-10 ರಿಂದ ಜರ್ಮನಿಯ ಜೂಲಿಯನ್ ಕರಾಗ್ಗಿ ಅವರನ್ನು ಮಣಿಸಿದರು.

ಮೊದಲ ಗೇಮ್ ಅನ್ನು ಸುಲಭವಾಗಿ ಗೆದ್ದ ಸೇನ್, ಎರಡನೇ ಗೇಮ್‌ನಲ್ಲಿ ಜೂಲಿಯನ್ ಎದುರು ಮೇಲುಗೈ ಸಾಧಿಸಿದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಮತ್ತೆ ಚುರುಕಿನ ಆಟವಾಡಿದ ಸೇನ್ ಗೆಲುವನ್ನು ತಮ್ಮದಾಗಿಸಿಕೊಂಡರು.

ಸಿಂಧು ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಶ್ರೇಯಾಂಕದ ಜಪಾನಿನ ಯಮಗುಚಿ ಅವರ ಸವಾಲನ್ನು ಎದುರಿಸಲಿದ್ದಾರೆ. ಸೇನ್ ಅವರು ವಿಶ್ವದ ನಾಲ್ಕನೇ ಶ್ರೇಯಾಂಕದ ಜಪಾನಿನ ಕೆಂಟಾ ನಿಶಿಮೊಟೊ ವಿರುದ್ಧ ಸೆಣಸಲಿದ್ದಾರೆ. ಕೆಂಟಾ ವಿರುದ್ಧ 1–1ರ ಗೆಲುವಿನ ದಾಖಲೆಯನ್ನು ಸೇನ್ ಹೊಂದಿದ್ದಾರೆ.

ಏಷ್ಯನ್ ಗೇಮ್ಸ್: ಭಾರತ ಅಕ್ವೆಟಿಕ್ಸ್ ತಂಡ ಪ್ರಕಟ

ಶ್ರೀಹರಿ, ಸಜನ್ ಪ್ರಕಾಶ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಒಲಿಂಪಿಯನ್ ಈಜುಪಟು, ಬೆಂಗಳೂರಿನ ಶ್ರೀಹರಿ ನಟರಾಜ್ ಮತ್ತು ಸಜನ್ ಪ್ರಕಾಶ್ ಸೇರಿ ದಂತೆ ಒಟ್ಟು 36 ಸದಸ್ಯರ ಭಾರತ ಅಕ್ವೆಟಿಕ್ಸ್ ತಂಡವನ್ನು ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸಲು ಆಯ್ಕೆ ಮಾಡಲಾಗಿದೆ.

ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ಶನಿವಾರ ಪ್ರಕಟಿಸಿರುವ ಪಟ್ಟಿಯಲ್ಲಿ ಈಜು, ಡೈವಿಂಗ್ ಮತ್ತು ವಾಟರ್ ಪೋಲೊ ತಂಡಗಳನ್ನು ಆಯ್ಕೆ ಮಾಡಲಾಗಿದೆ. ಈಜು ತಂಡದಲ್ಲಿ 21, ವಾಟರ್ ಪೋಲೊನಲ್ಲಿ 13 ಹಾಗೂ ಡೈವಿಂಗ್ ಮೂವರು ಇದ್ದಾರೆ.

ಪುರುಷರ ಈಜು ತಂಡದಲ್ಲಿ 12 ಪಟುಗಳಿದ್ದಾರೆ. ಅದರಲ್ಲಿ ಶ್ರೀಹರಿ, ಸಜನ್ ಪ್ರಕಾಶ್ ಮತ್ತು ವೀರ ಧವಳ್ ಖಾಡೆ ಪ್ರಮುಖರು. ಕರ್ನಾಟಕದ ಅನೀಷ್ ಗೌಡ, ಲಿಖಿತ್ ಕೂಡ ಇದ್ದಾರೆ. ಮಹಿಳೆಯರ ತಂಡದಲ್ಲಿ ದಿನಿಧಿ ದೇಸಿಂಗು, ಹಷಿಕಾ ರಾಮಚಂತ್ರ, ನೀನಾ ವೆಂಕಟೇಶ್ ಮತ್ತು ಲಿನೇಶಾ ಸ್ಥಾನ ಗಳಿಸಿದ್ದಾರೆ.

ಶ್ರೀಹರಿ ನಟರಾಜ್

ತಂಡಗಳು: ಈಜು–ಪುರುಷರು: ಶ್ರೀಹರಿ ನಟರಾಜ್, ಅನೀಷ್ ಗೌಡ, ಅದ್ವೈತ್ ಪೇಜ್, ಆರ್ಯನ್ ನೆಹ್ರಾ, ಎ.ಎಸ್. ಆನಂದ್, ಕುಶಾಗ್ರ ರಾವತ್, ಎಸ್.ಪಿ. ಲಿಖಿತ್, ಸಜನ್ ಪ್ರಕಾಶ್, ತನೀಷ್ ಜಾರ್ಜ್ ಮ್ಯಾಥ್ಯೂ, ಉತ್ಕರ್ಷ್ ಪಾಟೀಲ, ವಿಶಾಲ್ ಗೆರೆವಾಲ್, ವೀರಧವಳ್ ಖಾಡೆ

ಮಹಿಳೆಯರು: ಅನನ್ಯಾ ನಾಯಕ, ದಿನಿಧಿ ದೇಸಿಂಗು, ಹಷಿಕಾ ರಾಮಚಂದ್ರನ್, ಎ.ಕೆ. ಲಿನೇಶಾ, ಮಾನಾ ಪಟೇಲ್, ನೀನಾ ವೆಂಕಟೇಶ್, ಪಲಕ್ ಜೋಶಿ, ಶಿವಾಂಗಿ ಶರ್ಮಾ, ವೃತ್ತಿ ಅಗರವಾಲ್

ಡೈವಿಂಗ್ (ಪುರುಷರು): ಸಿದ್ಧಾರ್ಥ್ ಬಜರಂಗ್ ಪರದೇಶಿ, ಹಿಮ್ಯಾನ್ ಲಂಡನ್ ಸಿಂಗ್. ವಾಟರ್‌ಪೋಲೊಗೆ 13 ಆಟಗಾರರ ತಂಡ.

ಕುಸ್ತಿಪಟುಗಳ ಹೆಸರು ಕಳುಹಿಸಲು ಜುಲೈ 22ರ ಗಡುವು

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್‌ಗೆ ಭಾರತೀಯ ಕುಸ್ತಿಪಟುಗಳ ಹೆಸರನ್ನು ಕಳುಹಿಸಲು ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ (ಒಸಿಎ) ಐಒಎಗೆ ಜುಲೈ 22 ರವರೆಗೆ ಗಡುವು ನೀಡಿದೆ.

ಭಾರತೀಯ ಒಲಿಂಪಿಕ್ ಸಮಿತಿ (ಐಒಎ) ಆಗಸ್ಟ್ 5ರವರೆಗೆ ಸಮಯ ಕೇಳಿತ್ತು. ಸೆ.23ರಿಂದ ಚೀನಾದ ಹ್ಯಾಂಗ್‌ಝೌನಲ್ಲಿ ಏಷ್ಯನ್ ಗೇಮ್ಸ್ ಪ್ರಾರಂಭವಾಗಲಿದೆ.

ಭಾರತೀಯ ಒಲಿಂಪಿಕ್ ಸಮಿತಿ ಅಧ್ಯಕ್ಷೆ ಪಿಟಿ ಉಷಾ, ಹಿರಿಯ ಉಪಾಧ್ಯಕ್ಷ ಅಜಯ್ ಪಟೇಲ್ ಮತ್ತು ಜಂಟಿ ಕಾರ್ಯದರ್ಶಿ ಕಲ್ಯಾಣ್ ಚೌಬೆ ಅವರು ಬ್ಯಾಂಕಾಕ್‌ನಲ್ಲಿ ನಡೆದ ಒಸಿಎಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ್ದರು. ಬಳಿಕ ಒಂದು ವಾರದ ವಿಸ್ತರಣೆ ದೊರಕಿದೆ.

ಆ.14ರಿಂದ ಟೂರ್ನಿ ಆರಂಭ: ಆರು ತಂಡಗಳು ಭಾಗಿ

ಬೆಂಗಳೂರಿನಲ್ಲಷ್ಟೇ ಮಹಾರಾಜ ಟ್ರೋಫಿ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಶ್ರಯದಲ್ಲಿ ಆಗಸ್ಟ್ 14ರಿಂದ 30ರವರೆಗೆ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ನಡೆಯಲಿದೆ. ಟೂರ್ನಿಯ ಎಲ್ಲ 33 ಪಂದ್ಯಗಳೂ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜನೆಯಾಗಲಿವೆ.

ಈ ಮೊದಲು ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಹೆಸರಿನಲ್ಲಿ ಟೂರ್ನಿ ನಡೆಯುತ್ತಿತ್ತು. ನಾಲ್ಕು ವರ್ಷಗಳ ಹಿಂದೆ ಫಿಕ್ಸಿಂಗ್ ಹಗರಣ ವರದಿಯಾಗಿದ್ದರಿಂದ ಟೂರ್ನಿಯನ್ನು ಸ್ಥಗಿತಗೊಳಿಸಲಾಯಿತು. ಹೋದ ವರ್ಷದಿಂದ ಮಹಾರಾಜ ಟ್ರೋಫಿ ಟಿ20 ಟೂರ್ನಿಯನ್ನು ಆರಂಭಿಸಲಾಯಿತು. ಇದೀಗ ಎರಡನೇ ಆವೃತ್ತಿಗೆ ಸಿದ್ಧತೆ ನಡೆದಿದೆ. ಆದರೆ ಈ ಮೊದಲು ಪಂದ್ಯಗಳು ಮೈಸೂರು, ಹುಬ್ಬಳ್ಳಿಯಲ್ಲಿಯೂ ನಡೆದಿದ್ದವು. ಆದರೆ ಈ ಸಲ ಎಲ್ಲ ಪಂದ್ಯಗಳೂ ರಾಜಧಾನಿಯಲ್ಲಿ ನಡೆಯಲಿವೆ.

ಹುಬ್ಬಳ್ಳಿ ಟೈಗರ್ಸ್, ಗುಲ್ಬರ್ಗ ಮಿಸ್ಟಿಕ್ಸ್, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಮೈಸೂರ್ ವಾರಿಯರ್ಸ್ ಜೊತೆಗೆ ಮಂಗಳೂರು ಮತ್ತು ಶಿವಮೊಗ್ಗದಿಂದ ಎರಡು ಹೊಸ ತಂಡಗಳೂ ಕಣಕ್ಕಿಳಿಯಲಿವೆ.

ಹೋದ ವರ್ಷ ಡ್ರಾಫ್ಟ್ ಮಾದರಿಯಲ್ಲಿ ತಂಡಗಳ ಆಯ್ಕೆ ನಡೆದಿತ್ತು. ಆದರೆ ಈ ಸಲ ಮತ್ತೆ ಫ್ರಾಂಚೈಸಿ ಮಾದರಿಯಲ್ಲಿ ಟೂರ್ನಿ ನಡೆಯುವುದು. 'ಆರು ತಂಡಗಳಿಗೆ ಮಾತ್ರ ಅವಕಾಶ ಇದೆ. ಇದರಿಂದ ಉತ್ತಮ ದರ್ಜೆಯ ಕ್ರಿಕೆಟ್ ಸಾಧ್ಯವಾಗಲಿದೆ' ಎಂದು ಕೆಎಸ್‌ಸಿಎ ಉಪಾಧ್ಯಕ್ಷರೂ ಆಗಿರುವ ಮಹಾರಾಜ ಟ್ರೋಫಿ ಟೂರ್ನಿ ಕಮಿಷನರ್ ಬಿ.ಕೆ. ಸಂಪತ್ ಕುಮಾರ್ ಹೇಳಿದ್ದಾರೆ.

ಇದೇ 22ರಂದು ಆಟಗಾರರ ಹರಾಜು ಪ್ರಕ್ರಿಯೆ ನಡೆಯುವ ಸಾಧ್ಯತೆ ಇದೆ. ಪ್ರತಿ ಫ್ರಾಂಚೈಸಿಯು ತಲಾ ₹ 50 ಲಕ್ಷದ ಹಣದ ಥೈಲಿ ಹೊಂದಿವೆ. ಹರಾಜು ಪ್ರಕ್ರಿಯೆಗೆ ನೋಂದಾಯಿಸುವ ಆಟಗಾರರನ್ನು ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಭಾರತ ತಂಡ ಮತ್ತು ಐಪಿಎಲ್‌ನಲ್ಲಿ ಆಡಿರುವವರು ಎ ಗುಂಪಿನಲ್ಲಿ ಇರುತ್ತಾರೆ. ಬಿ ಗುಂಪಿನಲ್ಲಿ ಬಿಸಿಸಿಐ ಟೂರ್ನಿಗಳಲ್ಲಿ (ವಿಜಯ ಹಜಾರೆ ಟ್ರೋಫಿ, ರಣಜಿ ಟ್ರೋಫಿ ಮತ್ತು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಗಳು) ಆಡಿರುವ ಸೀನಿಯರ್ ಆಟಗಾರರು ಇರುವರು.

ಬಿಸಿಸಿಐನ ಇನ್ನಿತರ ಟೂರ್ನಿಗಳಲ್ಲಿ ಆಡಿರುವ ಆಟಗಾರರು ಸಿ ಗುಂಪು ಮತ್ತು ಕೆಎಸ್‌ಸಿಎಯಿಂದ ನೋಂದಾಯಿತರಾಗಿರುವ ಆಟಗಾರರು ಡಿ ಗುಂಪಿನಲ್ಲಿದ್ದಾರೆ. ಪ್ರತಿ ತಂಡವೂ ಕನಿಷ್ಠ 15 ಹಾಗೂ ಗರಿಷ್ಠ 20 ಆಟಗಾರರನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಅದರಲ್ಲಿ ತಂಡವು ಪ್ರತಿನಿಧಿಸುವ ಊರಿನ ವ್ಯಾಪ್ತಿಯ ಇಬ್ಬರು ಆಟಗಾರರನ್ನು ಕಡ್ಡಾಯವಾಗಿ ಸೇರಿಸಿಕೊಳ್ಳಬೇಕು.

ಒಟ್ಟು ₹ 35 ಲಕ್ಷ ನಗದು ಬಹುಮಾನ ನಿರ್ಧರಿಸಲಾಗಿದೆ. ವಿಜೇತ ತಂಡವು ₹15 ಲಕ್ಷ, ರನ್ನರ್ಸ್ ಅಪ್ ₹ 10 ಲಕ್ಷ ಪಡೆಯಲಿವೆ. ಉಳಿದ ಹಣವನ್ನು ಮೂರು ಮತ್ತು ನಾಲ್ಕನೇ ಸ್ಥಾನ ಪಡೆದ ತಂಡಗಳಿಗೆ ಹಂಚಿಕೆ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.